ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ವೀರಪ್ಪಮೊಯಿಲಿಯವರು ಹೇಳು ವುದನ್ನು ನಾನು ಒಪ್ಪುತ್ತೇನೆ. ಇದು ಮಹತ್ವವಾದ ಮಸೂದೆ, ಚರ್ಚೆಯಾಗಬೇಕು. ಅಭಿಪ್ರಾಯ ಗಳು ಹೊರಕ್ಕೆ ಬರಬೇಕು. ಚರ್ಚೆ ಇಲ್ಲದೆ ಪಾಸ್ ಆಗತಕ್ಕಂಥ ಮಸೂದೆ ಇದಲ್ಲ. ಧಾರ್ಮಿಕ ಭಾವನೆಗಳ ಬಗ್ಗೆ, ಸೂಕ್ಷ್ಮವಾಗಿ, ಸರ್ಕಾರದ ನಿಲುವನ್ನು ಈಗಾಗಲೇ ನ್ಯಾಷನಲ್ ಇಂಟಿಗ್ರೇಷನ್ ಕಮಿಟಿಯಲ್ಲಿ ಚರ್ಚೆ ಮಾಡಿದ್ದಾರೆ. ಆ ಕಮಿಟಿಯಲ್ಲಿ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳು ಇದ್ದು, ಪ್ರಧಾನಿಯವರು ಅಧ್ಯಕ್ಷರಾಗಿರತಕ್ಕಂಥ ಕಮಿಟಿ ಅದು. ಅದರ ಆಧಾರದ ಮೇಲೆ ಕೇಂದ್ರಸರ್ಕಾರ ದಿಂದ ಒಂದು ಪತ್ರ ಬಂದಿದೆ. ಚರ್ಚೆ ಜೊತೆಗೆ ವಿರೋಧಪಕ್ಷದ ಸದಸ್ಯರನ್ನೂ ಕರೆದು. ಮತ್ತೆ ಬೇರೆ ಬೇರೆ ಪಕ್ಷಗಳ ಸದಸ್ಯರನ್ನು ಕರೆದು ಚರ್ಚೆ ಮಾಡೋಣ. ಇದು ಪಾಸ್ ಆಗುವುದಕ್ಕೆ ಮೊದಲೇ ಚರ್ಚೆ ಮಾಡೋಣ. ಎಲ್ಲರೂ ಅಭಿಪ್ರಾಯಪಟ್ಟರೆ, ತಿದ್ದುಪಡಿ ಮಾಡಿಕೊಳ್ಳುವುದಕ್ಕೂ ಒಪ್ಪೋಣ. ಇವತ್ತು ಚರ್ಚೆ ಬೇಡ ಎಂದು ಹೇಳಿದ್ದೀರಿ ಆದ್ದರಿಂದ ಇದನ್ನು ಮುಂದಕ್ಕೆ ಹಾಕೋಣ,

ಶ್ರೀ ಬಿ. ಎ. ಇದಿನಬ್ಬ ರಾಜಾಸ್ಥಾನದಲ್ಲಿ ಒಂದು ಕಡೆ ಇರಬಹುದು. ಇನ್ನುಳಿದ ೧೯ ಸಂಸ್ಥಾನಗಳಲ್ಲಿ, ಒಂದೊಂದು ಸಂಸ್ಥಾನದಲ್ಲಿ ಒಂದೊಂದು ರೀತಿಯ ಧಾರ್ಮಿಕ ಭಾವನೆಗಳು ಇರುವುದರಿಂದ, ಇದರ ಬಗ್ಗೆ ಚರ್ಚೆ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ಈಗ ಮಂಡಲ್ ಪಂಚಾಯ್ತಿಗಳಿಗೆ ನಾಮಿನೇಷನ್ ಮಾಡುವ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳೋಣ. ಶ್ರೀಮತಿ ನಾಗರತ್ನಮ್ಮನವರೇ, ತಾವು ಚರ್ಚೆ ಪ್ರಾರಂಭ ಮಾಡಿ.

ಅಲ್ಪ ಕಾಲಾವಧಿ ಚರ್ಚೆ

ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಂತಿಗೆ ಹಿಂದುಳಿದ ವರ್ಗದವರನ್ನು ನಾಮಕರಣ ಮಾಡುವ ಬಗ್ಗೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಇದು ದುರಾದೃಷ್ಟ ಏಕೆಂದರೆ, ನಮ್ಮ ಚರ್ಚೆ ಪ್ರಾರಂಭವಾಗುವುದಕ್ಕೆ ಮುಂಚೆ ಮುಖ್ಯಮಂತ್ರಿಗಳು ಬರುತ್ತಾರೆಂದು ನನಗೆ ನಂಬಿಕೆ ಇತ್ತು, ಆದರೆ ಈಗ ಏನಾಗಿದೆ......

ಅಧ್ಯಕ್ಷರು.—ಈಗ ಮಂಡಲ್ ಪಂಚಾಯ್ತಿಗಳಿಗೆ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳನ್ನು ನಾಮಕರಣ ಮಾಡುವ ಬಗ್ಗೆ ದಿನಾಂಕ ೨೬ನೇ ಮಾರ್ಚ್ ೧೯೮೭ರಂದು ಹೊರಡಿಸಲಾದ ಆರ್‌ಡಿಪಿ ೪೪ ಜಡ್‌ಪಿಎಸ್ ೮೭ನೇ ಕ್ರಮಾಂಕದ ಅಧಿಸೂಚನೆಯ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಲಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲಿ ಇದ್ದರೆ ಸ್ವಲ್ಪ ಸಮಾಧಾನವಾಗುತ್ತಿತ್ತು ಏಕೆಂದರೆ, ನಮ್ಮ ಸಕಲ ವಿದ್ಯಾಪ್ರವೀಣರಾದ ಶ್ರೀ ಲಕ್ಷ್ಮೀಸಾಗರ್ ಎದುರಿಗೆ ನಾವು ಏನು ಹೇಳಿಕೊಂಡರೂ ಅದು 'ಗೋರ್ಕಲ್ಲ ಮೇಲೆ ಮಳೆ ಸುರಿದಂತೆ" ಎಂಬಂತಾಗುತ್ತದೆ. ಅವ ರಿಗೆ ಕೊಡುವುದೂ ಬರುವುದಿಲ್ಲ, ತೆಗೆದುಕೊಳ್ಳುವುದೂ ಬರುವುದಿಲ್ಲ ಆಮೇಲೆ ಇನ್ನೊಬ್ಬರು ಇದ್ದಾರೆ, ಅವರು ಕಿವಿ ಮೇಲೆ ಹಾಕಿಕೊಳ್ಳುವುದೇ ಇಲ್ಲ ಈ ಜನರ ಮುಂದೆ ಚರ್ಚೆ ಮಾಡುವಂತ ದುರಾದೃಷ್ಟ ನಮಗೆ ಬಂದಿದೆ ಮಂಡಲ್ ಪಂಚಾಯ್ತಿ ಪ್ರಧಾನ ಮತ್ತು ಉಪಪ್ರಧಾನರ ಆಯ್ಕೆ ನಡೆಸುವಾಗ ಇದನ್ನು ತಡೆಹಿಡಿಯುವುದರ ಬಗ್ಗೆ ನಾವು ಚರ್ಚೆಮಾಡಬೇಕೆಂಬ ನಿಲುವಳಿ ಸೂಚನೆಯನ್ನು ಮಂಡಿಸಿ, ಅದರ ಚರ್ಚೆಗೆ ತಮ್ಮ ಪರ್ಮಿಷನ್ ಕೇಳುತ್ತಿದ್ದ ಸಮಯದಲ್ಲಿ ಈ ವಿಷಯ ಚರ್ಚೆಗೆ ಬರಕೂಡದೆಂದು ಕೆಲವು ಸದಸ್ಯರು ತಡೆ ಹಿಡಿಯುವುದಕ್ಕೆ ಮಾಡಿದ ಪ್ರಯತ್ನ, ಅನಂತರ ಉದ್ಭವಿಸಿದ ದುರ್ಘಟನೆ ಬಗ್ಗೆ ತಿರುಗಿ ಹೇಳುವುದು ಅಷ್ಟು ಸಮಂಜಸವಲ್ಲ ಹಾಗೂ ಅದರ ಅವಶ್ಯಕತೆ ಈಗ ಇಲ್ಲ. ಅಧ್ಯಕ್ಷರೇ, ಸರ್ಕಾರದವರು ಬಹಳ ಖಚಿತವಾಗಿ ನಿಸಂಕೋಚವಾಗಿ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಆಕ್ಟನ್ನು "Yes, this is a political Act. We are going to carry it out whether you like it or not" ನೀವು ಬೇಕಾದರೆ ಒಪ್ಪಿಕೊಳ್ಳಿ ಅಥವಾ ಬಿಡಿ ನಾವಂತೂ ನಡೆಸಿಕೊಂಡು ಹೋಗುತ್ತೇವೆ. "This is a Political Act" ಎಂದು ನಿಸ್ಸಂಕೋಚವಾಗಿ ಹೇಳಿದ್ದಾರೆ ಇದು ಆಕ್ಟ್ ಆಗುವಾಗಲೇ ಎಷ್ಟೋ ಡಿಸ್ಕಷನ್ ಆಯಿತು ಜಾಯಿಂಟ್ ಸೆಲೆಕ್ಟ್ ಕಮಿಟಿಗೂ

ಹೋಯಿತು. ಅಲ್ಲಿಂದ ಬಂದ ಮೇಲೆ ಅದರ ಬಗ್ಗೆ ನಾವು ಅನೇಕ ಅಮೆಂಡ್‌ಮೆಂಟ್‌ನ್ನು ತಂದರೂ ಕೂಡ ಅವುಗಳು ಯಾವುವು ಪಾಸ್ ಆಗಲಿಲ್ಲ ಎಲ್ಲಾ ತಿರಸ್ಕೃತವಾಯಿತು ಅದು ಆಗಲೇ ಬೇಕು. because that is a Political Act. ಅದಕ್ಕೆ ಏನೂ ಉತ್ತರವೇ ಇಲ್ಲ ಆ ಮೇಲಿಂದ ನಾನು ಕೊಟ್ಟು ಅಮೆಂಡ್‌ಮೆಂಟ್ ಏನೂ ಆಗಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಆಕ್ಟನ್ನು ಯುನಾನಿಮಸ್ ಆಗಿ ಪಾಸ್ ಮಾಡಿದ್ದೇವೆ.

SMT K. S. NAGARATHNAMMA.—You have said it very clearly. "Yes, this is a political Act" ಎಂದು ಧೈರ್ಯವಾಗಿ ಹೇಳಿದ್ದೀರಿ ಅದನ್ನು ನಾವು ಒಪ್ಪಲೇ ಬೇಕು. Regarding nomination there is a clause to nominate two persons. ಬ್ಯಾಕ್‌ವರ್ಡ್ ಕ್ಲಾಸ್‌ನ ಜನ ಯಾರೂ ಎಲೆಕ್ಟ್ ಆಗಿಲ್ಲ, ಅವರ ಪೈಕಿ ಇಬ್ಬರನ್ನು ನಾಮಿನೇಟ್ ಮಾಡಬೇಕೆಂದು ಹೇಳಿ ಅಮೆಂಡ್‌ಮೆಂಟ್ ಆಕ್ಟ್‌ನಲ್ಲಿ ಇದೆ. ಬ್ಯಾಕ್‌ವರ್ಡ್‌ಕ್ಲಾಸ್‌ನವರನ್ನು ನಾಮಿನೇಟ್ ಮಾಡುವುದರ ಬಗ್ಗೆ ನಿಮಗಿಂತ ನಾವು ಹಿಂದೆ ಎಂದೂ ಬಿದ್ದಿಲ್ಲ ಕಾಂಗ್ರೆಸ್‌ನವರ ತತ್ವ ಮತ್ತು ಪಾಲಿಸಿಯೇ ಅದು. ಬ್ಯಾಕ್‌ವರ್ಡ್ ಕ್ಲಾಸ್‌ನವರ ಇಂಟರೆಸ್ಟನ್ನು ಸೇಫ್ ಗಾರ್ಡ್ ಮಾಡುವುದೇ ಕಾಂಗ್ರೆಸ್‌ನ ನೀತಿ ಮತ್ತು ತತ್ವ ೧೯೬೯ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಬ್ಯಾಂಕ್‌ಗಳನ್ನು ನ್ಯಾಷನಲೈಸ್ ಮಾಡಿದರು ಬ್ಯಾಕ್‌ವರ್ಡ್ ಕ್ಲಾಸಸ್‌ನವರಿಗೆ, ವೀಕರ್ ಸೆಕ್ಷನ್, ಲ್ಯಾಂಡ್ ಲೇಬರರ್ಸ್‌ಗೆ, ಆರ್ಟಿಸಾನ್‌ಗಳಿಗೆ, ಇವರೆಲ್ಲರಿಗೂ ಸಹಾಯ ಮಾಡುವುದಕ್ಕೋಸ್ಕರ ಬ್ಯಾಂಕುಗಳನ್ನು ನ್ಯಾಷನಲೈಸ್ ಮಾಡಿದರು ಬಾಂಡೇಡ್ ಲೇಬರರ್ಸ್‌ಗಳನ್ನು ರಿಲೀಸ್ ಮಾಡಿಸಿ ಅವರುಗಳಿಗೆ ಮನೆಗಳನ್ನು ಕೊಡಿಸಿದರು ಸಬ್‌ಸಿಡಿ ಕೊಟ್ಟು ಸಾಲಗಳನ್ನು ಬ್ಯಾಂಕುಗಳ ಮುಖಾಂತರ ಕೊಡಿಸಿದರು ಬೇಕಾದಷ್ಟು ಲೇಬರರ್ಸ್‌ಗಳಿಗೆ ಮತ್ತು ಆರ್ಟಿಸಾನ್‌ಗಳಿಗೆ ಸಹಾಯ ಮಾಡುವುದಕ್ಕೋಸ್ಕರ ೧೯೬೯ರಲ್ಲಿ ಈ ತತ್ವವನ್ನು ಜಾರಿಗೆ ತೆಗೆದುಕೊಂಡು ಬಂದರು. ಶ್ರೀ ದೇವರಾಜ್ ಅರಸ್‌ರವರು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಅನುಕೂಲವಾಗಲಿ ಎಂದು ಹಾವನೂರ್ ಕಮಿಷನ್‌ನನ್ನು ನೇಮಕ ಮಾಡಿದರು ಅವರ ರಿಪೋರ್ಟ್‌ನ್ನು ೧೯೭೭ರಲ್ಲಿ ಇಂಪ್ಲಿಮೆಂಟ್ ಮಾಡಿದರು. ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್ ರಿಪೋರ್ಟ್ ಮೇಲೆ ಎಲ್ಲಾ ಕೆಲಸ ನಡೆಯುತ್ತಿತ್ತು ಈಗ ಜಿಲ್ಲಾ ಪರಿಷತ್ತಿನ ಒಂದು ಹೊಸ ಆ್ಯಕ್ಟ್ ಬಂತು ಈ ಆ್ಯಕ್ಟನ್ನು ನಾವು ಒಪ್ಪಿಕೊಂಡಿದ್ದೆವು ಹಾಗೂ ಹಾವನೂರ್ ಕಮೀಷನ್ ರಿಪೋರ್ಟ್ ಪ್ರಕಾರ ನಾಮಿನೇಟ್ ಮಾಡುವುದಕ್ಕೂ ನಾವು ಒಪ್ಪಿಕೊಂಡಿದ್ದೆವು. ಆದರೆ, ವೆಂಕಟಸ್ವಾಮಿ ರಿಪೋರ್ಟ್ ಬಂದ ಮೇಲೆ, ಈ ರಿಪೋರ್ಟ್‌ನಲ್ಲಿ ೩ ಕಮ್ಯೂನಿಟಿಗಳನ್ನು ಬಿಟ್ಟು ಎಲ್ಲರೂ ಬ್ಯಾಕ್‌ವರ್ಡ್ ಕ್ಲಾಸ್ ಎಂದು ಆಯಿತು. ಬ್ರಾಹ್ಮಣರು, ಜೈನರು ಕೊಡಗರ ಬಿಟ್ಟು ಎಲ್ಲರೂ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸೇರುವ ಹಾಗೆ ಮಾಡಿದ್ದಾರೆ. ಮೊನ್ನೆ ನಡೆದ ಎಲೆಕ್ಷನ್‌ನಲ್ಲಿ ಎಲ್ಲರಿಗೂ ರೆಪ್ರೆಸೆಂಟೇಷನ್ ಸಿಕ್ಕಿದೆ. ಈಗ ಲ್ಯಾಂಡ್ ಲೇಬರರ್ಸ್‌ಗಳಿಗೆ, ಆರ್ಟಿಸಾನ್‌ಗಳಿಗೆ ಅವಕಾಶ ಕೊಡಬೇಕೆಂದು ಹೇಳುತ್ತಿದ್ದಾರೆ. ಪಾಪ್ಯುಲೇಷನ್ ಬೇಸಿಸ್ ಮೇಲೆ ರೆಪ್ರೆಸೆಂಟೇಟೀವ್‌ಗಳನ್ನು ತೆಗೆದುಕೊಳ್ಳತಕ್ಕಂತಹ ಪದ್ಧತಿಯನ್ನು ಇವರು ಹೊಸದಾಗಿ ಶುರು ಮಾಡಿದ್ದಾರೆ ಇವರಿಗೆ ಇದ್ದಕ್ಕಿದ್ದ ಹಾಗೆ ಏನು ಇಷ್ಟೊಂದು ದೊಡ್ಡ ಬುದ್ಧಿ ಬಂತು ? ಇವರು ಏಪ್ರಿಲ್ ೩ನೇ ತಾರೀಖಿನೊಳಗಾಗಿ ಚುನಾವಣೆಯನ್ನು ನಡೆಸಿಬಿಡುತ್ತೇವೆ ಎಂದು ಕೋರ್ಟಿನಲ್ಲಿ ಅಂಡರ್‌ಟೇಕಿಂಗ್ ಕೊಟ್ಟರು. ಎಲ್ಲಾ ವಿಷಯಗಳ ಬಗ್ಗೆಯೂ ರೂಲ್ಸ್‌ಗಳನ್ನು, ಅಂಕಿ ಅಂಶಗಳನ್ನು, ಹೇಳುವ ಈ ಸರಕಾರ ತನ್ನ ಅನುಕೂಲಕ್ಕಾಗಿ ಅನುಕೂಲಸಿಂಧು ಶಾಸ್ತ್ರವನ್ನು ಮಾಡಿಕೊಂಡು ತನಗೆ ಏನು ಬೇಕೋ ಅದನ್ನು ಮಾಡಿಕೊಳ್ಳುತ್ತದೆ. ಅಂತ ಸಂದರ್ಭದಲ್ಲಿ ಇವರಿಗೆ ತನ್ನಷ್ಟಕ್ಕೆ ಬುದ್ಧಿ, ಶಾಸ್ತ್ರ, ವಿಸಡಮ್ ಇತ್ಯಾದಿ ಯಾರಿ ಬಂದುಬಿಡುತ್ತದೆ. ಹೀಗೆ ಮಾಡುವ ಇವರ ದ್ವಿಮುಖ ನೀತಿ ಯಾರಿಗೂ ಅರ್ಥವಾಗುವುದಿಲ್ಲ ಎಂದು ತಿಳಿದುಕೊಂಡಿದ್ದರೆ, ಅದಕ್ಕೆ ಏನೂ ಬೆಲೆ ಇಲ್ಲ ಎಂದು ನಾನು ಹೇಳಬೇಕಾಗುತ್ತದೆ, ಹಾಗೆಯೇ ತಾವುಗಳು ಮಾಡುವುದು ಯಾರಿಗೂ ಗೊತ್ತಾಗುವುದಿಲ್ಲ ಎಂದು ಇವರ ಭಾವನೆ ಇದ್ದುದಾದರೆ, ಅದು ಅರ್ಥ ಇಲ್ಲದ ನೀತಿ ಆಗುತ್ತದೆ. ಹಾಗೂ ಇವರು ಬಾಯಲ್ಲಿ ಹೇಳುವುದು ಒಂದು ನೀತಿ ಆದರೆ, ಮಾಡುವುದು ಇನ್ನೊಂದು ನೀತಿ ಎಂದು ಹೇಳಬೇಕಾಗುತ್ತದೆ.

ಇವರ ೨೫–೨–೧೯೮೭ರಲ್ಲಿ, ನೋಟಿಫಿಕೇಶನ್‌ನಲ್ಲಿ "Backward means Backward Communities. Backward castes, Backward Tribes notified by the Government dated 14th March 1970 or such other order as may be

notified from time to time.'' ಎಂದಿದೆ, Time to Time ಅಂದರೆ ಏನು ? ತಿರುಗಿ ೧೯೮೬ರಲ್ಲಿ ಕೊಟ್ಟಿರುವ ಆರ್ಡರ್ ಯಾವುದು? ಅದು ಇಲ್ಲಿ ತಿರುಗಿ ಬರಲಿಲ್ಲವೇ? ಈ ಆರ್ಡರ್‌ಗೆ ಯಾರು ಪರ್ಮಿಷನ್ ಕೊಟ್ಟಿದ್ದಾರೆ. ಹಾಗೆಯೇ ೨೬-೩-೧೯೮೭ರಲ್ಲಿ ಒಂದು ನೋಟಿಫಿಕೇಶನ್ ಹೊರಡಿಸಿದರು. Draft Notification ಗೂ ತಿರುಗಿ ಈ ನೋಟಿಫಿಕೇಶನ್‌ಗೆ ಬೇಕಾದಷ್ಟು ವ್ಯತ್ಯಾಸ ಇದೆ. ಸರಕಾರಕ್ಕೆ ಯಾವಾಗ ಬೇಕೋ, ಆಗ ಒಂದೊಂದು ರಿಪೋರ್ಟನ್ನು ಇವರು ಮಾಡಿಕೊಂಡು ಹೋಗುತ್ತಾರೆ. ಇಂತಹ ಇವರ ನ್ಯಾಯ ಸ್ವಲ್ಪವೂ ಸರಿಯಲ್ಲ. ಇವರು ಹೇಳುವ ಜನಗಳಿಗೆ ಪ್ರಾತಿನಿಧ್ಯ ಕೊಡಬೇಕಾಗಿದ್ದರೆ, ಈ ಆಕ್ಟನ್ನು ಮಾಡುವ ಸಮಯದಲ್ಲಿಯೇ ತೀರ್ಮಾನ ಮಾಡಬಹುದಾಗಿತ್ತು. ಆಗ ಇವರಿಗೆ ಯಾರು ಬೇಡ ಎಂದು ಹೇಳಿದರು? ಈ ಮಂಡಲ ಪಂಚಾಯತಿ ಚುನಾವಣೆ ಮಾಡಿ, ಇಸ್ಪೀಟಾಟದಲ್ಲಿ ಇರುವ ಜೋಕರ್ ಹಾಗೆ, ಎಲ್ಲಾ ರೀತಿಯಿಂದಲೂ Landless labourers artisans, ಗಳನ್ನು ಇಸ್ಪೀಟ್ ಆಟದಲ್ಲಿನ ಜೋಕರ್ ಆಗಿ ಮಾಡಿಬಿಟ್ಟಿದ್ದಾರೆ. ಇದು ನಿಜವಾಗಿಯೂ Anti-democratic principle ಚುನಾವಣೆಗಳಲ್ಲಿ ಯಾರೇ ಸೋಲಲಿ, ಯಾರೇ ಗೆಲ್ಲಲಿ. ಅದನ್ನು ಸರಕಾರವಾಗಲೀ ಇತರರಾಗಲೀ, ಒಪ್ಪಿಕೊಳ್ಳಬೇಕು. ಅದು ಜನಗಳ ಅಭಿಪ್ರಾಯವಾಗಿದ್ದು ಅದಕ್ಕೆ ಮನ್ನಣೆ ಕೊಡಬೇಕಾಗುತ್ತದೆ. ಅದನ್ನು ಬಿಟ್ಟು ಬಿಟ್ಟು. ಇವರು ಬಾಯಿ ಎತ್ತಿದರೆ, ಮಹಾತ್ಮಾ ಗಾಂಧೀಜಿಯವರು ಕಂಡ ಕನಸು ಎಂದೆಲ್ಲಾ ಹೇಳಿದ್ದಾರೆ. ಅಧ್ಯಕ್ಷರೇ, ಮಾನ್ಯ ಸಚಿವರುಗಳು ನಾನು ಹೇಳುತ್ತಿರುವುದನ್ನು ಕೇಳಿಸಿಕೊಳ್ಳುತ್ತಿಲ್ಲ. ಅವರೇ ಮಾತನಾಡುತ್ತಿದ್ದಾರೆ...ಹಾಗೆಂದ ಮೇಲೆ... ನಾನು ಮಾತನಾಡುವುದಿಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳೂ ಇಲ್ಲ ಮುಖ್ಯ ಮಂತ್ರಿಗಳೂ ಈಗ ಈ ಸದನದಲ್ಲಿಲ್ಲ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಈ ಮಹತ್ವದ ವಿಚಾರದಲ್ಲಿ ಏನು ಮಾತನಾಡುತ್ತಿದ್ದೇನೆ ಎಂದು ಕೇಳದಿದ್ದರೆ ನಾನು ಮಾತನಾಡಿ ಏನು ಪ್ರಯೋಜನ ?

ಅಧ್ಯಕ್ಷರು.—ತಾವುಗಳು ಮಾತನಾಡುತ್ತಿದ್ದುದನ್ನು ಅವರು ನೋಟ್ ಮಾಡಿಕೊಳ್ಳುತ್ತಿದ್ದಾರೆ. ತಾವು ಮಾತನಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಯವರಿಗೆ ಹೇಳಿ ಕಳುಹಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.-ಈ ವಿಚಾರದ ಚರ್ಚೆ ನಾವುಗಳು ಇವೊತ್ತು ಫಿಕ್ಸ್ ಮಾಡಿದ್ದು ಅಲ್ಲ. ೫-೬ ದಿನಗಳ ಹಿಂದೆಯೇ ಚರ್ಚೆಯ ಬಗ್ಗೆ ದಿನಾಂಕವನ್ನು ಫಿಕ್ಸ್ ಮಾಡಿ, ಈ ದಿವಸ ಚರ್ಚೆಯಾಗ ಬೇಕೆಂದು ತೀರ್ಮಾನ ಮಾಡಿದ್ದೇವೆ. ಇಂತಹ ಮಹತ್ವದ ವಿಚಾರವನ್ನು ಸಂಬಂಧಪಟ್ಟವರು ಇದ್ದು ಕೇಳದಿದ್ದರೆ ಹೇಗೆ

ಅಧ್ಯಕ್ಷರು —ನಾನು ತಮಗೆ ವಿಷಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೇನೆ. ತಾವುಗಳು ದಯವಿಟ್ಟು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಅವರು ಹೇಳಿದ್ದುದನ್ನು ಕೇಳುವುದಕ್ಕೆ ಮಾತ್ರ ಇಲ್ಲಿಗೆ ಬಂದಿದ್ದೇವೆಯೋ, ಅಥವಾ ನಾವು ಕೂಡ ಹೇಳಿದ್ದನ್ನು ಅವರು ಕೇಳಬಾರದು ಎಂದು ಏನಾದರೂ ಇದೆಯೋ ? ಮಾನ್ಯ ಮುಖ್ಯಮಂತ್ರಿಗಳು ಕೂಡ ಇಲ್ಲ. ದೇಶದ ರಾಜಕಾರಣ ಮಾಡುವ ಜನರಿಗೆ ಈ ಸದನದ ಕಾರ್ಯಕಲಾಪಗಳಿಗೆ ಹಾಜರಾಗುವುದಕ್ಕೆ ಬರುವುದಿಲ್ಲವೇ ? ಈ ವಿಷಯದ ಮೇಲೆ ೨.೪.೮೭ ರಂದು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದು ನೀವು ಮೊದಲೇ ಹೇಳಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ —ನಾನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಮಾತುಗಳನ್ನು ಬರೆದುಕೊಂಡಿದ್ದೇನೆ. ಸಂಬಂಧಪಟ್ಟ ಮಂತ್ರಿಯವರು ಈಗ ಕೌನ್ಸಿಲ್‌ನಲ್ಲಿದ್ದಾರೆ. ತಾವುಗಳು ಹೇಳಿದ ವಿಚಾರಗಳನ್ನು ಬರೆದುಕೊಂಡಿದ್ದೇನೆ.

೧೧-೩೦ ಎ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನ ಪ್ರಶ್ನೆ ಇಷ್ಟೇ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇರತಕ್ಕಂಥಾದ್ದು ಅವಶ್ಯಕ ಏಕೆಂದರೆ ನಾವು ಇದರ ಬಗ್ಗೆ ಆರೇಳು ದಿವಸ ಧರಣಿ ಮಾಡಿ ಈಗ

ಇದನ್ನು ಚರ್ಚೆಗೆ ತೆಗೆದುಕೊಂಡಿದ್ದು, ಇದರ ಪ್ರಾಮುಖ್ಯತೆಯನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು, ಕನ್‌ವಿನ್ಸ್ ಮಾಡಿಕೊಡಬೇಕು ಎನ್ನುವುದಾಗಿತ್ತು ಸಾಧ್ಯವಾದಷ್ಟು ಚರ್ಚೆಯನ್ನು ಮಾಡುವ ಮೂಲಕ ಅವರ ಮುಂದೆ ವಿಷಯಗಳನ್ನು ಇಟ್ಟರೆ ಏನಾದರೂ ಉಪಯೋಗವಾದಿತು ಎನ್ನುವ ದೃಷ್ಟಿಯಿಂದ ನಾವು ಮಾತನಾಡುತ್ತಿದ್ದೇವೆ. ನೀವು ಏನಾದರೂ ಹೇಳಿಕೊಂಡು ಹೋಗಿ, ಕೊನೆಗೆ ನಾವು ಉತ್ತರ ಕೊಡುತ್ತೇವೆಂದು ಹೇಳುವುದಾದರೆ ಈ ಡಿಸ್‌ಕಷನ್‌ನಿಂದ ಏನು ಉಪಯೋಗ ಇದೆ?

SRI S. R BOMMAI.—It is a joint responsibility ಇದರಲ್ಲಿ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವುದೋ ಒಂದು ಕಾಲದಲ್ಲಿ ನಿಮಗೆ ಒಪ್ಪಿಸಿ ಹೋಗಿದ್ದರೆ ಒಪ್ಪಿಕೊಳ್ಳುತ್ತೇನೆ ಆದರೆ ಚರ್ಚೆಗೆ ನಿಗದಿ ಮಾಡಿದಂತಹ ಸಮಯ ಇದು ಇದನ್ನು ನೀವೂ ಒಪ್ಪಿಕೊಂಡಿದ್ದೀರಿ.

ಅಧ್ಯಕ್ಷರು.—ಅವರಿಗೆ ಬೇಗ ಬನ್ನಿ ಎಂದು ಹೇಳಿಕಳುಹಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಏನು ಮಾತನಾಡಿದ್ದೇನೆಂದು ಅವರಿಗೆ ಗೊತ್ತಿಲ್ಲ, ಯಾರೂ ಕೇಳಲಿಲ್ಲ ಅವರಿಬ್ಬರದ್ದೂ ಬೇರೆ ಏನೋ ಪ್ರಸ್ತಾಪ ನಡೆಯುತ್ತಿತ್ತು. ಅವರು ಕೇಳಿದ್ದರೆ ನಾನು ಏನು ಮಾತನಾಡಿದೆ ಎಂಬುದನ್ನು ಹೇಳಲ್ಲಿ ನಾನು ಹೇಳಿದ್ದೇನೆಂದರೆ ಇವತ್ತು ಮಂಡಲ ಪಂಚಾಯತಿಯಲ್ಲಿ you have made the rural artisans and agricultural labourers as Jokers ಎಂದು ಹೇಳಿದೆ. Why did I say that? We don't want to waste our time here. We have got better business and better work. ಇಷ್ಟು ಹಗುರವಾಗಿ ನಮ್ಮನ್ನು ತೆಗೆದುಕೊಂಡರೆ ಹೇಗೆ? You must pull up the Government They are insulting us. ನಾವು ಏನು ಹೇಳುತ್ತೇವೆ ಎಂಬುದನ್ನು ಕೇಳುವ ಹಾಗೆ ಇಲ್ಲ, ಇವರಿಗೆ ಇಷ್ಟ ಬಂದಂತೆ ಉತ್ತರ ಹೇಳುತ್ತಾರೆ, ನಾವು ಅದನ್ನು ಕೇಳಬೇಕು. ಬೆಳಗಿನಿಂದ ಸಂಜೆಯವರೆಗೂ ನಾವು ಇಲ್ಲಿ ಕುಳಿತುಕೊಳ್ಳುತ್ತೇವೆ. ನಾನು ಭಾಷಣವನ್ನು ಪ್ರಾರಂಭ ಮಾಡುವಾಗಲೇ ಹೇಳಿದೆ ಇವರುಗಳಿಗೆ ಯಾರಿಗೂ ನಿಗಾ ಇರುವುದಿಲ್ಲ ಮಾನ್ಯ ಮುಖ್ಯ ಮಂತ್ರಿಗಳು ಸಹ ಇಲ್ಲದೇ ಇರುವುದು ನನ್ನ ದುರಾದೃಷ್ಟ ಎಂದು ಹೇಳುತ್ತಾ ಪ್ರಾರಂಭ ಮಾಡಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮಗೆ ನಿಗಾ ಇದೆ ಪ್ರತಿಯೊಂದನ್ನೂ ಜವಾಬ್ದಾರಿಯಿಂದ ಕೇಳುತ್ತಿದ್ದೇವೆ ಜವಾಬ್ದಾರಿಯಿಂದ ಉತ್ತರ ಕೊಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಬಂದಾದ ಮೇಲೆ ಮಾತನಾಡಿದರೆ ಆಯಿತು ನಷ್ಟವೇನಾಯಿತು ಆಗುವ ನಷ್ಟವೆಲ್ಲಾ ಆಗಿದೆ, ಎಂಟು ಸಾವಿರವಿಲ್ಲದಿದ್ದರೆ ೧೫ ಸಾವಿರ ಖರ್ಚು ಮಾಡಿ, ಖರ್ಚು ಮಾಡುವುದಕ್ಕೆ ಅವರಿಗೆ ಏನು ಲೆಕ್ಕ ಇದೆಯೋ? ಇವರು ಹೇಳಿದ್ದನ್ನು ಕೇಳುವುದಕ್ಕೋಸ್ಕರ ನಾವು ಇಲ್ಲಿ ಬಂದಿದ್ದೇವೆಂದು ತಿಳಿದುಕೊಂಡಿದ್ದಾರೆ? ಇವರ ಪ್ರಯತ್ನ ಹೇಗೆ ಇದೆ ಎಂದರೆ, ಜೋಕರ್ ಹಾಗೆ, ಇವರು ನಾಮಿನೇಷನ್ ಮಾಡುತ್ತಿದ್ದಾರೆ, ಇವರು ಸೋತರೂ ಅಧಿಕಾರಕ್ಕೆ ಬರಬೇಕು ಗೆದ್ದರೂ ಅಧಿಕಾರಕ್ಕೆ ಬರಬೇಕು. This is the way they are doing. That is why I wanted to raise this point. ಹೇಗಾದರೂ ಮಾಡಿ ನಾಮಿನೇಷನ್ ಮಾಡುವುದರ ಮೂಲಕ ಸೋತರೂ ಅಧಿಕಾರಕ್ಕೆ ಬರಬೇಕು, ಗೆದ್ದರೂ ಅಧಿಕಾರಕ್ಕೆ ಬರಬೇಕೆನ್ನುವುದು ಇವರ ವಾದ.

ಅಧ್ಯಕ್ಷರು.—ತಾವು ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದನ್ನೇ ನೇರವಾಗಿ ಹೇಳುತ್ತಿದ್ದೇನೆ. ನಾಮಿನೇಷನ್ ಮಾಡಿಕೊಂಡು ಸೋತು ಹೋದರೂ ಅಧಿಕಾರಕ್ಕೆ ಬರಬೇಕು ಎನ್ನುವುದು ಇವರ ಇಚ್ಛೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲೆಲ್ಲಿ ಸೋತಿದ್ದಾರೆ, ಅಲ್ಲಿ ಇವರು ನಾಮಿನೇಷನ್ ಮಾಡಿ ಅಧಿಕಾರಕ್ಕೆ ಬರಬೇಕೆಂದಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಹಾತ್ಮ ಗಾಂಧೀಜಿಯವರು ಕಂಡಿದ್ದ ಕನಸು ಇದೇ ಏನು, ನೀವು ಸೋತರೂ ಅಧಿಕಾರಕ್ಕೆ ಬನ್ನಿ ಎಂದು, ನಿಮಗೆ ಬೇಕಾದ ಹಾಗೆ ನಾಮಿನೇಷನ್ ಮಾಡಿಕೊಳ್ಳಿ ಎಂದು ಹೇಳಿದ್ದಾರಾ ? ಬಾಪೂಜಿ, ಜಯಪ್ರಕಾಶ ನಾರಾಯಣ್ ಅವರ ಹೆಸರು ಹೇಳುವುದಕ್ಕೆ ನಿಮಗೆ ಮನಸ್ಸು ಹೇಗೆ ಬರುತ್ತದೆ ? ಈಗ ಅವರಿಬ್ಬರಂತೂ ಇಲ್ಲ. ಎಸ್. ಕೆ. ಡೇ ಅವರು ಬದುಕಿದಾರೆ, ನಾನೂ ಕೂಡ ಹೋಗಿ ಅವರನ್ನು ಮಾತನಾಡಿಸಿ ಕೊಂಡು ಬಂದೆ. ಅವರನ್ನು ಹೋಗಿ ಕೇಳಲಿ, ನಾಮಿನೇಷನ್ ಮಾಡುತ್ತಿರುವುದು ಸರಿಯೇ, ನಾವು ಸೋತರೂ ನಾಮಿನೇಷನ್ ಮಾಡಿಕೊಂಡು ಅಧಿಕಾರದಲ್ಲಿರಬಹುದೇ ಎಂದು ಕೇಳಿ, ಗೆದ್ದರೂ ನಾವೇ ಬರುತ್ತೇವೆ ನಾಮಿನೇಷನ್ ಮಾಡಿಕೊಳ್ಳುತ್ತೇವೆಂದು ಕೇಳಿ, ಎಸ್. ಕೆ. ಡೇ ಅವರು ಹಣೆ ಹಣೆ ಗಟ್ಟಿಸಿಕೊಂಡು ಅತ್ತು ಬಿಡುತ್ತಾರೆ ಅಷ್ಟೇ.

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಚುನಾವಣೆಯಾಗುವುದಕ್ಕೆ ಮುಂಚೆಯೇ ಪಾಸ್ ಮಾಡಿದಂತಹ ಕಾನೂನು ಇದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದೇ ಕಾನೂನನ್ನು ನಾನು ಹೇಳುತ್ತಿರುವುದು, ನೀವು ಕಾನೂನು ಬಿಟ್ಟು ಹೋಗುತ್ತಿದ್ದೀರಿ ಎಂದು. ನಾನು ಹೇಳಿದ್ದನ್ನು ಕೇಳಿಲ್ಲ ಎನ್ನುವುದಕ್ಕೆ ಇದೇ ಸಾಕ್ಷಿ. ನಾನು ಹೇಳುವುದನ್ನೆಲ್ಲಾ ಬಿಟ್ಟು ಇದು ಆಗ ಆದ ಕಾನೂನು ಎಂದು ಹೇಳುವುದೊಂದನ್ನು ಬಿಟ್ಟರೆ ಇವರಿಗೆ ನಾನು ಹೇಳಿದ್ದು ಏನು ಅರ್ಥವಾಗಿದೆ ? ನಾವು ಏನು ಮಾತನಾಡಿದರೂ ನಿಮಗೆ ಗೊತ್ತಿರುವುದೊಂದೇ ಸೋತರೂ ನಾವೇ, ಗೆದ್ದರೂ ನಾವೇ, ನಾಮಿನೇಷನ್ ಮಾಡಿಕೊಂಡು ಅಧಿಕಾರದಲ್ಲಿರುತ್ತೇವೆಂದು ಇವರು ಹೇಳುತ್ತಾರೆ. ಈಗ ಏನಾಗಿದೆ ಎಂದರೆ, ಡಿವೈಡ್ ಅಂಡ್ ರೂಲ್ ಪಾಲಿಸಿಯಾಗಿದೆ, ಬ್ರಿಟಿಷರದ್ದು ಸ್ವಲ್ಪ ಇನ್ನೂ ಉಳಿದುಕೊಂಡಿದೆ, ಡಿವೈಡ್ ಮಾಡಬೇಕು, ರೂಲ್ ಮಾಡಬೇಕು ಅದನ್ನು ಬಿಟ್ಟರೆ ಇನ್ನೇನೂ ಇವರಲ್ಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮಾತೆತ್ತಿದರೆ ನಮ್ಮದೊಂದು ಪಾತ್ರ ನಿಮ್ಮದೊಂದು ಪಾತ್ರ ಎಂದು ಹೇಳುತ್ತಾರೆ, ನಮ್ಮ ನಮ್ಮ ಪಾತ್ರ ಮಾಡುವುದಕ್ಕೆ ನಮ್ಮನ್ನು ಏಕೆ ಬಿಡಬಾರದು ? ನಮ್ಮ ಪಾತ್ರವನ್ನು ನಾವು ಮಾಡುವಾಗ ಮಧ್ಯದಲ್ಲಿ ಇವರು ಏಕೆ ಬರಬೇಕು ಜೋಕರ್ ಹಾಗೆ, ನಾಮಿನೇಷನ್ ಮಾಡುವುದನ್ನು ಬಿಟ್ಟು ಬಿಡಿ. ಬಲವಂತ ಮಾಘಸ್ನಾನ ಬೇಡ ಇಷ್ಟು ಖಂಡನೀಯವಾದ ರೂಲ್ಸ್‌ಗಳನ್ನು ಮಾಡದೇ ಇದನ್ನು ವಾಪಸ್ ತೆಗೆದುಕೊಂಡು ನಮ್ಮ ನಮ್ಮ ಪಾತ್ರ ಮಾಡುವುದಕ್ಕೆ ನಮಗೆ ಅನುಕೂಲ ಮಾಡಿಕೊಡಿ Let them know we are not aganist Backward Community. ಇದು ನಮ್ಮ ತತ್ವ ಇಂದಿರಾ ಗಾಂಧಿಯವರು ನಮಗೆ ಹಾಕಿಕೊಟ್ಟಿರುವ ತತ್ವ. ಇದು ಪಾಲಿಸಿ ಇದು. ನಿಮಗೆ ಬೇಕಾದಾಗ ಬ್ಯಾಕ್‌ವರ್ಡ್ ಕಮ್ಯುನಿಟಿ ನಾಮಿನೇಟ್ ಮಾಡುವುದಲ್ಲ. ಇವರುಗಳ ಪಾಲಿಗೆ ದೇವರು ಇದ್ದರೆ ಒಳ್ಳೆಯ ಬುದ್ಧಿಯನ್ನು ಕೊಡಲಿ, ಇವರ ಭಾಗಕ್ಕೆ ದೇವರು ಇಲ್ಲದಿದ್ದರೆ ಎಸ್. ಕೆ. ಡೇ ಅಂತಹವರಾದರೂ ಬುದ್ಧಿಯನ್ನು ಇವರಿಗೆ ಕೊಡಲೀ ಎಂದು ಹೇಳುತ್ತಾ ನನಗೆ ಇಲ್ಲಿ ನಾಲ್ಕು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಶ್ರೀ ಚಂದ್ರಕಾಂತ ಬೆಲ್ಲದ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ಎಂ ವೀರಪ್ಪ ಮೊಯಿಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಇವತ್ತು ಈ ಮಂಡಲ ಪಂಚಾಯತಿಗಳಿಗೆ ನಾಮಕರಣ ಮಾಡುವ ಬಗ್ಗೆ ಚರ್ಚೆ ಮಾಡುವಂತಹ ಸಮಯದಲ್ಲಿ ಈ ಸದನದ ನಾಯಕರಾದ ಮುಖ್ಯ ಮಂತ್ರಿಗಳು ಇದ್ದಾಗ ಈ ಸದನದ ಸಲಹಾ ಸಮಿತಿಯ ಸಭೆಯಲ್ಲಿ ಇದ್ದಾಗ ನಿರ್ಣಯವಾದದ್ದು. ಇದು ಒಂದು ಬಹಳ ಗಂಭೀರವಾದಂತಹ ವಿಚಾರ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕೆಂದು ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಆದರೆ ಮೊದಲಿನಿಂದಲೂ ಕೂಡ ಈ ಬಗ್ಗೆ ತೀರ್ಮಾನ ಮಾಡುವಂತಹ ಒಂದು ಸದಭಿಪ್ರಾಯ ಅದು ಒಂದು ಕಡೆ ಒತ್ತಟ್ಟಿಗೆ ಇರಲಿ, ಈ ಸದನದಲ್ಲಿ ಈ ಚರ್ಚೆಯನ್ನು ಮೊಟಕು ಮಾಡಬೇಕೆಂಬ ಅಭಿಪ್ರಾಯ ಸದನದಲ್ಲಿ ಮತ್ತು ಸದನದ ಹೊರಗಡೆ ಜನಗಳ ಕಿವಿಗೆ ಬೀಳಬಾರದು ಎಂಬ ರೀತಿಯ ಒಂದು ವಿಚಾರ ಈಗ ಅಧಿಕಾರದಲ್ಲಿರತಕ್ಕಂತಹ ಪಕ್ಷದಲ್ಲಿ ಸಂಪೂರ್ಣವಾಗಿ ಒಡಕು ಮೂಡಿದೆ, ಇದು ಇವತ್ತೂ ಕೂಡ ಸ್ಪಷ್ಟವಾಗಿದೆ. ಈ ಸದನದಲ್ಲಿ ಇಂತಹ ಒಂದು ಪ್ರಾಮುಖ್ಯವಾದಂತಹ ಚರ್ಚೆಯಾಗುತ್ತಿರುವಾಗ ಅದೂ ಕೂಡ ಈ ಸದನದಲ್ಲಿ ಈ ವಿಚಾರದ ಬಗ್ಗೆ ೫-೬ ದಿವಸಗಳ ಕಾಲ ಧರಣಿ ಆದಂತಹ ವಿಚಾರವಿದ್ದರೂ ಕೂಡ, ಇದಕ್ಕೆ ಸಂಬಂಧ

ಪಟ್ಟಂತಹ ಸಚಿವರು ಇಲ್ಲ, ಇದಕ್ಕೆ ಸಮಜಾಯಿಷಿ ಉತ್ತರ ಕೊಡತಕ್ಕಂತಹ ಮುಖ್ಯ ಮಂತ್ರಿಗಳು ಇಲ್ಲ, ಅದೆಲ್ಲವನ್ನೂ ಬಿಟ್ಟು ಈ ಒಂದು ಗಂಭೀರವಾದಂತಹ ಒಂದು ಚರ್ಚೆ ಈ ಸದನದಲ್ಲಿ ಆಗುತ್ತಿರುವಾಗ ಆ ಕಡೆಯಲ್ಲಿ ಇರತಕ್ಕಂತಹ ಸದಸ್ಯರ ಸಂಖ್ಯೆ ಅಥವಾ ಈ ನಮ್ಮ ಸಂಪುಟದ ಸದಸ್ಯರ ಸಂಖ್ಯೆ ಕಡಿಮೆ ಇದೆ ಖಾಲಿ ಕುರ್ಚಿಗಳನ್ನು ನೋಡಿದರೆ ಇವರಿಗೆ ಎಷ್ಟು ಆಸಕ್ತಿ ಇದೆ ಈ ಚರ್ಚೆಯ ಬಗ್ಗೆ ಈ ವಿಚಾರದ ಬಗ್ಗೆ ಎಂಬುದು ಗೊತ್ತಾಗುತ್ತದೆ

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ಸಾಲನ್ನು ನೋಡಿಕೊಳ್ಳಿ.

ಶ್ರೀ ಬಿ. ಎಂ. ಇದಿನಬ್ಬ,—ಅವರು ೧೪೮ ಜನರಿದ್ದಾರೆ, ನಾವು ೬೮ರಲ್ಲಿ ಇಷ್ಟು ಇದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂತಹ ಒಂದು ಪ್ರಾಮುಖ್ಯವಾದಂತಹ ವಿಷಯದ ಬಗ್ಗೆ ಪ್ರಜಾ-ತತ್ವದ ವಿಧಾನದ ಬಗ್ಗೆ ಆ ಪಕ್ಷದವರಿಗೆ ಬಹಳಷ್ಟು ನಿರ್ಲಕ್ಷತೆ ಇದೆ. ಏಕೆಂದರೆ ಜನತಾ ಪಕ್ಷದ ಸದಸ್ಯರು ೮೩ರಲ್ಲಿ ಅಧಿಕಾರಕ್ಕೆ ಬಂದರು, ಇದೂ ಒಂದು ರೀತಿಯ ಮಾದರಿ. ನಾಮಕರಣದ ಸರಕಾರ. ೧೯೮೩ರಲ್ಲಿ ಜನರಿಂದ ಆರಿಸಿ ಬಂದವರು ೮೫ರಲ್ಲಿ ಕೂಡ ಏನಾಯಿತು ಎಷ್ಟು ಪ್ರಮಾಣದಲ್ಲಿ ಎಲೆಕ್ಟ್ ಆಗಿ ಬಂದಿದ್ದೀರಿ ಎಂಬುದು ನಿಮಗೆ ಗೊತ್ತಿದೆ. ಇವತ್ತು ಸೊಸೈಟಿಗಳಿಗೆಲ್ಲಾ ನಾಮಕರಣ ಮಾಡಿ ಎಲ್ಲಾ ಸಹಕಾರ ಸಂಘಗಳನ್ನೂ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿದ್ದೀರಿ, ಆ ಪ್ರಯತ್ನ ಬೇಡ. ಹಿಂದೆ ಕೆಲವು ಸತ್‌ಸಂಪ್ರದಾಯಗಳು ಇದ್ದವು.

೧೯೮೦ನೇ ಇಸವಿಯಿಂದ ೮೩ನೇ ಇಸವಿಯವರೆಗೆ ನಾವು ಅಧಿಕಾರದಲ್ಲಿ ಇರುವಾಗ ತಾವು ದಯ ಮಾಡಿ ನೋಡಬೇಕು, ನಾವು ಎಷ್ಟು ನಾಮಕರಣ ಮಾಡಿದ್ದೇವೆ, ಎಷ್ಟು ಸಹಕಾರ ಸಂಘಗಳಿಗೆ ನಾಮಕರಣ ಮಾಡಿದ್ದೇವೆ ಎಂದು ತಾವು ನೋಡಬೇಕು. ತಾವು ಬಂದ ಮೇಲೆ ಎಷ್ಟು ನಾಮಕರಣ ಮಾಡಿದ್ದೀರಿ ಎನ್ನುವುದರ ಬಗ್ಗೆ ಆ ಪಟ್ಟಿಯನ್ನು ಇಲ್ಲಿ ಒದಗಿಸಿ ನಾಮಕರಣ ಮಾಡುವಾಗ ಈಗ ಲ್ಯಾಂಡ್ ಟ್ರಿಬ್ಯೂನಲ್ ಇರಲಿ, ಡಿಪಾರ್ಟ್‌ಮೆಂಟ್ ರೆಕ್ರೂಟ್‌ಮೆಂಟ್ ಕಮಿಟಿಗಳು ಇರಲಿ, ಆದರೆ ಎಲ್ಲವೂ ಏಕಪಕ್ಷೀಯವಾಗಿ ನಾಮಕರಣ ಮಾಡತಕ್ಕಂಥದ್ದು ಸರಿಯಲ್ಲ. ಇದು ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧವಾಗಿದೆ. ಪ್ರಜಾಪ್ರಭುತ್ವದ ತತ್ವಗಳಿಗೆ ಪ್ರತಿಕ್ರಿಯೆಯನ್ನು ತೋರಿಸತಕ್ಕಂಥ ಸಂವೇದನಾ ಶಕ್ತಿಯನ್ನು ಇವರ ಪಕ್ಷ ಸಂಪೂರ್ಣವಾಗಿ ಕಳೆದುಕೊಂಡುಬಿಟ್ಟಿದೆ. ಪ್ರಜಾಪ್ರಭುತ್ವದಲ್ಲಿ ಮತ್ತೊಂದು ಪಕ್ಷದ ವಿಚಾರವನ್ನು ತಿಳಿಯತಕ್ಕಂಥ ಅದರ ಪ್ರಕಾರ ವರ್ತನೆ ಮಾಡತಕ್ಕಂಥ ಸಂವೇದನಾಶಕ್ತಿಯನ್ನು ಇವರ ಪಕ್ಷ ಸಂಪೂರ್ಣವಾಗಿ ಕಳೆದುಕೊಂಡಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ನಾಮಕರಣದ ವಿಚಾರದಲ್ಲಿ ಬೇರೆ ಬೇರೆ ಸಹಕಾರ ಸಂಘಗಳ ಬಗ್ಗೆ ಬೇರೆ ಬೇರೆಯಾಗಿ ಚರ್ಚೆ ಮಾಡುವುದು ಇದ್ದರೆ ಮಾಡೋಣ. ಅಂಕಿ ಸಂಖ್ಯೆಯನ್ನೂ ಕೊಡುತ್ತೇನೆ. ನಿಮಗಿಂತ ಹೆಚ್ಚಿಗೆ ವಿರೋಧ ಪಕ್ಷಗಳಿಗೆ ಸ್ಥಾನ ಮಾನವನ್ನು ಕೊಟ್ಟಿದ್ದೇವೆ, ಬ್ಯಾಕ್‌ವರ್ಡ್ ಕ್ಲಾಸ್‌ಗೆ ಕೊಟ್ಟಿದ್ದೇವೆ, ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಕೊಟ್ಟಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಒಂದು ಪ್ರಶ್ನೆ ಕೇಳಿದಾಗ ಜೆ. ಹೆಚ್. ಪಟೇಲ್‌ರವರು ಹೇಳಿದರು. ಅದು ರೆಕಾರ್ಡ್ ಆಗಿದೆ. ನಮ್ಮ ನೀತಿಯೋ ಅದು, ನಾವು ಅದನ್ನು ಮಾಡುವುದು ಹಾಗೆಯೇ, ಸರ್ಕಾರದ ನೀತಿಯೋ ಅದು, ಕಮಿಟಿಗಳಲ್ಲಿ ನಿಮಗೆ ಸ್ಥಾನ ಇಲ್ಲ ಎಂದು ಹೇಳಿದರು. ನಮಗೆ ಕೊಡಿ ಎಂದು ನಾವು ಧರಣಿ ಮಾಡುವುದಿಲ್ಲ. ರೆಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ಸ್ಥಾನ ಕೊಡಿ ಎಂದು ಅವರೆಲ್ಲರೂ ಧರಣಿ ಮಾಡಿದರು. ಆದರೆ ನಮ್ಮ ನೀತಿ ಅದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ —ಡಿಎಲ್‌ಆರ್‌ಸಿ ಕಮಿಟಿ ಇರಬಹುದು, ರೆಕ್ರೂಟ್‌ಮೆಂಟ್ ಕಮಿಟಿ ಇರಬಹುದು, ಲ್ಯಾಂಡ್ ಟ್ರಿಬ್ಯೂನಲ್ಸ್ ಕಮಿಟಿ ಇರಬಹುದು, ತಾವು ಯಾವುದೇ ಕಮಿಟಿ ಗಳನ್ನು ತೆಗೆದುಕೊಳ್ಳಲಿ, ನಮ್ಮ ಎಂ.ಎಲ್.ಎ.ಗಳಲ್ಲಿ ನಾಮಿನಿ ಎಂ.ಎಲ್.ಎ. ಇರಬೇಕೆಂದು ಒಂದು ಪರಂಪರೆ ಇತ್ತು. ಈಗ ಎಂ.ಎಲ್.ಎ.ಗಳ ಬದಲಿಗೆ ಒಂದು ನಾಮಕರಣ ಮಾಡಿದ್ದಕ್ಕೆ ಅದನ್ನು ಒಪ್ಪಿಕೊಂಡರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಮಿನೇಟ್ ಮಾಡಿದ್ದನ್ನು ತೆಗೆದುಹಾಕಿದರು. ಆ ಸ್ಥಳಕ್ಕೆ ಬೇರೆ ಹೆಸರನ್ನು ಕೊಡಿ ಎಂದು ಅವರು ಕೇಳಿದ ಮೇಲೆ ನಾನು ಹೆಸರು ಕೊಟ್ಟಿದ್ದೆ ಆ ಹೆಸರನ್ನು ಪುನಃ ತೆಗೆದುಹಾಕಿ ಅವರ ಪಾರ್ಟಿಯವರಿಗೆ ನಾಮಿನೇಟ್ ಮಾಡಿದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಲ್ಯಾಂಡ್ ಟ್ರಿಬ್ಯೂನಲ್ ಬಗ್ಗೆ ವಿವರಣೆಯನ್ನು ಕೊಡುವುದಾದರೆ......

ಶ್ರೀ ಎಂ. ರಾಮಪ್ಪ.—ಬಳ್ಳಾರಿ ತಾಲ್ಲೂಕಿನಲ್ಲಿ ಏನು ಮಾಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಒಬ್ಬ ಶಾಸಕನಾಗಿ ಹೆಸರು ಕೊಟ್ಟಿದ್ದನ್ನು ನೀವು ತೆಗೆದು ಬದಲಾವಣೆ ಮಾಡಿದ್ದೀರಿ, ಏತಕ್ಕೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಅವರ ಕಾಲದಲ್ಲಿ ಟ್ರಿಬ್ಯೂನಲ್‌ನಲ್ಲಿ ಮಾಡಿರತಕ್ಕಂಥ ಸದಸ್ಯರ ಪಟ್ಟಿಯನ್ನು, ನಮ್ಮ ಕಾಲದಲ್ಲಿ ಮಾಡಿರತಕ್ಕಂಥ ಸದಸ್ಯರ ಪಟ್ಟಿಯನ್ನೂ ಒದಗಿಸಿಕೊಡುತ್ತೇನೆ, ಕಂಪೇರ್ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನ ತಾಲ್ಲೂಕಿನದೇ ಜೀವಂತ ಉದಾಹರಣೆ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಬ್ಬರು ಶಾಸಕರು ಇದ್ದರೆ ಅಲ್ಲಿ ಒಬ್ಬರಿಗೆ ಬರುತ್ತದೆ, ಅದು ನೀತಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿರೋಧ ಪಕ್ಷದವರಿಗೆ ಒಂದು ಕೊಡುತ್ತೇವೆ ಎಂದು ಹೇಳಿದಿರಿ. ನೀವು ನಿಮ್ಮ ಜಾಗದಲ್ಲಿ ಬೇರೆಯವರಿಗೆ ಕೊಡಿ ಎಂದು ಹೇಳಿದಿರಿ, ಕೊಟ್ಟಿದ್ದನ್ನು ಏತಕ್ಕೆ ತಪ್ಪಿಸುತ್ತೀರಿ ? ಛೇಂಜ್ ಮಾಡಿ ಇವತ್ತಿನ ದಿವಸ ಬೇರೆಯವರಿಗೆ ಹಾಕಿದ್ದೀರಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತಿನ ವಿಚಾರ ಮಾತನಾಡೋಣ.

ಶ್ರೀ ಎಂ. ವೀರಪ್ಪಮೊಯಿಲಿ.—ಇವತ್ತಿನ ವಿಚಾರವನ್ನೆ ಮಾತನಾಡೋಣ. ನಿಮ್ಮ ಧೋರಣೆ ಏನು ಇದೆ ಎಂದು ನೋಡಬೇಕು. ಜೆ. ಹೆಚ್. ಪಟೇಲರು ಈಗಾಗಲೇ ಅದನ್ನು ಸ್ಪಷ್ಟಪಡಿಸಿದ್ದಾರೆ, ರಾಜಕೀಯವಾಗಿ ನಾವು ಮಾಡುವುದೇ ? ಅಧಿಕಾರ ಪುಣ್ಯವಶಾತ್ ಬಂದಿದೆ, ಅಧಿಕಾರವನ್ನು ಬಿಡಲಿಕ್ಕೆ ತಯಾರಿಲ್ಲ, ಇದು ಸರ್ಕಾರದ ನೀತಿಯೇ ಎಂದು ಆಗಾಗ ಪುನರ್ ಉಚ್ಚಾರಣೆ ಮಾಡುತ್ತಿದ್ದಾರೆ. ಬಿ.ಡಿ.ಎ.ನಲ್ಲಿ ಕೂಡಾ ನಮ್ಮ ಸರ್ಕಾರ ಇರುವಾಗ ವಿರೋಧ ಪಕ್ಷದವರನ್ನು ಹಾಕಿದ್ದೆವು. ಎಂ. ಎಸ್. ಕೃಷ್ಣನ್ ಕೂಡಾ ಅವರ ಜೊತೆಯಲ್ಲಿ ಚುನಾವಣೆಯಾಗಿ ಬಂದವರು, ತಮಗೆ ಸಹಕಾರವನ್ನು ಕೊಡ ತಕ್ಕಂಥವರು. ಬಿ.ಡಿ.ಎ.ನಲ್ಲಿ ಕೃಷ್ಣನ್ ಇದ್ದರೆ ಅನಾನುಕೂಲವಾಗುತ್ತದೆಂದು ಅವರನ್ನು ತೆಗೆದು ನಿಮ್ಮ ಸದಸ್ಯರನ್ನು ಹಾಕಿಕೊಂಡಿದ್ದೀರಿ. ಇದು ಪಾಪ, ಏನು ಆಗಿದೆ ಅಂದರೆ, ಮಾನ್ಯ ಬೊಮ್ಮಾಯಿಯವರನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಅವರಿಗೆ ಎಲ್ಲಾ ವಿಚಾರ ಗೊತ್ತಿಲ್ಲ. ಟ್ರಿಬ್ಯೂನಲ್ ವಿಚಾರ ಸ್ವಲ್ಪ ಗೊತ್ತಿದೆ. ಅದರಲ್ಲಿಯೂ ಕೂಡ ಕೆಲವು ಕಡೆ ತಪ್ಪು ಇರಬಹುದು ಮತ್ತು ಕೆಲವು ಕಡೆ ಸರಿ ಇರಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಿಯೂ ಕೂಡ ಒತ್ತಡ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಮ್ಮಂಥವರಿಗೆ ಗೊತ್ತಿದೆ. ಸನ್ಮಾನ್ಯ ದೇವೇಗೌಡರಿಗೆ ಗೊತ್ತಿದೆ. ಯಾವ ತರಹ ರೆಕಮಂಡೇಷನ್ ಮಾಡುತ್ತಾ ಇದ್ದೀರಿ. ಒಂದು ಹೆಜ್ಜೆಯಲ್ಲಿ ಕಾಮಗಾರಿ ಇರಲಿ ನಾಮಿನೇಷನ್ ಇರಲಿ ಅಥವಾ ಯಾವುದೇ ವಿಚಾರ ಇದ್ದರೂ ಕೂಡ ನಾವು ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತಾ ಇದ್ದೆವು. ಮಾಡಿದ ಕೆಲಸವನ್ನು ಎಲ್ಲೂ ಕೂಡ ಇಲ್ಲವೆಂದು ಹೇಳಬೇಡಿ. We have taken. ನಮ್ಮ ಕಾಲದಲ್ಲಿ ಡಿ.ಎಲ್.ಆರ್.ಸಿ.ನಲ್ಲಿ ಸನ್ಮಾನ್ಯ ಬೊಮ್ಮಾಯಿಯವರು ಇದ್ದರು. ಆದರೆ ಈಗ ನೀವು ಮಾಡಿರತಕ್ಕ ಡಿ.ಎಲ್.ಆರ್.ಸಿ.ನಲ್ಲಿ ಯಾವುದೇ ಒಬ್ಬ ನಮ್ಮ ಪಕ್ಷದ ಶಾಸಕನೂ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಧಾರವಾಡ ಜಿಲ್ಲೆಯಲ್ಲಿ ಮಾತ್ರ. ೧೯ ಜಿಲ್ಲೆಗಳಲ್ಲಿ ಒಂದು ಜಿಲ್ಲೆಯಲ್ಲಿ ಇದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ದೇಶಮುಖ್ ಅವರನ್ನು ನಮ್ಮ ಕಾಲದಲ್ಲಿ ಜನತಾ ಪಕ್ಷದ ಸದಸ್ಯರನ್ನಾಗಿ ಡಿ.ಎಲ್.ಆರ್.ಸಿ.ಯಲ್ಲಿ ನೇಮಕ ಮಾಡಿದ್ದೆವು. ಸನ್ಮಾನ್ಯ ಬೊಮ್ಮಾಯಿಯವರನ್ನು ಸಹ ಧಾರವಾಡದಲ್ಲಿ ನೇಮಕ ಮಾಡಿದ್ದೆವು.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ನಮ್ಮ ತಾಲ್ಲೂಕಿನಲ್ಲಿ ಡಿ.ಎಲ್.ಆರ್.ಸಿ.ನಲ್ಲಿ ಶ್ರೀ ಆರ್.ಎನ್. ನಾಯಕ್ ಅವರನ್ನು ನೇಮಕ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾವಾಗ ಮಾಡಿದ್ದೀರಿ, ಯಾವ ವರ್ಷದಲ್ಲಿ. ಯಾವುದೋ ಕನಸಿನ ಬಗ್ಗೆ ಮಾತನಾಡುತ್ತಿದ್ದೀರಿ. ಸನ್ಮಾನ್ಯ ಬೊಮ್ಮಾಯಿಯವರನ್ನು ಸನ್ಮಾನ್ಯ ದೇಶಮುಖ್ ಅವರನ್ನು ನೇಮಕ ಮಾಡಿದ್ದೀವಿ. ನೀವು ಯಾರನ್ನೂ ಮಾಡಿಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅವರಿಗೆ ಸಾಕಾಗುವುದಿಲ್ಲ. ಇನ್ನು ಬೇರೆ ಪಕ್ಷದವರನ್ನು ಏತಕ್ಕೆ ಹಾಕುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬೇರೆ ಪಕ್ಷದವರಿಗೆ ಕೊಟ್ಟಿದ್ದೇವೆಂದು ಹೇಳಬೇಡಿ. ಇವೊತ್ತು ತಮ್ಮ ಉದಾಹರಣೆ ಜೀವಂತವಾಗಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದೆ ಎಂದು ನಾನು ಹೇಳುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಇಲ್ಲಿ ನಡೆಯುತ್ತಾ ಇರತಕ್ಕಂಥಹ ಧಾಟಿಯನ್ನು ನೋಡಿದರೆ ಡಾ. ರಾಜೇಂದ್ರ ಪ್ರಸಾದ್ ಅವರು ೨೬ನೇ ನವೆಂಬರ್ ೧೯೪೯ ರಲ್ಲಿ ಅವರು ತಮ್ಮ ಮುಕ್ತಾಯ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಈ ಮಾತು ಜ್ಞಾಪಕಕ್ಕೆ ಬರುತ್ತದೆ. ಈಗ ನೂರಾರು ಪಾಲು ಜನತಾ ಪಕ್ಷದವರಿಗೆ ಇದು ಅನ್ವಯ ಆಗುವುದರಿಂದ ಇದನ್ನು ನಾನು ಕೋಟ್ ಮಾಡುತ್ತೇನೆ. ಅವರು ಏನು ಹೇಳಿದ್ದಾರೆ ಅಂದರೆ

> "We have prepared a democratic institution, he said. But successful working of the democratic institution required not those who have to work, but their willingness to respect other's view-point."

ಇಲ್ಲಿ ಚರ್ಚೆ ಆಗತಕ್ಕಂಥ ಕ್ರಮ ನೋಡಿದರೆ ಅಥವಾ ಹೊರಗಡೆ ನಡೆದಿರತಕ್ಕ ಸರ್ಕಾರದ ನಡವಳಿಕೆ ನೋಡಿದರೆ it is totally lacking–willingness to respect the view-points. It is totally lacking. ಇದು ಸತತವಾಗಿ ನಡೆಯುತ್ತಿದೆ. Willingness to reject the other's view-points, willingness to dis-respect the other's view-points. Capacity for compromise and accommodation. ಇದು ಮೂರು ಡಾ. ರಾಜೇಂದ್ರ ಪ್ರಸಾದ್ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿ ಕನ್‌ಕ್ಲೂಡ್ ಮಾಡುವಾಗ ಹೇಳಿದ್ದಾರೆ. ಈ ಮೂರು ಗುಣಗಳು ಕೂಡ ಸಂಪೂರ್ಣವಾಗಿ ಈ ಪಕ್ಷದಲ್ಲಿ, ಈ ಸರ್ಕಾರದಲ್ಲಿ ಲೋಪ ಆದದ್ದನ್ನು ಖಂಡಿತವಾಗಿ ತೋರಿಸುತ್ತದೆ. ಟೋಪಿ ನಿಮಗೆ ಸೂಟ್ ಆಗುತ್ತದೆ. ಏಕೆ ಸೂಟ್ ಆಗುತ್ತದೆ ಎಂದು ನಮಗೆ ಕಾಣುತ್ತದೆ. ಇಲ್ಲಿ ಆಗತಕ್ಕ ಚರ್ಚೆ ಸಮಾಲೋಚನೆ ಈ ಸದನದಲ್ಲಿ ನಡೆಯುತ್ತಾ ಇರುವಾಗ ಅವರಿಗೆ ಇದರ ಬಗ್ಗೆ ಚರ್ಚೆಯೂ ಬೇಕಾಗಿಲ್ಲ, ಅಥವಾ ಅವರು ನಿರ್ಣಯ ಏನೇ ತೆಗೆದುಕೊಳ್ಳಲಿ, ವ್ಯಕ್ತಪಡಿಸತಕ್ಕ ಅಭಿಪ್ರಾಯಕ್ಕೆ ಯಾವ ಮನ್ನಣೆ ಅಥವಾ ಗೌರವ ಬರತಕ್ಕ ಅಭಿಪ್ರಾಯ ಇಲ್ಲ. ಪಂಚಾಯಿತಿಗಳ ಆಡಳಿತವನ್ನು ಅವುಗಳಿಗೆ ಚುನಾಯಿತರಾದವರಿಗೆ ಬಿಟ್ಟುಕೊಡೋಣ. ವಿರೋಧ ಪಕ್ಷವಿರಲಿ, ಅಧಿಕಾರದಲ್ಲಿರತಕ್ಕಂಥ ಪಕ್ಷವಾಗಿರಲಿ, ಅವುಗಳಿಗೆ ಅನುಕೂಲ ಕಲ್ಪಿಸಿಕೊಡುವಂತಹ ಸತ್ ಸಂಪ್ರದಾಯ ಪ್ರಜಾಪ್ರಭುತ್ವದಲ್ಲಿ ನಡೆಯಬೇಕು. ಆಗಿದ್ದಾಗ ಮಾತ್ರ ಪ್ರಜಾಪ್ರಭುತ್ವದಲ್ಲಿ ಅಥವಾ ಸಂವಿಧಾನ ಪ್ರಕಾರ ತಯಾರಾದಂತಹ ಸಂಸ್ಥೆಗಳು ಬದುಕಲು ಸಾಧ್ಯವಾಗುತ್ತದೆ. ಹಾಗೂ ಅವು ಯಶಸ್ವಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇದನ್ನು ಸಂಪೂರ್ಣವಾಗಿ ತಿರಸ್ಕರಿಸಿದಂಥ ಒಂದು ಪಕ್ಷ, ಅಧಿಕಾರದಲ್ಲಿರತಕ್ಕಂಥ ಪಕ್ಷ ಇದನ್ನು ಮೂಲೆಗೆ ತಳ್ಳತಕ್ಕಂಥ ಪ್ರಯತ್ನ

ಮಾಡುತ್ತಿದೆ ಎನ್ನುವುದರಲ್ಲಿ ಯಾವ ಅನುಮಾನವೂ ಕೂಡ ಇಲ್ಲ. ಇವತ್ತು ಸರ್ಕಾರದವರು ಇಂತಹ ಒಂದು ಬದಲಾವಣೆಯನ್ನು ಜಾರಿಗೆ ಮಾಡುವುದಕ್ಕೆ ಹೊರಟುಬಿಟ್ಟಿದ್ದಾರೆ. ಹಿಂದುಳಿದವರ್ಗಗಳ ಅನುಕೂಲಕ್ಕಾಗಿ ಹಾಗೂ ಇವರನ್ನು ಮುಂದಕ್ಕೆ ತರುವುದೇ ತಮ್ಮ ಪ್ರಯತ್ನ ಎಂಬ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆ. 'We are representing as champions of the backward classes' ಆದರ ಬಗ್ಗೆ "A new deal for backward classes in Karnataka" ಒಂದು ಪತ್ರಿಕೆಯನ್ನು ಮುದ್ರಿಸಿ ಎಲ್ಲರಿಗೂ ಕೂಡ ಹಂಚಿದ್ದಾರೆ. ಇವರಿಗೆ ಹಿಂದುಳಿದವರ್ಗದವರ ಬಗ್ಗೆ ಏನು ಆಸಕ್ತಿ ಇದೆ. ಹಿಂದುಳಿದವರ್ಗದವರ ನಿರಂತರವಾದ ಹೋರಾಟಕ್ಕೆ ಯಾವ ರೀತಿಯಲ್ಲಿ ಹೆಚ್ಚಿನ ರೀತಿಯಲ್ಲಿ ಸಮ್ಮತಿ ಕೊಟ್ಟಿದ್ದಾರೆ ಎಂಬುದನ್ನು ಅವರೇ ಮುದ್ರಿಸಿದಂಥ ಯಾವ ಒಂದು ಪತ್ರಿಕೆ ಇದೆ, ಆ ಎಲ್ಲಾ ಪತ್ರಿಕೆಯವರು ಕೂಡ ಅದನ್ನು ಸಂಪೂರ್ಣವಾಗಿ ಪ್ರಕಟಿಸಿದ್ದಾರೆ. ಪತ್ರಿಕೆಗಳವರು ಮಾತ್ರ ಅಲ್ಲ. ಇಡೀ ರಾಜಕೀಯ ಅನುಕೂಲಕ್ಕಾಗಿ ಈ ಸರ್ಕಾರದವರು ಇವತ್ತು ಯಾವುದೇ ಸಿದ್ಧಾಂತವನ್ನು ಯಾವುದೇ ಇತಿಹಾಸಪೂರ್ವಕವಾದ ಹೋರಾಟವನ್ನು ಸಂಪೂರ್ಣವಾಗಿ ಮಣ್ಣುಪಾಲು ಮಾಡುವುದಕ್ಕೆ ಇವರು ಹೋಗಲು ಹಿಂಜರಿಯುವುದಿಲ್ಲವೆಂದು ಸ್ಪಷ್ಟವಾಗಿ ನಾನು ಹೇಳುತ್ತೇನೆ. ಈಗ ಎಲ್ಲಾ ಪತ್ರಿಕೆಗಳ ಸಂಪಾದಕೀಯಗಳನ್ನು ನಾವು ನೋಡಿದರೆ ಇವರ ರಿಸರ್ವೇಷನ್ ಪಾಲಿಸಿ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ದಿನಾಂಕ ೯–೧೦–೧೯೮೬ರ 'ಹಿಂದೂ' ಪತ್ರಿಕೆಯಲ್ಲಿ "Buckling under pressure" ಎಂದು ತಿಳಿಸುತ್ತಾ ಸಂಪಾದಕೀಯದಲ್ಲಿ ಈ ಕೆಳಗಿನಂತೆ ಹೇಳಿದ್ದಾರೆ.—

It has reduced the whole idea to farce. It is nothing but a farce. ಎಂದು ಹೇಳಿದ್ದಾರೆ.

ಸರ್ಕಾರದ ಸಿದ್ಧಾಂತ, ಯಾವ ರಾಜಕೀಯ ಸಿದ್ಧಾಂತ, ಆರ್ಥಿಕ ಮತ್ತು ಸಾಮಾಜಿಕ ಸಿದ್ಧಾಂತಗಳ ಒತ್ತಡ ಇವರಿಗೆ ಇಲ್ಲ. ಒಂದು ಪಕ್ಷವಾಗಿ ಕೆಲಸ ಮಾಡುತ್ತಿಲ್ಲ. ಬದಲಾಗಿ ಅವರಿಗೆ ಅನುಕೂಲವಾಗುವಂತಹ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗಬೇಕಾದಂಥ ಈ ಅವಕಾಶ, ಮಾತ್ರ ಇವರನ್ನು ಬಾಧಿಸುತ್ತದೆಯೇ ಹೊರತು ಯಾವುದೇ ಆರ್ಥಿಕ, ಸಾಮಾಜಿ ಮತ್ತು ರಾಜಕೀಯ ಸಿದ್ಧಾಂತದ ಒತ್ತಡ ಈ ಸರ್ಕಾರ ಖಂಡಿತವಾಗಿ ಹೊಂದಿಲ್ಲವೆಂದು ಅನೇಕ ಪತ್ರಿಕೆಗಳು ಹೇಳುತ್ತಿವೆ.

> "The whole episode and the forces at work in Karnataka however, are little different from what is witnessed elsewhere in the country...... And the fact that in the case of Karnataka nearly 90% of the State's population is categorised as 'backward' has reduced the whole idea to a farce.

ಹಿಂದೂ ಪತ್ರಿಕೆಯವರು always keeps a very conservative opinion on any political aspect. ಅವರೇ ಇವೊತ್ತು They have branded your act on the reservation policy as a farce. ಆದುದರಿಂದ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ತಾವು ಏನು ಚಿಂತನೆ ಮಾಡುತ್ತಿದ್ದೀರಿ ಎಂದು ಹೇಳುತ್ತೇನೆ. ವಿಶಾಸಲಾತಿ ಇಟ್ಟುಕೊಂಡು ಅವರ ರಕ್ಷಣೆ ಮಾಡತ್ತೇವೆ ಎನ್ನುವಂಥ ಒಂದು ಕಳಕಳಿಯನ್ನು ತಾವು ತೋರಿಸಿರುತ್ತೀರಿ. ಎಂದು ಹೇಳಬೇಕಾದರೆ, ತಾವು ಎಷ್ಟರ ಮಟ್ಟಿಗೆ ತಮ್ಮ ರಾಜಕೀಯ ಸಿದ್ಧಾಂತಕ್ಕಾಗಿ, ಅಧಿಕಾರಕ್ಕೆ ಅಂಟಿಕೊಳ್ಳಬೇಕೆಂಬ ಸ್ವಾರ್ಥಲಾಲಸೆಗಾಗಿ ಯಾವ ಒಂದು ಸಿದ್ಧಾಂತವನ್ನು ಬಲಿ ಕೊಡತಕ್ಕಂಥ ಪಕ್ಷ ಇದು ಎಂಬುದಾಗಿ ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ದಿನಾಂಕ ೯–೧೦–೧೯೮೬ರ 'ಇಂಡಿಯನ್' ಪತ್ರಿಕೆಯಲ್ಲಿ ನಿಮ್ಮ ಸರ್ಕಾರದ ವಿರೋಧಿಅಲ್ಲ. ಇದು ನಿಮ್ಮದೇ ಆದ ಪತ್ರಿಕೆ 'ಇಂಡಿಯನ್ ಎಕ್ಸ್‌ಪ್ರೆಸ್‌ಯಲ್ಲಿ ಏನು ಹೇಳುತ್ತಿದ್ದಾರೆಂದ, "A step backward"

"Mr. Ramakrishna Hegde has taken a retrograde step on the question of reservations for specified castes in educational institutions and public service."

What step you have taken is not a progressive step.

ಆಮೇಲೆ ರಿಸರ್ವೇಷನ್ ಪಾಲಿಸಿ ಬಗ್ಗೆ ನಿಮ್ಮ ಸರ್ಕಾರ ಯಾವ ನೀತಿ ಅನುಸರಿಸಿದ್ದಾರೆ, ಎಂದರೆ it has taken a retrograde step

ಎಂದು ಇಂಡಿಯನ್ ಎಕ್ಸ್‌ಪ್ರೆಸ್ ಸಂಪಾದಕೀಯದಲ್ಲಿ ತಿಳಿಸಿದ್ದಾರೆ.

The "Free Press Journal" date 9-10-1936 has observed as follows :

"In what amounts to a climb down, the Janata Government has now come out with a new reservation formula of its own which Jettisons the report of both the Havanur and Venkataswamy Commissions, clearly in a bid to head off the politically hurting agitation in Karnatak."

Further, it has observed :

"Under in adhoc formula, which will hold good for three years, a whopping 92 per cent of the State's population would be conferred the 'backward' status and would enjoy a reservation of 68 percent in both educational institutions and government jobs"

According to "Newstime" date 10-10-1986: they have also writlen an editorial :

"The rejection of the Venkataswamy Commission's report on reservations for the Backward Classes and enlargement of the label of "Backward Class" to cover 92 percent of the population is a shockingly retrograde measure." ಈ ರೀತಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ.

Further,

"That the time of this proposed commission"

"What makes it all the more galling is that Mr. Hegde, who posits himself as a point of alternative politics should stoop to something that shows more law curring than shrewd policy assessment or political sagacty."

(ಶ್ರೀ ಬಿ.ಜಿ, ಬಣಕರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು),

ಇದೇ ಪ್ರಕಾರ ಇನ್ನೂ ಅನೇಕ ಬೇರೆ ಬೇರೆ ಪತ್ರಿಕೆಗಳಲ್ಲಿ ಈ ರಿಸರ್ವೇಷನ್ ಪಾಲಿಸಿ ಬಗ್ಗೆ ಯಾವ ರೀತಿ ಒಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ ಎಂಬುದಕ್ಕೆ ಈ ಪುಸ್ತಕವೇ ಸಾಕ್ಷಿ, ಆದ್ದರಿಂದ ಈ ಪಾಲಿಸಿಯನ್ನು ತಾವು ಇವತ್ತು ಮುಂದುವರಿಸಿಕೊಂಡು ರಿಸರ್ವೇಷನ್ ಪಾಲಿಸಿಯನ್ನು ಹಿಂದುಳಿದ ವರ್ಗದವರ ಹೋರಾಟವನ್ನು ಸಮಾಧಿ ಮಾಡುವಂತಹ ತಮ್ಮ ಸರ್ಕಾರ, ತಮ್ಮ ಪಕ್ಷ ಇವತ್ತು ಹಿಂದುಳಿದ ವರ್ಗದವರ ಬಗ್ಗೆ ಮಾತನಾಡುವುದಕ್ಕೆ ಯಾವುದೇ ರೀತಿಯದಾದ ನೈತಿಕ ಹಕ್ಕಿಲ್ಲವೆಂದು ನಾನು ಈ ಸಂದರ್ಭ

ದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ತಾವು ಈಗ ಘೋಷಣೆ ಮಾಡಬಹುದು ಏಕೆ ಅಂತ ಹೇಳಿದರೆ, ಮುಂದೆ ಬರತಕ್ಕಂತಹ ಜನಾಂಗ ಮುಂದೆ ಬರತಕ್ಕಂತಹ ರಾಜಕೀಯ ಪರಿಸ್ಥಿತಿ, ಅದಕ್ಕೆ ಉತ್ತರವನ್ನು ಅವರೇ ಕೊಡುತ್ತಾರೆ, ಏಕೆಂದರೆ ಇದಕ್ಕೆ ನಾನು ಪ್ರತ್ಯೇಕ ಉತ್ತರ ಕೊಡಬೇಕಾಗಿಲ್ಲ. ಆದರೆ ಪತ್ರಿಕೆಗಳಲ್ಲಿ ಬಂದಂತಹ ಪ್ರತಿಕ್ರಿಯೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ತಾವು ತಮ್ಮ ಸ್ವಾರ್ಥ ಸಾಧನೆಗಾಗಿ ಈ ಒಂದು ಪ್ರಯತ್ನವನ್ನು ತಾವು ಮಾಡಿದ್ದೀರಿ. ಇದು ದೊಡ್ಡ ರಾಜಕೀಯ ದುರಂತ ಅಂತ ಹೇಳುವುದಕ್ಕೆ ನನಗೆ ಬಹಳ ವ್ಯಸನವಾಗುತ್ತದೆ. ಇವತ್ತು ತಾವು ರಿಸರ್ವೇಷನ್ ಪಾಲಿಸಿ ಬಗ್ಗೆ ಗವರ್ನಮೆಂಟ್ ಆರ್ಡರನ್ನು ಇಶ್ಯೂ ಮಾಡಿದ್ದೀರಿ. ಗವರ್ನಮೆಂಟ್ ಆರ್ಡರ್‌ನ ಇಶ್ಯೂ ಮಾಡಿದಾಗಲೂ ಕೂಡ ಬ್ಯಾಕ್‌ವರ್ಡ್ ಕ್ಲಾಸ್ ಏನು ಎಂದು ಹೇಳಿ ತಾವು ಒಂದು ಕಡೆ ನಮೂದಿಸಿದ್ದೀರಿ. ಈಗ ಯಾವುದು ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಯಾವುದಕ್ಕೆ ರಿಸರ್ವೇಷನ್ ಕೊಡಲಿಕ್ಕೆ ತಾವು ಹೋಗಿದ್ದೀರಿ, ಅದನ್ನು ಈ ಆ್ಯಕ್ಟನಲ್ಲಿ ಸ್ಪಷ್ಟವಾಗಿ ಕಾಣಿಸಿದೆ. ತಾವು ಈ ಸೆಕ್ಷನ್ ೨ ಸಬ್ ಕ್ಲಾಸ್ ೨ನಲ್ಲಿ Backward class means such classes as may be prescribed ಎಂದು ಹೇಳಿದ್ದೀರಿ. ಆದ್ದರಿಂದ ಈ ಬಗ್ಗೆ ತಮ್ಮ ನಿರ್ಣಯ ಏನು ಇದೆ ಎಂಬುದನ್ನು ಈಗ ಹೇಳಬೇಕು. Any policy of the government must be defined. ಈಗ ರಿಸರ್ವೇಷನ್ ಬ್ಯಾಕ್‌ವರ್ಡ್ ಕ್ಲಾಸ್ ಏನು ಎಂಬುದು ಹಾಗೂ ರಿಸರ್ವೇಷನ್ ಪಾಲಿಸಿ ಈಗ ಸರ್ಕಾರದ ಮುಂದ ಇದೆ. ಇದು ಮುಂದೆ ನಿರ್ಣಯ ಮಾಡತಕ್ಕಂತಹ ಪಾಲಿಸಿ ಅಲ್ಲ. ಈ ಎರಡೂ ಪಾಲಿಸಿಯು ತಮ್ಮ ಕ್ಯಾಬಿನೆಟ್ ಸ್ವೀಕಾರ ಮಾಡಿದೆ. ಇಲ್ಲಿ ತಾವು ಅದನ್ನು ಪುನರುಚ್ಚಾರ ಮಾಡಿದ್ದೀರಿ, ಸಾರ್ವಜನಿಕರಿಗೆ, ದೇಶಕ್ಕೆ ತಮ್ಮ ರಿಸರ್ವೇಷನ್ ಪಾಲಿಸಿ ಮತ್ತು ಯಾರು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಹೇಳಿ ತಾವು ಈಗಾಗಲೇ ನಮೂದಿಸಿದ್ದೀರಿ. ಇವತ್ತು ಒಂದು ಪಾಲಿಸಿಯನ್ನು ಸರ್ಕಾರದ ಘೋಷಣೆಯನ್ನು ಈ ಸದನದಲ್ಲಿ ಅಥವಾ ಸದನದ ಹೊರಗಡೆ ನಿರ್ಣಯ ಮಾಡಿ ಘೋಷಣೆ ಮಾಡಿದ ಮೇಲೂ ಇವತ್ತು ಈ ಬ್ಯಾಕ್‌ವರ್ಡ್ ಕ್ಲಾಸ್‌ಗಳನ್ನು ಪುನಃ ರೀಡಿಫೈನ್ ಮಾಡಿ ಬೇರೆ ಒಂದು ಉದ್ದೇಶದಿಂದ ಅದನ್ನು ಉಪಯೋಗ ಮಾಡತಕ್ಕಂತಹದು ಏನು ಇದೆ, ಅದಕ್ಕಿಂತ ದೊಡ್ಡ ಒಂದು ಆಶಾಢಭೂತಿತನ ಬಹುಶಃ ಭರತಖಂಡದಲ್ಲಿರತಕ್ಕ ಒಂದು ರಾಜಕೀಯ ಪಕ್ಷ, ರಾಷ್ಟ್ರೀಯ ಪಕ್ಷ, ಒಂದು ಕಾಲದಲ್ಲಿ ರಾಷ್ಟ್ರವನ್ನು ಆಳಿದಂತಹ ಒಂದು ಪಕ್ಷ ಇಂತಹ ಒಂದು ಆಶಾಢಭೂತಿತನವನ್ನು ಇವತ್ತು ತೋರಿಸಿದೆ. ಇದು ನಮ್ಮ ದೇಶದ ರಾಜಕೀಯ ಇತಿಹಾಸದಲ್ಲಿ ಇದಕ್ಕಿಂತ ದೊಡ್ಡ ದುರಾದೃಷ್ಟಕರ ಪ್ರಸಂಗ ಮತ್ತೊಂದು ಇಲ್ಲವೆಂದು ನಾನು ಸ್ಪಷ್ಟವಾಗಿ ಇವತ್ತು ಹೇಳಬೇಕಾಗುತ್ತದೆ. ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಡೆಫಿನಿಷನ್ ಕೊಡುವ ಸಂದರ್ಭದಲ್ಲಿ ೭೭ನೇ ಆರ್ಡರ್ ಪ್ರಕಾರ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಯಾವ ಒಂದು ಡೆಫಿನಿಷನ್ ಇದೆ ಅದನ್ನು ಬದಲಾವಣೆ ಮಾಡಿದ್ದಾರೆ, ೧೩ನೇ ಅಕ್ಟೋಬರ್ ೧೯೮೬ರಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್ ಅಂದರೆ ಯಾರು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಂದರೆ ಗ್ರೂಪ್ ಎ ಬಿ ಸಿ ಡಿ ನಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಎಂದರೆ ಯಾರು ಎಂದು ತಾವು ಹೇಳಿದ್ದೀರಿ. ಬ್ಯಾಕ್‌ವರ್ಡ್ ಕ್ಲಾಸ್ ಸ್ಪೇಷಲ್ ಗ್ರೂಪ್‌ನಲ್ಲಿ (a)to(d)ನಲ್ಲಿಬರುವುದಿಲ್ಲ. ಬ್ಯಾಕ್‌ವರ್ಡ್ ಸ್ಪೇಷಲ್ ಬರುವುದು ಗ್ರೂಪ್ ಇ ನಲ್ಲಿ Backward Class doesn't meanBackward Class Special. Backward Class has definite meaning in the dictionery or in ordinary parlance or in ordinary connotation. ಆದ್ದರಿಂದ ಇದರಲ್ಲಿ ಬರತಕ್ಕ ಆರ್ಟಿಜಾನ್ಸ್, ಅಗ್ರಿಕಲ್ಚರಲ್ ಲೇಬರರ್‌ಸ್ನನ್ನು ಪ್ರತ್ಯೇಕವಾಗಿ ಗುರುತಿಸಿ ಹುಡುಕುವುದಕ್ಕೆ ಎಲ್ಲಿ ಹೋಗುತ್ತೀರಿ? Are we to conclude that by Backward Class we mean backward class special, not the backward classes Backward Class Special Group comes under group "E" ಈ ಗ್ರೂಪ್ "ಇ" ನಲ್ಲಿ ಬರತಕ್ಕವರು ಎಂದರೆ ಬ್ರಾಹ್ಮಿನ್ಸ್ ಮತ್ತು ಜೈನ್ಸ್. ಅಥವಾ ಸಿವಿಲಿಯನ್ ಕಮ್ಯೂನಿಟಿಸ್‌ಗಳವರು. ಗ್ರೂಪ್ 'ಇ' ಬ್ಯಾಕ್‌ವರ್ಡ್ ಕ್ಲಾಸ್ ಸ್ಪೆಷಲ್‌ನಲ್ಲಿ ೫ ಪರ್ಸೆಂಟ್ ಏನೋ ಅದನ್ನೇ ತಾವು ಕೊಟ್ಟಿದ್ದೀರಿ. Is it your case that we must bring this class of people, who have been classified under Group 'E' as Backward Class Special who should to enjoy certain privileges over and above those classes which have been classified under group A to D? ಈಗ ಏನೋ ಒಂದು ಹೊಸದಾಗಿ ನೋಟಿಫಿಕೇಷನ್‌ನ್ನು ಕೊಟ್ಟಿದ್ದಾರೆ, ಆ ನೋಟಿಫಿ

ಕೇಷನ್ ಪ್ರಕಾರ ಬ್ಯಾಕ್‌ವರ್ಡ್ ಕ್ಲಾಸ್ ಇದರಲ್ಲಿ ಇನ್‌ಕ್ಲೂಡ್ ಆಗುವುದಿಲ್ಲವೆಂದು ಹೇಳಿದ್ದಾರೆ. ಆಗಿದ್ದರೆ ಈ ರೂರಲ್ ಲ್ಯಾಂಡ್‌ಲೆಸ್ ಅಗ್ರಿಕಲ್ಚರಲ್ ಲೇಬರರ್ಸ್ ಎಷ್ಟು ಜನ ಇದ್ದಾರೆ? ಅವರು ಎಲ್ಲಿ ಇದ್ದಾರೆ? ಮತ್ತೆ ಯಾವ ಗ್ರೂಪಿನಲ್ಲಿ ಬರುತ್ತಾರೆ ಎಂದು ಹುಡುಕಬೇಕಾಗುತ್ತದೆ. ಈ ಪ್ರಶ್ನೆ ಇವತ್ತೂ ಕೂಡ ಇತ್ಯರ್ಥವಾಗಿಲ್ಲ. ಈರೂಲ್ ಮೇಕಿಂಗ್ ಪವರ್‌ನ್ನು ಸರ್ಕಾರ ಯಾವ ರೀತಿ ಉಪಯೋಗ ಮಾಡಿಕೊಳ್ಳಲು ಅಧಿಕಾರ ಇದೆ ಎಂಬುದನ್ನು ವಿಶ್ಲೇಷಣೆ ಮಾಡಬಯಸುತ್ತೇನೆ.

I would just read out the proposed amendment or the rule, which has been notified and finalised.

> " (2) "Backward Classes" means rural artisans and landless agricultural labourers whose gross annual income from all sources (including his share of income of the joint family, if any, of which he is a member) does not exceed rupees six thous and four hundred."

If you go back to the reservation policy, it could be seen that category is grouped under "E", which includes Brahamins and Jains. You have get to nominate those people.

Again there is a provise to the rule which reads as follows:

> "Provided that no person shall be deemed to belong to a backwards class unless the population of the caste or tribe to which he belongs is less than one per cent of the total population of the district."

For the purpose of this rule, the population shall be the population as estimated by the Karnataka Backward Classes Commission 1975.

೧೨-೦೦ ಪಿ.ಎಂ.

ಹಾವನೂರು ರಿಪೋರ್ಟ್‌ನ ವಾಲ್ಯೂಂ ನಂಬರ್ ೨ರಲ್ಲಿ ಪಾಪ್ಯುಲೇಷನ್ ಆಫ್ ದಿ ಕ್ಯಾಸ್ಟ್ ಆರ್ ಟ್ರೈಬ್ಸ್ ವಿಚಾರವಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ನೀವು ಈಗ ತಂದಿರುವ ನೋಟಿಫಿಕೇಷನ್‌ನಲ್ಲಿ ರೂರಲ್ ಆರ್ಟಿಸಾನ್ಸ್ ಅಂಡ್ ಅಗ್ರಿಕಲ್ಚರಲ್ ಲೇಬರರ್ಸ್ ಎಂದು ಇದೆ. ಅಗ್ರಿಕಲ್ಚರಲ್ ಲೇಬರರ್ಸ್ ಮತ್ತು ಆರ್ಟಿಸಾನ್ಸ್ ಏನು ಇದ್ದಾರೆ ಅವರನ್ನು ಸಪರೇಟ್ ಆಗಿ ಎನ್ಯೂಮರೇಷನ್ ಮಾಡಿಲ್ಲ. Once you saythat you are not concerned with castes orcommunities or tribes, then it must refer to those rural artisans. They may belong to any community. The proviso says.

> "Provided that no person shall be deemed to belong to a backward class unless the population of the caste or tribe to which he belongs is less than 1% of the total population of the district."

ನಾವು ಈ ಪ್ರಶ್ನೆಯನ್ನು ಏತಕ್ಕೆ ಹಾಕುತ್ತೇವೆಂದರೆ, ಆಯಾಯ ಜಿಲ್ಲೆಯಲ್ಲಿ ಆಯಾಯ ಕ್ಯಾಸ್ಟ್‌ನಲ್ಲಿ ಹಿಂದುಳಿದಿರತಕ್ಕಂಥಾವರು ಯಾರು ಇದ್ದಾರೋ. ಅಗ್ರಿಕಲ್ಚರಲ್ ಲೇಬರರ್ಸ್ ಆಗಲಿ. ಆರ್ಟಿಸಾನ್ಸ್ ಆಗಲಿ ಯಾರು ಇದ್ದಾರೆ. ಅಂಥವರನ್ನು that has not been enumerated in this document. ಹೀಗಿರುವಾಗ ಹೇಗೆ ಸರಿಯಾಗಿ ನಾಮಕರಣ ಮಾಡಲು ಸಾಧ್ಯವಾಗುತ್ತದೆ.

Population less than one percent ಎಲ್ಲಾದರೂ ಇದ್ದರೆ ಅದನ್ನು ಈವೊತ್ತು ಪ್ರತ್ಯೇಕ ಮಾಡುವುದಕ್ಕಾಗುವುದಿಲ್ಲ. You cannot be ascribed only to a particular community or caste. Whether a particular community or caste belongs this agricultural labourers or artisans. Particular community ಇದ್ದರೆ ಮಾತ್ರ Caste and tribe ಬರುತ್ತದೆ. If you want to confer certain advantages, it will have to go along with the general clause. ಈ ಆರ್ಟಿಸಾನ್ಸ್ ಮತ್ತು ಅಗ್ರಿಕಲ್ಚರಲ್ ಲೇಬರರ್ಸ್ ಗ್ರೂಪ್ಸ್ ಏನು ಇದೆ ಇದಕ್ಕೆ ಸಂಬಂಧಪಟ್ಟಿದ್ದರೆ ಮಾತ್ರ ಅವರು ಈ ಆರ್ಟಿಸಾನ್ಸ್ ಮತ್ತು ಅಗ್ರಿಕಲ್ಚರಲ್ ಲೇಬರರ್ಸ್ ಗ್ರೂಪ್‌ಗೆ ಬರುತ್ತಾರೆ. ಇದರಲ್ಲಿ ಸಬ್‌ಪ್ರಾವಿಷೋ ಕ್ಲಾಸ್ ಏನಾದರೂ ಮಾಡಿದ್ದೀರಾ ? ಈ ಕ್ಯಾಸ್ಟ್ ಅಂಡ್ ಕಮ್ಯೂನಿಟಿ ನಲ್ಲಾಗಲಿ, ಟ್ರೈಬ್ಸ್ ಬಗ್ಗೆಯಾಗಲಿ ಇದಕ್ಕೆ ಸಂಬಂಧಪಟ್ಟಂತೆ ಅಂಕಿಅಂಶ ಇದ್ದರೆ ಮಾತ್ರ ಪ್ರೊವೈಡೆಡ್ ಎನ್ನುವ ಪದವನ್ನು ಸೇರಿಸಬಹುದು. ಅದು ಬಿಟ್ಟು ಬರೀ ಪಾಪ್ಯುಲೇಷನ್ ಆಫ್ ದಿ ಕ್ಯಾಸ್ಟ್ ಆರ್ ಟ್ರೈಬ್ಸ್ ಎಂದು ಹಾಕುವುದು ಸರಿಯಲ್ಲ. ಹಾಗೆ ಮಾಡಿದರೆ ಹಾವನೂರ್ ಕಮೀಷನ್ ವರದಿಯನ್ನು ಓವರ್‌ರೈಡ್ ಮಾಡಿದ ಹಾಗಾಗುತ್ತದೆ. ಹಾವನೂರು ಕಮಿಷನ್ನಿನವರು ಇದರ ಬಗ್ಗೆ ಕೊಟ್ಟಂತಹ ಅಂಕಿಅಂಶ ಸರಿಯಾಗಿತ್ತು. ಆದರೆ ಅದನ್ನು ತಾವು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಆಮೇಲೆ ಆಯೋಗ ಮಾಡಿದಿರಿ, ಅವರು ಕೊಟ್ಟ ರಿಪೋರ್ಟನ್ನೂ ಕೂಡ ತಿರಸ್ಕಾರ ಮಾಡಿದಿರಿ. ವೆಂಕಟಸ್ವಾಮಿಯವರು ಇದರ ಬಗ್ಗೆ ಅಂಕಿಅಂಶಗಳನ್ನು ಕಲೆಕ್ಟ್ ಮಾಡಿದ್ದರು. ಆದರೆ ಆ ವರದಿಯನ್ನೂ ತಿರಸ್ಕಾರ ಮಾಡಿದ್ದೀರಿ. ಈಗ ಇದಕ್ಕೆ ಸಂಬಂಧಪಟ್ಟಂತೆ ಒಂದು ಗೌರ್ನಮೆಂಟ್ ಆರ್ಡರ್ ಅನ್ನು ಹೊರಡಿಸಿದ್ದೀರಿ. ಈವೊತ್ತು ಇದನ್ನು indvidiualcarton ಮಾಡಿದ್ದೀರಿ. ಇದನ್ನು ಎರಡು ಭಾಗವಾಗಿ ಮಾಡಿ ಇವರನ್ನು ಪ್ರತ್ಯೇಕವಾಗಿ ಮಾಡಿ ತಮಗೆ ಅನುಕೂಲವಾಗುವ ಹಾಗೆ ಮಾಡಿಕೊಳ್ಳುವುದಕ್ಕೆ ಈ ಪ್ರಯತ್ನ ಮಾಡಿದ್ದೀರಿ ? ಈವೊತ್ತು ಇದನ್ನು ಎರಡು ಭಾಗವಾಗಿ ಏನು ಡಿವೈಡ್ ಮಾಡಿದ್ದೀರಿ? ಇದರ ಬಗ್ಗೆ ಆರ್ಟಿಸಾನ್ಸ್ ಆಗಲಿ, ಅಗ್ರಿಕಲ್ಚರಲ್ ಲೇಬರರ್ಸ್ ಆಗಲಿ ಯಾರು ಎನ್ನುವುದನ್ನು ನೀವೇ ಗುರುತಿಸಿ ಅವರನ್ನು ನಾಮಕರಣ ಮಾಡುವಂಥ ಒಂದು ಪ್ರಯತ್ನವನ್ನು ತಾವೇನು ಮಾಡಿದ್ದೀರಿ ಇದು ನಿಮ್ಮ ಅನುಕೂಲ ಸಿಂಧುವೇ ವಿನಾಹ ನಮ್ಮ ಪ್ರಕಾರ ಹೇಳುವುದಾದರೆ ಇದು ಶಾಸ್ತ್ರೀಯ ವಿಧಾನವಲ್ಲ. This will lead to—total and gross arbitrariness which will give the executive the authority to determine. ನೀವು ಏನು ಮಾಡುತ್ತೀರಿ ಅನ್ನುವುದು ನನಗೆ ಗೊತ್ತಿದೆ. ಈಗ ಕೂರ್ಗ್‌ನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾವು ನಾಮಿನೇಷನ್ ಮಾಡಬಹುದೋ ಇಲ್ಲವೋ ಅದು ಪ್ರತ್ಯೇಕ ಪ್ರಶ್ನೆ. ಈಗಾಗಲೇ ಅಲ್ಲಿಯ ಜಿಲ್ಲಾಧಿಕಾರಿಗಳಿಗೆ ಟೆಲೆಕ್ಸ್ ಮೆಸೇಜ್ ಕೊಟ್ಟಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್-(ಐ) ಪಕ್ಷ ಇರುವುದರಿಂದ ಅಲ್ಲಿ ಎಲ್ಲಿ ನಾಮಕರಣ ಮಾಡುತ್ತಾರೋ ಎನ್ನುವ ಭಯ ನಿಮಗೆ ಬಂದಿದೆ. ಅಧಿಕಾರದಲ್ಲಿರುವಾಗ ಯಾವ ರೀತಿಯಾಗಿಯಾದರೂ ಮಾಡಬಹುದು. ಈಗಾಗಲೇ ಜಿಲ್ಲಾಧಿಕಾರಿಯವರು ತಹಶೀಲ್ದಾರರಿಗೆ ಒಂದು ಆದೇಶ ಕಳುಹಿಸಿದ್ದಾರೆ. ಎಲ್ಲೆಲ್ಲಿ ನಮ್ಮ ಪಕ್ಷದ ಸದಸ್ಯರು ಎಲೆಕ್ಟ್ ಆಗಿ ಬಂದಿರುತ್ತಾರೋ ಅಲ್ಲಿಗೆ ಆರ್ಟಿಸಾನ್ಸ್ ಆಗಲಿ, ಆಗ್ರಿಲ್ಚಕರಲ್ ಲೇಬರರ್ಸ್ ಆಗಲಿ ನಾಮಕರಣ ಮಾಡುವುದಕ್ಕೆ ಅಲ್ಲಿ ಅಡ್ವಕೇಟ್ ರೆಪ್ರೆಸೆಂಟ್ಸ್ ಇದ್ದರೆ evidencs should be created ಎಂದು ಮಾಡಿದ್ದೀರಿ ಅಲ್ಲದೆ You have asked or authorised the officers to create false evidence with regard to this concept of artisans and agricltural labourers. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈವೊತ್ತು ಅಧಿಕಾರಿಗಳು ಎಲ್ಲಾ ಹಂತದಲ್ಲೂ ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡತಕ್ಕಂಥ ಕೆಲಸಕ್ಕೆ ಪ್ರಚೋದನೆ ಮಾಡುತ್ತಾ ಇರುವುದು ನಮ್ಮ ದುರಾದೃಷ್ಟ. ಈ ಒಂದು ಪರಂಪರೆಯನ್ನು ತಾವು ಬೆಳೆಸಿಕೊಂಡು ಬಂದಿದ್ದೀರಿ ? ಎನ್ನುವುದು ಇದರಿಂದ ಸ್ಪಷ್ಟವಾಗಿ ಕಂಡುಬರುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುವಾಗ ನನಗೆ ಈ ಮನೆಯಲ್ಲಿ ಇದ್ದು ಅವರ ಭಾಷಣವನ್ನು ಕೇಳಲು ಕಾಲಾವಕಾಶ ಇಲ್ಲದೇ ಇರುವುದರಿಂದ ಕ್ಷಮೆ ಕೇಳುತ್ತೇನೆ. ನಾನು ಮೇಲ್ಮನೆಯಲ್ಲಿ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಹೇಳಬೇಕಾಗಿರು

ವುದರಿಂದ ಅಲ್ಲಿಗೆ ಹೋಗಲು ತಮ್ಮ ಅಪ್ಪಣೆಯನ್ನು ಕೇಳುತ್ತೇನೆ. ಮತ್ತೆ ಅಲ್ಲಿ ಅದನ್ನು ಮುಗಿಸಿ ಕೊಂಡು ಇದಕ್ಕೆ ಉತ್ತರ ಹೇಳುವುದಕ್ಕೆ ಮತ್ತೆ ಬರುತ್ತೇನೆ.

ಅಧ್ಯಕ್ಷರು.—ಆಗಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈವೊತ್ತು ರಾಜಕೀಯಕ್ಕಾಗಿ ಮತ್ತು ಸ್ವಾರ್ಥಕ್ಕಾಗಿ ಅಧಿಕಾರ ದುರುಪಯೋಗ ಮಾಡಲಿಕ್ಕೆ ನಿಮ್ಮ ಕಾಲವನ್ನು ಸಂಪೂರ್ಣವಾಗಿ ವಿನಿಯೋಗ ಮಾಡುತ್ತಿದ್ದೀರಿ ಎನ್ನು ವುದಕ್ಕೆ ನಮ್ಮಲ್ಲಿ ಸಾಕಷ್ಟು ಪುರಾವೆಗಳು ಇವೆ.

ಇಂತಹ ಒಂದು ಕೆಲಸವನ್ನು ಇವರು ಕೊಡಗಿನಲ್ಲಿ ಮಾಡಿದ್ದಾರೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಲ್ಲಿಯೂ ಮಾಡಿದ್ದಾರೆ. ಇವರು ಎಲ್ಲಾ ತಹಶೀಲ್‌ದಾರರಿಗೆ ಟೆಲೆಕ್ಸ್ ಮೆಸೇಜನ್ನು ಕಳುಹಿಸಿ, ಎಲ್ಲೆಲ್ಲಿ ಜನತಾ ಪಕ್ಷದವರು ಆರಿಸಿ ಬಂದಿದ್ದಾರೆ, ಅಂತಹವರ ಕಡೆಯಿಂದ ಆ ಭಾಗದಲ್ಲಿ ಯಾರು ಯಾರು ವ್ಯವಸಾಯ ಕೂಲಿಗಾರರಾಗಿದ್ದಾರೆ ಮತ್ತು ಯಾರು ಯಾರು ಕುಶಲಕರ್ಮಿಗಳಾಗಿದ್ದಾರೆ ಎಂಬ ಬಗ್ಗೆ ಅಫಿಡವಿಟ್ ಪಡೆದು ರೆಕಾರ್ಡ್‌ಗಳನ್ನು ತಯಾರಿಸಬೇಕೆಂದು ಹೇಳಿದ್ದಾರೆ. ಆದರೆ ಎಲ್ಲೆಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ನಾಮಿನೇಟ್ ಮಾಡುವಂತಹ ಒಂದು ಅವಕಾಶ ಇದೆಯೋ ಅಲ್ಲೆಲ್ಲಾ ಈ ಬಗ್ಗೆ ಸುಳ್ಳು ದಾಖಲೆಗಳನ್ನು ತಯಾರು ಮಾಡಿ ಇಟ್ಟಿದ್ದಾರೆ. ಆದ್ದರಿಂದ I demand this Government to institute an inquiry on this and institute the inquiry through C B I for the total gross misuse of the authority to create false evidence just to capture the Nandals from the hand of the Congress. ಜನತಾ ಪಕ್ಷದವರೇ ಅಧಿಕಾರದಲ್ಲಿರುವಂತಹ ಜಿಲ್ಲೆಗಳಲ್ಲಿ ಬರುವಂಥ ಮಂಡಲ್ ಪಂಚಾಯತ್‌ಗಳಲ್ಲಿ ಇವರಿಗೆ ಎಲ್ಲೆಲ್ಲಿ ಬಹುಮತ ಇಲ್ಲವೋ, ಅಂತಹ ಕಡೆಗಳಲ್ಲಿ ಕುಶಲ ಕರ್ಮಿಗಳಿಗೆ ಮತ್ತು ವ್ಯವಸಾಯ ಕೂಲಿಗಾರರಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ ಎಂಬತಕ್ಕಂಥ ಮಾಹಿತಿಯನ್ನು ತಯಾರು ಮಾಡಿಸಿ ಇಟ್ಟಿದ್ದಾರೆ. ಈ ಬಗ್ಗೆ ಫಾಲ್ಸ್ ಎವಿಡೆನ್ಸನ್ನು ತಯಾರಿಸಿ ಇವರಿಗೆ ಬೇಕಾದ ವರನ್ನು ನಾಮಂಕರಣ ಮಾಡಲು ಎಲ್ಲಾ ರೀತಿಯ ಸಿದ್ಧತೆಯನ್ನು ಮಾಡಿಟ್ಟುಕೊಂಡಿದ್ದಾರೆ. ಇಲ್ಲಿಯ ವರೆಗೆ ಮಾತನಾಡಿದಂಥ ಮಾನ್ಯ ಸದಸ್ಯರುಗಳು ಹೇಳಿದಂತೆ cunningly, shamelessly stooping to any extent to capture the power. ಇದಕ್ಕಿಂತ ದೊಡ್ಡ ಒಂದು ಹೇಡಿತನದ ಕೆಲಸ ಮತ್ತೊಂದು ಇಲ್ಲ. ಇದೊಂದು ನಾಚಿಕೆಗೇಡಿನ ಕೆಲಸ. ಹೇಗಾದರೂ ಮಾಡಿ ಎಲ್ಲಾ ಕಡೆ ತಾವೇ ಅಧಿಕಾರಕ್ಕೆ ಬರಬೇಕು ಎಂಬತಕ್ಕಂಥ ಅಧಿಕಾರದ ದಾಹ, ಅಧಿಕಾರದ ಲಾಲಸೆ ಇವರಿಗೆ ಎಷ್ಟರಮಟ್ಟಿಗೆ ಇದೆ ಎಂಬುದು ಇದರಿಂದ ತಿಳಿದುಬರುತ್ತದೆ. ಹೇಗಾದರೂ ಮಾಡಿ ಅಧಿಕಾರಕ್ಕೆ ಬರಬೇಕು ಎಂಬ ವಿಷಯದಲ್ಲಿ ಇವರ ಆಳ ಮತ್ತು ಎತ್ತರ ಎಷ್ಟರಮಟ್ಟಿಗೆ ಇದೆ ಎಂಬುದು ಸಹ ಇದರಿಂದ ತಿಳಿದು ಬರುತ್ತದೆ, ಇತಂಹ ಒಂದು ನಾಚಿಕೆಗೇಡಿನ ಕೆಲಸವನ್ನು ಈಗ ಅಧಿಕಾರದಲ್ಲಿರುವಂತಹ ಜನತಾ ಪಕ್ಷದ ಸರ್ಕಾರ ಮಾಡಿದೆ. ತಮಗೆ ಬೇಕಾದವರನ್ನು ನಾಮಕರಣ ಮಾಡಲು ಅವಕಾಶವಾಗುವಂತೆ ಇಂತಹ ಒಂದು ಕಾನೂನನ್ನು ತಂದಿದ್ದಾರೆ. ಇದಕ್ಕೆ ಸಂಬಂಧ ಪಟ್ಟಂತೆ ಈ ಮೊದಲೇ ಇದ್ದಂಥ ಕಾನೂನನ್ನು ಮತ್ತಷ್ಟು ಎಕ್ಸ್‌ಟೆಂಡ್ ಮಾಡಿದ್ದಾರೆ. ಈ ಜಿಲ್ಲಾ ಪರಿಷತ್‌ಗಳ ಮೂಲಕ ತಮಗೆ ಅನುಕೂಲವಾಗುವಂತಹ ವ್ಯವಸ್ಥೆಯನ್ನು ಇಲ್ಲಿ ಮಾಡಿದ್ದಾರೆ. ಸುಮಾರು ೫೦೦-೬೦೦ ಮಂಡಲ್ ಪಂಚಾಯತ್‌ಗಳನ್ನು ಹೇಗಾದರೂ ಮಾಡಿ ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ಇವರು ಹೊರಟ್ಟಿದ್ದಾರೆ. ಇವರ ಒಂದು ಅಧಿಕಾರದ ಆಸೆ ಮತ್ತು ದುರಾಸೆ ಎಷ್ಟರಮಟ್ಟಿಗೆ ಹೋಗಿದೆ ಎಂದರೆ, ತಮ್ಮ ಒಂದು ರಾಜಕೀಯದ ಹಿತವನ್ನು ಕಾಪಾಡಿಕೊಳ್ಳಲು ಅಧಿಕಾರಿಗಳನ್ನು ಸಾಕಷ್ಟುಮಟ್ಟಿಗೆ ದುರುಪಯೋಗ ಪಡಿಸಿಕೊಂಡಿದ್ದಾರೆ. ಆದ್ದರಿಂದ ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಮತ್ತೊಂದು ಇಲ್ಲ ಎಂದು ಈ ಸಂದಭದಲ್ಲಿ ಹೇಳಬೇಕಾಗಿದೆ. ಇದಕ್ಕೆ ಸಂಬಧಪಟ್ಟಂತೆ ನಾವು ಈ ಹಿಂದೆಯೇ ಕಾನೂನನ್ನು ಮಾಡಿದ್ದೆವು. ಇದರ ಬಗ್ಗೆ ಮಾನ್ಯ ಬೊಮ್ಮಾಯಿ ಅವರು ಸಹ ಜಿಲ್ಲಾ ಪರಿಷತ್‌ಗಳಿಗೆ ಮತ್ತು ಮಂಡಲ್ ಪಂಚಾಯತ್‌ಗಳಿಗೆ ಚುನಾವಣೆಯನ್ನು ಮಾಡುವುದಕ್ಕೆ ಮೊದಲು ಕಾನೂನು ಮಾಡಲಾಗಿತ್ತು ಎಂದು ಹೇಳಿದ್ದಾರೆ. ಈ ಹಿಂದುಳಿದ ವರ್ಗದವರನ್ನು ನಾಮಕರಣ ಮಾಡುವಂತಹ ಪ್ರಾವಿಜನ್ ಇದರಲ್ಲಿ ಏನಿದೆ, ಇದನ್ನು ಅವರು

ಸರಿಯಾಗಿ ಅರ್ಥ ಮಾಡಿಕೊಳ್ಳದೆ ಹೇಳಿದ್ದಾರೆ. ಏಕೆಂದರೆ, ಈ ಹಿಂದೆ ನಾವು ಇದನ್ನು ಒಪ್ಪಿಕೊಂಡ ಸಂದರ್ಭದಲ್ಲಿ ಇದಂಥ ಪರಿಸ್ಥಿತಿ ಈಗ ಇಲ್ಲ. ೧೯೭೭ ರಲ್ಲಿ ಹಾವನೂರ್ ಕಮಿಷನ್ ವರದಿ ಪ್ರಕಾರ ನಮ್ಮ ರಾಜ್ಯದಲ್ಲಿ ಹಿಂದುಳಿದ ವರ್ಗದವರು ಶೇಕಡಾ ೫೦ ಕ್ಕಿಂತ ಕಡಿಮೆ ಪ್ರಮಾಣದಲ್ಲಿದ್ದರು. ಈ ಕಾರಣದಿಂದ ಇವರಿಗೆ ಸರಿಯಾದ ಪ್ರಾತಿನಿಧ್ಯ ಸಿಗುವುದಿಲ್ಲವೆಂಬ ಭಯ ನಮಗೆ ಇದ್ದಾಗ ನಾಮಕರಣ ಪದ್ಧತಿಯನ್ನು ನಾವು ಒಪ್ಪಿಕೊಂಡಿದ್ದೆವು. ಆದರೆ ಇತ್ತೀಚಿನ ಸರ್ಕಾರದ ಆದೇಶದ ಪ್ರಕಾರ ನಮ್ಮ ರಾಜ್ಯದ ಜನ ಸಂಖ್ಯೆಯಲ್ಲಿ ಶೇಕಡಾ ೬೨ ರಿಂದ ಶೇಕಡಾ ೯೪ ರಷ್ಟು ಜನರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ. ಯಾವ ವರ್ಗಕ್ಕೆ ಸೂಕ್ತ ಪ್ರಾತಿನಿಧ್ಯ ಕೊಡಬೇಕೆಂಬುದು ಈ ಮೊದಲು ಈ ಶಾಸನ ಸಭೆಯ ಉದ್ದೇಶವಾಗಿತ್ತೋ ಹಾಗೂ ನಮ್ಮೆಲ್ಲರ ಉದ್ದೇಶವಾಗಿತ್ತೋ ಆ ಉದ್ದೇಶದ ಸಾಧನೆ ಈ ಸರ್ಕಾರದ ಹೊಸ ಆದೇಶದ ಪ್ರಕಾರ ಈಗಾಗಲೇ ಈಡೇರಿದೆ. ಯಾವ ಒಂದು ಉದ್ದೇಶವನ್ನು ಸಾಧನೆ ಮಾಡಬೇಕೆಂದು ನಾವು ಕಾನೂನು ಮಾಡಿದ್ದೆವೋ ಆ ಒಂದು ಉದ್ದೇಶ ಈಗಾಗಲೇ ಸಾಧನೆಯಾಗಿರುವಾಗ ಈಗ ಪುನಃ ಹಿಂದುಳಿದ ವರ್ಗದವರನ್ನು ನಾಮಕರಣ ಮಾಡುವ ಅವಶ್ಯಕತೆ ಯಾರಾದರೂ ಎಲ್ಲಿ ಬರುತ್ತದೆ ? ಈ ಅಂಶವನ್ನು ಮಾನ್ಯ ಬೊಮ್ಮಾಯಿ ಅವರು ಸಹ ಆಲೋಚನೆ ಮಾಡಬೇಕಾಗಿತ್ತು. ಈ ಹಿಂದೆ ಇಲ್ಲಿ ನಾವು ಕಾನೂನು ಮಾಡುವಾಗ ಹಿಂದುಳಿದ ವರ್ಗದವರ ಬಗ್ಗೆ ಕಾಂಗ್ರೆಸ್ ಪಕ್ಷದವರಿಗೆ, ಕಮ್ಯುನಿಸ್ಟ್ ಪಕ್ಷದವರಿಗೆ, ಬಿ. ಜೆ. ಪಿ. ಅವರಿಗೆ ಹೀಗೆ ಎಲ್ಲರಿಗೂ ಒಂದು ರೀತಿಯ ಆತಂಕವಿತ್ತು. ಹಿಂದುಳಿದ ವರ್ಗದವರಿಗೆ ಸೂಕ್ತ ಪ್ರಾತಿನಿಧ್ಯ ಕೊಡುವ ಬಗ್ಗೆ ಎಲ್ಲರಲ್ಲಿಯೂ ಸದಭಿಪ್ರಾಯವಿತ್ತು. ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯ ಕೊಡಬೇಕು, ಏಕೆಂದರೆ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಂತ್‌ಗಳನ್ನು ಇವತ್ತು ಪಟ್ಟಭದ್ರ ಹಿತಾ ಸಕ್ತಿಗಳು ಆಕ್ರಮಿಸಬಹುದು. ಬಾಕಿಯವರಿಗೆ ಅವಕಾಶ ಸಿಗದೇ ಇರಬಹುದು ಎಂಬ ಉದ್ದೇಶ ಈ ಒಂದು ಕಾನೂನು ಮಾಡುವಾಗ ಇತ್ತು. ಆ ಉದ್ದೇಶವನ್ನು ಸಂಪೂರ್ಣವಾಗಿ ಮನವರಿತು ತಾವು ಕೂಡ ರೂಲನ್ನು ಮಾಡಿದ್ದೀರಿ, ಸರ್ಕಾರದ ಈ ಉದ್ದೇಶವನ್ನು ಅರಿತಿದ್ದೀರಿ. ತಾವು ಆ ಉದ್ದೇಶವನ್ನು ತಿಳಿದುಕೊಂಡೇ ಬ್ಯಾಕ್‌ವರ್ಡ್ ಕ್ಲಾಸಸ್ ಏನು ಎಂದು ತಮ್ಮ ರೂಲ್‌ನಲ್ಲಿ ಹೇಳಿದ್ದೀರಿ, This is the rule of RDC 71. dated 4-3-86 of UAC 1985. ಅದರ ಪ್ರಕಾರ ರೂಲ್ ಮಾಡಿದ್ದೀರಿ, ಮಾಡಲಿಲ್ಲ ಎಂದು ಅಲ್ಲ ಈ ಕಾನೂನು ಜಾರಿಗೆ ಬಂದ ಮೇಲೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆ ಆಗುವ ಮೊದಲು ತಾವು ಈ ರೂಲನ್ನು ಮಾಡಿದ್ದೀರಿ. ಸದನದ ಮುಂದೆ ಇಟ್ಟಿದ್ದೀರಿ, ಈ ಸದನ ಒಪ್ಪಿಗೆ ಕೊಟ್ಟಿದೆ. ಸದನ ಆ ರೂಲ್‌ಗೆ ಆಕ್ಷೇಪಣೆ ಮಾಡಲಿಲ್ಲ. ಒಂದು ವೇಳೆ ನಮ್ಮ ಈ ಕಡೆಯವರು ಅಥವಾ ವಿರೋಧ ಪಕ್ಷದಲ್ಲಿದ್ದಂತಹವರು ಕಾನೂನಿನ ಒಂದು ಅಪೇಕ್ಷೆಗೆ, ಕಾನೂನಿನ ಒಂದು ಸದುದ್ದೇಶಕ್ಕೆ ಆಕ್ಷೇಪಣೆ ತಂದು, ಅಡ್ಡಿ ತಂದು, ಆತಂಕ ತಂದು ಹೇಳಿದ್ದರೆ ತಾವು ಹೇಳತಕ್ಕಂಥ ವಾದವನ್ನು ನಾವು ಒಪ್ಪಿಕೊಳ್ಳಬಹುದು. ಆದರೆ ಅದಕ್ಕೆ ನಾವು ಆಕ್ಷೇಪಣೆ ತರಲಿಲ್ಲ. We have not objected to this rule. In fact, we have agreed for this rule Backward classes means backward com unities, backward classes, backward tribes notified by the Government in the Order No. DPAR 1, BC 77 4-3-77 or any such other order which m y be issued from time to time. ಇದೇ ಪ್ರಕಾರ ರಿಸರ್ವೇಷನ್ ಪಾಲಿಸಿ ನಿಮ್ಮ ಸರ್ಕಾರದ್ದು ಅಥವಾ ನಾವು ಹಿಂದೆ ಮಾಡಿರಬಹುದು it is a continuing G vernment. ಸರ್ಕಾರದ ನೀತಿ ರಿಸರ್ವೇಷನ್ ಮೇಲೆ, ಬ್ಯಾಕ್‌ವರ್ಡ್‌ಕ್ಲಾಸಸ್ ಮೇಲೆ ನಿಂತಿದೆ. ಇದು ಎರಡು ನೀತಿ ಆಗುವುದಿಲ್ಲ, ಅಥವಾ ದಿನಕ್ಕೊಂದು ನೀತಿ ಆಗುವುದಿಲ್ಲ. ನಿಮ್ಮದು ರಾತ್ರಿ ಒಂದು ನೀತಿ, ಬೆಳಿಗ್ಗೆ ಒಂದು ನೀತಿ ಆಗಿರಬಹುದು. ನಿಮ್ಮ ಜನತಾ ಪಕ್ಷದ್ದು ರಾತ್ರಿ ಒಂದು ನೀತಿ, ಬೆಳಿಗ್ಗೆ ಒಂದು ನೀತಿ ಅಥವಾ ಸಂಜೆ ಒಂದು ನೀತಿ, ಮಧ್ಯಾಹ್ನ ಒಂದು ನೀತಿ. ಅದಕ್ಕಾಗಿ ತಾವು ಕೇಂದ್ರ ಸರ್ಕಾರದಲ್ಲಿ ಉರುಳಿ ಬಿದ್ದಿದ್ದೀರಿ ದಿನಕ್ಕೊಂದು ನೀತಿಯಾಗಿ ೫-೬ ಜನ ಪ್ರಧಾನಮಂತ್ರಿಗಳಾಗಿ ಅಲ್ಲಿ ಉರುಳಿ ಬಿದ್ದಿದ್ದೀರಿ ಆ ಸಂಗತಿ ಪ್ರತ್ಯೇಕ, ಈಗ ಇದರಲ್ಲಿ ಒಂದು ನೀತಿ ಕೊಟ್ಟಿದ್ದೀರಿ, ತಾವು ೭೭ ರಲ್ಲಿ ಒಂದು ನೀತಿ ಕೊಟ್ಟಿದ್ದೀರಿ. or any such other order ಎಂದು ಹೇಳಿದ್ದೀರಿ ೮೫ ಆರ್ಡರ್ ಅಥವಾ ೮೬ ಆರ್ಡರ್. ವೆಂಕಟಸ್ವಾಮಿ ವರದಿ ಬಗ್ಗೆ ಅಜಿಟೇಷನ್ ಆಯಿತು. ರಿಸರ್ವೇಷನ್ ಪಾಲಿಸಿ ಬಗ್ಗೆ, ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ತಾವು ಏನು ಡಿವೈಸ್ಡ್ ಆರ್ಡರ್ ಕೊಟ್ಟಿದ್ದೀರಿ, ಆ

ಆರ್ಡರನ್ನು ಇವತ್ತು ಸಬ್‌ಸ್ಟಿಟ್ಯೂಟ್ ಮಾಡಿ ತಾವು ರೂಲನ್ನು ಬದಲಾವಣೆ ಮಾಡುತ್ತಾ ಇದ್ದರೆ ಬಹುಶಃ ನಮ್ಮ ಕಡೆಯುವರು ಯಾರೂ ಆಕ್ಷೇಪಣೆ ಮಾಡುತ್ತಾ ಇರಲಿಲ್ಲ. ಒಂದು ವೇಳೆ ಈ ಬ್ಯಾಕ್‌ವರ್ಡ್ ಕ್ಲಾಸಸ್ ಎಂದು ನಿರ್ಣಯಿಸಿದಂಥ ಈ ಸದನ ಒಪ್ಪಿದ್ದಂಥ......

SRI K. H. SRINIVAS.— There is no need to amend the rule. Already there is provision for that.

SRI M. VEERAPPA MOILY.— That is inclusive of 1986 order. ಅದು ಅಗತ್ಯವಿಲ್ಲ. It includes 1986 order ಒಂದು ವೇಳೆ ಸದುದ್ದೇಶದಿಂದ ಇನ್ನೂ ಸ್ಪಷ್ಟವಾಗಿ ಮಾಡಬೇಕು ಎಂಬ ಅಭಿಪ್ರಾಯ ತಮ್ಮಲ್ಲಿದ್ದರೆ you could have at the most added that particular order to 1986. ಅದನ್ನು ಇವತ್ತು ಹಾಕಿಲ್ಲ. ಆದುದರಿಂದ ಇವತ್ತು ಸಾರ್ವಜನಿಕವಾಗಿ ಆಗಲಿ ಈ ಸದನದಲ್ಲಾಗಲಿ ಯಾವುದೇ ಹಿಂದುಳಿದ ವರ್ಗದ ಒಂದು ನೀತಿಗೆ ನಾವು ವಿರುದ್ಧವಾಗಿ ಹೋಗುತ್ತಾ ಇಲ್ಲ. ಆ ನೀತಿಗೆ ನಮ್ಮ ಬೆಂಬಲ ಇದೆ. ಏಕೆಂದರೆ, Congress Party is totally committed for giving protection and reservation to the backward classes, ಆದರೆ ತಮ್ಮ ಹಾಗೆ, ಅನುಕೂಲ ಬಂದ ಹಾಗೆ ಇಡೀ ಕಾನೂನನ್ನು ತಿರುಚತಕ್ಕಂಥ, ಹಿಂದುಳಿದ ವರ್ಗದವರ ಒಂದು ಸಂಪೂರ್ಣವಾದಂಥ ಬೆನ್ನೆಲುಬನ್ನೇ ಮುರಿದು ಹಾಕತಕ್ಕಂಥ ಪ್ರಯತ್ನಕ್ಕೆ ನಮ್ಮ ಒಪ್ಪಿಗೆ ಇಲ್ಲ. ಆದನ್ನು ನಾವು ಒಪ್ಪಲಿಕ್ಕೆ ತಯಾರಿಲ್ಲ. ಆದುದರಿಂದ ತಾವು ಯಾವ ಹೊಸ ರೂಲ್ಸನ್ನು ಮಾಡಿದ್ದಿರಿ, ಆ ರೂಲ್ಸನ್ನು ಹಿಂದಕ್ಕೆ ತೆಗೆದುಕೊಳ್ಳಿ.

ಈ ರೂಲ್ಸ್‌ನ್ನು ಸಿಂಧುವಾಗಿಟ್ಟು ಕೊಂಡು ೭೭ರ ಆರ್ಡರ್ ಪ್ರಕಾರ, ೮೬ರ ಆರ್ಡರ್ ಪ್ರಕಾರ ನಿಜವಾಗಿಯೂ ಹಿಂದುಳಿದವರ್ಗದವರಿಗೆ ನಿಮ್ಮ ನೀತಿ ಪ್ರಕಾರ, ಈ ಸದನ ಒಪ್ಪಿದಂಥ, ತಮ್ಮ ಸಂಪುಟ ಒಪ್ಪಿದಂಥ, ಸಾರ್ವಜನಿಕ ಬೇಡಿಕೆಗಳಲ್ಲಿ ಜನ ಆತ್ಮಪೂರ್ವಕವಾಗಿ ಒಪ್ಪಿದಂಥ ನೀತಿಯನ್ನು ಅನುಷ್ಠಾನಕ್ಕೆ ತರಬಹುದಾಗಿತ್ತು. ಎಲ್ಲೆಲ್ಲಿ ಪ್ರಾತಿನಿಧ್ಯ ಸಿಗಲಿಲ್ಲ ಅಂಥವರಿಗೆ ಪ್ರಾತಿನಿಧ್ಯ ಕೊಡತಕ್ಕ ಒಂದು ಪ್ರಯತ್ನ ಮಾಡಿದ್ದರೆ ಯಾರು ಕೂಡ ಆಕ್ಷೇಪಣೆ ಮಾಡುತ್ತಿರಲಿಲ್ಲ. ಆದರೆ, ಇವತ್ತು ಆ ನೀತಿಯನ್ನು ಸಂಪೂರ್ಣವಾಗಿ ಬದಿಗೊತ್ತಿ ಹೊಸ ನೀತಿಯನ್ನು ಜಾರಿಗೆ ಕೊಟ್ಟಿದ್ದೀರಿ. ಹಾಗಿದ್ದರೆ ನಿಮ್ಮಲ್ಲಿ ಎಷ್ಟು ನೀತಿಗಳು ಇವೆ? ಹಿಂದುಳಿದವರ ಬಗ್ಗೆ ನಿಮ್ಮ ಬತ್ತಳಿಕೆಯೊಳಗೆ ಎಷ್ಟು ಬಾಣಗಳಿವೆ. ಹಿಂದುಳಿದವರನ್ನು ರಕ್ಷಣೆ ಮಾಡತಕ್ಕ ಬಾಣಗಳಂತೂ ಅಲ್ಲ. ನಿಮ್ಮ ಅಧಿಕಾರ ದಾಹದ ಪೂರೈಕೆಗಾಗಿ ಈ ಬಾಣಗಳನ್ನು ಹಿಂದುಳಿದವರ ಎದೆಗೆ ಗುರಿ ಇಟ್ಟು ಹೊಡೆಯುತ್ತಿದ್ದಿರಿ. ಹಿಂದುಳಿದವರನ್ನು ಸಂಪೂರ್ಣವಾಗಿ ನಾಶ ಮಾಡತಕ್ಕ ಪ್ರಯತ್ನವನ್ನು ಈ ಆರ್ಡರ್‌ನಿಂದ ಮಾಡುತ್ತಿದ್ದೀರಿ. ನಾನು ಒಂದು ಹೆಜ್ಜೆ ಮುಂದೆಹೋಗಿ ಹೇಳುವುದಾದರೆ, ಚುನಾಯಿತ ಪ್ರತಿನಿಧಿಗಳು ಪ್ರಧಾನ ಮತ್ತು ಉಪ ಪ್ರಧಾನರಾಗುವುದಕ್ಕೆ ಕಾದು ನಿಂತಿದ್ದಾರೆ, ಅಂತಹವರ ಹಕ್ಕನ್ನು ಅಪಹರಿಸತಕ್ಕ ಪ್ರಯತ್ನವನ್ನು ಈ ಹುಕ್ಕುಂ ಪ್ರಕಾರ ಮಾಡುತ್ತಿದ್ದೀರೆಂದು ನಾನು ನೇರವಾದ ಆಪಾದನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. Now I would like to quote few sentences from 'Delegated Legislation and exercises of delegated powers in India' written by Sri T.B. Jois page156–Parliamentary rule, which says thus:

> "If the committee is of the opinion that any other matter relating to any order should be brought to the notice of the House it may report that matter or opinion of the matter to the House."
>
> In his address to the Members of the Committee, in 1954 the Speaker of the Lok Sabha had observed that the rule making power vested in the executive though a necessity and a risk, had however, given rise to a kind of a new

dispotism as experienced parliamentarian in the UK would say 'Exhorted members of the committee' to watch as to how the powers given by the parliament is exercised in action to keep the administration with the bounds intended by the parliament.''

ಮಾನ್ಯ ಅಧ್ಯಕ್ಷರೆ. ೧೯೫೪ರಲ್ಲಿ ಲೋಕಸಭಾ ಸ್ಪೀಕರ್‌ರವರು It is some sort of an exercise of new despotism. ಎಂದು ಹೇಳಿದ್ದಾರೆ. ಬದಲಾವಣೆ ೮೭ರಲ್ಲಿ ಏನು ರೂಲ್ಸ್ ಮಾಡಿದ್ದರು ಅದನ್ನು ೮೭ರಲ್ಲಿ ಮಾಡಿದ್ದಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿಗಳಿಗೆ ಚುನಾವಣೆ ನಡೆಯುವಾಗ ಒಂದು ರೂಲು, ಅದರ ಫಲಿತಾಂಶ ನೋಡಿದ ಮೇಲೆ, ಇನ್ನು ೫೦೦–೬೦೦ ಮಂಡಲಗಳನ್ನು ವಶೀಕರಣ ಮಾಡಿಕೊಳ್ಳುವುದಕ್ಕಾಗಿ ಮತ್ತೊಂದು ರೂಲ್. This amounts to gross arbitraryness and also amounts new despotism which is exercised under the subordinate legislation. ಮಾನ್ಯ ಅಧ್ಯಕ್ಷರೆ, ಕರ್ನಾಟಕದ ಶಾಸನ ಸಭೆಯು ಒಂದು ಪರಂಪರೆಗೆ '' ಕಪ್ಪು ಚುಕ್ಕೆ, ಕಪ್ಪು ಗೆರೆ''ಯನ್ನು ಎಳೆದಂಥಾದ್ದು you have created by changing the rule earlier to the mandal Panchayats election and also revising the rule after Mandal Panchayats Election. This constitute a new brutal, crude despotism by the party in power. ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನೀವು ಯಾರ ತಲೆಗೆ ಟೋಪಿ ಇಡಬಹುದೆಂದರೆ.

This fits into your head aptly and abundantly. ಇದನ್ನು ತಾವು ಖಂಡಿತವಾಗಿಯೂ ಮಾಡಿದ್ದೀರಿ.

The Speaker had further said,

''you are the only protectors of the people against the new despotism getting aggressive and you have to drive the rule making power in proper channel.''

ಅಧ್ಯಕ್ಷರೆ, ಈ ನಾಮಿನೇಷನ್ ವಿಚಾರದ ಬಗ್ಗೆ ಇಲ್ಲಿ ಧರಣ ಆಯಿತು. ನನಗನಿಸುತ್ತದೆ, ಈ ಧರಣ ವನ್ನು ನಾಮಿನೇಷನ್ ಮಾಡಬಾರದು ಎಂದು ಹೇಳಿ ಮಾಡಿದ್ದುದು. I think we, some of us, should havequoted this before. I think you should have appreciated the aggressive stand taken by us. Noless than the person like Mavalankar, who was the Speaker, himself, said,

"you are the only protectors of the people''

He said this addressing to the parliament Members and now we can address ourselves against the new despotism and we have to fight against the new despotism of this Janata Government and getting aggressive. We have got to be aggressive and nothing wrong in getting aggressive to fight against this new despotism. ಅಂತಹ ಅಗ್ರೆಸ್ಸೀವ್ ರೀತಿಯಲ್ಲಿ ನಾಲ್ಕೈದು ದಿವಸ ಧರಣ ಮಾಡಿದ್ದೇವೆ. ಬಹುಶಃ ಇದನ್ನು ತಮ್ಮ ಗಮನಕ್ಕೆ ಮೊದಲೇ ತಂದಿದ್ದರೆ. ತಾವು ಶಹಭಾಸ್‌ಗಿರಿ ಕೊಡುತ್ತಿದ್ದಿರಿ. ಇಂತಹ ಒಂದು ಹೋರಾಟ ವನ್ನು ಇವೊತ್ತು ಈ ಒಂದು ಡೆಸ್‌ಪಾಟಿಸಮ್ ಮೇಲೆ ಕಾಂಗ್ರೆಸ್ ಶಾಸಕರು ಮಾಡಿದರು ಎಂದು ಒಂದು ಉನ್ನತ ಪದವಿಯಲ್ಲಿದ್ದಂಥ ತಾವು ನಮಗೆ ಶಹಭಾಸ್‌ಗಿರಿ ಕೊಡುತ್ತಿದ್ದಿರಿ. ಬಹುಶಃ ಇದನ್ನು

ಕೋಟ್ ಮಾಡಲಿಕ್ಕೆ ತಡ ಆಗಿದ್ದರಿಂದ ನಮಗೆ ತಾವು ಕ್ಷಮೆ ಕೊಡಬೇಕು. ಇನ್ನು ರೂಲ್ ಮೇಕಿಂಗ್ ಪವರ್ ಬಗ್ಗೆ ಪೇಜ್ ೧೫೫ರಲ್ಲಿ ಇರತಕ್ಕ ಒಂದೆರಡು ಪ್ಯಾರಾಗ್ರಾಫ್ ಓದಿಹೇಳುತ್ತೇನೆ,

In Page 155 it has been said,

> "**Delegation of legislative powers against the principles ofrule of law and Parliamentary Sovereignity.**—
>
> In so far as it tends to postpone the formulation of the exact and definite law and it encourages taking powers meanwhile in wider terms than may be ultimately required."

ಇದು ಒಂದು ಜ್ವಲಂತ ನಿದರ್ಶನ ಒಂದು ಸೀಮಿತ ವ್ಯಾಖ್ಯಾನಕ್ಕೆ ಸಂಬಂಧಪಟ್ಟಂಥ ರೂಲ್‌ಅನ್ನು ಅಧಿಕಾರದಲ್ಲಿರುವಂತಹವರು ಬೇರೆ ರೀತಿಯಲ್ಲಿ ಹೇಳುವುದಕ್ಕೆ ಹೇಗೆ ಸಾಧ್ಯ? ಇವೊತ್ತು ಮಂಡಲ್ ಪಂಚಾಯತ್, ಜಿಲ್ಲಾ ಪರಿಷತ್ ಚುನಾವಣೆಗಳಿಗೆ ಮೊದಲು ಕೂಡ ಜನತಾ ಸರ್ಕಾರ ಇತ್ತು, ಚುನಾವಣೆ ಆದ ಮೇಲೆಯೂ ಕೂಡ ಜನತಾ ಸರ್ಕಾರ ಇದೆ, ಅಂದರೆ ಒಂದೇ ಸರ್ಕಾರ ಇದೆ. ಇದ್ದು How can they interpret the intention of this Legislature in a different way, in their own way, in a different way and every year, one interpretation. What is rule ?Rule is the expression of intention of this Legislature. Can they interpret in two ways or in a different way? That is a matter which we have got to understand. ಚುನಾವಣೆಗೆ ಮೊದಲು, ಅನಂತರ ಅವರ ಅನುಕೂಲಕ್ಕೆ ರೂಲ್‌ಅನ್ನು ಬದಲಾವಣೆ ಮಾಡಿಕೊಂಡು This Government has committed gross Offence against the principles of rule of law and the Parliamentary Sovereignity. ಇವೊತ್ತು ಆ ಕೆಲಸವನ್ನು, ಆ ಪಾಪವನ್ನು ಸರ್ಕಾರದವರು ಮಾಡಿದ್ದಾರೆ. ಮತ್ತು ನಾನು ಈಗಾಗಲೇ ಹೇಳಿದಂತೆ, ಮಾನ್ಯ ಹಾವನೂರ್ ಕಮಿಷನ್‌ನವರು ಕೊಟ್ಟಂತಹ ಅಂಕಿಸಂಖ್ಯೆಗಳು ಏನು? ಅವರು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದು ಜಾತಿಗೆ ಸಂಬಂಧಪಟ್ಟಂತೆ. ಟ್ರೈಬ್ಸ್‌ಗೆ ಸಂಬಂಧಪಟ್ಟಂತೆ ಕ್ಯಾಸ್ಟ್‌ಗೆ ಸಂಬಂಧಪಟ್ಟ ಹಾಗೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ಲೇಬರರ್ಸ್ ಮತ್ತು ಆರ್ಟಿಸಾನ್‌ಗೆ ಸಂಬಂಧಪಟ್ಟಂತೆ ಕೊಟ್ಟಿಲ್ಲ. ಇವತ್ತು ಒಂದು ರೂಲ್ ಮಾಡಿಕೊಂಡು again they are introducing law of vagueness. They cannot frame rules to have a wider terms. ಇದನ್ನು ಇನ್ನೂ ವೈಡರ್ ಟರ್ಮ್ಸ್‌ಗೆ ಹಾಕಿದ್ದಾರೆ. ಏಕೆಂದರೆ, ಅಧಿಕಾರದಲ್ಲಿದ್ದಂಥ ಒಂದು ಸರ್ಕಾರ ಸ್ವೇಚ್ಛಾನುಸಾರವಾಗಿ ಈಗ ಫ್ರೇಮ್ ಮಾಡಿದಂಥ ರೂಲ್ ಅನ್ನು ಉಪಯೋಗ ಮಾಡಲಿಕ್ಕೆ ಅನುಕೂಲ ಇರುವಂತೆ ಈ ರೂಲ್ ಅನ್ನು ಸ್ಪಷ್ಟವಾಗಿ ಮಾಡಿದ್ದಾರೆ. ಇದರಿಂದ ಕೂಡ ಸಾಕಷ್ಟು ತೊಂದರೆಯಾಗುತ್ತದೆ.

I will read this. It further says:

> "It is true that the Lok Sabha Committee on Subordinate Legislation has performed and has performed very useful functions and keeps subordinate legislation under control."

ಇದನ್ನು ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಗೆ ಕಳುಹಿಸುತ್ತೇವೆ ಎಂದು ತಾವು ಹೇಳಬಹುದು. ಈಗಲೇ ತಾವು ಹೇಳಬೇಕು. ಇದು ಕೇವಲ ನಮ್ಮ ವಾದವಾಗಿ ಉಳಿಯಬಾರದು. ಇದು ತಮ್ಮ ವಾದವಾಗಿರಬೇಕು. The principles enunciated by Lok Sabha Speaker, Sri Mavalankar, in 1954, that aggressive policy, the MPs or the Legislators should adopt. We should adopt. I think the initiative will come

from you to make us aware of this approach against the way in which they are misusing the rule-making power.

About Rule making power, in page149, it has been stated thus.—

> "Under section 5(1) thereof if a resolution is passed in either House, the Crown shall by Order-in-Council revoke the statutory instrument in question and there upon no further proceedings shall be taken under that instrument..."

...Well it has got no control. I am speaking now after 40 years of experience, parliament has really no control over the Executive; it is a pure fiction"

This is an instance case. This illustrates the case where this legislature has lost control over the Executive. Executive inthis case has agone amock after getting these Zilla Parishads and Mandal Panchayats Act passed in misusing its rule-making power."

Aneurin Bewan in his Memorandum to said Committee has pointed out that while he did not question the necessity for delegated legislation, the real problem is, how this legislation can be reconciled, with the processes to democratic consultation, scrutiny and control All these qualities are lacking here. ಒಂದು ಕಾಲದಲ್ಲಿ ಅನಿರುನ್ ಬೇವರ್‌ರವರು ಯು.ಕೆ.ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಏನೆಂದರೆ, It will amply apply in this case where the Executive has totally misused their power. There shouldbe democratic consultation, scrutiny and control. This will tell upon the credibility of the executive and dishonesty practised by them in rule making power ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಪ್ರಕಾರ ನಾವು ಎಷ್ಟೇ ಹೇಳಿದರೂ ಕೂಡ ಇವರು ಮಾಡುವುದನ್ನು ಮಾಡಿಯೇ ಮಾಡುತ್ತಾರೆ. ಏಕೆಂದರೆ ಆ ಒಂದು ಪ್ರಾಮಾಣಿಕತೆ ಎಂಬುದು ಇವರಲ್ಲಿಲ್ಲ. ರಾಜಕೀಯ ಪ್ರಾಮಾಣಿಕತೆ ಇವರಲ್ಲಿಲ್ಲ. ಹಿಂದುಳಿದ ವರ್ಗದವರ ಬಗ್ಗೆ ಏನೊಂದು ನೀತಿಯನ್ನು ಇವರು ಹಾಕಿಕೊಂಡಿದ್ದಾರೆ ಅದನ್ನು ಅನುಸರಿಸುವ ಪ್ರಾಮಾಣಿಕತೆ ಇವರಲ್ಲಿಲ್ಲ. ಇಷ್ಟು ವಿಚಾರಗಳನ್ನು ಇಲ್ಲಿ ತಮ್ಮ ಗಮನಕ್ಕೆ ತಂದು ನಾಮಕರಣ ಮಾಡತಕ್ಕ ಇವರ ದ್ವಂದ್ವ ನೀತಿಯನ್ನು, ಅಪ್ರಮಾಣಿಕ ನೀತಿಯನ್ನು ನಾನು ವಿರೋಧ ಮಾಡುತ್ತೇನೆ. ಈ ಮೂಲಕ ಕರ್ನಾಟಕದ ಇತಿಹಾಸಕ್ಕೆ ಒಂದು ರೀತಿಯ ಅಪವಾದವನ್ನು ಈ ಸರ್ಕಾರ ದವರು ತಂದಿದ್ದಾರೆ. ಇದರ ಬಗ್ಗೆ ಪುನಃ ತಾವು ಆಲೋಚನೆ ಮಾಡಬೇಕಾದದ್ದು ಅವಶ್ಯಕ ಇದೆ ಎಂಬ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ಹಿಂದುಳಿದ ವರ್ಗದ ಬಗ್ಗೆ ಇವರ ನೀತಿ ಕ್ಷಣ ಕ್ಷಣಕ್ಕೂ ಬದಲಾವಣೆಯಾಗುತ್ತಿದೆ. ಈ ನೀತಿ ಹಿಂದುಳಿದ ವರ್ಗದವರ ಹಿತಾಸಕ್ತಿಗೆ ಆಘಾತವಾಗುತ್ತದೆ ಹಿಂದುಳಿದ ವರ್ಗದವರ ವಿಚಾರದಲ್ಲಿ ನೀವು ನಾಟಕೀಯವಾದ ಧೋರಣೆಯನ್ನು ತೋರಿಸಿದಂತಾಗುತ್ತದೆ. ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಅನುಸರಿಸಿ ವಿರೋಧಪಕ್ಷದವರನ್ನು ಧ್ವಂಸ ಮಾಡತಕ್ಕ, ದಮನ ಮಾಡತಕ್ಕ ನೀತಿಯನ್ನು ನೀವು ತಾಳುವುದಾದರೆ ಈ ಕರ್ನಾಟಕ ರಾಜ್ಯದ ಜನತೆ ಒಂದಲ್ಲೊಂದು ದಿವಸ ನಿಮಗೆ ಬುದ್ಧಿಯನ್ನು ಕಲಿಸುತ್ತಾರೆ ಎನ್ನತಕ್ಕ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾವು ಯಾವ ಉದ್ದೇಶದಿಂದ ಇವತ್ತು ಈ ಒಂದು ತಿದ್ದುಪಡಿಯನ್ನು ಇಲ್ಲಿ ತಂದಿದ್ದೇವೆ ಇದಕ್ಕೆ ಮನ್ನಣೆಯನ್ನು ತಾವು ಕೊಡಿ ಗೌರವವನ್ನು ತಾವು ಕೊಡಿ, ಇಲ್ಲದಿದ್ದರೆ ಈ ಶಾಸನವನ್ನು ಮಾಡತಕ್ಕ ಶಾಸಕರು ನಾವು ಏನಿದ್ದೇವೆ, ನಾವೆಲ್ಲರೂ ತಲೆತಗ್ಗಿಸಬೇಕಾದ ಪರಿಸ್ಥಿತಿ ಬರುತ್ತದೆ.

೧೨-೩೦ ಪಿ. ಎಂ.

Our amendment is only to give expression to the intention of the Legis'ation which is psssed. I may now be permitted to move the following amendment:

CLAUSE 2:

I beg to move:

That for the existing clause and proviso there to, the following clause shall be sustituted:

> (2) "Backward Classes" means the Backward communities, Backward Castes and Backward Tribes notified by the Government in Order No. DPAR 1 SBC 77 dt: 4th March 1977 or in such other order as may be issued from time to time."

Qnestion was propsed

ಆದ್ದರಿಂದ ಇದನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡು ಮುಂದುವರಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ನನ್ನ ವಂದನಾರ್ಪಣೆಗಳನ್ನು ಸಮರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು. ಭೂಪತಿ (ಸಂಡೂರು) — ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಹಳಷ್ಟು ವಿಚಾರಗಳನ್ನು ಮಾನ್ಯ ವೀರಪ್ಪ ಮೊಯಿಲಿಯವರು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಮುಖ್ಯವಾಗಿ ಬಂದಿರತಕ್ಕಂಥದ್ದು ಎರಡು ವಿಚಾರಗಳು. ಒಂದು ಮಂಡಲ್ ಪಂಚಾಯಿತಿಗೆ ನಾಮಕರಣ ಮಾಡುವ ವಿಚಾರ. ಈ ನಾಮಕರಣ ಮಾಡುವಾಗ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ಜನರು ಯಾರು ಯಾರು ಎನ್ನತಕ್ಕದ್ದರ ಬಗ್ಗೆ ಸರ್ಕಾರ ಕೊಟ್ಟಿರತಕ್ಕಂಥ ಹೊಸ ವ್ಯಾಖ್ಯಾನ. ಇವೆರಡು ಬಹಳ ಮುಖ್ಯವಾದ ಅಂಶ. ಈಗ ನಮಗೆ ಬಹಳ ವಿಚಿತ್ರವೆನಿಸತಕ್ಕಂಥ ಅಂಶ ಏನೆಂದರೆ ಈ ಮೀಸಲಾತಿ ನೀತಿಯನ್ನು ತಯಾರು ಮಾಡುವಾಗ ಹಿಂದಿನಿಂದಲೂ ನಡೆದುಕೊಂಡು ಬಂದಿರತಕ್ಕಂಥದ್ದು ಏನು ಇದೆ, ಅದು ಮಾನ್ಯ ದೇವರಾಜ ಅರಸ್‌ರವರ ಕಾಲಕ್ಕೆ ಆಗಬಹುದು, ಅಥವಾ ಅವರ ನಂತರ ಮಾನ್ಯ ಮುಖ್ಯಮಂತ್ರಿಗಳ ಕಾಲಕ್ಕೆ ಆಗಬಹುದು ಆವತ್ತಿನ ಪರಿಸ್ಥಿತಿಯನ್ನು ನೋಡಿದಾಗಲೂ ಕೂಡ ಈ ಮೀಸಲಾತಿ ಪದ್ಧತಿಯನ್ನು, ಮೀಸಲಾತಿ ನೀತಿಯನ್ನು ಜಾರಿಗೆ ತರುವಾಗ ಜಾತಿ ಮತ್ತು ವರ್ಗ ಇವೆರಡನ್ನೂ ಬೇರೆ ಬೇರೆಯಾಗಿ ನೋಡತಕ್ಕಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿಲ್ಲ. ವರ್ಗ ಪರಿಗಣನೆ ಮಾಡುವಾಗ ಅದರಲ್ಲಿ ಜಾತಿ ಪರಿಗಣನೆಯ ದೃಷ್ಟಿಯಿಂದ ನೋಡಬೇಕು ಹಿಂದುಳಿದ ವರ್ಗಗಳೆಂದು ಕರೆಯುವಾಗ ಒರೇ ಜಾತಿ ಎಂದು ಇಟ್ಟುಕೊಂಡು ಹಿಂದುಳಿದ ವರ್ಗಗಳೆಂದು ಹೇಳತಕ್ಕಂಥ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ ಉದಾಹರಣೆಗೆ ಸಾಮಾಜಿಕವಾಗಿ ಬಹಳ ವರ್ಷಗಳಿಂದ ತುಳಿತಕ್ಕೆ ಒಳಗಾದ ಜನರು ಅಸ್ಪೃಶ್ಯರು ಎಂದು ಈವತ್ತಿನವರೆಗೂ ಉಳಿದುಕೊಂಡಿರತಕ್ಕಂಥ ಜನರನ್ನು ಆಡಳಿತ ಪಕ್ಷದವರು ತಮ್ಮ ಅನುಕೂಲ ಸಿಂಧುವಾಗಿ ಮಾಡಿಕೊಳ್ಳುತ್ತಿದ್ದಾರೆಯೇ ಹೊರತು, ಇದರಲ್ಲಿ ಯಾವುದೇ ನೀತಿ ಇಲ್ಲ, ತತ್ವ ಇಲ್ಲ ಎನ್ನತಕ್ಕಂಥ ಮಾತನ್ನು ನಿಷ್ಠುರವಾಗಿ ಹೇಳಲೇಬೇಕಾಗುತ್ತದೆ ಕಾನೂನನ್ನು ಮಾಡುವಾಗ ಆ ಒಂದು ಅಧಿಕಾರವನ್ನು ನಾವು ಕೊಟ್ಟಿದ್ದೇವೆ. ಈ ಸದನ ಕೊಟ್ಟಿದೆ ಎನ್ನತಕ್ಕಂತಹ ಮಾತನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. ಕಲಮು ೫(೩)ರ ಕೆಳಗೆ ಹಿಂದುಳಿದ ವರ್ಗದವರಿಗೆ ನಾಮಕರಣ ಮಾಡತಕ್ಕ ಒಂದು ಅವಕಾಶವನ್ನು ನಾವು ಕೊಟ್ಟಿದ್ದೇವೆ. ನೀವೇ ಆ ರೀತಿಯ ಅಧಿಕಾರವನ್ನು ಕೊಟ್ಟಿಲ್ಲವೆ ಎಂಬುದಾಗಿ ಅವರು ಕೇಳುತ್ತಾರೆ, ಆದರೆ ಅಂದು ಸದನದ ಅಭಿಪ್ರಾಯ ಏನು ಇತ್ತು ಎಂಬುದನ್ನು ಇವತ್ತಾದರೂ ಸರ್ಕಾರ

ತಿಳಿದುಕೊಳ್ಳಬೇಕಾಗುತ್ತದೆ. ಕಲಮು ೫(೩) ಕೆಳಗೆ ಹಿಂದುಳಿದ ವರ್ಗದ ಜನರನ್ನು ನಾಮಕರಣ ಮಾಡುವಂತಹದ್ದನ್ನು ಏಕೆ ಯೋಚನೆ ಮಾಡಿತು ಎಂದರೆ, ಯಾವ್ಯಾವ ಮಂಡಲದಲ್ಲಿ ಹಿಂದುಳಿದ ವರ್ಗದವರು ಆಯ್ಕೆಯಾಗಿಲ್ಲವೋ ಅಲ್ಲಿ ಇಬ್ಬರು ಆ ಜನಾಂಗದ ಸದಸ್ಯರನ್ನು ನಾಮಕರಣ ಮಾಡತಕ್ಕ ಸದವಕಾಶವನ್ನು ಕಾನೂನಿನಲ್ಲಿ ಕೊಟ್ಟಿದ್ದಾಗಿದೆ. ಆದರೆ ಈ ಸರ್ಕಾರ ಈ ಕಾನೂನನ್ನು ತಿರುಚಿ ತಿರುಚಿ ತಮಗೆ ಅನುಕೂಲವಾಗುವ ರೀತಿಯಲ್ಲಿ ಅನುಕೂಲ ಸಿಂಧು ಆಗುವ ರೀತಿಯಲ್ಲಿ ಈ ಕಾನೂನನ್ನು ತಿರುಚಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನತಕ್ಕಂತಹದ್ದು ಅನೇಕ ಉದಾಹರಣೆಗಳಿಂದ ಕಂಡು ಬರುತ್ತಿದೆ.

ಅದನ್ನು ಏತಕ್ಕೆ ಮಾಡಿದರು, ಏನು ಮಾಡಿದರು ಎಂದು ವಿಚಾರ ಮಾಡಿದರೆ ನನಗನ್ನಿಸುತ್ತದೆ, ಈ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜನರು ಏನು ಇವತ್ತು ಹೋರಾಟ ಮಾಡತಕ್ಕ ಐಕ್ಯತೆ ಮತ್ತು ಚೈತನ್ಯವನ್ನು ಕಳೆದುಕೊಂಡಿದ್ದಾರೆ. ಅದು ಸರ್ಕಾರದ ಪಾಲಿಗೆ ಅದೃಷ್ಟವಾಗಿದೆ ಎಂದು ನಾನು ಭಾವಿಸಿದ್ದೇನೆ. ನಿಜವಾಗಿ ಶೋಷಣೆಗೆ ಒಳಗಾದ ವರ್ಗಕ್ಕೆ ಸೇರಿದ ಜನ ಸರಿಯಾಗಿ ಎಚ್ಚೆತ್ತುಕೊಂಡಿದ್ದರೆ, ಬಲವಾಗಿ ಹೋರಾಟ ಮಾಡಿದ್ದರೆ ವೆಂಕಟಸ್ವಾಮಿ ಆಯೋಗದ ವರದಿಯನ್ನು ಅಷ್ಟು ಸುಲಭವಾಗಿ ತಿರಸ್ಕರಿಸುವುದಕ್ಕೆ ಈ ಸರ್ಕಾರಕ್ಕೆ ಆಗುತ್ತಿರಲಿಲ್ಲ, ಅದಕ್ಕೆ ತದ್ವಿರುದ್ಧವಾಗಿ ರಾಜ್ಯದಲ್ಲಿ ಚಳುವಳಿ ನಡೆಯಿತು, ಸರ್ಕಾರದ ಮೇಲೆ ಒತ್ತಡ ಬಂತು. ಅದಕ್ಕೆ ಮಣಿದು ವರದಿಯಲ್ಲಿ ಒಳ್ಳೆಯದು ಕೆಟ್ಟದ್ದು ಏನಿದೆ ಎಂದು ಚರ್ಚಿಸದೆ ತಿರಸ್ಕಾರ ಮಾಡಿ ಹೊಸ ನೀತಿಯನ್ನು ಜಾರಿಗೆ ತಂದರು. ಹೊಸ ನೀತಿಯಲ್ಲಿ ಮಾಡಿದ್ದು ಏನು? ವೆಂಕಟಸ್ವಾಮಿಯವರು ಒಂದು ಕಡೆ ಸರ್ಕಾರದ ಹೊಸ ನೀತಿ ಹೇಗಿದೆ ಎಂಬುದರ ಬಗ್ಗೆ ಒಳ್ಳೆಯ ಮಾತಿನಲ್ಲಿ ಹೇಳಿದ್ದಾರೆ, ಅದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಹಂಡೆತುಂಬ ನೀರಿದ್ದು ೨ ಲೀಟರ್ ಹಾಲು ಹಾಕಿ ಎಲ್ಲರೂ ಕುಡಿಯಿರಿ' ಎಂದು ಹೇಳಿದ ಹಾಗೆ ಈ ಮೀಸಲಾತಿ ನೀತಿ ಇದೆ. ಎಷ್ಟು ಸುಲಭವಾಗಿ ಹೇಳಿದ್ದಾರೆ. ಹೆಗಡೆಯವರು ಹಂಡೆ ತುಂಬ ನೀರು ಹಾಕಿ ಅದಕ್ಕೆ ೨ ಲೀಟರ್ ಹಾಲು ಸೇರಿಸಿ ಶೇಕಡ ೯೨ರಷ್ಟು ಜನ ಏನಿದ್ದಾರೆ, ಅವರಿಗೆ ನೀವೆಲ್ಲ ಕುಡಿಯಿರಿ, ನಾನು ಎಲ್ಲರಿಗೂ ಹಾಲು ಕುಡಿಸುತ್ತಿದ್ದೇನೆ ಎಂದು ಹೇಳುತ್ತಾರೆ. ಹಾಲು ಇರುವುದು ಕೇವಲ ೨ ಲೀಟರ್. ಇಂಥ ನೀತಿಯನ್ನು ಇವರು ತಂದರು. ಆದಾದಮೇಲೆ ಈಗ ಮಂಡಲ ಪಂಚಾಯಿತಿಗಳಲ್ಲಿ ಹಿಂದುಳಿದ ವರ್ಗದವರ ನಾಮಕರಣಕ್ಕಾಗಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಆ್ಯಕ್ಟಿನ ೨೮೮ನೇ ಸಬ್ ಸೆಕ್ಷನ್ (೧)ನ್ನು ಅಮೆಂಡ್ ಮಾಡಿ ರೂಲ್ಸ್ ಫ್ರೇಂ ಮಾಡಿದ್ದಾರೆ ಇದರಲ್ಲಿ ಏನು ಹೇಳುತ್ತಾರೆಂದರೆ, ಗ್ರಾಮಾಂತರ ಪ್ರದೇಶದ ಕುಶಲ ಕರ್ಮಿಗಳು ಮತ್ತು ಕೃಷಿ ಕಾರ್ಮಿಕರು ಏನಿದ್ದಾರೆ. ಅವರಿಗೆ ಆದಾಯದ ಮಿತಿಯನ್ನು ನಿಗದಿ ಮಾಡಿದ್ದಾರೆ. ಹಿಂದುಳಿದ ವರ್ಗಗಳನ್ನು ಪರಿಗಣನೆ ಮಾಡುವಾಗ ಆ ಒಂದು ವರ್ಗದ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಜೊತೆಗೆ ಆರ್ಥಿಕವಾಗಿ ಹಿಂದುಳಿದಿರುವಿಕೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಎರಡನ್ನೂ ಗಣನೆಗೆ ತೆಗೆದುಕೊಂಡು ಈ ನಿಯಮವನ್ನು ತಂದಿದ್ದೀರಾ? ಈ ಧೋರಣೆಯನ್ನು ತಾಳಿದ್ದೀರಾ ಎಂದು ಯೋಚಿಸಿದರೆ ಅದು ಆಗಿಲ್ಲ. ಏತಕ್ಕೆಂದರೆ ಅದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಹಜಾಮರು ಅಥವಾ ಕ್ಷೌರಿಕರು ಎಂದು ಇಟ್ಟು ಕೊಳ್ಳೋಣ. ಹಳ್ಳಿಗಳಲ್ಲಿ ಕೆಲವು ಕಡೆ ಪರಿಸ್ಥಿತಿ ಹೇಗಿದೆ ಎಂದರೆ ಹರಿಜನರಿಗೆ ಹರಿಜನರೇ ಕ್ಷೌರ ಮಾಡುತ್ತಾರೆ, ಲಿಂಗಾಯಿತರಿಗೆ ಲಿಂಗಾಯಿತರೇ ಕ್ಷೌರ ಮಾಡುತ್ತಾರೆ. ಲಿಂಗಾಯಿತರಲ್ಲೂ ಕ್ಷೌರಿಕರು ಇದ್ದಾರೆ. ಬೇರೆ ಬೇರೆ ಜಾತಿಗಳಲ್ಲೂ ಕ್ಷೌರಿಕರು ಇದ್ದಾರೆ. ಅನಂತರ ಕಮ್ಮಾರರನ್ನು ತೆಗೆದುಕೊಳ್ಳಿ, ಅವರ ಒಂದೇ ಜಾತಿಯಲ್ಲಿ ಇರತಕ್ಕ ಕಮಾರರು ಇದ್ದಾರೆ. ಮುಸ್ಲಿಮರಲ್ಲಿ, ಕ್ರೈಸ್ತರಲ್ಲಿ, ಹಿಂದೂಗಳಲ್ಲಿ ಲಿಂಗಾಯಿತರಲ್ಲೂ ಕಮ್ಮಾರರು ಇದ್ದಾರೆ. ಕೆಲವು ಹಳ್ಳಿಗಳಲ್ಲಿ ಮೆಜಾರಿಟಿ ಜಾತಿ ಜನರು ಯಾವ ಉದ್ಯೋಗ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ ಅದೇ ಉದ್ಯೋಗವನ್ನು ಉಳಿದವರು ಆರಂಭಿಸುತ್ತಾರೆ, ಈ ರೀತಿ ಕುಶಲ ಕರ್ಮಿಗಳು ಎಲ್ಲಾ ಜಾತಿಯಲ್ಲೂ ಇರುವಾಗ ಇಲ್ಲಿ ವಿರೋಧ ಪಕ್ಷದವರು ಧರಣಿ ಕೂಡುವುದಕ್ಕೆ ಮುಂಚೆ ಮಾನ್ಯ ದೇವೇಗೌಡರು ಒಂದು ಹೇಳಿಕೆ ಕೊಟ್ಟರು. ಅವರ ಮಾತನ್ನು ನಾನು ಕೇಳಿದೆ. ಏನು ಹೇಳಿದರು ಅವರು? ಮುಂದುವರೆದಂಥ ಜಾತಿ ಜನಗಳು ನಾಮಿನೇಷನ್‌ನಲ್ಲಿ ಬರಬಾರದು, ಕುಶಲಕರ್ಮಿಗಳು, ಕೃಷಿ ಕಾರ್ಮಿಕರು ಮತ್ತು ಹಿಂದುಳಿದವರಿಗೆ ಅನುಕೂಲವಾಗಲಿ ಎಂದು ಇದನ್ನು ತಂದರೆ ನೀವು ವಿರೋಧ ಮಾಡುತ್ತೀರಲ್ಲ, ಎಂದು ಹೇಳಿದರು ಆದರೆ ಇದರಲ್ಲಿ ಅಡಗಿರತಕ್ಕ ಅಂತರಂಗ ಬೇರೆ. ಹಿಂದುಳಿದವರ ಹೆಸರಿನಲ್ಲಿ ಈ ತಿದ್ದುಪಡಿಯನ್ನು ತಂದು

ಮತ್ತೆ ತಮಗೆ ಬೇಕಾದ ಜನರನ್ನು ಸೃಷ್ಟಿ ಮಾಡಿ ನಾಮಕರಣ ಮಾಡುವ ಪದ್ಧತಿಗೆ ಕೈ ಹಾಕಿದ್ದಾರೆ ಎಂದು ನೇರವಾಗಿ ನಾನು ಆಪಾದನೆ ಮಾಡಬೇಕಾಗಿದೆ. ಒಮ್ಮೆ ಅಧಿಕಾರ ವಿಕೇಂದ್ರೀಕರಣ ಮಾಡೇತ್ತೇವೆಂದು ಚುನಾವಣೆ ಘೋಷಣೆ ಮಾಡಿದಮೇಲೆ ತಮಗೆ ಬೇಕಾದ ಪ್ರತಿನಿಧಿಗಳನ್ನು, ಪಕ್ಷ ಯಾವುದೇ ಇರಲಿ, ಆರಿಸಿ ಆದಮೇಲೆ ಆ ಸಂಸ್ಥೆಗಳಿಗೆ ಪುನಃ ನಾಮಕರಣ ಮಾಡತಕ್ಕ ಪ್ರಜಾಪ್ರಭುತ್ವ ವಿರೋಧಿ ನೀತಿಗೆ ಸರ್ಕಾರ ಏತಕ್ಕೆ ಕೈಹಾಕಬೇಕು ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ಒಂದು ಸಾರಿ ಚುನಾವಣೆ ಆದ ಮೇಲೆ ನೀವು ಏತಕ್ಕೆ ನಾಮಕರಣ ಮಾಡುತ್ತೀರಿ ಎಂದಾಗ ಈ ಮನೆಯಲ್ಲಿ ಡಿಫೆಂಡ್ ಮಾಡಿಕೊಂಡರು. ವೈಜಯಂತಿ ಮಾಲ, ಆರತಿ ಅಂಥವರನ್ನು ನಾಮಕರಣ ಮಾಡಬಹುದು, ಆದರೆ ಕೃಷಿ ಕಾರ್ಮಿಕರು ಮತ್ತು ಕುಶಲಕರ್ಮಿಗಳನ್ನು ಮಾಡಬಾರದೇ ಎಂದು ಕೇಳಿದರು? ಇದರಲ್ಲಿ ಮೊದಲೇ ಸೃಷ್ಟಿ ಮಾಡಿರತಕ್ಕ ವ್ಯವಸ್ಥೆ ಇದೆ ಆದ್ದರಿಂದ ಇದನ್ನು ಮಾಡುತ್ತಿದ್ದಾರೆ, ಆದರೆ ನೀವು ತಂದಿರತಕ್ಕ ಹೊಸ ವ್ಯವಸ್ಥೆಯಲ್ಲಿ ನಾಮಕರಣ ಮಾಡಬೇಡಿ ಎಂದು ಈ ಕಡೆಯಿಂದ ಒತ್ತಾಯ ಬಂದರೂ ಅದನ್ನು ಮಾಡೇ ಮಾಡುತ್ತೇವೆ ಎಂದು ಏತಕ್ಕೆ ಹಠಮಾರಿತನ ಮಾಡುತ್ತೀರಿ?

ಸದಸ್ಯರೊಬ್ಬರು.—ವೈಜಯಂತಿ ಮಾಲ ನಾಮಿನೇಟೆಡ್ ಅಲ್ಲ, ಎಲೆಕ್ಟೆಡ್,

ಶ್ರೀ ಯು. ಭೂಪತಿ.—ಅದನ್ನು ಉದಾಹರಣೆ ಕೊಟ್ಟರು ಮೂಲಭೂತವಾಗಿ ನಾಮಕರಣ ಮಾಡತಕ್ಕ ಪದ್ಧತಿಗೆ ನಾವು ವಿರೋಧ. ಏಕೆಂದರೆ ಚುನಾವಣೆಗಳನ್ನು ಮಾಡಿದ ಮೇಲೆ ನಾಮಕರಣ ಮಾಡುವ ಪ್ರಶ್ನೆ ಇಲ್ಲವೇ ಇಲ್ಲ. ಅದಾದನಂತರ ಮೊನ್ನೆ ಕೂಡ ಚರ್ಚೆ ನಡೆದು ಕಾಂಗ್ರೆಸ್ ಪಕ್ಷದ ಸ್ನೇಹಿತರು ಸಭಾತ್ಯಾಗ ಮಾಡಿದರು, ಈ ಮನೆಯ ಸಾರ್ವಭೌಮತ್ವವನ್ನು ಕಳೆಯುತ್ತಿದ್ದೀರಿ, ನಾಮಕರಣ ವಿಚಾರ ಚರ್ಚೆಗೆ ಇರುವಾಗಲೇ ಜಿಲ್ಲಾ ಪರಿಷತ್ ಸಭೆಗಳಿಗೆ ನಾಮಕರಣ ಮಾಡುವುದಕ್ಕೆ ಆದೇಶ ಕೊಟ್ಟಿದ್ದೀರಿ ಎಂದು ಹೇಳಿದರು ಕೆಲವು ಕಡೆ ನಾಮಕರಣ ಮಾಡುವ ಅಧಿಕಾರವನ್ನು ಜಿಲ್ಲಾ ಪರಿಷತ್ ಅಧ್ಯಕ್ಷರಿಗೇ ಬಿಟ್ಟಿದ್ದಾರೆ ಎಂದು ಈಗಾಗಲೇ ಪತ್ರಿಕೆಗಳಲ್ಲಿ ಬಂದಿದೆ ಸರ್ವಾನುಮತದ ತೀರ್ಮಾನದ ಪ್ರಶ್ನೆ ಅಲ್ಲ. ಅಧಿಕಾರ ವಿಕೇಂದ್ರೀಕರಣದ ಪ್ರಶ್ನೆ ಯಾವರೀತಿ ಬರುತ್ತದೆಂದರೆ ಜನತಾ ಪಕ್ಷ ಮೆಜಾರಿಟಿ ಇರುವ ಕಡೆ ಏನಾದರೂ ಜಗಳ ಬಂದರೆ ಕೊನೆಗೆ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರ ಚೇಂಬರ್‌ನಲ್ಲಿ ನಾಮಕರಣ ಮಾಡುವ ನಿರ್ಣಯವಾಗುತ್ತದೆ. ಇದು ಅಧಿಕಾರ ವಿಕೇಂದ್ರೀಕರಣದ ನೈಜ ಪರಿಸ್ಥಿತಿ. ಅಧಿಕಾರ ವಿಕೇಂದ್ರೀಕರಣ ಹೆಸರಿನಲ್ಲಿ ಎಲ್ಲಾ ನಡೆಯುವುದು ಇಲ್ಲಿ. ಅಲ್ಲಿ ಏನೂ ನಡೆಯುವುದಿಲ್ಲ. ಒಬ್ಬರೇ ನಾಯಕರು ಹೇಳಿದಮಾತನ್ನು ಕೇಳತಕ್ಕಂಥ ಪರಿಸ್ಥಿತಿ ಇಲ್ಲಿ ಬರುತ್ತದೆ. ಅಧಿಕಾರ ವಿಕೇಂದ್ರೀಕರಣ ಎಂದು ಹೇಳಿದರೂ ಕೂಡ ಅವ್ಯವಸ್ಥೆ ಇಲ್ಲವೇ ಇಲ್ಲ. ಈ ಸದನದ ಸಾರ್ವಭೌಮತ್ವವನ್ನು ಕಾಪಾಡಿ ಕೊಂಡು ಬರುತ್ತದೆಂದು ಹೇಳಿದ ಸರ್ಕಾರ ಎಲ್ಲಿ ಕಾಪಾಡಿದೆ ಎಂದು ಕೇಳಬೇಕಾಗಿದೆ. ಇಲ್ಲಿ ಚರ್ಚೆಗೆ ಟೈಮ್ ನಿಗದಿ ಮಾಡಿ ಅಲ್ಲಿ ನಾಮಕರಣ ಮಾಡಿ ಎಂದು ಹೇಳಿ ಮತ್ತೊಮ್ಮೆ ಸಾರ್ವಭೌಮತ್ವಕ್ಕೆ ಧಕ್ಕೆ ತಂದಿದ್ದಾರೆ ಎಂದು ಹೇಳಬೇಕಾಗಿದೆ? ಹಿಂದುಳಿದ ವರ್ಗದ ಬಗ್ಗೆ ತಮ್ಮ ಆಸಕ್ತಿಗೆ ಅನುಗುಣವಾಗಿ, ಪರಿಸ್ಥಿತಿಗೆ ಅನುಗುಣವಾಗಿ ತಮಗೆ ಬೇಕಾದ ರೀತಿಯಲ್ಲಿ ಬೇಕಾದ ಸಂದರ್ಭದಲ್ಲಿ ತಮ್ಮದೇ ಆದ ಒಂದು ಸಿದ್ಧಾಂತವನ್ನು ಹೇಳಿದರೆ ಆಗುವುದಿಲ್ಲ ಅದಕ್ಕೆ ಕೆಲವು ನೀತಿಗಳಿವೆ, ಪದ್ಧತಿಗಳಿವೆ, ಅದನ್ನು ಅನುಸರಿಸಿ ಎಂದು ನಾವು ನಿಮಗೆ ಹೇಳಬೇಕಾಗುತ್ತದೆ. ಮಾನ್ಯ ದೇವೇಗೌಡರು ಒಂದು ಹೇಳಿಕೆ ಕೊಟ್ಟರು. ಅದು ಹಿಂದುಳಿದ ವರ್ಗವಾಗುವುದಿಲ್ಲ ಮಾನ್ಯ ಬೊಮ್ಮಾಯಿಯವರು ಒಂದು ಹೇಳಿದರು ಅದು ಹಿಂದುಳಿದ ವರ್ಗ ಆಗುವುದಿಲ್ಲ. ಈಗ ತಂದಿರತಕ್ಕ ಅಮೆಂಡ್‌ಮೆಂಟಿನಲ್ಲಿ ಅಗ್ರಿಕಲ್ಚರಲ್ ಲೇಬರರ್ಸ್ ಮತ್ತು ರೂರಲ್ ಆರ್ಟಿಸಾನ್ಸ್ ನಾಮಿನೇಟ್ ಮಾಡಬೇಕು ಎಂದು ಹೇಳುತ್ತೀರಿ, ಇದರಲ್ಲಿ ಒಂದಕ್ಕೊಂದು ಕ್ಲಾರಿಟಿ ಇಲ್ಲ. ಸ್ಪಷ್ಟವಾಗಿ ಹೇಳಿಲ್ಲ. ಮತ್ತೆ ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡುವುದಕ್ಕೆ ಅವಕಾಶ ಇದೆ. ಹಿಂದುಳಿದವರ್ಗದವರಿಗೆ ಅಲ್ಲಿ ಏನೂ ಪ್ರಾತಿನಿಧ್ಯ ಸಿಕ್ಕುವುದಿಲ್ಲ. ಈಗಾಗಲೇ ಸಿಕ್ಕಿಲ್ಲ. ೧೮ ಪರ್ಸೆಂಟ್ ಎಸ್. ಸಿ. ಎಸ್. ಟಿ. ಯವರಿಗೆ ರಿಸರ್ವೇಷನ್ ಇರುವುದರಿಂದ ಅವರು ಬಂದಿದ್ದಾರೆ. ಇಲ್ಲದೇ ಇದ್ದರೆ ಅವರೂ ಬರುತ್ತಿರಲಿಲ್ಲ. ಅದರಲ್ಲೂ ಶ್ರೀಮಂತರು ಹೆಚ್ಚು ಆರಿಸಿ ಬಂದಿದ್ದಾರೆ. ಅದು ತಮಗೂ ಗೊತ್ತಿದೆ. ಅವರ ಬಗ್ಗೆ ಮತ್ತೆ ಹೇಳಿ ಪ್ರಯೋಜನ ಇಲ್ಲ.

(ಶ್ರೀಮತಿ ಮನೋರಮ ಮಧ್ವರಾಜ್ ಅವರು ಅಧ್ಯಕ್ಷ ಪೀಠ ಅಲಂಕರಿಸಿದರು)

ಆದ ಕಾರಣದಿಂದ ಈ ಸಂದರ್ಭದಲ್ಲಿ ಏಕ ಪಕ್ಷೀಯವಾಗಿ ನಿರ್ಣಯವನ್ನು ತೆಗೆದುಕೊಂಡು, ನೀವು ಏನೇ ಹೇಳಿ, ನಾವು ಮಾಡುವುದನ್ನು ಮಾಡೇ ಮಾಡುತ್ತೇವೆಂಬ ಹಠಮಾರಿತನವನ್ನು ಮಾಡದೆ, ವಿರೋಧಪಕ್ಷದ ಸದಸ್ಯರು ನೀಡುವಂತಹ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ಮೊದಲು ಈ ಬಗ್ಗೆ ಏನು ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೀರಿ, ಅದರ ಬಗ್ಗೆ ಮತ್ತೊಮ್ಮೆ ಆಲೋಚನೆ ಮಾಡಿ ಹಿಂದುಳಿದವರ್ಗದವರಿಗೆ ಅನುಕೂಲವನ್ನು ದೊರಕಿಸಿ ಕೊಡುವಂತಹ ರೀತಿಯಲ್ಲಿ ಅನುಕೂಲ ಮಾಡಬೇಕು. ಮೂಲಭೂತವಾಗಿ ನಾಮಕರಣ ಮಾಡುವಂತದ್ದನ್ನು ಕೈಬಿಡಬೇಕು, ನಾವು ಇಷ್ಟೆಲ್ಲಾ ಹೇಳಿದರೂ ಅವರು ಬಿಡುವುದಿಲ್ಲ ಎಂಬುದು ನಮಗೆ ಗೊತ್ತಿದೆ. ಏಕೆಂದರೆ ಅವರು ಆ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ನೀವು ಹೇಳುವುದನ್ನು ಹೇಳಿ. ನಾವು ಮಾಡುವುದನ್ನು ಮಾಡೇ ಮಾಡುತ್ತೇವೆಂದು ಹೇಳುತ್ತಾರೆ. ಕಾರಣ ಇದರ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಸಂಬಂಧಪಟ್ಟ ಮಂತ್ರಿಗಳೇ ಇಲ್ಲಿ ಇಲ್ಲ. ಇದರಿಂದ ವಿರೋಧಪಕ್ಷದವರು ನೀಡುವಂತಹ ಸಲಹೆಗಳು ಆಡಳಿತ ಪಕ್ಷಕ್ಕೆ ಎಷ್ಟರಮಟ್ಟಿಗೆ ಹಿಡಿಸುತ್ತವೆ ಎಂಬುದು ಇದರಿಂದ ಅರ್ಥವಾಗುತ್ತದೆ. ಆದ ಕಾರಣ ನಾಮಕರಣ ಮಾಡತಕ್ಕ ಪದ್ಧತಿಯನ್ನು ಕೈಬಿಡುವುದಲ್ಲದೆ, ಮತ್ತೆ ಇಂತಹ ಕೆಲಸವನ್ನು ಮಾಡಬಾರದು. ನೀವೇನಾದರೂ ಹಿಂದುಳಿದ ವರ್ಗದ ಜನರನ್ನು ಇದರಿಂದ ನಾವು ಕಾನ್ಫಿಡೆನ್ಸಿಗೆ ತೆಗೆದುಕೊಂಡು ಬಿಟ್ಟಿದ್ದೇವೆಂಬ ಭ್ರಮೆ ಇದ್ದರೆ ಅದು ಖಂಡಿತ ಸಾಧ್ಯವಿಲ್ಲ. ಹಿಂದುಳಿದ ವರ್ಗದವರ ಹಿತಾಶಕ್ತಿಯನ್ನು ಈ ಸರ್ಕಾರದಿಂದ ರಕ್ಷಣೆ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳಿ ಈ ನಾಮಕರಣ ಮಾಡುವ ಪದ್ಧತಿಯ ಬಗ್ಗೆ ನನ್ನ ವಿರೋಧವನ್ನು ವ್ಯಕ್ತಪಡಿಸಿ, ಇಷ್ಟು ಸಮಯ ಮಾತನಾಡುವುದಕ್ಕೆ ಅವಕಾಶಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ್ (ರಾಣಿಬೆನ್ನೂರು) —ಮಾನ್ಯ ಅಧ್ಯಕ್ಷಣೀಯರವರೆ, ನಾಮಕರಣಕ್ಕೆ ಸಂಬಂಧಪಟ್ಟ ವಿಷಯದ ಬಗ್ಗೆ ಚರ್ಚೆ ಮಾಡತಕ್ಕಂತಹದ್ದು ಉಚಿತ ಅಲ್ಲ ಎನ್ನತಕ್ಕಂತಹದ್ದು ನನ್ನ ಭಾವನೆ. ಏಕೆಂದರೆ ಈಗಾಗಲೇ ಸರ್ಕಾರದ ನಿಲುವು ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ವಿರೋಧ ಪಕ್ಷದ ಈ ಒಂದು ವಾದದ ಬಗ್ಗೆ ಚರ್ಚೆ ಮಾಡಲು ಆಸ್ಪದ ಮಾಡಿಕೊಟ್ಟಿದ್ದಾರೆಯೇ ಹೊರತು ಚರ್ಚೆ ನಡೆಯುವಂತಹ ಕಾಲದಲ್ಲಿ ವಿರೋಧಪಕ್ಷದವರು ನೀಡತಕ್ಕ ಮಾತುಗಳಿಗೆ ಗಮನ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂತಹದ್ದು ಸರ್ಕಾರದ ನೀತಿ ಹಾಗೂ ನಡವಳಿಕೆಯ ಮೇಲೆ ಅರ್ಥವಾಗುತ್ತದೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸರ್ಕಾರದವರು ನಾವು ಹೇಳತಕ್ಕ ಮಾತಿಗೆ ಅಷ್ಟೊಂದು ಲಕ್ಷ್ಯ ಕೊಡುತ್ತಿಲ್ಲ ಎಂಬುದಕ್ಕೆ ಉದಾಹರಣೆಯಾಗಿ ಸಂಬಂಧಪಟ್ಟ ಮಂತ್ರಿಗಳೇ ಇಲ್ಲಿ ಇಲ್ಲ. ಮತ್ತೆ ಎರಡನೆಯದಾಗಿ ಈ ಬಗ್ಗೆ ಸದನದಲ್ಲಿ ಚರ್ಚೆ ನಡೆಯುತ್ತದೆ ಎಂಬುದು ಗೊತ್ತಿದ್ದರೂ ಸಹ ಇಡೀ ರಾಜ್ಯದಲ್ಲೆಲ್ಲಾ ಕಳೆದ ತಿಂಗಳು ೨೮–೨೯ನೇ ತಾರೀಖುಗಳಲ್ಲಿ ಜಿಲ್ಲಾಪರಿಷತ್ತಿನ ಸಭೆಗಳನ್ನು ಕರೆದು, ಅನೇಕ ಜಿಲ್ಲಾ ಪರಿಷತ್ತುಗಳು ಈಗಾಗಲೇ ಆಯಾ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ನಾಮಕರಣ ಮಾಡತಕ್ಕ ಅಧಿಕಾರವನ್ನು ಕೊಟ್ಟಿರತಕ್ಕ, ನಡವಳಿಕೆ, ಹಾಗೂ ಸರ್ಕಾರದ ಧೋರಣೆಯನ್ನು ನೋಡಿದರೆ ವಿರೋಧ ಪಕ್ಷ ಕೊಟ್ಟಂತಹ ಮಾತಿಗೆ ಮತ್ತು ಸಲಹೆಗಳಿಗೆ, ಮತ್ತು ಹೇಳತಕ್ಕ ವಿಷಯಕ್ಕೆ ಏನೂ ಬೆಲೆ ಕೊಡುತ್ತಿಲ್ಲ ಎನ್ನತಕ್ಕಂತಹದ್ದು ಅರ್ಥವಾಗುತ್ತದೆ. ಇದು ನಿಜವಾಗಿಯೂ ಖಂಡನಾರ್ಹ ಎಂಬುದನ್ನು ಮತ್ತೆ ಹೇಳಬೇಕಾಗುತ್ತದೆ. ಹಿಂದುಳಿದ ವರ್ಗದವರು ಎಂಬ ಹೆಸರಿನ ಮುಖವಾಡವನ್ನು ಧರಿಸಿ ಕೊಂಡು, ಈ ಸರ್ಕಾರ ದ್ವಂದ್ವ ನೀತಿಯನ್ನು ಅನುಸರಿಸಿ ಹಿಂದುಳಿದ ವರ್ಗದವರಿಗೆ, ಅವರ ಅಭಿವೃದ್ಧಿ ಬಗ್ಗೆಯಾಗಲಿ ಹಿಂದುಳಿದ ವರ್ಗದವರ ಹಿತರಕ್ಷಣೆಗೆ ಕೊಡಲಿ ಪೆಟ್ಟನ್ನು ಈ ಸರ್ಕಾರ ಕೊಡುತ್ತಿದೆ ಎನ್ನತಕ್ಕಂತಹದ್ದನ್ನು ಅನಿವಾರ್ಯವಾಗಿ ಹೇಳಲೇಬೇಕಾಗುತ್ತದೆ. ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗಾಂಧೀಜಿಯವರ ಹೆಸರನ್ನು ಹೇಳಿಕೊಳ್ಳುತ್ತಾ, ಶ್ರೀ ಜಯಪ್ರಕಾಶ್ ನಾರಾಯಣ್ ರವರ ಹೆಸರನ್ನು ಹೇಳಿಕೊಳ್ಳುತ್ತಾ ಅನೇಕ ಮಹಾನ್ ವ್ಯಕ್ತಿಗಳ ಹೆಸರುಗಳನ್ನು ಹೇಳುತ್ತಾ, ಅವರ ಮುಖವಾಡಗಳನ್ನು ತೋರಿಸುತ್ತಾ ಹೊರಟಿದ್ದಾರೆ ಜನತೆಗೆ ಮೋಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ೧೯೭೭ರಲ್ಲಿ ಹಾಗೂ ೧೯೭೮ನೇ ಇಸವಿಯಲ್ಲಿ ಈ ರೀತಿಯ ಮುಖವಾಡಗಳನ್ನು ಜನತೆಗೆ ತೋರಿಸಿ ಅವರನ್ನು ಮೋಸ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ದಿನಗಳು ಕಳೆದಂತೆ, ದಿನಗಳು ಉರುಳಿದಂತೆ ಜನತಾ ಸರ್ಕಾರದ ಮುಖವಾಡ ಬಯಲಿಗೆ ಬಂದೇ ಬರುತ್ತದೆ. ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರ, ಹರಿಜನ–ಗಿರಿಜನರ ಬಗ್ಗೆ ಇವರ ಧೋರಣೆ ಬೆಳಕಿಗೆ ಬರುತ್ತದೆ. ಕೆಲವು ದಿವಸ ಗಳಲ್ಲೇ ಇವರ ನೀತಿಯ ಬಗ್ಗೆ, ಇವರ ಧೋರಣೆಯ ಬಗ್ಗೆ ಜನ ಒಂದಲ್ಲ ಒಂದು ರೀತಿಯಲ್ಲಿ ಉತ್ತರ

ಕೊಡುತ್ತಾರೆ ಎನ್ನತಕ್ಕಂತಹ ವಿಶ್ಲೇಷಣೆಯನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಯಾವ ರೀತಿ ಈ ಒಂದು ನಾಮಕರಣ ಮಾಡುವಂತಹ ಸಂದರ್ಭದಲ್ಲಿ ನಮ್ಮ ಹಿರಿಯ ಸದಸ್ಯರಾದ ಶ್ರೀಮಾನ್ ಮೊಯ್ಲಿಯವರು ಹೇಳಿದ ಹಾಗೆ ಅದರ ಹಿಂದೆ ಇರತಕ್ಕಂತಹ ತತ್ವವನ್ನು ಆಧಾರವಾಗಿಟ್ಟುಕೊಂಡು ನಾಮಕರಣ ಮಾಡಬೇಕಾಗಿದೆ. ಮೊಟ್ಟಮೊದಲನೆಯದಾಗಿ ಶಾಸಕರ ಹಾಗೂ ಈ ಸದನದ ಅಭಿಪ್ರಾಯದ ಮೇರೆಗೆ ಈ ಸರ್ಕಾರ ೪-೩-೧೯೮೭ರಲ್ಲಿ ೧೪೪ರ ಕಲಮ್ ಮೇಲೆ ಕೊಟ್ಟ ಅಧಿಕಾರದ ಮೇಲೆ ಬ್ಯಾಕ್ ವರ್ಡ್ ಕ್ಲಾಸ್‌ನ ಡೆಫನಿಷನ್ ಕೊಟ್ಟರು. ಶಾಸಕರ ಒಂದು ಅಭಿಪ್ರಾಯದ ಮೇರೆಗೆ ಬ್ಯಾಕ್‌ವರ್ಡ್ ಕ್ಲಾಸ್ ಎಂದರೆ Backward class means backward communities, backward castes and backward tribes. ಎನ್ನತಕ್ಕ ಒಂದ. ಡೆಫನೇಷನ್ ಕೊಟ್ಟು ನಿಜವಾದ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ತದ ನಂತರ ಮಂಡಲಪಂಚಾಯಿತಿ ಪೂರ್ವದಲ್ಲಿ ಯಾವ ಉದ್ದೇಶವನ್ನು ಇಟ್ಟುಕೊಂಡು ಈ ಸರ್ಕಾರ ಬ್ಯಾಕ್‌ವರ್ಡ್ ಕ್ಲಾಸ್ ಡೆಫನಿಷನ್ ಕೊಟ್ಟಿದ್ದರು ಅದನ್ನು ಮಂಡಲಪಂಚಾಯಿತಿ ಚುನಾವಣೆ ನಂತರ, ಇನ್ನೂ ಅನೇಕ ಮಂಡಲ ಪಂಚಾಯಿತಿಗಳನ್ನು ತಮ್ಮ ಪಕ್ಷದ ಹಿಡಿತದಲ್ಲಿ ತೆಗೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಬ್ಯಾಕ್‌ವರ್ಡ್ ಕ್ಲಾಸ್ ಅರ್ಥವನ್ನೇ ಸಂಪೂರ್ಣವಾಗಿ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ೨೫-೨-೧೯೮೭ರಲ್ಲಿ ಒಂದು ಡ್ರಾಫ್ಟ್ ನೋಟಿಫಿಕೇಷನ್ ಮಾಡಿದರು. ಈ ಡ್ರಾಫ್ಟ್ ನೋಟಿಫಿಕೇಷನ್‌ನಲ್ಲಿ ಅದರ ಅರ್ಥವನ್ನೇ ಬೇರೆ ರೀತಿ ಕಲ್ಪಿಸಿದ್ದಾರೆ. ಅದು ಏನೆಂದರೆ Rural artisans and landless agricultural labourers whose income should not exceed Rs. 4,600. ಎನ್ನತಕ್ಕ ಒಂದು ಅರ್ಥವನ್ನೇ ಕಲ್ಪನೆ ಮಾಡಿ ಡ್ರಾಫ್ಟ್ ನೋಟಿಫಿಕೇಷನ್ ಮಾಡಿದರು. ಈ ಡ್ರಾಫ್ಟ್ ನೋಟಿಫಿಕೇಷನ್ ಆದಮೇಲೆ ಕೂಡಾ ಚುನಾಯಿತ ಪ್ರತಿನಿಧಿಗಳಲ್ಲಿ ಇಂತಹ ಅನೇಕ ಜನ ಇದ್ದಾರು ಎಂದು ಗೊತ್ತಾಗಿ ಫೈನಲ್ ನೋಟಿಫಿಕೇಷನ್ ಅನ್ನು ೨೬-೩-೧೯೮೭ರಲ್ಲಿ ಇಷ್ಯೂ ಮಾಡುವಾಗ ಮತ್ತೊಂದು ಕ್ಲಾಸನ್ನು ಸೇರಿಸಿ ಬದಲಾವಣೆ ಮಾಡಿದರು. ಮಾನ್ಯ ಮೊಯ್ಲಿಯವರು ಹೇಳಿದಹಾಗೆ, ಇವರು ಮುಂಜಾನೆ ಒಂದು ಮಾಡುತ್ತಾರೆ, ಅದು ಅನುಕೂಲ ಸಿಂಧು ಆಗಿಲ್ಲ ಎಂದರೆ ಮಧ್ಯಾಹ್ನ ಮತ್ತೊಂದು ಮಾಡುತ್ತಾರೆ. ಮಧ್ಯಾಹ್ನದ್ದು ಅನುಕೂಲ ಆಗಿಲ್ಲ ಎಂದರೆ ರಾತ್ರಿ ಎಲ್ಲಾ ಮಾಡಿ ಪುನಃ ಬೆಳಿಗ್ಗೆ ಆಗುವುದರಲ್ಲಿ ಪುನಃ ಬದಲಾವಣೆ ಮಾಡುತ್ತಾ ಈ ಬ್ಯಾಕ್‌ವರ್ಡ್ ಕ್ಲಾಸ್‌ನ್ನು ಗುರ್ತಿಸುವುದರಲ್ಲೇ ಅನೇಕ ರೀತಿಯ ಬದಲಾವಣೆಗಳನ್ನು ಮಾಡುತ್ತಿದ್ದಾರೆ ೨೬-೩-೧೯೮೭ರಲ್ಲಿ ಈ ಸರ್ಕಾರ ಹೊರಡಿಸಿದ ಫೈನಲ್ ನೋಟಿಫಿಕೇಷನ್‌ನಲ್ಲಿ ಮತ್ತೊಂದು ಪ್ರಾವಿಷನನ್ನು ಸೇರಿಸಿದ್ದಾರೆ. ಇದು ಏನೆಂದರೆ ಇಂತಹ ನಾಮಕರಣ ಮಾಡತಕ್ಕ rural artisans, land-less agricultural labourers ಏನಿದ್ದಾರೆ, ಇವರನ್ನು ಏನು ನಾಮಕರಣ ಮಾಡುತ್ತಿದ್ದಾರೆ ಅವರು ಆ ಜಾತಿಯ ಜನ ಆ ಜಿಲ್ಲೆಯ ಒಟ್ಟು ಜನತೆಯ ೧ ಪರ್ಸೆಂಟ್‌ಗಿಂತಲೂ ಕಡಿಮೆ ಇರಬೇಕೆನ್ನುವುದನ್ನು ಹೊಸದಾಗಿ ಸೇರಿಸಿದ್ದಾರೆ. ಈ ರೀತಿಯಾಗಿ ತನಗೆ ಬೇಕಾದ ಹಾಗೆ ತಾಸಿಗೆ ಒಂದು ನೀತಿಯನ್ನು ಬದಲಾವಣೆ ಮಾಡತಕ್ಕ ಈ ಸರ್ಕಾರ ಯಾವ ಉದ್ದೇಶದಿಂದ ಈ ನಾಮಕರಣ ಮಾಡುವುದಕ್ಕೆ ಹೊರಟಿದೆ ಎಂದರೆ ತಮ್ಮ ಪಕ್ಷದ ಹಿಡಿತದಲ್ಲಿ ಎಲ್ಲಾ ಮಂಡಲಗಳು ಎಂದರೆ ೩೦೦ ರಿಂದ ೩೫೦ ಮಂಡಲಗಳು ತಮ್ಮ ಹಿಡಿತದಲ್ಲಿ ಬರಬೇಕು ಎನ್ನುವ ದುರಾಲೋಚನೆ, ದುರುದ್ದೇಶದಿಂದ ಈ ನಾಮಕರಣದ ಹಗರಣ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ಈ ನಾಮಕರಣದ ಹಗರಣದಲ್ಲಿ ಈ ಸರ್ಕಾರ ಏನೋ ಕೆಲವು ಮಂಡಲಗಳನ್ನು ತಮ್ಮ ಹಿಡಿತದಲ್ಲಿ ಹಾಕಿಕೊಳ್ಳಬಹುದು. ನೀವು ಇದನ್ನು ಮಾಡೇ ಮಾಡುತ್ತೀರಿ ಎಂಬುದನ್ನು ತಮ್ಮ ನಡವಳಿಕೆಯಲ್ಲಿಯೇ ತೋರಿಸುತ್ತದೆ. ಆದರೆ ಈ ರಾಜ್ಯದ ಹಿಂದುಳಿದ ವರ್ಗದ ಜನರಿಗೆ ಏನು ದ್ರೋಹ ಮಾಡುವುದಕ್ಕೆ ಹೊರಟಿದ್ದೀರಿ, ತಮ್ಮ ಮೂರು ವರ್ಷದ ಅವಧಿಯಲ್ಲಿ ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗದವರಿಗೆ ಯಾವ ರೀತಿ ಮುಖವಾಡವನ್ನು ತೋರಿಸುತ್ತಾ ತಮ್ಮ ನಡವಳಿಕೆಯಲ್ಲಿ ಈ ರೀತಿ ನಡೆದುಕೊಳ್ಳುತ್ತಿರತಕ್ಕ ನೀತಿ, ತತ್ವ ಏನು ಇದೆ, ಇದು ಕೆಲವೇ ದಿವಸಗಳಲ್ಲಿ ನಿಮಗೆ ಕಂಟಕಪ್ರಾಯ ಆಗುತ್ತದೆ ಎನ್ನುವ ಮುನ್ಸೂಚನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿಯಾಗಿ ಅವರು ತಮ್ಮಲ್ಲಿ ಇರತಕ್ಕ ಅಧಿಕಾರವನ್ನು ದುರುಪಯೋಗ ಮಾಡುತ್ತಾ ಪ್ರಧಾನ ಮತ್ತು ಉಪಪ್ರಧಾನರ ಚುನಾವಣೆ ೪ ವಾರದಲ್ಲಿ ಮಾಡುವುದಕ್ಕೆ ಅನುಕೂಲ ಸಿಂಧು 'within four weeks of the publication' ಎನ್ನುವ ನೆಪದಲ್ಲಿ ಆರಿಸಿ ಬಂದ ಪ್ರತಿನಿಧಿಗಳನ್ನು ಪಬ್ಲಿಕೇಷನ್ ಮಾಡದೇ ಇಲ್ಲಿಯವರೆಗೆ ಮುಂದೂಡಿ, ನಾಮಕರಣ ಮಾಡಿಯೇ ಪ್ರಧಾನ ಮತ್ತು ಉಪಪ್ರಧಾನರ ಚುನಾವಣೆ

ಮಾಡಬೇಕು ಎನ್ನುವ ದುರಾಲೋಚನೆಯನ್ನು ಈ ಜನತಾ ಸರ್ಕಾರ ಇಟ್ಟುಕೊಂಡು ಅನುಕೂಲ ಸಿಂಧು ರೀತಿಯಲ್ಲಿ ಈ ಸರ್ಕಾರ ನಡೆಯುತ್ತಿದೆ. ನಾವು ಏನು ಹೇಳಿದರೂ ಕೂಡಾ ಇಷ್ಟೇ, ನಾವು ಮನವರಿಕೆ ಮಾಡಿದರೂ ಕೂಡಾ ಅವರ ಕಿವಿಗಳು ತೆರೆದಿಲ್ಲ. ಸಂಪೂರ್ಣವಾಗಿ ನಾಮಕರಣ ಮಾಡುವುದಕ್ಕೆ ಇವರು ಸಿದ್ಧರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಚರ್ಚೆ ಮಾಡುವುದು ಅನುಚಿತ, ಅನಾವಶ್ಯಕ ಎನ್ನತಕ್ಕ ಮಾತನ್ನು ಅನಿವಾರ್ಯವಾಗಿ ಹೇಳುತ್ತೇನೆ. ಈ ಸರ್ಕಾರದ ನೀತಿಗೆ ಇವತ್ತು ನಾವು ವಿರೋಧ ವ್ಯಕ್ತಪಡಿಸುವುದು ಅಷ್ಟೆ ಅಲ್ಲ, ನಮ್ಮ ರಾಜ್ಯದ ಹಿಂದುಳಿದ ವರ್ಗದ ಜನತೆ ಕಾಲ ಬಂದಾಗ ನಿಮಗೆ ತಕ್ಕ ಪ್ರಾಯಶ್ಚಿತ್ತ ಮಾಡುತ್ತಾರೆ. ಕರ್ನಾಟಕ ರಾಜ್ಯದ ಪ್ರಜ್ಞಾವಂತ ಜನ, ವಿದ್ಯಾವಂತ ಜನ ಇವರ ನೀತಿಯ ಬಗ್ಗೆ ಸಾಕಷ್ಟು ವಿಚಾರಮಾಡಿ ಮುಂದೆ ಬರತಕ್ಕಂಥಹ ಅನೇಕ ಸಂದರ್ಭಗಳಲ್ಲಿ ಜನತಾ ಪಕ್ಷದ ಮುಖವಾಡದ ತೋಡಿಕೆಯನ್ನು ಹಾಗೂ ನಿಮ್ಮ ವಿರೋಧಿ ನೀತಿಯನ್ನು ಜನತೆಯೇ ನಿರ್ಧರಿಸಲಿ ಎನ್ನುವ ಮಾತನ್ನು ಕಟುವಾಗಿ ಹೇಳಿ ಈ ಸರ್ಕಾರದ ನೀತಿಯನ್ನು ವಿರೋಧಿಸಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷಣೀಯವರೆ, ಈಗಾಗಲೇ ಸರ್ಕಾರ ಅಧಿಕಾರ ವಿಕೇಂದ್ರಿಕರಣ ನೆಪದಲ್ಲಿ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್‌ನ್ನು ಅಸ್ತಿತ್ವಕ್ಕೆ ತಂದು ಚುನಾವಣೆಯನ್ನು ನಡೆಸಿದ್ದಾರೆ. ಈಗ ಚುನಾವಣೆ ನಡೆದಂತಹ ಮಂಡಲ ಪಂಚಾಯಿತಿಗೆ ನಾಮಕರಣ ಮಾಡತಕ್ಕ ಒಂದು ಕರಾಳ ಶಾಸನವನ್ನು ಬಹಳ ಜರೂರಾಗಿ ಈ ಸದನ ಮುಕ್ತಾಯವಾಗುವ ಹಂತದಲ್ಲಿ ತಂದಿದ್ದಾರೆ. ನಾಮಕರಣ ಮಾಡತಕ್ಕ ಸಂದರ್ಭವನ್ನು ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಸಹ ಈ ಸದನದಲ್ಲಿ ಕಲ್ಪಿಸದೆ ಒಂದು ಕಾನೂನಿನ ವ್ಯಾಪ್ತಿಯಲ್ಲಿ ತಂದು ನಾಮಕರಣ ಮಾಡತಕ್ಕ ಆಮಿಷವನ್ನು ಒಡ್ಡುತ್ತಿದ್ದಾರೆ. ಇದರಿಂದ ಏನು ಅರ್ಥವಾಗುತ್ತದೆ ಅಂದರೆ, ಈ ಸರ್ಕಾರದ ನೀತಿಗೆ ಒಂದು ಮಾತು ಮನವರಿಕೆಯಾಗುತ್ತದೆ. ಅದೇನೆಂದರೆ ಹೆಸರಾಂತ ನಾಟಕಕಾರ ವಿಲಿಯಂ ಶೇಕ್ಸ್‌ಪಿಯರ್ ಅವರು ಬರೆದಂತಹ 'ಜೂಲಿಯಸ್ ಸೀಸರ್' ನಾಟಕದಲ್ಲಿ ಬರತಕ್ಕ ಪಿತೂರಿಗಾರ ಬ್ರೂಟಸ್‌ನ ಚಮತ್ಕಾರ ಹೇಗಿರುತ್ತದೋ ಅದೇರೀತಿ ಈ ಸರ್ಕಾರ ಮಾಡಿದೆಯೆಂದು ಸ್ಪಷ್ಟವಾಗಿ ಹೇಳ ಬಯಸುತ್ತೇನೆ. ಈಗಾಗಲೇ ಸರ್ಕಾರ ನಿಯೋಜಿಸಿದಂತಹ ನೀತಿಯಲ್ಲಿ ಒಂದುಳಿದ ವರ್ಗಗಳವರಿಗೆ ಶೇಕಡ ೯೪ ರಷ್ಟು ಪ್ರಾತಿನಿಧ್ಯ ಸಿಗುವುದರಿಂದ ನಾಮಕರಣ ಮಾಡುವುದು ಅನಾವಶ್ಯಕವೆಂದು ಅವರಿಗೆ ಮನವರಿಕೆಯಾಗಿದ್ದರೂ ಕೆಲವು ಮಂಡಲ ಪಂಚಾಯತಿಗಳು ಇವರ ವ್ಯಾಪ್ತಿಗೆ ಸಿಗದೇ ಇರತಕ್ಕ ಸಂದರ್ಭವನ್ನು ಉಪಯೋಗಿಸಿಕೊಂಡು ಅಲ್ಲಿ ಅಧಿಕಾರವನ್ನು ಕಬಳಿಸುವ ದುರಾಲೋಚನೆ ಇದರಲ್ಲಿ ಅಡಕವಾಗಿದೆ. ಈ ಕಾನೂನನ್ನು ತರುತ್ತಾ ಇರುವುದು ತುಂಬಾ ನಾಚಿಕೆಗೇಡು. ಅಧಿಕಾರ ವಿಕೇಂದ್ರೀಕರಣ ನಡೆಯತಕ್ಕ ಮಂಡಲ ಪಂಚಾಯತಿಗಳಲ್ಲಿ ಸಾಕಷ್ಟು ತೊಂದರೆ ಮತ್ತು ಅಡಚಣೆಗಳನ್ನು ಗಮನಿಸಬೇಕು. ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಮೀಸಲಾತಿಯನ್ನು ಕೊಡುವುದರಲ್ಲಿ ವಿಫಲರಾಗಿದ್ದಾರೆ. ಯಾವ ಸ್ಥಳ ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ಸೀಮಿತವಾಗಿರಬೇಕು ಅದನ್ನು ಪರೀಕ್ಷಿಸಿದಾಗ, ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ [illegible] ಬೇಕಾದ ಸೀಟುಗಳನ್ನು ಇವತ್ತು ನಾಯಕ ಜನಾಂಗದವರಿಗೆ ಕೊಟ್ಟಿರುವುದನ್ನು ನಾವು ನೋಡಬಹುದು. ನಾಯಕ ಜನಾಂಗದವರನ್ನು ಪರಿಶಿಷ್ಟ ವರ್ಗ ಎಂದು ಘೋಷಣೆ ಮಾಡಿ ಸೀಟುಗಳನ್ನು ಕೊಟ್ಟಿರುವುದನ್ನು ನೋಡಬಹುದು. ಅಲ್ಲಿ ಸರಿಯಾದ ವ್ಯಾಪ್ತಿಯನ್ನು ತರದೆ, ಒಂದು ಅರ್ಥವನ್ನು ತರದೆ ಮಾಡಿರತಕ್ಕ ವೈಫಲ್ಯವನ್ನು ಹೇಳಬೇಕಾದರೆ, ಇವರು ಹಿಂದುಳಿದ ವರ್ಗಗಳವರ ಬಗ್ಗೆ ಕಾಳಜಿಯನ್ನು ವಹಿಸಿದ್ದೇವೆಂದು ಹೇಳುತ್ತಾರೆ. ಆದರೆ, ಇಲ್ಲಿ ನೋಡಿದರೆ ಮಂಡಲ ಪಂಚಾಯತಿಗಳಿಗೆ ನಾಮಕರಣ ಮಾಡುವುದಕ್ಕೆ ಹೊರಟಿದ್ದಾರೆ. ಮಾನ್ಯ ಸಮಾಜ ಕಲ್ಯಾಣ ಸಚಿವರು ಹಾಸನ ಜಿಲ್ಲೆಯೊಳಗೆ ಸಾರ್ವಜನಿಕ ಭಾಷಣ ಮಾಡುವಾಗ ಏನು ಹೇಳಿದ್ದಾರೆ ಅದನ್ನು ಇವರೇ ಮಾಡಲಿಲ್ಲ. ಇವರು ಮೊನ್ನೆ ತಾನೆ ಚುನಾವಣೆಯನ್ನು ಮಾಡಿದ್ದಾರೆ. ಹಾವನೂರು ಕಮಿಷನ್ ಅವರು ಯಾರು ಹಿಂದುಳಿದ ವರ್ಗದವರು ಎಂದು ಸ್ಪಷ್ಟವಾಗಿ ಅವರ ರಿಪೋರ್ಟ್‌ನಲ್ಲಿ ಹೇಳಿದ್ದಾರೆ ಆ ಒಂದು ಶಾಸನ ಇರಬೇಕಾದರೆ ಇವರು ಯಾವುದನ್ನು ಹೊಸದಾಗಿ ಮಾಡಿಲ್ಲ. ಸುಪ್ರಿಂ ಕೋರ್ಟ್‌ನಲ್ಲಿ ಅದರ ಬಗ್ಗೆ ಇನೇ ಕಮಿಷನ್ ನೇಮಕ ಮಾಡಿ ಪುನರ್ ಪರಿಶೀಲನೆ ಮಾಡಿಯೆಂದು ಹೇಳಿದಾಗ, ವೆಂಕಟಸ್ವಾಮಿಯವರ ಆಯೋಗವನ್ನು ರಚನೆ ಮಾಡಿದರು. ವೆಂಕಟಸ್ವಾಮಿ ಆಯೋ-

ದವರು ಸರ್ಕಾರಕ್ಕೆ ಒಪ್ಪಿಸಿದಂತಹ ವರದಿಯನ್ನು ಸಭೆಯ ಮುಂದೆ ಚರ್ಚೆಗೆ ತೆಗೆದುಕೊಳ್ಳದೆ, ಅದರಿಂದ ಬಹಳಷ್ಟು ಜನರಿಗೆ ಉಪಯೋಗ ಆಗುವುದನ್ನು ತಪ್ಪಿಸಿ ಸರ್ಕಾರ ಕೆಲವರ ದಾಕ್ಷಿಣ್ಯಕ್ಕೆ ಮಣಿದು ಅದನ್ನು ತಿರುಚಿ ಬೇರೆ ರೂಪವನ್ನು ಕೊಟ್ಟು ಎಲ್ಲಾ ಜಾತಿಯವರು ಹಿಂದುಳಿದ ವರ್ಗಕ್ಕೆ ಬರತಕ್ಕ ವ್ಯವಸ್ಥೆಯನ್ನು ಮಾಡಿ ಆ ವರದಿಯನ್ನು ಸಂಪೂರ್ಣವಾಗಿ ತಳ್ಳಿ ಹಾಕುವಂತಹ ಇವರ ದೊಂಬರಾಟ, ತಿಪ್ಪರಲಾಗ ಏನಿದೆ ಅದನ್ನು ಮಾಡತಕ್ಕ ಚಮತ್ಕಾರ ಇವರಿಗೆ ಇರುವುದರಿಂದ ಆ ಒಂದು ಸಂದರ್ಭವನ್ನು ಉಪಯೋಗಿಸಿ ಕೊಂಡು ಹಿಂದುಳಿದ ವರ್ಗದವರನ್ನು ನಾಮಕರಣ ಮಾಡುತ್ತೇವೆಂದು ಹೇಳುತ್ತಿದ್ದಾರೆ.

೧-೦೦ ಪಿ. ಎಂ.

ಇದರ ಬಗ್ಗೆ ಈಗಾಗಲೇ ಬಹಳಷ್ಟು ಮಂದಿ ಸದಸ್ಯರು ಹೇಳಿದ್ದಾರೆ. ಯಾರು ಕುಶಲಕರ್ಮಿಗಳು ಇದ್ದಾರೆ, ಭೂ ರೈತ ಕೃಷಿ ಕಾರ್ಮಿಕರು ಇದ್ದಾರೆ ಅವರನ್ನೇ ನಾಮಿನೇಟ್ ಮಾಡುತ್ತೇವೆ ಎಂದು ಹೇಳು ತ್ತಿದ್ದಾರೆ. ಈ ಆರ್ಟಿಸನ್ ಅಥವಾ ಕುಶಲಕರ್ಮಿಗಳು ಹಿಂದುಳಿದ ವರ್ಗಗಳಲ್ಲೇ ಬರುವುದರಿಂದ ಮತ್ತೆ ನಾಮಕರಣ ಮಾಡುವುದು ಅನಾವಶ್ಯಕವೆಂದು ನಾನಾದರೂ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇವತ್ತು ಮಂಡಲ್ ಪಂಚಾಯತ್‌ಗಳಲ್ಲಿ ಸರ್ಕಾರದ ಧೋರಣೆಯ ವಿರುದ್ಧ ಜನರು ಕಾಂಗ್ರೆಸ್ಸಿಗೆ ಸ್ಪಷ್ಟವಾಗಿ ಮತ ಕೊಟ್ಟಿದ್ದಾರೆ. ಇಲ್ಲಿ ನಾವು ಸಫಲರಾಗಿದ್ದೇವೆ. ಒಂದೆರಡು ಪರ್ಸೆಂಟ್‌ನಲ್ಲಿ ವ್ಯತ್ಯಾಸ ಇದ್ದರೂ ಸಫಲರಾಗಿ ಮುಂದುವರೆದಿದ್ದೇವೆ. ಮುಂದೆ ತಾವು ಇಲ್ಲಿ ಉಳಿಯುವುದಕ್ಕೆ ಕಷ್ಟ ವೆಂದು ದುರುದ್ದೇಶ ಇಟ್ಟುಕೊಂಡು ನಾಮಕರಣ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ ವಿನಹಃ ಇದರಲ್ಲಿ ಬೇರೆ ಯಾವುದೇ ಉದ್ದೇಶ ಇಲ್ಲ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಜನರು ನೇರವಾಗಿ ಓಟ್ಟು ಕೊಟ್ಟು ತಮ್ಮ ಪ್ರತಿನಿಧಿಗಳನ್ನು ಆರಿಸಿರುವಾಗ, ಅವರಿಗೆ ಎಲ್ಲಾ ವ್ಯವಸ್ಥೆಯೂ ಇರಬೇಕಾದರೆ ಮತ್ತೆ ಹೀಗೆ ನಾಮಕರಣ ಮಾಡುವುದು ಸರಿಯಲ್ಲ. ಸ್ಪಷ್ಟವಾಗಿ ಜನ ತೀರ್ಮಾನ ಕೊಟ್ಟಿದ್ದಾರೆ. ಅವರು ತೀರ್ಮಾನಿಸಿದಂಥ ಪ್ರತಿನಿಧಿಗಳಲ್ಲಿ ಬಹುತೇಕ ಹಿಂದುಳಿದ ವರ್ಗಗಳಿಗೆ ಸೇರಿದ ಪ್ರತಿನಿಧಿಗಳು ಇರ ಬೇಕಾದರೆ, ಮತ್ತೆ ಬೇರೆ ಹೆಸರು ಇಟ್ಟುಕೊಂಡು ಹಿಂದುಳಿದ ವರ್ಗಗಳ ಪ್ರತಿನಿಧಿಗಳನ್ನು ನಾಮಕರಣ ಮಾಡತಕ್ಕಂಥಾದ್ದು ತೀರಾ ನಾಚಿಕೆಗೇಡಿತನದ ಪ್ರವೃತ್ತಿಯಾಗುತ್ತದೆ. ಆದ್ದರಿಂದ ಸರ್ಕಾರ ಈ ಹೊತ್ತಿನಲ್ಲಾದರೂ ಇದನ್ನು ಕೈಬಿಡತಕ್ಕದ್ದು ಒಳ್ಳೆಯದು ಅದಕ್ಕೋಸ್ಕರ ಏನು ಚುನಾವಣೆಯಾದ ನಾಲ್ಕು ವಾರಗಳಲ್ಲಿ ಪ್ರಧಾನ ಮತ್ತು ಉಪಪ್ರಧಾನರನ್ನು ಆಯ್ಕೆ ಮಾಡತಕ್ಕಂಥ ಜವಾಬ್ದಾರಿ ಕಾನೂನಿನ ಚೌಕಟ್ಟಿನಲ್ಲಿ ಇದ್ದರೂ ಕೂಡ ಅದನ್ನು ಉಲ್ಲಂಘಿಸಿ ಈ ರೀತಿಯಾಗಿ ಹಿಂದುಳಿದ ವರ್ಗಗಳನ್ನು ನೇಮಕಾತಿ ಮಾಡಿಕೊಂಡು ಮಂಡಲ ಪಂಚಾಯತಿಗಳಿಗೆ ಹಾಕತಕ್ಕಂಥ ಕೆಟ್ಟ ಆಲೋಚನೆಯನ್ನು ಹೊಂದಿದ್ದಾರೆ ಇದು ಇವರಿಗೆ ಪ್ರಜಾಪ್ರಭುತ್ವದ ಬಗ್ಗೆ ಎಷ್ಟು ಕಾಳಜಿ ಇದೆಯೆಂಬುದನ್ನು ತೋರಿಸು ತ್ತದೆ. ಆದ್ದರಿಂದ ಇವತ್ತು ಹಿಂದುಳಿದ ವರ್ಗಗಳ ನೇಮಕಾತಿ ಮಾಡುವುದಕ್ಕೋಸ್ಕರ ಈ ಶಾಸನ ವನ್ನು ಆತುರಾತುರವಾಗಿ ತರತಕ್ಕಂಥಾದ್ದು ಸರಿಯಾದ ಕ್ರಮ ಅಲ್ಲ. ಇದನ್ನು ಸರ್ಕಾರ ಖಂಡಿತ ವಾಗಿಯೂ ಕೈಬಿಡಬೇಕು. ಇವರೇನು ಪ್ರಜಾಪ್ರಭುತ್ವ ಮತ್ತು ವಿಕೇಂದ್ರಿಕರಣ ಎಂದು ಹೇಳುತ್ತಾರೆ, ಇದರ ಬಗ್ಗೆ ಜನರಿಗೆ ನಂಬಿಗಯೇ ಹೊರಟು ಹೋಗುವಂತಾಗುತ್ತದೆ. ಅಧಿಕಾರ ವಿಕೇಂದ್ರಿಕರಣ ನೆಪದಲ್ಲಿ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳಲ್ಲಿ ಕಲ್ಪಿಸಿಕೊಟ್ಟಿರತಕ್ಕಂಥ ಅಧಿಕಾರವನ್ನು ನಿರ್ವಹಿಸುವುದಕ್ಕೋಸ್ಕರ ನೇಮಕಲಾಗಿರತಕ್ಕಂಥ ಅಧಿಕಾರಿಗಳ ಧೋರಣೆ ಬಗ್ಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿ ನೇಮಿಸಿರತಕ್ಕಂಥ ಚೀಫ್ ಸೆಕ್ರೆಟರಿ ಏನಿದ್ದಾರೆ, ಅವರು ಜಿಲ್ಲಾ ಪರಿಷತ್ ಸದಸ್ಯರಿಗೆ ನಾವು ನಿಮಗಿಂತ ಮೇಲ್ಪಟ್ಟವರು ಒಬ್ಬ ಮಂತ್ರಿ ಬರೆದ ಮಿನಿಟ್ಸ್‌ ಗಿಂತ ಒಬ್ಬ ಸೆಕೆಂಡ್ ಡಿವಿಜನ್ ಕ್ಲರ್ಕ್ ಬರೆದದ್ದೇ ಶಾಸನವಾಗುತ್ತದೆ ಎಂಬ ಧೋರಣೆಯನ್ನು ಇಟ್ಟು ಕೊಂಡು, ಅಧಿಕಾರ ವಿಕೇಂದ್ರಿಕರಣ ಮಾಡುತ್ತೇವೆ. ಜನತೆಯ ಮನೆಬಾಗಿಲಲ್ಲೇ ಕಾರ್ಯಕ್ರಮಗಳ ಉಪಯೋಗಗಳನ್ನು ತಲುಪಿಸುತ್ತೇವೆ ಎಂದು ಹೇಳಿದ ಮಾತು ಬಹಳ ಸಣ್ಣದಾಗುತ್ತದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜಾಪ್ರತಿನಿಧಿಗಳನ್ನಾಗಿ ಜನರು ಏನು ಆಯ್ಕೆ ಮಾಡಿದ್ದಾರೆ, ಈ ವ್ಯವಸ್ಥೆಯಡಿಯಲ್ಲೇ ಏನು ಅಧಿಕಾರವನ್ನು ಕೊಟ್ಟಿದ್ದಾರೆ, ಅದನ್ನು ಚಲಾಯಿಸುವುದಕ್ಕೆ ಅವಕಾಶ ಕಲ್ಪಿಸಿದರೆ ಸಾಕು. ನಾಮಕರಣದಂಥ ಬೇರೆ ಬೇರೆ ರೂಪದಲ್ಲಿ ಯಾರ್‍ಯಾರನ್ನೋ ತಂದು ಕೂರಿಸತಕ್ಕಂಥ ವ್ಯವಸ್ಥೆಯನ್ನು ಕೈಬಿಡಬೇಕು. ಇಲ್ಲದೇ ಹೋದರೆ ಪ್ರಜಾಪ್ರಭುತ್ವ ಪದ್ಧತಿಯಲ್ಲೇ ವಿಶ್ವಾಸ ಕಳೆದು ಕೊಳ್ಳಬೇಕಾದಂಥ ವ್ಯವಸ್ಥೆ ಇದಾಗುತ್ತದೆ ಎಂದು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ

ಈ ನಾಮಕರಣ ಪದ್ಧತಿಯನ್ನು ಕೈಬಿಟ್ಟು, ಇಂತಹ ಕೆಟ್ಟ ಪರಂಪರೆಯನ್ನು ಆಚರಣೆಗೆ ತರಬಾರದೆಂದು ಹೇಳಿ ಈ ಯೋಚನೆಯನ್ನೇ ಕೈಬಿಡಬೇಕೆಂದು ಮತ್ತೊಮ್ಮೆ ಒತ್ತಾಯಿಸಿ ನಾನು ಈ ಶಾಸನವನ್ನು ವಿರೋಧಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ) —ಮಾನ್ಯ ಅಧ್ಯಕ್ಷಿಣಿಯವರೇ, ಮಂಡಲ್ ಪಂಚಾಯ್ತಿಗಳಿಗೆ ಸದಸ್ಯರನ್ನು ನಾಮಕರಣ ಮಾಡತಕ್ಕಂಥ ಈ ಚರ್ಚೆ ದುರಾದೃಷ್ಟವಶಾತ್ ಒಂದು ರೀತಿಯಲ್ಲಿ ಈಗಾಗಲೇ ಸತ್ತು ಹೋಗಿರತಕ್ಕಂಥ ವಿಷಯಕ್ಕೆ ಒಂದು ಶಾಸ್ತ್ರೀಯವಾದಂಥ ಸಮಾಧಿಯನ್ನು ಕಟ್ಟುವಂಥ ಕಾರ್ಯವಾಗಿದೆ ಎಂದು ನನ್ನ ಪ್ರಾಮಾಣಿಕ ಅನಿಸಿಕೆ. ಈ ಬಗ್ಗೆ ಚರ್ಚೆ ಏರ್ಪಡಿಸಬೇಕು ಎನ್ನುವ ವಿಷಯದಲ್ಲಿ ಗೊಂದಲ ಉಂಟಾಗಿ, ಈ ಬಗ್ಗೆ ಸಂಧಾನ ನಡೆಸಿದ ಕಾಲದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಒಂದು ನೇರ ಪ್ರಶ್ನೆ ಕೇಳಿದೆ. ಏನೆಂದರೆ, ಇದರ ಬಗ್ಗೆ ಎಲ್ಲಾ ತೀರ್ಮಾನ ಮಾಡಿಕೊಂಡಿರುವುದಾದರೆ, ಮತ್ತೆ ಚರ್ಚೆಗೆ ಏಕೆ ಒಪ್ಪುತ್ತೀರಿ ಎಂದು. ಅದಕ್ಕೆ ಅವರು ತೀರ್ಮಾನ ಮಾಡಿಕೊಂಡಿದ್ದರೆ ಚರ್ಚೆಗೆ ಏಕೆ ಒಪ್ಪುತ್ತಿದ್ದೆ ಎಂದು ಒಂದು ಪ್ರಶ್ನೆ ರೂಪದಲ್ಲಿ ಹೇಳಿದರು. ಆಗ ನಾನು ಅದರ ಅರ್ಥ ಯಾವುದೇ ತೀರ್ಮಾನವನ್ನು, ಅಂತಿಮವಾಗಿ ಇವರು ಮಾಡಿಲ್ಲವೆಂದು ಅಂದುಕೊಂಡೆ. ಇಲ್ಲಿ ಚರ್ಚೆಯ ಹಿನ್ನಲೆಯಲ್ಲಿ, ಚರ್ಚೆಯಲ್ಲಿ ಏನು ಒಟ್ಟಿನ ತಾತ್ಪರ್ಯ ಉದ್ಭವವಾಗುತ್ತದೆ. ಅದರ ಆಧಾರದ ಮೇಲೆ ಯಾವುದೇ ರೀತಿಯ ಬದಲಾವಣೆಗೆ ಇವರು ಸಿದ್ಧರಿದ್ದಾರೆ, ಯಾವುದೇ ಪೂರ್ವಾಗ್ರಹದಿಂದ ಈ ಚರ್ಚೆಯನ್ನು ಅವರು ನೋಡುವುದಿಲ್ಲ ಎನ್ನುವ ವಿಶ್ವಾಸವನ್ನು ನಾನು ನೋಡಿದ್ದೆ. ಆದರೆ ಈ ವಿಷಯದಲ್ಲಿ ಸರ್ಕಾರದ ಪರವಾಗಿ, ತೆರೆಯ ಮರೆಯಲ್ಲಿ ನಡೆದಿರತಕ್ಕ ಹಲವಾರು ಚಟುವಟಿಕೆಗಳು ಮತ್ತು ಈ ದಿನ ಚರ್ಚೆಯಲ್ಲಿ ಸರ್ಕಾರ ಎಲ್ಲರಿಗೂ ಕಂಡು ಬರುವ ರೀತಿಯಲ್ಲಿ ತೋರಿರತಕ್ಕ ತೀವ್ರ ಅನಾಸಕ್ತಿ ನೋಡಿದರೆ ಈಗಾಗಲೇ ಸತ್ತು ಹೋಗಿರತಕ್ಕಂಥ ವಿಷಯಕ್ಕೆ ಒಂದು ಶಾಸ್ತ್ರೀಯವಾದಂಥ ಸಮಾಧಿ ಕಟ್ಟತಕ್ಕಂಥ ಪ್ರಯತ್ನ ಅಷ್ಟೆ ಆಗಿದೆ ಎಂಬ ನನ್ನ ಸಂದೇಹಕ್ಕೆ ಸಾಕಷ್ಟು ಪುಷ್ಟಿಯನ್ನು ಕೊಡುತ್ತದೆ. ಅದೇನೆ ಇರಲಿ, ನಾವು ಹೇಳಬೇಕಾದ್ದನ್ನು ಕೊನೆಯ ಪಕ್ಷ ನಮ್ಮ ಕರ್ತವ್ಯವೆಂದು ಭಾವಿಸಿ ಹೇಳಬೇಕಾಗುತ್ತದೆ. ಏನೂ ತಾತ್ಪರ್ಯ ಇಲ್ಲವೆಂದು ಗೊತ್ತಿದ್ದರೂ ಕೂಡ, ನಾಳೆ ಹೊರಗಡೆಯವರು ಹೇಳಬಹುದು, ನೀವು ಏನು ಹೇಳಿದರೂ ಕೂಡ "ಕೋಣನ ಮುಂದೆ ಕಿನ್ನರಿ ಭಾರಿಸಿದಂತೆ" ಎಂದು. ಅದೇನೇ ಆದರೂ ನಾವು, ನಮ್ಮ ಕರ್ತವ್ಯ ಎಂದು ಭಾವಿಸಿ ಚರ್ಚೆ ಮಾಡುತ್ತಿದ್ದೇವೆ.

ಸಭಾಧ್ಯಕ್ಷಿಣಿಯರೆ, ಒಂದು ಹೊಸ ಅಧ್ಯಾಯವನ್ನು ನಮ್ಮ ಪ್ರಜಾಪ್ರಭುತ್ವದಲ್ಲಿ ಪ್ರಾರಂಭಿಸುತ್ತೇವೆಂದು ಹೇಳಿ, ೪ ವರ್ಷಗಳ ಕಾಲ ಗ್ರಾಮೀಣ ಜನಜೀವನಕ್ಕೆ ಯಾವುದೇ ರೀತಿಯ ಪ್ರಾತಿನಿಧಿಕ ಸಂಸ್ಥೆಯೂ ಇಲ್ಲದಂತೆ ಮಾಡಿ, ಇಷ್ಟೆಲ್ಲಾ ಪರ್ವತ ಪ್ರಸವ ಮಾಡಿ ಈ ಕಾನೂನನ್ನು ರಚನೆ ಮಾಡಿದ್ದಾರೆ. ಇನ್ನೊಂದು ಅಂಶವನ್ನು ಏಕೆ ಈ ಸರ್ಕಾರ ಜ್ಞಾಪಿಸಿಕೊಳ್ಳುವುದಿಲ್ಲವೋ ನನಗೆ ಅರ್ಥವಾಗುವುದಿಲ್ಲ. ಈ ಒಂದು ಶಾಸನ, ಶಾಸನಸಭೆಯ ಬಹುಮತದ ಬಲದಿಂದ ರಚನೆಯಾಗಿರತಕ್ಕ ಶಾಸನ. ಇದು ಎಲ್ಲಾ ಪಕ್ಷಗಳೂ ಕೂಡ ಚರ್ಚಿಸಿ, ಸಮಿತಿಯಲ್ಲಿ ಕುಳಿತು ಚರ್ಚೆ ಮಾಡಿ, ಒಮ್ಮತದಿಂದ ಮಾಡಿರತಕ್ಕಂಥ ಒಂದು ಶಾಸನ. ಇಡೀ ಶಾಸನವನ್ನು ಒಮ್ಮತದಿಂದ ರಚನೆ ಮಾಡುವುದಕ್ಕೆ ಸಾಧ್ಯವಿದ್ದಾಗ, ಇದು ಸಾಧ್ಯವಾಗಿದ್ದರೆ, ಇವತ್ತು ಒಂದು ಉಪ-ವಿಧಿಯನ್ನು, ಒಂದು ನಿಯಮವನ್ನು ಇಡೀ ಶಾಸನ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡುವುದಕ್ಕೆ ಸರ್ಕಾರಕ್ಕೆ ಏಕೆ ಶಕ್ತಿ ಇಲ್ಲ, ಅಥವಾ ಸರ್ಕಾರಕ್ಕೆ ಏತಕ್ಕೆ ಮನಸ್ಸಿಲ್ಲ.

ಈ ವಿಚಾರದಲ್ಲಿ ಏತಕ್ಕೆ ಅವರು ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಿಲ್ಲ. ಇಷ್ಟೊಂದು ದೊಡ್ಡ ಶಾಸನವನ್ನು ಶಾಸನ ಸಭೆಯು ಒಮ್ಮತದಿಂದ ಕುಳಿತುಕೊಂಡು ಮಾಡುವುದಕ್ಕೆ ಶಕ್ತಿ ಇದ್ದರೆ, ಮನಸಿದ್ದರೆ, ಇದೊಂದು ನಿಯಮವನ್ನು ಮಾಡುವುದಕ್ಕೆ ಏತಕ್ಕೆ ಶಕ್ತಿ ಇಲ್ಲ? ಇದಕ್ಕೆ ಕಾರಣ ಬಹಳ ಸರಳವಾಗಿದೆ. ಇದಕ್ಕೆ ಮನಸ್ಸಿಲ್ಲ. ಏತಕ್ಕೆ ಮನಸ್ಸಿಲ್ಲ? ಇವರ ಮನಸ್ಸನ್ನು ಬೇರೆ ಒಂದು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರಿಂದ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದುರಾಸೆ ಪೀಡಿಸುತ್ತಿದೆ, ಅದಕ್ಕೋಸ್ಕರವಾಗಿ ಮನಸ್ಸಿಲ್ಲ. ಈ ಆಸೆ ಇಲ್ಲದೆ, ಉದ್ದೇಶ ಸಿದ್ಧಿಯಿಂದ ನೋಡಿದ್ದರೆ, ಸರಕಾರಕ್ಕೆ ಇಚ್ಛೆ ಇದ್ದಿದ್ದರೆ, ಯಾವ ರೀತಿಯ ನಾಮಕರಣ ಇರಬೇಕು, ನಾಮಕರಣ ಇರಬೇಕೇ ಬೇಡವೇ? ಯಾವುದು ಸಾಧುವಾದುದು ಎಂದು ಯೋಚನೆ ಮಾಡುವುದಕ್ಕೆ ಅವಕಾಶ ಇರುತ್ತಿತ್ತು. ಈ ರೀತಿಯ ಒಂದು ನಿಯಮವನ್ನು ಯಾರಿಗೂ ಗೊತ್ತಾಗದ ರೀತಿಯಲ್ಲಿ ಇದನ್ನು ಪ್ರಕಟ ಮಾಡಿದ್ದೇವೆ ಎಂದು ಹೇಳಿ ತೋರಿಸತಕ್ಕಂಥಾದ್ದು, ಇದಕ್ಕೆ ಯಾವುದೇ ರೀತಿಯಲ್ಲಿ ನಮ್ಮ ಆಕ್ಷೇಪಣೆಯನ್ನು ಕೂಡಾ ವ್ಯಕ್ತ ಮಾಡುವುದಕ್ಕೆ ಸರಿಯಾದಂಥ ಅವಕಾಶವನ್ನು ಕೊಡದೇ, ನಿಯಮ ಜಾರಿಗೆ ಬಂದಿದೆ ಎಂದು ಹೇಳಿ ಘೋಷಿಸಬೇಕೆಂದು, ನಿಯಮ ಬರುವುದಕ್ಕಿಂತ ಮುಂಚಿತವಾಗಿ, ಆ ನಿಯಮದಡಿಯಲ್ಲಿ ಏನೇಲ್ಲಾ ಕಿತಾಪತಿಗಳನ್ನು ಮಾಡಬೇಕು, ಹೇಗೆ ಎಲ್ಲೆಲ್ಲಿ ಯಾವ ರೀತಿಯಲ್ಲಿ ಬೇರೆ ಬೇರೆ ರೀತಿಯ ವಿವರಣೆಗಳನ್ನು ಕೊಡಬೇಕೆಂದು, ತಮ್ಮ ರಾಜಕೀಯ ಉದ್ದೇಶವನ್ನು ಸಾಧಿಸ ಬೇಕೆಂದು, ಇದಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಗುಟ್ಟಾಗಿ ನಿರ್ದೇಶನಗಳನ್ನು ಕೊಟ್ಟು, ಇಂತಹ ಒಂದು ಚಿಲ್ಲರೆ ಕೆಲಸವನ್ನು ಮಾಡಬೇಕಾದ ಅಗತ್ಯ ಈ ಸರಕಾರಕ್ಕೆ ಏನಿತ್ತು. ಇವರು ತಿಳಿದುಕೊಂಡಿರಬಹುದು, ನಾವು ಅದೊಂದು ಹೇಳಿ, ಇದೊಂದು ಹೇಳಿ, ಬ್ಯಾಕ್‌ವರ್ಡ್ ಕ್ಲಾಸಸ್ ಎಂದು ಹೇಳಿ, ಮತ್ತೊಂದು ಹೇಳಿ ಬಿಟ್ಟರೆ ಜನ ಒಪ್ಪುತ್ತಾರೆ ಎಂದು ಈ ಜಗತ್ತನ್ನೇ ಒಪ್ಪಿಸಬಹು ದೆಂದು ಇವರು ತಿಳಿದುಕೊಂಡಿರಬಹುದು. ಬೆಕ್ಕು ಎಷ್ಟೇ ಪ್ರಬಲವಾಗಿ ಕಣ್ಣುಮುಚ್ಚಿಕೊಂಡು ಹಾಲು ಕುಡಿದರೂ ಕೂಡಾ, ಅದನ್ನು ನೋಡುವವರಿಗೆ ಅದು ತನ್ನ ಹೊಟ್ಟೆಯನ್ನು ತುಂಬಿಸಿ ಕೊಳ್ಳುತ್ತಿದೆ ಎಂದು ಗೊತಾಗುತ್ತದೆ.

ಇವತ್ತು ಇವರು ಏನೆಲ್ಲಾ ಹೇಳಿದರೂ ನಾನು ನೇರವಾಗಿ ಅವರ ಆತ್ಮಕ್ಕೆ ಒಂದು ಪ್ರಶ್ನೆ ಯನ್ನು ಹಾಕಲಿಕ್ಕೆ ಬಯಸುತ್ತೇನೆ' ಅವರಿಗೆ ಆತ್ಮ ಇದೆ ಎಂಬ ನಂಬಿಕೆಯಿಂದ, ಆದರೆ ಆತ್ಮ ಎಲ್ಲಿದೆ, ಸಾಕ್ಷಿ ಎಲ್ಲಿ ಹೋಯಿತು ಗೊತ್ತಿಲ್ಲ ಇಷ್ಟೆಲ್ಲಾ ನೀವು ಮಾಡುತ್ತಿರುವುದು ಏತಕ್ಕಾಗಿ? ನೀವು ಈ ಎಲ್ಲಾ ಸರ್ಕಸ್‌ಗಳನ್ನು ಮಾಡುತ್ತಿರತಕ್ಕದ್ದು, ತಾತ್ಪರ್ಯದಲ್ಲಿ ನಿಮಗೆ ಬೇಕಾಗಿರತಕ್ಕಂಥ ಎರಡೆರಡು ಜನಗಳನ್ನು, ಮಂಡಲ್ ಪಂಚಾಯಿತಿಗಳಿಗೆ ನಾಮಕರಣ ಮಾಡಿ, ಎಲ್ಲೆಲ್ಲಿ ನಿಮಗೆ ಬಹುಮತ ಬಂದಿಲ್ಲವೋ, ಎಲ್ಲಿ ಎರಡು ಜನರನ್ನು ನಾಮಕರಣ ಮಾಡುವುದರಿಂದಾಗಿ, ಬಹುಮತ ಪಡೆಯುವುದಕ್ಕೆ ಸಾಧ್ಯ ಇದೆಯೋ, ಆ ಮಂಡಲಗಳನ್ನು ನಿಮ್ಮ ಪಕ್ಷದ ಕೈವಶ ಮಾಡಿಕೊಳ್ಳಬೇಕು ಎಂಬುದನ್ನು ಬಿಟ್ಟರೆ ಬೇರೆ ಏನಿದೆ? ನಿಜವಾಗಿ ನಿಮ್ಮ ಅಂತಃಕರಣದಲ್ಲಿ ಏನಿದೆ? ಹಿಂದುಳಿದ ವರ್ಗಗಳಿಗೆ ಅನುಕೂಲ ದೊರಕಿಸಿ ಕೊಡಬೇಕೆನ್ನತಕ್ಕಂಥಾದ್ದು ಇದೆಯೇ? ಅದು ನಿಮಗೆ ಇದ್ದಿದ್ದರೆ ಇನ್ನೂ ಎಷ್ಟೋ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯ ಇತ್ತು, ಇವತ್ತು ಹಿಂದುಳಿದಿರುವಿಕೆ ಎಂದರೆ ಯಾವುದು? ಮಾನ್ಯ ಸಭಾಧ್ಯಕ್ಷಿಣಿಯರೇ, ಇದಕ್ಕೆ ನಾವು ಸಂವಿಧಾನದ ಮೊರೆ ಹೋಗ ಬೇಕಾಗುತ್ತದೆ. ಸಂವಿಧಾನದ ೧೫(೪) ೧೬(೪) ವಿಧಿಗಳನ್ನು ನಾವು ವಿಶ್ಲೇಷಣೆ ಮಾಡಬೇಕಾಗುತ್ತದೆ. ಮತ್ತು ಅದರ ಮೇಲೆ ಈವರೆಗೆ ನಮ್ಮ ಸರ್ವೋಚ್ಚ ನ್ಯಾಯಾಲಯ ಏನೆಲ್ಲಾ ವಿವರಣೆಗಳನ್ನು ಕೊಟ್ಟಿದೆ, ಏನೆಲ್ಲಾ ತೀರ್ಪುಗಳನ್ನು ಕೊಟ್ಟಿದೆ, ಅದನ್ನೂ ಮನಸ್ಸಿನಲ್ಲಿ, ಗಮನದಲ್ಲಿ ಇಟ್ಟುಕೊಳ್ಳ ಬೇಕಾಗುತ್ತದೆ. ಸಂವಿಧಾನದ ೧೫(೪) ೧೬(೪) ವಿಧಿಗಳು, ಅವುಗಳ ಶಬ್ದದಲ್ಲಿ ಬೇರೆ ಬೇರೆ ಪ್ರಯೋಗಗಳು ಇದ್ದಾಗ್ಯೂ ಕೂಡಾ, ತಾತ್ಪರ್ಯದಲ್ಲಿ ಅವು ಮನ್ನಿಸಿರತಕ್ಕಂಥ ಹಿಂದುಳಿದಿರುವಿಕೆ, ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ, ಈ ಎರಡೂ ದೃಷ್ಟಿಯಲ್ಲೂ ಕೂಡಾ ಹಿಂದುಳಿದಿರಬೇಕು ಹಾಗೆಯೇ ಇನ್ನೊಂದು ಬಹಳ ಪ್ರಾಮುಖ್ಯವಾದಂಥ ಅಂಶವನ್ನು ಕೂಡಾ ನಾವು ಈ ಸಂದರ್ಭದಲ್ಲಿ ನೋಡಬೇಕಾಗುತ್ತದೆ. ಇದೂ ಕೂಡಾ ನಮ್ಮ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಎತ್ತಿ ಹಿಡಿದಿರತಕ್ಕಂಥ ಒಂದು ಮಾತು. ಬ್ಯಾಕ್‌ವರ್ಡ್ ಕ್ಲಾಸಸ್ ಎಂದರೆ ಏನು?

''The Scheduled Castes and Tribes obviously come under this class and in order to be classified as backward, a class must be comparable in backwardness to Scheduled Castes and Tribes. ಸುಮ್ಮನೆ ನಿಮ್ಮ ಖುಷಿ ಬಂದ ಹಾಗೆ ಬ್ಯಾಕ್‌ವರ್ಡ್ ಕ್ಲಾಸ್ಟ್ ಫಾರ್‌ವರ್ಡ್ ಕ್ಲಾಸ್ಟ್ ಎಂದು ಮಾಡುವುದಕ್ಕೆ ಸಾಧ್ಯವಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್ಟ್ ಎಂದರೆ ರಾಜ್ಯಾಂಗಕ್ಕೆ ಅನುಗುಣವಾಗಿ ಎಸ್. ಸಿ. ಮತ್ತು ಎಸ್. ಟಿ, ಯವರಿಗೆ ಯಾವ ರೀತಿಯಲ್ಲಿ ರಿಜರ್ವೇಶನ್ ಕೊಡುವುದಕ್ಕೆ ಅವಕಾಶ ಇದೆಯೋ ಅಂತಹ

ಯಾವುದಾದರೊಂದು ಪರಿಸ್ಥಿತಿಗೆ ನಾವು ಇವರನ್ನು ಸಹ ಹೋಲಿಕೆ ಮಾಡಿ ನೋಡಬೇಕು. ಆ ಹೋಲಿಕೆಯಲ್ಲಿ ಅವರು ಬರಬೇಕು, ಆ ಹೋಲಿಕೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಆ ಪರಿಸ್ಥಿತಿಯಲ್ಲಿ ಇದ್ದಾರೆ ಎಂದಾದರೂ ಪರಿಗಣಿಸಬಹುದು, ಅವರಿಗಿಂತ ಸ್ವಲ್ಪ ಹೆಚ್ಚು ಇದ್ದರೂ ಪರವಾಗಿಲ್ಲ, ಒಂದು ಗುಲಗಂಜಿ ತೂಕದಷ್ಟು ಹೆಚ್ಚು ಕಡಿಮೆ ಇದ್ದರೂ ಪರವಾಗಿಲ್ಲ. ಅಂತಹವರಿಗೆ ಏತಕ್ಕೆ ಅವಕಾಶ ಕೊಡಬಾರದು ? ಅಂತಹ ಪರಿಸ್ಥಿತಿಯಲ್ಲಿರುವವರಿಗೆ ಕೊಡಬೇಕು. ಅದು ಬಿಟ್ಟು ಸುಮ್ಮನೆ ಜಗತ್ತೆಲ್ಲಾ ನೋಡಲಿ ಎಂದು ಮಾಡುವುದಕ್ಕೆ ಆಗುವುದಿಲ್ಲ. ಈಗ ನಾವು ನಮ್ಮ ದೇಶವನ್ನು ಅಮೇರಿಕಾ ದೇಶಕ್ಕೆ ಹೋಲಿಕೆ ಮಾಡಿಕೊಂಡರೆ ನಾವೆಲ್ಲಾ ಬ್ಯಾಕ್‌ವರ್ಡ್ ನಲ್ಲಿಯೇ ಬರುತ್ತೇವೆ. ಆಗ ಫಾರ್‌ವರ್ಡ್ ಎನ್ನುವ ಪ್ರಶ್ನೆಯೇ ಬರುವುದಿಲ್ಲ, ನಮ್ಮ ದೇಶದ ಪರಿಸ್ಥಿತಿಯನ್ನು ನಾವು ಹೋಲಿಕೆ ಮಾಡಿ ನೋಡಿದಾಗ ಸ್ವಲ್ಪ ಹೆಚ್ಚು ಕಡಿಮೆ ಇರಬೇಕು. ಬ್ಯಾಕ್‌ವರ್ಡ್ ಕ್ಲ್ಯಾಸ್ಟ್ ಎಂದರೆ ಯಾವುದಾದರೊಂದು ಪರಿಸ್ಥಿತಿಯಲ್ಲಿ ಅವರನ್ನು ನಾವು ಪರಿಗಣಿಸುವಂತಿರಬೇಕು. ಇದನ್ನು ನಮ್ಮ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ರಾಜ್ಯಾಂಗ ವಿಧಿಗಳ ಹಿನ್ನೆಲೆಯಲ್ಲಿ ಸರಿಯಾಗಿ ವಿಶ್ಲೇಷಣೆ ಮಾಡಿದೆ ಅದಕ್ಕಾಗಿಯೇ ನಾನು ಕೆಲವು ಬೇರೆ ಬೇರೆ ತೀರ್ಪುಗಳನ್ನು ಇಲ್ಲಿ ತಂದಿದ್ದೇನೆ. ಆದರೆ ಆ ತೀರ್ಪುಗಳನ್ನು ವಿವರಿಸುವುದಕ್ಕೆ ಸಮಯ ವಿಲ್ಲ. ಅದರ ಒಟ್ಟಾರೆ ತಾತ್ಪರ್ಯವೇನು ಎನ್ನುವುದನ್ನು ಮಾತ್ರ ನಾನು ಇಲ್ಲಿ ಹೇಳುತ್ತೇನೆ. ಬ್ಯಾಕ್‌ವರ್ಡ್ ಕ್ಲ್ಯಾಸ್ಟ್ ಎಂದರೆ ಸರ್ಕಾರಕ್ಕೆ ಅನುಕೂಲವಾಗತಕ್ಕಂಥ ಒಂದು ಕಾನೂನು ಮಾಡಿಕೊಂಡು ಕೆಲಸ ಮಾಡುವುದಲ್ಲ. ಆ ರೀತಿ ಮಾಡಬಾರದು, ಎಲ್ಲಾ ದೃಷ್ಟಿಕೋನಗಳಿಂದ ಯೋಚನೆ ಮಾಡಬೇಕು ಎಲ್ಲವನ್ನೂ ವೈಜ್ಞಾನಿಕ ದೃಷ್ಟಿಯಿಂದ ವಿಶ್ಲೇಷಣೆ ನಡೆಸಬೇಕು ಯಾವುದಾದರೊಂದು ಆಯೋಗದ ಮೂಲಕವಾಗಿ ಇಂತಹ ಪರಿಸ್ಥಿತಿಯಲ್ಲಿ ಯಾರಿದ್ದಾರೋ ಅವರನ್ನು ಗುರುತಿಸಿ ಆ ಸೌಲಭ್ಯಗಳು ಇಂತಹವರಿಗೆ ಮಾತ್ರ ಸಿಗಬೇಕು, ಇಂತಹ ಜನ ಮಾತ್ರ ಅರ್ಹರು ಎನ್ನುವುದನ್ನು ವೈಜ್ಞಾನಿಕ ರೀತಿಯಲ್ಲಿ ನಿರ್ಧರಿಸಬೇಕು, ಅದು ಬಿಟ್ಟು ತಮ್ಮ ಖುಷಿ ಬಂದ ರೀತಿಯಲ್ಲಿ ಬ್ಯಾಕ್‌ವರ್ಡ್ ಕ್ಲ್ಯಾಸ್ಟ್ ಎಂದು ಮಾಡಿಕೊಂಡು ತಮಗೆ ಬೇಕಾದಂತಹ ಅರ್ಥವನ್ನು ಕಲ್ಪಿಸಿಕೊಳ್ಳಬಾರದು. ನ್ಯಾಯಾಲಯದಲ್ಲಿ ಕೊಟ್ಟಿರತಕ್ಕಂಥ ಒಂದು ತಾತ್ಪರ್ಯದ ಹಿನ್ನೆಲೆಯಲ್ಲಿ ಕಾನೂನುಗಳನ್ನು ನೋಡಬೇಕು, ನಾವು ಇವತ್ತಿನ ದಿವಸ ಆ ಒಂದು ಹಿನ್ನೆಲೆಯಲ್ಲಿ ನೋಡಿದಾಗ ನಮ್ಮ ರಾಜ್ಯದಲ್ಲಿ ಏನಾಗಿದೆ ? ೧೯೭೨ನೇ ಇಸವಿಯಿಂದ ೧೯೭೫ನೇ ಇಸವಿಯವರೆವಿಗೂ ಆ ಕಾಲದಲ್ಲಿ ಹಾವನೂರು ಆಯೋಗ ಕೆಲಸ ಮಾಡಿ ಹಿಂದುಳಿದ ವರ್ಗಗಳವರು ಯಾರ್ಯಾರು ಎಂದು ಗುರುತು ಮಾಡಿ ಮೀಸಲಾತಿಯನ್ನು ಇಂತಿಷ್ಟು ಕೊಡಬೇಕೆಂದು ಹೇಳಿದಾಗ ಆಗ ಇದ್ದಂತಹ ಸರ್ಕಾರ ಅವರ ವರದಿಗೆ ಮಾನ್ಯತೆಯನ್ನು ಕೊಟ್ಟು ಆ ವರದಿಯನ್ನು ಜಾರಿಗೆ ತಂದರು. ಆ ವರದಿಯಲ್ಲಿ ಅಲ್ಪಸ್ವಲ್ಪ ಲೋಪದೋಷಗಳು ಇದ್ದದ್ದಕ್ಕಾಗಿ ಮತ್ತೊಂದು ಆಯೋಗವನ್ನು ನೇಮಕ ಮಾಡುವುದಾಗಿ ಆಗಿದ್ದ ಸರ್ಕಾರ ಸುಪ್ರೀಂ ಕೋರ್ಟಿನಲ್ಲಿ ಒಪ್ಪಿಕೊಂಡು ಬಂದಿದ್ದರಿಂದ ವೆಂಕಟಸ್ವಾಮಿ ಆಯೋಗವನ್ನು ರಚನೆ ಮಾಡಿದರು. ವೆಂಕಟಸ್ವಾಮಿ ಆಯೋಗ ಕೂಡ ವೈಜ್ಞಾನಿಕವಾದ ಒಂದು ಸಮೀಕ್ಷೆಯನ್ನು ಮಾಡಿ ಅವರು ತಮ್ಮದೇ ಆದಂತಹ ಶಿಫಾರಸ್ಸುಗಳನ್ನು ಮಾಡಿದರು. ಆ ಶಿಫಾರಸ್ಸುಗಳು ಸರಿಯಾಗಿದ್ದವೇ, ಸರಿಯಾಗಿರಲಿಲ್ಲವೇ ಆ ಶಿಫಾರಸ್ಸುಗಳಿಗೆ ಮಾನ್ಯತೆಯನ್ನು ಕೊಡಬೇಕಾಗಿತ್ತೇ ಅಥವಾ ಮಾನ್ಯತೆಯನ್ನು ಕೊಡಬಾರದಾಗಿತ್ತೇ ಎಂದು ಹೇಳುವ ವಿವರಕ್ಕೆ ನಾನು ಈಗ ಹೋಗುವುದಿಲ್ಲ ಆ ವಿಷಯಕ್ಕೆ ಹೋದರೆ ಅದೇ ಒಂದು ಬೇರೆ ಚರ್ಚೆಯಾಗುತ್ತದೆ. ಒಂದು ದೃಷ್ಟಿಯಲ್ಲಿ ಆ ವಿಚಾರವನ್ನು ಈ ಸದನದಲ್ಲಿ ಗಂಭೀರವಾಗಿ ಚರ್ಚೆ ಮಾಡುವಂತಹ ಅಗತ್ಯವಿತ್ತು. ಈ ಮಾತನ್ನೇ ಮಾನ್ಯ ಸದಸ್ಯರಾದಂಥ ಭೂಪತಿಯವರು ಹೇಳಿದರು, ಈ ಸದನದಲ್ಲಿ ಆ ವಿಚಾರವನ್ನು ಸರಿಯಾದ ರೀತಿಯಲ್ಲಿ ಚರ್ಚೆ ಮಾಡಿ ಆ ಬಗ್ಗೆ ಒಂದು ಅಂತಿಮ ತೀರ್ಮಾನಕ್ಕೆ ಬರುವುದು ಯೋಗ್ಯವಾಗಿತ್ತು. ಆಗ ಯೋಗ್ಯವಾದಂಥ ಒಂದು ಕೆಲಸವನ್ನು ಮಾಡಿದಂತೆ ಆಗುತ್ತಿತ್ತು, ಆದರೆ ಆ ಕೆಲಸವನ್ನು ಸರ್ಕಾರ ಮಾಡಲಿಲ್ಲ ಆ ಬಗ್ಗೆ ಕೂಡ ಸರ್ಕಾರ ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ವ್ಯವಹರಿಸಿ ಆ ಆಯೋಗದವರು ಮಾಡಿದ್ದ ಶಿಫಾರಸ್ಸುಗಳನ್ನು ಸಾರಾಸಗಟಾಗಿ ತಿರಸ್ಕಾರ ಮಾಡಿ ತಮ್ಮದೇ ಆದಂತಹ ಒಂದು ವ್ಯಾಖ್ಯಾನವನ್ನು ರೂಪಿಸಿ ಒಂದು ಆಜ್ಞೆಯನ್ನು ಹೊರಡಿಸಿದರು. ಆ ಆಜ್ಞೆಯ ಬಗ್ಗೆ ನಿಮಗೆ ಗೌರವವಿದಿದ್ದರೆ ನೀವು ಈಗ ಅದೇ ಆಜ್ಞೆಯನ್ನು ಪಾಲನೆ ಮಾಡಬೇಕಿತ್ತು. ಆದರೆ ನಿಮ್ಮ ಆಜ್ಞೆಯ ಬಗ್ಗೆ ನಿಮಗೇ ಗೌರವವಿಲ್ಲ. ಆ ಆಜ್ಞೆಯಲ್ಲಿರುವುದನ್ನು ಬಿಟ್ಟು ತಾವು ಈಗ ಬೇರೆ ಒಂದು ರೀತಿಯಾದಂಥ ವಿಶ್ಲೇಷಣೆಯನ್ನು ಏತಕ್ಕೆ ಕೊಡುತ್ತಿದ್ದೀರಿ ? ಈ ಆಜ್ಞೆಯಿಂದ ಬ್ಯಾಕ್‌ವರ್ಡ್ ಕ್ಲ್ಯಾಸ್ಟಿನವರಿಗೆ ಅನುಕೂಲವಾಗುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಅಂದ ಮೇಲೆ ತಾವು ಅಂತಹ

ಆಜ್ಞೆಯನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ ? ಸರ್ಕಾರಕ್ಕೆ ಯಾವುದು ಅನುಕೂಲವಾಗುತ್ತದೆಯೋ ಆ ಆಜ್ಞೆಯನ್ನು ಇಟ್ಟುಕೊಳ್ಳುವುದು, ಸರ್ಕಾರಕ್ಕೆ ಯಾವ ಆಜ್ಞೆಯಿಂದ ಅನುಕೂಲವಾಗುವುದಿಲ್ಲವೋ ಆ ಆಜ್ಞೆಯನ್ನು ಕೈಬಿಡುವುದು. ಯಾವುದಾದರೊಂದು ಸರ್ಕಾರಿ ಆಜ್ಞೆಯನ್ನು ಸರ್ಕಾರ ಹೊರಡಿಸಿದ ಮೇಲೆ ಆ ಆಜ್ಞೆಯ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕು. ಯಾವುದಾದರೊಂದು ಆಜ್ಞೆಯನ್ನು ಹೊರಡಿಸಿದ ಮೇಲೆ ಆ ಆಜ್ಞೆಯ ಒಳಿತು ಮತ್ತು ಕೆಡಕುಗಳನ್ನು ಸ್ವೀಕಾರ ಮಾಡಬೇಕಾಗುತ್ತದೆ. ಅದು ಬಿಟ್ಟು ತಮಗೆ ಲಾಭವಾಗುವುದಾದರೆ ಅಂತಹ ಆಜ್ಞೆಗಳನ್ನು ಇಟ್ಟುಕೊಳ್ಳುವುದು, ತಮಗೆ ಅನಾನುಕೂಲವಾದರೆ ಅಂತಹ ಆಜ್ಞೆಗಳನ್ನು ಕೈ ಬಿಡುವುದು ಏನಿದೆ, ಇದು ಬೇಡ, ಯಾವುದಾದರೊಂದು ಆಜ್ಞೆಯನ್ನು ಸರ್ಕಾರ ಹೊರಡಿಸಿದರೆ ಅದು ಬರೀ ಭೂಷಣ ಪ್ರಿಯವಾಗಿ ಇಟ್ಟುಕೊಳ್ಳತಕ್ಕಂಥ ವಿಚಾರವಲ್ಲ. ಸರ್ಕಾರದವರು ಇಂತಹ ವ್ಯವಹಾರವನ್ನು ಮಾಡಬಾರದು. ಒಂದು ಆಜ್ಞೆಯಿಂದ ಉಂಟಾಗತಕ್ಕಂಥ ಒಳಿತು ಮತ್ತು ಕೆಡಕುಗಳೆರಡನ್ನೂ ಸಹ ಸ್ವೀಕಾರ ಮಾಡತಕ್ಕಂಥ ಜವಾಬ್ದಾರಿ ಸರ್ಕಾರದ್ದು.

ತಾವು ಒಳ್ಳೆಯ ವಿಷಯಕ್ಕೆ ತಂದಂಥ ಆಜ್ಞೆಯಲ್ಲಿ ಲೋಪದೋಷ ಇದ್ದರೆ ಅದು ನಮ್ಮ ಆಜ್ಞೆ ಅಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ವೆಂಕಟಸ್ವಾಮಿ ಆಯೋಗದ ನಂತರ ಮೂಲತಃ ಆಜ್ಞೆಯನ್ನು ಮಾಡಲಾಗಿದೆ. ಆ ಆಜ್ಞೆ ಊರ್ಜಿತದಲ್ಲಿರುವಾಗ ಸರ್ಕಾರದ ವತಿಯಿಂದ ಯಾವುದೇ ಕಾನೂನಿನ ಅಡಿಯಲ್ಲಿ ಬೇರೆ ತರಹ ವಿಶ್ಲೇಷಣೆ ಮಾಡುವುದಕ್ಕೆ ನಿಜವಾಗಿ ಮತ್ತು ಕಾನೂನು ಬದ್ಧವಾಗಿ ನಿಮಗೆ ಅಧಿಕಾರ ಇಲ್ಲ. ಇದನ್ನು ಮಾಡಿರುವುದು ಸಮರ್ಪಕವಾದುದಲ್ಲವೆಂದು ನ್ಯಾಯಾಲಯದ ಮುಂದೆ ತೆಗೆದುಕೊಂಡು ಹೋದರೆ ಏನಾಗುತ್ತದೆಯೋ ಗೊತ್ತಿಲ್ಲ, ಕಾನೂನಿನ ವಿಷಯಗಳನ್ನು ಹೇಳಿದ ಕೂಡಲೇ, ನೀವು ಕೋರ್ಟಿಗೇ ಹೋಗಿ ಎಂದು ಹೇಳುತ್ತಾರೆ. ಆದರೆ, ಈ ಮನೆಗೇ ಕಾನೂನನ್ನು ಮಾಡತಕ್ಕಂಥ ಜವಾಬ್ದಾರಿ ಇದೆ. ಯಾವುದೇ ಕಾನೂನಿಗೆ ವಿರುದ್ಧವಾದಂಥ ಶಾಸನವನ್ನು ಗೊತ್ತಿದ್ದೂ ಗೊತ್ತಿದ್ದೂ ಮಾಡಿದರೆ ನಾವು ಅಪರಾಧಿಗಳಾಗುತ್ತೇವೆ. ಅದನ್ನು ಹೇಳುವುದಕ್ಕೆ ಹೋದರೆ, ನಮಗೆ ಬೇಕಾದ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಬೇಕಾದರೆ ನೀವು ಕೋರ್ಟಿಗೆ ಹೋಗಿ ಎನ್ನುವ ಮಾತನ್ನು ಆಡುತ್ತಾರೆ. ನೀತಿ ಹೇಳುವುದಕ್ಕೆ ಹೋದರೆ ನಮ್ಮ ನೀತಿ ಹೀಗೇ ಇರುವುದು ಎಂದು ಹೇಳುತ್ತಾರೆ. ನಮಗೆ ಮೆಜಾರಿಟಿ ಇದೆ, ನಾವು ಇಷ್ಟ ಬಂದಹಾಗೆ ಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಇದಕ್ಕೆ ಏನೂ ಪರಿಹಾರ ಇಲ್ಲ ಇವರಿಗೆ ಹೇಳುವುದಕ್ಕೆ ಬದಲಾಗಿ ಸಾಷ್ಟಾಂಗ ನಮಸ್ಕಾರ ಮಾಡಿ ಹೋಗುವುದನ್ನು ಬಿಟ್ಟರೆ ಇದಕ್ಕೆ ನಿಜವಾದ ಪರಿಹಾರ ಇಲ್ಲ. ಇವತ್ತು ಸರ್ಕಾರದ ಆಜ್ಞೆ ಇದೆ. ಆ ಆಜ್ಞೆಗೆ ಬೇರೆ ರೀತಿಯಲ್ಲಿ ವಿಶ್ಲೇಷಣೆಯನ್ನು ಮಾಡಿ ಈ ಕಾನೂನನ್ನು ಜಾರಿಗೆ ತರುವುದಕ್ಕೆ ನಿಜವಾಗಿ ಸರ್ಕಾರಕ್ಕೆ ನೈತಿಕವಾದ ಅಧಿಕಾರ ಇಲ್ಲ. ಹಾಗೂ ಕಾನೂನು ಪ್ರಕಾರವೂ ಸಹ ಅಧಿಕಾರ ಇಲ್ಲ. ಏಕೆಂದರೆ, ನಾನು ಕೆಲವು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ನೋಡಿದ್ದೇನೆ. ಒಂದು ಆಯೋಗ ರಚನೆಯಾಗಿ, ಆ ಆಯೋಗವು ಹಿಂದುಳಿದಿರುವವರ ಬಗ್ಗೆ ಒಂದು ತೀರ್ಮಾನವನ್ನು ಕೊಟ್ಟಾಗ ಆ ತೀರ್ಮಾನವನ್ನು ಸರ್ಕಾರದವರು ಯಾವುದೇ ಕಾರಣಕ್ಕೂ ಎಕ್ಸಿಕ್ಯೂಟ್ ಮಾಡಕೂಡದೆಂದು ಕೆಲವು ತೀರ್ಪುಗಳಲ್ಲಿ ನಿರ್ದೇಶನ ಕೊಟ್ಟಿರುವುದನ್ನು ನಾನು ಓದಿದ್ದೇನೆ. ಅದನ್ನು ಹೇಳುವುದಕ್ಕೆ ಹೋದರೆ, ಮಾನ್ಯ ಲಕ್ಷ್ಮೀಸಾಗರ್‌ರವರು ಮತ್ತೆ ಏನಾದರೂ ಒಂದು ಹೇಳುತ್ತಾರೆ, ಹಾಗೂ ಅದನ್ನು ಬೇಕಾದರೆ ಕೋರ್ಟಿನಲ್ಲಿ ಚಾಲೆಂಜ್ ಮಾಡಿಕೊಳ್ಳಿ, ಎಂದು ಹೇಳುತ್ತಾರೆ. ಈ ಬಗ್ಗೆ ನಾನು ಹೇಳುವುದೇನೆಂದರೆ, ಅಂಥ ಆಜ್ಞೆ ಜಾರಿಯಲ್ಲಿರುವ ಹೊತ್ತಿನಲ್ಲಿ ಇದನ್ನು ತಂದಿದ್ದಾರೆ. ಚುನಾವಣೆ ಆದ ನಂತರ ತಂದಿದ್ದಾರೆ, ಚುನಾವಣೆ ಆಗುವುದಕ್ಕಿಂತ ಮುಂಚಿತವಾಗಿ ಇರುವ ರೂಲ್ಸ್‌ನಲ್ಲಿ ಸ್ಪಷ್ಟವಾಗಿದೆ.

Backward class means 'backward communities backward castes and backward tribes notified by the Government in DPAR 1 SBC 77 dated 14th March, 1977 or any such other order as may be issued from time to time.

ಇದು ನಿಜವಾದುದು. ಅಂದರೆ ಒಮ್ಮತದಿಂದ ಪಾಸ್ ಮಾಡಿರತಕ್ಕಂಥ ಕಾನೂನಿನ ಒಂದು ಆಶಯ ಏನಿದೆ, ಅದರ ಅಂತರ್ಗತದ ಅಭಿಪ್ರಾಯ ಏನಿದೆ ? ಬ್ಯಾಕ್‌ವರ್ಡ್ ಕ್ಲಾಸಸ್ ಮೀನ್ಸ್ 'as may be prescribed'...... ಎಂದರೆ, ಮಂತ್ರಿಗಳು. ಡೆಪ್ಯೂಟಿ ಕಮೀಷನರ್‌ರವರು ಪ್ರಿಸ್ಕ್ರೈಬ್ ಮಾಡು ವುದೆಂದು ಅರ್ಥ ಅಲ್ಲ. ಅವತ್ತು ಆದಂಥ ಚರ್ಚೆಯಲ್ಲಿ ಮತ್ತು ಹಾವನೂರ್ ಕಮಿಷನ್ ವರದಿಯ ಪ್ರಕಾರ ಆಜ್ಞೆಯಾಗಿದೆ. ಆಗಲೇ ನಾಮಿನೇಷನ್ ಮಾಡುವ ಪ್ರಶ್ನೆ ಇದ್ದುದರಿಂದ ಆ ರೀತಿಯ ಆಜ್ಞೆ ಯನ್ನು ಮಾಡಲಾಗಿತ್ತು. ಆ ಆಜ್ಞೆ ಪ್ರಕಾರ ನಿರ್ಧಾರವಾಗಿರತಕ್ಕಂಥ ಜನರನ್ನು ಮಾತ್ರ ಬ್ಯಾಕ್ ವರ್ಡ್ ಕ್ಲಾಸ್‌ನವರೆಂದು ಗುರುತಿಸಬೇಕೆಂದು ಅದರಲ್ಲಿದೆ. ಈ ಕಾನೂನಿಗೆ ಸಂಬಂಧಿಸಿದ ಹಾಗೆ ಜನತಾ ಪಕ್ಷದ ಹಿತಾಸಕ್ತಿಗಳನ್ನು ಎತ್ತಿ ದುಡಿಯುವುದಕ್ಕೆ ಮತ್ತು ಅನುಕೂಲವಾಗುವ ರೀತಿಯಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಜನರನ್ನು ಪ್ರಿಸ್ಕ್ರೈಬ್ ಮಾಡುವುದೆಂದಲ್ಲ. ಅವತ್ತು ಇದ್ದಂಥ ಕಾನೂನನ್ನು ಒಮ್ಮತದಿಂದ ಪಾಸ್ ಮಾಡಿದೆ. ಆ ಕಾನೂನಿನ ಅಂತರ್ಗತದ ಅಭಿಪ್ರಾಯ ಏನು ಇದೆ ಅದರಂತೆ ಮಾಡಬೇಕು. ಅದರಂತೆ ನಡೆಯುವುದು ಸದನದ ಕರ್ತವ್ಯ. ರೂಲ್ ಮೇಕಿಂಗ್ ಪವರ್ ಇದೆ ಎನ್ನುವ ಒಂದು ಕಾರಣಕ್ಕೆ ಕಾನೂನಿನ ಅಭಿಪ್ರಾಯವನ್ನು ಸಂಪೂರ್ಣವಾಗಿ ತಲೆಕೆಳಗು ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಕಾನ್ಸ್ಟಿಟ್ಯೂಷನ್ ಆಫ್ ಇಂಡಿಯಾ ದಲ್ಲಿ ಏನು ಹೇಳಿದೆ ಎಂದರೆ,

> " The essential legislative functions are the determination of the Legislative Policy which is formulation as a rule of conduct. In other words the Legislature cannot delegate to another agency the exercise of its judgment on the question as to what the law should be." ಎಂದು,

ಇದು ಕಾನೂನು ಏನು ಇರಬೇಕೆನ್ನತಕ್ಕಂಥಾದ್ದನ್ನು ನಿರ್ದೇಶನ ಮಾಡತಕ್ಕಂಥ ರೀತಿಯಲ್ಲಿ ರೂಲ್‌ನ್ನು ಮಾಡಿದ್ದಕ್ಕೆ, ಅದೂ ಅಂಡರ್ ಡೆಲಿಗೇಟೆಡ್ ಪವರ್ಸ್, ಸರಕಾರಕ್ಕೆ ಖಂಡಿತವಾಗಿ ಅಧಿಕಾರ ಇಲ್ಲ. ಅದರಲ್ಲಿ ಮುಂದೆ ಏನು ಹೇಳುತ್ತಾರೆ ಅಂದರೆ under the delegated powers.

> "The power to modify an Act in its essential particulars (so as to involve a change of policy) is also an essential legislative function'. ಎಂದು,

ಆದ್ದರಿಂದ ತಾವುಗಳು ದಯವಿಟ್ಟು ಈ ಬಗ್ಗೆ ಯೋಚನೆ ಮಾಡಬೇಕು. ಹಾವನೂರ್ ಕಮಿಷನ್ ವರದಿಯ ಆಧಾರದ ಮೇಲೆ ಮಾಡಿದಂತಹ ಆಜ್ಞೆ ಇದೆ, ಅಥವಾ ವೆಂಕಟಸ್ವಾಮಿ ಕಮೀಷನ್ ವರದಿ ಬಂದ ಮೇಲೆ ಮಾಡಿರತಕ್ಕಂಥ ಆಜ್ಞೆ ಇದೆ, ಅದರಲ್ಲಿ ಸರಕಾರದ ಪಾಲಿಸಿ ಕಂಟೆಂಟ್ ಇದೆ. ಆ ಪಾಲಿಸಿಗೆ ಸರಕಾರ ದವರೇ ನಾವು ಮುಖ್ಯವಾದಂತಹ ಕಾನೂನಲ್ಲಿ ಈ ಪಾಲಿಸಿಗೆ ರೆಫರ್ ಮಾಡಿಯೇ 'Backward class means as may be preseribed'...... ಎಂದು ಹೇಳಿದ್ದಾರೆ. ಆ ಕಾನೂನಿನ ಅಂತರ್ಗತ ಅಭಿಪ್ರಾಯ, ಅದೇ ಸರಿ ಎಂದು ಹೇಳಿ ನಾನು ಹೊಸದಾಗಿ ಹೇಳಬೇಕಾದ ಅಗತ್ಯವೂ ಇಲ್ಲ. ಅದನ್ನು ಸರಕಾರವೇ ಒಪ್ಪಿಕೊಂಡಿದೆ. ಯಾವ ಸರಕಾರ ಈ ರೂಲ್ ಮಾಡಿತು ?

> 'Backward class means, backward communities, backward castes, backward tribes, notified by the Government in order No...... dated 14th March, 1977 or any such otber order as may be issued from time to time......'

ಅಂತ ಇಲ್ಲಿ ಏನು ಹೇಳಿದರು, ಅದರ ಪ್ರಕಾರ ಸರಕಾರವೇ ಒಪ್ಪಿಕೊಂಡ ಹಾಗೆ ಆಯಿತು. ಅವೊತ್ತಿನ ಕಾನೂನಿನ ಅಭಿಪ್ರಾಯ ಏನು ಎನ್ನತಕ್ಕಂಥಾದ್ದನ್ನು ನಾನು ಹೇಳಬೇಕಾದ ಅವಶ್ಯಕತೆ ಇಲ್ಲ. It is an honest confession on the part of the Government......
ಅವರು ಅದನ್ನು ಒಪ್ಪಿಕೊಂಡಿದ್ದಾರೆ. ಈಗ ಅದನ್ನು ತಿರುಗು ಮುರುಗು ಮಾಡತಕ್ಕಂಥ ಪ್ರಯತ್ನ ವನ್ನು ಏನು ಮಾಡುತ್ತಿದ್ದೀರಿ ಅದು ಸರಿಯಲ್ಲ, ಏಕೆಂದರೆ ಇಲ್ಲಿ

'To alter the essential character of an Act or to change it in material particulars is to legislate, and that, namely, the power to legislate, all authorities are agreed, cannot be delegated by a Legislature which is not unfettered'. ಎಂದು ಹೇಳಿದ್ದಾರೆ.

(ಸನ್ಮಾನ್ಯ ಬಿ.ಜಿ. ಬಣಕಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಯಾವುದು ಮೂಲಭೂತವಾಗಿ ಕಾನೂನನ್ನು ವ್ಯತ್ಯಾಸಗೊಳಿಸುತ್ತದೆಯೋ, ಪರಿಣಾಮವನ್ನು ಉಂಟು ಮಾಡುತ್ತದೆಯೋ, ಆ ರೀತಿ ನಿಯಮಗಳನ್ನು ಮಾಡುವುದಕ್ಕೆ ಸರಕಾರಕ್ಕೆ ಅಧಿಕಾರ ಇಲ್ಲ. ಎಕ್ಸಿಕ್ಯೂಟಿವ್‌ಗೆ ಅಧಿಕಾರ ಇಲ್ಲ. ಈಗ ಮೂಲಭೂತವಾಗಿ ಕಾನೂನಿನ ಅಂತರ್ಗತ ಅಭಿಪ್ರಾಯವನ್ನು ವ್ಯತ್ಯಾಸ ಗೊಳಿಸತಕ್ಕಂಥ ಒಂದು ನಿಯಮವನ್ನು ತಾವು ಮಾಡಿದ್ದೀರಿ ಎನ್ನತಕ್ಕಂಥಾದ್ದು. ನೀವು ಹಿಂದೆ ಇದ್ದ ನಿಯಮಗಳು ಮತ್ತು ಈಗ ತಂದಿರತಕ್ಕಂಥ ನಿಯಮಗಳು ಇವೆರಡನ್ನು ಓದಿದರೆ ವಿಷಯವು ಸ್ಪಷ್ಟ ವಾಗಿ ಅರ್ಥವಾಗುತ್ತದೆ. ಆಗ ಅದರ ಬಗ್ಗೆ ಯಾವುದೇ ವ್ಯಾಖ್ಯಾನದ ಅಗತ್ಯ ಬರುವುದಿಲ್ಲ. ಆವೊತ್ತಿನ ಅಭಿಪ್ರಾಯ ಏನು, ಇವೊತ್ತು ಹಾವನೂರ್ ವರದಿ ಪ್ರಕಾರ ಒಂದು ಆರ್ಡರ್ ಇದೆ. ಅದರ ಪ್ರಕಾರ ಯಾರು ಹಿಂದುಳಿದ ವರ್ಗದವರು ಎಂದು ಇದೆ. ಅಂಥ ಆರ್ಡರ್ ನಾಳೆ ತಿದ್ದುಪಡಿ ಆಗಬಹುದು ಅಥವಾ ಬೇರೆ ಒಂದು ಆಯೋಗ ಬಂದು, ಆ ಆಯೋಗದ ವರದಿಯ ಆಧಾರದ ಮೇಲೆ ಇವೊತ್ತು ಇರತಕ್ಕಂಥ ಕಾಲದೇಶ ವರ್ತಮಾನಗಳಿಗೆ ಅನುಸರಿಸಿ, ಒಂದು ನೀತಿ ರೂಪ ಆಗಬಹುದು. ಆ ನೀತಿಗೆ ಸಂಬಂಧಪಟ್ಟ ಯಾವ ಆಜ್ಞೆ ಇರುತ್ತದೆಯೋ, ಅದರ ಬಗ್ಗೆ ಇವೊತ್ತಿನ ಚರ್ಚೆಯನ್ನು ವಿಶ್ಲೇಷಣೆ ಮಾಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆ ಒಂದು ಕಾನೂನಿಗೆ ಅನುಸಾರವಾಗಿ ಮೊದಲು ಮಾಡಿರತಕ್ಕಂಥ ನಿಯಮಗಳು ಏನಿವೆ, ಅಂದರೆ ಈ ದುರ್ದೆಸೆ ಪ್ರಾಪ್ತಿ ಆಗುವುದಕ್ಕಿಂತ ಮುಂಚಿತವಾಗಿ, ಈ ಒಂದು ಭೂತ ನಿಮ್ಮನ್ನು ಹಿಡಿಯುವುದಕ್ಕಿಂತ ಮುಂಚಿತವಾಗಿ ನೀವು ಏನು ಮಾಡಿದ್ದೀರಿ, ಆಗ ಮಾಡಿದಂತಹ ನಿಮ್ಮ ಕೃತ್ಯವನ್ನು ನೋಡಿದರೂ ಕೂಡ ಇದು ಬಹಳ ಸ್ಪಷ್ಟ ವಾಗುತ್ತದೆ ಇಂತಹ ಒಂದು ಸಂದರ್ಭದಲ್ಲಿ ಇವೊತ್ತು ನೀವು ಬೇರೆ ಒಂದು ವ್ಯಾಖ್ಯಾನವನ್ನು ಮಾಡಿ, ಯಾವ ಒಂದು ನೀತಿ ಬಗ್ಗೆ ಕಾನೂನಿನಲ್ಲಿ ಸೂಚನೆ ಇದೆಯೋ, ಆ ನೀತಿಯನ್ನು ತಿರುಗು ಮುರುಗು ಮಾಡತಕ್ಕಂಥ ನಿಯಮಗಳನ್ನು ತಂದಿರತಕ್ಕಂಥಾದ್ದು ಕಾನೂನಿಗೆ ತದ್ವಿರುದ್ಧವಾಗಿದೆ ಅದು ಈ ಸದನಕ್ಕೆ ಮಾಡಿರತಕ್ಕಂಥ ನೇರವಾದ ವಂಚನೆಯಾಗಿದೆ. ಹಾಗೆಯೇ ರಾಜ್ಯಾಂಗಕ್ಕೂ ಕೂಡ ಮಾಡಿರ ತಕ್ಕಂಥ ದೊಡ್ಡ ದ್ರೋಹವಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿದೆ, ಆ ಆಜ್ಞೆ ಸರಿಯಿಲ್ಲ ಎಂದರೆ ಅದನ್ನು ತಿದ್ದುಪಡಿ ಮಾಡಿ, ಅಥವಾ ಮೂಲಭೂತವಾಗಿ ವಿಶಾಲ ನೀತಿಯಲ್ಲಿ ಏನು ದೋಷ ಇದೆ, ಆ ದೋಷಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಪಟ್ಟು, ಆ ನೀತಿಯಲ್ಲಿರ ತಕ್ಕಂಥ ಕೋಷ್ಟಕವನ್ನು ಇಲ್ಲಿಯೇ ಪ್ರಯೋಗ ಮಾಡಿದರೂ ಕೂಡ ಅದರಲ್ಲಿ ಹೇಳಿರತಕ್ಕಂಥ ಹಿಂದುಳಿದ ವರ್ಗಗಳಿಗೆ ನ್ಯಾಯ ಸಿಗಬೇಕು. ಆ ರೀತಿಯಾಗಿ ನೀತಿಯನ್ನು ಮಾರ್ಪಾಡು ಮಾಡಬೇಕಾಗಿದೆಯೇ ಹೊರತು, ನಿಮಗೆ ಯಾವ ಗೇರ್ ಬೇಕೋ ಅದರಲ್ಲಿ ಗಾಡಿ ಹೊಡೆಯುವುದು, ಯಾವ ಗೇರ್‌ನಲ್ಲಿ ಗಾಡಿ ಮುಂದೆ ಹೋಗುವುದಿಲ್ಲವೋ ಆಗ ಅದನ್ನು ಬಿಟ್ಟು ಬೇರೆ ಗೇರ್ ಹಾಕಿ ಬೇರೆ ಕಡೆಗೆ ಗಾಡಿಯನ್ನು ಹೊಡೆಯತಕ್ಕಂಥಾದ್ದು ಸರಿಯಲ್ಲ. ಇದು ಸರಕಾರಕ್ಕೆ ಭೂಷಣವಾಗುವುದಿಲ್ಲ. ಈ ರೀತಿ ಬೇರೆ ಕೆಲವರು ಮಾಡಬಹುದು. ವರ್ತಕರು ಮಾಡುತ್ತಾರೆ, ಒಬ್ಬೊಬ್ಬರು ಎಲ್ಲಿ ಲಾಭ ಸಿಗುತ್ತದೆಯೋ ಅಲ್ಲಿ ಹೊಂದಿಕೊಂಡು ಲುಕ್ಸಾನು ಇರುವ ಕಡೆಗಳಲ್ಲಿ ಬಿಟ್ಟುಬಿಡುವ ವರ್ತನೆ ಮಾಡುತ್ತಾರೆ. ಅದನ್ನು ಒಬ್ಬ ವ್ಯಕ್ತಿ ಮಾಡಬಹುದು, ಅದೂ ಕೂಡ ಅವರ ಸಂಸ್ಕೃತಿ ಅನುಸರಿಸಿಕೊಂಡು ಮಾಡುತ್ತಾರೆ. ಆದರೆ ಒಂದು ಸರಕಾರ ಹಾಗೆ ವರ್ತನೆ ಮಾಡಕೂಡದು. ನಿಜವಾಗಿಯೂ ಕೂಡ ನೀವು ಮಾಡಿರ ತಕ್ಕಂಥ ಆಜ್ಞೆಯಲ್ಲಿ ಹಿಂದುಳಿದ ವರ್ಗಗಳಿಗೆ ಸರಿಯಾದ ನ್ಯಾಯ ದೊರಕುವುದಿಲ್ಲ ಎಂದು ನಿಮ್ಮ ಆತ್ಮದಲ್ಲಿದ್ದರೆ ಹಾಗೂ

೧-೩೦ ಪಿ. ಎಂ.

ಆ ಆಜ್ಞೆಯನ್ನು ಸರಿಪಡಿಸುವ ಬುದ್ಧಿ ನಿಮಗಿಲ್ಲದಿದ್ದರೆ ಅಂಥಾ ಆಜ್ಞೆಯನ್ನು ಏಕೆ ಮಾಡಿದಿರಿ ? ನಮಗೆಲ್ಲ ಗೊತ್ತಿದೆ ಗೊತ್ತಿದೆ ಎಂದು ಹೇಳಿಕೊಂಡು ಈ ರಾಜ್ಯದ ನಿಜವಾದ ಬ್ಯಾಕ್‌ವರ್ಡ್

ಕಮ್ಯುನಿಟಿಗಳಿಗೆ ರೆಕ್ರೂಟ್‌ಮೆಂಟ್‌ನಲ್ಲಿ ಏನೇನು ಅನ್ಯಾಯ ಆಗಬಹುದೋ ಅದೆಲ್ಲ ಆಗುವುದಕ್ಕೆ ಬಿಟ್ಟಿರಿ, ಈಗ ಅದೂ ಸಾಲದಂತೆ ಎರಡೆರಡು ಜನರನ್ನು ನಾಮಿನೇಟ್ ಮಾಡುವ ಮೂಲಕ ಇನ್ಯಾವ ಸಾಮಾಜಿಕ ನ್ಯಾಯವನ್ನು ಕೊಡಲು ಹೊರಟಿದ್ದೀರಿ ? ಕೊಳ್ಳೆಯೆಲ್ಲಾ ಹೊಡೆದ ಮೇಲೆ ದಡ್ಡಿ ಬಾಗಿಲು ಹಾಕುವ ಪ್ರಯತ್ನ ಮಾಡುವುದಾಗಿ ಹೇಳುತ್ತಿದ್ದೀರಿ. ಇದು ಆತ್ಮವಂಚನೆಯೇ ಸರಿ. ಈ ರಾಜ್ಯದಲ್ಲಿರುವ ಹಿಂದುಳಿದ ವರ್ಗಕ್ಕೆ ದೊಡ್ಡ ದ್ರೋಹ ಹಾಗೂ ವಂಚನೆ ಮಾಡುವುದನ್ನೇ ಮುಂದು ವರೆಸುತ್ತಿದ್ದೀರಿ. ನಿಜವಾಗಿ ನಿಮ್ಮ ಕಾಳಜಿ ಹಿಂದುಳಿದ ವರ್ಗದವರ ಬಗ್ಗೆ ಇಲ್ಲವೆಂಬುದು ಎಲ್ಲರಿಗೂ ಗೊತ್ತಿದೆ, ಏನೆಂದರೆ ಯಾವ ಯಾವ ಮಂಡಲಗಳಲ್ಲಿ ನಿಮಗೆ ಬಹುಮತ ಇಲ್ಲವೋ ಅಲ್ಲೆಲ್ಲಾ ನಾಮಿನೇಟ್ ಮಾಡುವ ಮೂಲಕ ಆ ಭಾಗಗಳನ್ನು ಬಗಲಿಗೆ ಹಾಕಿಕೊಳ್ಳುವ ಪ್ರಯತ್ನ ಮಾಡಿದ್ದೀರಿ. ನೀವು ಪಬ್ಲಿಷ್ ಮಾಡಿದ್ದೇ ಒಂದು ರೂಲು. ಚರ್ಚಾ ಕಾಲದಲ್ಲಿ ಹೇಳಿದ್ದೇ ಬೇರೆ, ಇವತ್ತು ಅದರ ಜೊತೆಗೆ ಇನ್ನೊಂದೇನೋ ಸೇರಿಸಿಬಿಟ್ಟಿದ್ದೀರಿ. ಇದನ್ನೂ ಕೂಡ ಮಾಡಬೇಕೋ ಇಲ್ಲವೋ ನೋಡಬೇಕು. ಏಕೆಂದರೆ ನಾವು ಏನೇ ಕೇಳಿದರೂ ಬೇಕಾದರೆ ನೀವು ಕೋರ್ಟಿಗೆ ಹೋಗಿ ಎನ್ನುತ್ತೀರಿ. ನಾವೇನು ಕೋರ್ಟಿಗೆ ಓಡಾಡುವುದಕ್ಕೆಯೇ ಇರುವುದು. ಅಥವಾ ನೀವು ಹೇಳಿದಿರಿ ಎಂದೂ ಹೋಗುವುದಿಲ್ಲ. ಹೊಸದಾಗಿ ಇವರು ಏನು ಸೇರಿಸಿದ್ದಾರೆಂದರೆ 'Provided that no person shall be deemed to belong to backward classes unless thepopulation of the caste to which he belongs is less than 1% the total population of the district' ಇದೊಂದು ರೀಸನಬಲ್ ಕ್ರೈಟೀರಿಯಾ ಆಗುತ್ತದೋ ಇಲ್ಲವೋ ಎಂಬುದು ಗಂಭೀರವಾದ ಸಂಗತಿ. ರಾಜ್ಯಾಂಗದ ಸೆಕ್ಷನ್ ೧೬:೪, ೧೫:೪ ಏನೇನಿವೆ ಅವುಗಳಿಗೆ ಸಂಬಂಧಪಟ್ಟಂತೆ ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳು ಏನಿವೆ ಅವುಗಳನ್ನೆಲ್ಲ ಬದಿಗೊತ್ತಿ ಮನಸೋ ಇಚ್ಛೆ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಅನುಕೂಲವಾಗಲಿ ಎಂದೇ ನಾವು ಮಾಡುತ್ತಿರುವುದು ಎಂದು ಹೇಳುತ್ತಿರುವುದು ಸರಿಯಲ್ಲ. ಅದನ್ನೆಲ್ಲ ನಮಗೆ ಕೇವಲ ಬಹುಮತ ಇದೆ ಎಂದು ನಿಮ್ಮಿಷ್ಟ ಬಂದಹಾಗೆ ಮಾಡಿಕೊಳ್ಳುತ್ತಾ ಹೋದರೆ ನಾವೇನು ಮಾಡುವುದಕ್ಕಾಗುತ್ತದೆ ? ಸದನಕ್ಕಿರುವ ಜವಾಬ್ದಾರಿಯಿಂದ ನೋಡಿದರೆ ಆರ್ಬಿಟ್ರರಿಯಾದ ಅಂಶಗಳನ್ನು ಗಮನಿಸಿದರೆ ನೀವು ಹೇಳುವ ಒಂದು ಪರ್ಸೆಂಟ್ ಇದ್ದರೆ ಮಾತ್ರ ಬ್ಯಾಕ್‌ವರ್ಡ್, ಎರಡು ಪರ್ಸೆಂಟ್ ಇದ್ದರೆ ಫಾರ್‌ವರ್ಡ್ ಎಂದು ಹೇಳಿಬಿಟ್ಟರೆ ಏನರ್ಥ ? ಒಂದೂವರೆ ಪರ್ಸೆಂಟ್ ಇದ್ದರೆ ಇದ್ದಕ್ಕಿದ್ದ ಹಾಗೆ ಅವನು ಫಾರ್ವರ್ಡ್ ಆಗಿಬಿಡುತ್ತಾನೆಯೋ ? ನೀವು ಯಾವುದನ್ನು ಗಮನಿಸಬೇಕಾಗಿತ್ತು ಎಂದರೆ ಮೂಲಭೂತವಾಗಿ ಎಜುಕೇಶನಲ್ ಅಂಡ್ ಸೋಶಿಯಲ್ ಬ್ಯಾಕ್‌ವರ್ಡ್‌ನೆಸ್‌ಗಳನ್ನು. ಇನ್ನೊಂದು ಕಡೆ ಪ್ರೊಫೆಷನ್, ಟ್ರೇಡು ಎಂದು ಹೇಳುತ್ತೀರಿ ? ಯಾವುದು ನಿಮ್ಮ ಅಳತೆಗೋಲು ಹೇಳಿ ? ಜಾತಿಗೂ ಇದಕ್ಕೂ ಸಂಬಂಧ ಇಲ್ಲ ? ಯಾವನು ಕೃಷಿ ಕಾರ್ಮಿಕನಾಗಿದ್ದಾನೋ ೬,೫೦೦ಕ್ಕಿಂತ ಉತ್ಪನ್ನ ಕಡಿಮೆ ಇದೆಯೋ ಅಂಥವರು ಜಾತಿಭೇದ ಇಲ್ಲದೆ ನಿಮ್ಮ ವ್ಯಾಪ್ತಿಗೆ ಬರುವಂತಾಗಬೇಕು. ಇನ್ನೊಂದೇನೆಂದರೆ ಅದೇನು, ಮಂಡಲವೇ ಏಕೆ ಆಗಬಾರದು ? ಜಿಲ್ಲೆಯನ್ನೇ ಏಕೆ ತೆಗೆದುಕೊಳ್ಳಬೇಕು, ತಾಲೂಕನ್ನೇ ಏಕೆ ತೆಗೆದುಕೊಳ್ಳಬೇಕು ? ಏನು ಉತ್ತರ ಇದೆ ನಿಮ್ಮ ಹತ್ತಿರ? ಈ ತರಹ ಮಾಡಿದರೆ ಐನೂರು ಆರುನೂರು ಮಂಡಲಗಳು ಕೈಗೆ ಬರುತ್ತವೆ ಎಂಬದೊಂದೇ ನಿಮ್ಮ ಉದ್ದೇಶ. ಇದು ನೀತಿಯಾಗುತ್ತಿದೆಯೇ ಇದನ್ನು ಎಲ್ಲಾದರೂ ಪಬ್ಲಿಕ್ ಮಾಡಿದ್ದೀರಾ ? ಈಗ ಅದಕ್ಕೊಂದು ಪ್ರಾವಿಷನನ್ನು ಸೇರಿಸಿಬಿಟ್ಟರು. ಯಾವ ಅಬ್ಜೆಕ್ಷನ್ಸ್ ಬಂತು ಹೇಳಿ ಅದನ್ನು ಸೇರಿಸುವುದಕ್ಕೆ ನೋಡೋಣ ? ಹಾಗೆ ಅಬ್ಜೆಕ್ಟ್ ಮಾಡುವುದಕ್ಕೂ ಬರುವುದಿಲ್ಲ ಒಂದು ಪರ್ಸೆಂಟ್ ಎಂದು ನಿಗದಿ ಮಾಡಿದ್ದೀರಲ್ಲ ಯಾವ ಆಧಾರದ ಮೇಲೆ ಮಾಡಿದ್ದೀರಿ ಹೇಳಿ ? ಮೂಲಭೂತವಾಗಿ ಬ್ಯಾಕ್‌ವರ್ಡ್‌ನೆಸ್ ಡಿಟರ್‌ಮಿನ್ ಮಾಡತಕ್ಕಂತಹ ಎಸೆನ್‌ಷಿಯಲ್ ಇನ್‌ಗ್ರೀಡಿಯಂಟ್ ಏನು ? ಒಂದು ಪರ್ಸೆಂಟ್ ಎರಡು ಪರ್ಸೆಂಟ್ ಇದೆ ಎಂದು ಹೇಳುವುದು ಮುಖ್ಯವಲ್ಲ ಹತ್ತು ಪರ್ಸೆಂಟ್ ಒಂದು ಜಿಲ್ಲೆಯಲ್ಲಿದ್ದರೂ ಕೂಡ ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಯೋಗ್ಯತೆ ಇಲ್ಲದೇ ಇರುವಂತಹ ಪರಿಸ್ಥಿತಿ ಇದ್ದರೆ, ಶಕ್ತಿ ಸಾಮರ್ಥ್ಯ ಇಲ್ಲದಿದ್ದರೆ ಅದಕ್ಕೆ ಬೇಕಾದಂತಹ ಸಾಮಾಜಿಕ ಸ್ಥಾನಮಾನಗಳಾಗಲೀ ಸಾಮಾಜಿಕವಾದಂತಹ ಒಂದು ಸ್ಥಿತಿಯಾಗಲೀ, ಶೈಕ್ಷಣಿಕ ಅರ್ಹತೆ ಇಲ್ಲದೇ ಹೋದರೆ, ಏಕೆ ಅವರು ಬ್ಯಾಕ್‌ವರ್ಡ್ ಕ್ಲಾಸ್ ಅಲ್ಲ ಎಂಬ ಪ್ರಶ್ನೆಗಳನ್ನೆಲ್ಲಾ ವಿಶ್ಲೇಷಣೆ ಮಾಡದೇ ನಿಮಗೆ ಹೇಗೆ ಅನುಕೂಲವಾಗುತ್ತದೋ ಆ ರೀತಿಯಲ್ಲಿ ಇಲ್ಲಿ ಮಾಡಿದ್ದೀರಿ.

'Provided that no person shall be deemed to belong to a Backward class unless the population of the caste or tribe to which he belongs is less than 1% of the total population of the district' ಎಂದು ಹೇಳಿಬಿಟ್ಟಿರಿ.

ಹಿಂದಿನ ಕಮೀಷನ್ ೧೯೭೫ರಲ್ಲಿ ಯಾವ ಪಾಪ್ಯುಲೇಷನ್ ಎಸ್ಟಿಮೇಟ್ ಮಾಡಿದ್ದಾರೆಯೋ ಅದರ ಪ್ರಕಾರ ಮಾಡಬೇಕೆಂದು ಹೇಳಿದರು ಅದೇಕೆ ಬೇಕೋ ನನಗಂತೂ ಗೊತ್ತಿಲ್ಲ. ೧೯೭೧ ಸೆನ್ಸಸ್ ಎಂದು ಹೇಳಬಹುದಾಗಿತ್ತು, ಆದರೆ ನಿಮಗೆ ಸೆನ್ಸಸ್ ಬೇಡ ಹೊಸ ರೂಲ್ ಮಾಡಬೇಕಾದರೆ ಆ ಬಗ್ಗೆ ನೀವು ಬೇರೆ ಯಾವ ಚಿಂತನೆಯನ್ನೂ ಮಾಡಲಿಲ್ಲ. ನಿಜವಾಗಿ ಹಿಂದುಳಿದ ವರ್ಗದವರಿಗೆ ಅನುಕೂಲ ವಾಗುವುದೋ ಬಿಡುವುದೋ, ಅಥವಾ ಯಾರಿಗೆ ಅನುಕೂಲವಾಗಬೇಕೋ ಬೇಡವೋ, ನಿಮ್ಮ ಪ್ರಕಾರ ಯಾರಿಗೆ ಬೆನಿಫಿಟ್ ಆಗಬೇಕು ಎಂಬ ಬಗ್ಗೆ ಯಾವ ಚಿಂತನೆಯೂ ಇಲ್ಲದೇ ನಿಮ್ಮ ಪಕ್ಷಕ್ಕೆ ಅದರಿಂದ ಬೆನಿಫಿಟ್ ಆಗಬೇಕು ಎಂದು ಅಷ್ಟನ್ನು ಮಾತ್ರ ನೋಡಿ ಕಾನೂನು ಮಾಡಿರತಕ್ಕಂಥಾದ್ದು, ದೊಡ್ಡ ಅನ್ಯಾಯ. ಬ್ಯಾಕ್‌ವರ್ಡ್ ಕ್ಲಾಸ್ ಅನ್ನತಕ್ಕಂತಹ ವಿಚಾರದ ಬಗ್ಗೆ ನಮ್ಮ ರಾಜ್ಯಾಂಗದ ಮೂಲ ಆಶಯವೇನಿದೆ, ಅದನ್ನು ಹಿಡಿದುಕೊಂಡು ವೈಜ್ಞಾನಿಕವಾಗಿ ತೀರ್ಮಾನಕ್ಕೆ ಬರಬೇಕಾದಂತಹ ವಿಚಾರವೇ ಹೊರತು ನಿಮಗೆ ಖುಷಿ ಕಂಡಿದ್ದನ್ನು ಮಾಡುವುದಲ್ಲ. ಇಂಡಿಯಾ ದೇಶದಲ್ಲಿರುವ ಪ್ರತಿಯೊಂದು ರಾಜ್ಯದವರೂ ತಮಗೆ ಖುಷಿ ಬಂದ ರೀತಿಯಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್ ಅನ್ನು ಆಯಾಯಾ ಕಾಲಕ್ಕೆ ತಕ್ಕಂತೆ ಯಾರು ಸರಕಾರದಲ್ಲಿ ಇದ್ದರೋ ಅವರು ತಮ್ಮ ಮೂಗಿನ ನೇರಕ್ಕೆ ಮಾಡುವುದು ಸರಿಯಲ್ಲ. "ಒಂದು ಹಂಡೆ ನೀರಿಗೆ ಎರಡು ಬಿಂದಿಗೆ ಹಾಲು ಹಾಕಿ, ಮಕ್ಕಳಿರಾ ಎಲ್ಲಾ ಕುಡಿಯಿರಿ ಎಂದು ವೆಂಕಟಸ್ವಾಮಿಯವರು ಏನು ಹೇಳಿದರೋ" ಅದು ಮನಸ್ಸಿಗೆ ನಾಟತಕ್ಕಂತಹ ವಿಚಾರ. ಅಂತಹ ಹಾಲನ್ನು ಕುಡಿಯುವುವಕ್ಕೆ ಯಾರೂ ತಯಾರಿಲ್ಲ ಇಡೀ ಭಾರತ ದೇಶದ ತುಂಬಾ ಈ ರೀತಿ ಯಾದರೆ ಈ ರಾಜ್ಯಾಂಗ ಎನ್ನುವುದು ಇದ್ದೂ ಕೂಡ ಏನೂ ಪ್ರಯೋಜನವಿಲ್ಲ, Art. 15(4) & 16(4) ಅದರ ಆಧಾರದ ಮೇಲೆ ನೂರಾರು ತೀರ್ಮಾನಗಳನ್ನು ಸರ್ವೋಚ್ಚ ನ್ಯಾಯಾಲಯ ಕೊಟ್ಟಿದೆ. ಅದರ ತಾತ್ಪರ್ಯಗಳು ಏನು ಅದನ್ನು ಗ್ರಹಿಸುವುದೂ ಬೇಡವೇ? ಸರ್ವೋಚ್ಚ ನ್ಯಾಯಾಲಯದವರು ಏನು ಹೇಳಿದ್ದಾರೆ, ಬ್ಯಾಕ್‌ವರ್ಡ್ ಕ್ಲಾಸ್ ಎಂದು ಅದರ ಬಗ್ಗೆ ಯೋಚನೆ ಮಾಡದೇ, ಇವರು ಮಾಡುತ್ತಿದ್ದಾರೆ. ಸ್ಪಷ್ಟವಾದಂತಹ ಕೆಲವು ನಿದರ್ಶನಗಳೂ ಕೋರ್ಟಿನಿಂದ ಆಗಿವೆ. ಅದನ್ನೆಲ್ಲಾ ಬಿಟ್ಟು ಹುಚ್ಚುಚ್ಚಾಗಿ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಮನಸೋ ಇಚ್ಛೆ ಕಾನೂನು ಮಾಡಿ ಇಲ್ಲವೇ ಆಡಳಿತಾತ್ಮಕವಾದಂತಹ ಆಜ್ಞೆಯನ್ನು ಹೊರಡಿಸಿ ಮಾಡುವುದಲ್ಲ. ಸಾಧಾರಣವಾಗಿ ಸರಿಯಾದಂತಹ ಆಯೋಗವನ್ನು ನೇಮಿಸಿ ವೈಜ್ಞಾನಿಕ ಆಧಾರದ ಮೇಲೆ ಮಾಡಬೇಕೆನ್ನತಕ್ಕಂಥಾದ್ದು ಒಂದು ನೀತಿ ಇದೇ. ಬಹಳ ಮುಖ್ಯವಾದ ಅಂಶವೇನೆಂದರೆ ಎಸ್‌ಸಿ, ಎಸ್‌ಟಿ ಬಗ್ಗೆ ವ್ಯಾಖ್ಯಾನವನ್ನು ಸಂವಿಧಾನದಲ್ಲಿ ಮಾಡಿರುವುದರಿಂದ, ಇದನ್ನು ನಾನು ಹೇಳುತ್ತಿರುವುದಲ್ಲ, ಇಲ್ಲಿವೇ ಯಾರೋ ಬರೆದಂತಹದ್ದು ಅಲ್ಲ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಏನಿದೆ ಎಂದರೆ ಬ್ಯಾಕ್‌ವರ್ಡ್ ಕ್ಲಾಸ್ ಎಂದು ಯಾರನ್ನಾದರೂ ರೆಕಗ್ನೈಸ್ ಮಾಡಬೇಕಾದರೆ they must be comparable to the Scheduled Castes & Scheduled Tribes. ಅವರಿಗೆ ಹೋಲಿಸುವ ಸ್ಥಿತಿ ಇರಬೇಕು, ಅಂತಹವರನ್ನು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಹೇಳಬೇಕೇ ಹೊರತು ಎಲ್ಲರೂ ಬ್ಯಾಕ್‌ವರ್ಡ್ ಎಂದು ಹೇಳುವುದು ಸರಿಯಲ್ಲ. Backwardness is different from mere poverty... ಬರೀ ಬಡತನ ಅಲ್ಲ, ಅದು ಎರಡೂ ಐಡೆಂಟಿಕಲ್ ಅಲ್ಲ Backward class is totally a different proposition, it is not just recognition of poverty... ಯಾರು ಪಾವರ್ಟಿ ಲೈನ್‌ನಿಂದ ಕೆಳಗೆ ಇದ್ದಾರೆ, ಅವರನ್ನು ಬ್ಯಾಕ್‌ವರ್ಡ್ ಎಂದು ಹೇಳಬಹುದು ಬ್ಯಾಕ್‌ವರ್ಡ್ ಫೆನಾಮಿನನ್, ಭಾರತ ದೇಶಕ್ಕೆ ಸಂಬಂಧಪಟ್ಟ ಹಾಗೆ ವಿಶೇಷವಾಗಿ ಅದಕ್ಕೆ ಒಂದು ಮನ್ನಣೆಯನ್ನು ನೀಡಿ ಅದಕ್ಕೆ ಅರ್ಥ ಇದೆ, ಈ ಚೌಕಟ್ಟು ಇದೆ, ಇದರ ಬಗ್ಗೆ ಸಾಕಷ್ಟು ಆಲೋಚನೆ ಮಾಡಿ ಸಂವಿಧಾನವನ್ನು ಕರ್ತೃಗಳು ಮಾಡಿದ್ದಾರೆ. ಸರ್ವೋಚ್ಚ ನ್ಯಾಯಾಲಯ ಕೂಡ ಮಾಡಿದೆ ಇಂತಹ ಸಂದರ್ಭದಲ್ಲಿ ಅದನ್ನೆಲ್ಲಾ ಬದಿಗೊತ್ತಿ ಈ ರೀತಿ ಕೇವಲ ಅಧಿಕಾರವನ್ನು ಇನ್ನಷ್ಟು ಸಂಪಾದನೆ, ಮಾಡಬೇಕೆಂಬ ಗುಂಗಿನಿಂದ ಈ ಕೆಲಸ ಏನು ಮಾಡುತ್ತಿದ್ದಾರೆ ಇದು ಬ್ಯಾಕ್‌ವರ್ಡ್ ಕ್ಲಾಸಸ್ ಕಾನ್‌ಸೆಪ್ಟ್‌ಗೆ ಮಾಡುತ್ತಿರತಕ್ಕಂತಹ ದೊಡ್ಡ ದ್ರೋಹವಾಗಿದೆ. ವೆಂಕಟಸ್ವಾಮಿ ಆಯೋಗದ ಬಗ್ಗೆ ನೀವು

ಮಾಡಿರತಕ್ಕಂತಹ ಆಜ್ಞೆ ಏನಿದೆ, ಅದು ನಿಮ್ಮ ಆತ್ಮಸಾಕ್ಷಿಗೆ ಒಪ್ಪುತ್ತದೆಯೇ? ರಿಯಲ್ ಬ್ಯಾಕ್‌ವರ್ಡ್ ಕ್ಲಾಸ್ ಜನರಿಗೆ ಪ್ರಯೋಜನವಾಗದಿದ್ದರೆ ಮೇಲೆ ಕತ್ತಿ ಕಾಯುವುದಕ್ಕೆ ಈ ಆಜ್ಞೆ ಇರುವುದು, ಒಂದು ಫಲಪುರುಷಾರ್ಥ ಬೇಡವೇ ?ಆ ಆಜ್ಞೆಯನ್ನು ಸರಿಪಡಿಸತಕ್ಕಂತಹ ಜವಾಬ್ದಾರಿ ಸರಕಾರದಲ್ಲಿ ಇಲ್ಲವೇ? ರಿಯಲಿ ಬ್ಯಾಕ್‌ವರ್ಡ್ ಯಾರಿದ್ದಾರೆ, ಅವರಿಗೆ ಅನುಕೂಲ ಮಾಡುವುದಕ್ಕೋಸ್ಕರ ಇದು ಆಯಿತು ಎಂದು ಹೇಳಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಜಾಣ್ಮೆಯಿಂದ ಪದ ಪ್ರಯೋಗ ಮಾಡುತ್ತಾರೆ. ಈಗ ಅದರಲ್ಲಿ ಸ್ವಲ್ಪ ಗೊಂದಲವಾಗಿರುವುದರಿಂದ ನಾವು ಒಂದು ಸ್ಪಷ್ಟೀಕರಣ ಕೊಡಬೇಕಾಗಿದೆ ಎಂದು ಹೇಳಿದ್ದಾರೆ. ಇದು ಸ್ಪಷ್ಟೀಕರಣ ಯಾವುದೆಂದರೆ ಈ ರೂಲು. ಯಾರಿಗೆ ಗೊಂದಲ ಆಯಿತು? ಗೊಂದಲ ಆದದ್ದು ನಿಮಗೆ ಹೊರತು ಅಲ್ಲಿ ಯಾರಿಗೂ ಗೊಂದಲ ಆಗಿದ್ದು ನಮಗೆ ಕಾಣಿಸಲಿಲ್ಲ. ಯಾವುದೇ ಜಿಲ್ಲಾಪರಿಷತ್ತುಗಳ ಸಭೆಗಳನ್ನು ನಡೆಸಲಿಲ್ಲ, ಜಿಲ್ಲಾ ಪರಿಷತ್ತುಗಳವರು ನಿರ್ಣಯ ಮಾಡಿ ನಮ್ಮಲ್ಲಿ ಯಾರನ್ನು ಮಾಡಬೇಕು, ಯಾರನ್ನು ಮಾಡಬಾರದು ಎಂದು ಗೊತ್ತಾಗುತ್ತಿಲ್ಲ, ಆದುದರಿಂದ ಸರ್ಕಾರದ ಮಟ್ಟದಲ್ಲಿ ಇದಕ್ಕೆ ಏನಾದರೂ ಒಂದು ವಿವರಣೆಯನ್ನು ಕೊಡಿ ಎಂದು ನಿಮ್ಮನ್ನು ಕೇಳಿದ್ದಾರೆಯೋ? ಯಾರು ಕೇಳಿದ್ದಾರೆ? ಅಲ್ಲಿ ಡೇಟನ್ನು ತರಿಸಿಕೊಂಡಿದ್ದಾರೆಯೋ ಹೊರತು ನೀವು ಯೋಚನೆ ಮಾಡಿದ ಹಾಗೆ ಅವರು ಯಾರನ್ನೂ ಕೇಳಲಿಲ್ಲ. ನೀವು ಇಲ್ಲಿಂದ ನಿರ್ದೇಶನ ಕೊಟ್ಟು ನಮಗೆ ಇಲ್ಲಿ ಗೊಂದಲವಾಗಿದೆ. ಜಿಲ್ಲಾಪರಿಷತ್ತುಗಳ ಸಭೆಯನ್ನು ನಡೆಸಬೇಡಿ ಎಂದು ಹೇಳಿ ಟೆಲಿಗ್ರಾಂ ಮೇಲೆ ಟೆಲಿಗ್ರಾಂ ಮಾಡಿ ಈ ರೀತಿ ಮಾಡಿದ್ದೀರಿ. ನಮ್ಮ ಜಿಲ್ಲಾ ಪರಿಷತ್ತಿನದೇ ಮೂರು ಸಾರಿ ಕರೆದು ನಾಲ್ಕು ಸಾರಿ ಮುಂದಕ್ಕೆ ಹಾಕಿ ಈಗ ೫ನೇ ಸಾರಿ ಕರೆದಿದ್ದಾರೆ. ಈ ಜಿಲ್ಲಾ ಪರಿಷತ್ತನ್ನು ಏತಕ್ಕೆ ಮುಂದಕ್ಕೆ ಹಾಕಿದ್ದಾರೆ ಎಂದು ನೋಟೀಸ್‌ನಲ್ಲಿದೆ. ಅದು ಏನೆಂದರೆ ಶ್ರೀ ಜೆ. ಹೆಚ್. ಪಟೇಲರ ತಂತಿ ಸಂದೇಶದ ಮೇಲೆ ಮುಂದೆ ಹಾಕಿದ್ದೇವೆ ಎಂದು ಬರೆದು ಕಳುಹಿಸಿದ್ದಾರೆ ಜನರ ಕೈಗೆ ಅಧಿಕಾರವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಏನು ಅಧಿಕಾರ ನೀವು ಕೊಟ್ಟಿರುವುದು ? ಬಹುಶಃ ಇಂತಹ ಗಂಭೀರವಾದ ಚರ್ಚೆಯು ಬಗ್ಗೆ ಒಂದು ಒಮ್ಮತದ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಇದರಲ್ಲಿ ಪ್ರವೇಶ ಮಾಡಬಾರದು, ನಮಗೆ ಹಾಗೆ ಮಾಡಿ, ಹೀಗೆ ಮಾಡಿ ಎಂದು ಹೇಳದೇ ಹೋದರೆ ಆ ಮಟ್ಟದಲ್ಲಿ ಜನ ವಿವೇಕ ಇಟ್ಟುಕೊಂಡು ನಾವು ಶಾಶ್ವತ ಅಲ್ಲ ಎನ್ನತಕ್ಕಂಥ ಒಂದು ಭಾವನೆ ಬರುತ್ತದೆ. ಮಾನ್ಯ ಲಕ್ಷ್ಮೀಸಾಗರ್ ಅವರು ಮಾನ್ಯ ಬೊಮ್ಮಾಯಿಯವರು ನನ್ನ ಜೊತೆಯಲ್ಲಿ ಕೂಳಿತು ಕೆಲಸ ಮಾಡಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್‌ರವರು ನಾಯಕರಾಗಿ ನಾನು ಉಪ ನಾಯಕನಾಗಿ ಇಲ್ಲಿ ಕೆಲಸ ಮಾಡಿದ್ದೇವೆ. ಇವರ ಕಾಶಿಕೆಂಡ ಎಲ್ಲಾ ನೋಡಿ ಏನಪ್ಪ ಇವರು ಎಂದು ಅಂದುಕೊಂಡಿದ್ದೆ, ಈಗ ನೋಡಿದರೆ ಇವರು ತಿನ್ನುವುದು ಪೂರ್ತಿ ಮಂಸಿಕೆಂಡ. ಕಾಶಿಕೆಂಡದ ಬಗ್ಗೆ ಹೇಳಿದ್ದು ಹೇಳಿದ್ದೆ. ನನಗೆ ಗೊತ್ತಿದೆ. ಅದೇನೆಂದರೆ 'Power corrupts, absolute power corrupts absolutely'. ಆದರೆ ಇಷ್ಟು ಬೇಗನೆ ಈ ಒಂದು ಅಧಿಕಾರದ ಅಮಲು ಇಷ್ಟು ತೀವ್ರವಾಗಿ, ಈ ರೀತಿಯಲ್ಲಿ ಇವರ ಮೇಲೆ ಪರಿಣಾಮ ಬೀರುತ್ತದೆ ಎಂದು ಖಂಡಿತಾ ನಾನು ತಿಳಿದುಕೊಂಡಿರಲಿಲ್ಲ. ಅದಕ್ಕಾಗಿ ನಾನು ತೀವ್ರ ನಿರಾಶೆಯನ್ನು ವ್ಯಕ್ತಪಡಿಸುತ್ತೇನೆ. ನೀವು ೫೦೦ ಮಂಡಲಗಳನ್ನು ಹಿಡಿದಿಟ್ಟುಕೊಳ್ಳಬಹುದು, ಆದರೆ ಇಷ್ಟು ವರ್ಷ ರಾಜ್ಯಭಾರ ಮಾಡಿರತಕ್ಕಂಥ ಕಾಂಗ್ರೆಸ್ ಪಕ್ಷ ದಿನಬೆಳಗಾದರೆ ಯೋಚನೆ ಮಾಡಬೇಕಾದಂಥ ಪರಿಸ್ಥಿತಿ ಈ ದೇಶದಲ್ಲಿ ಇದೆ. ಇದು ಅಷ್ಟು ಸುಲಭ ಅಲ್ಲ ಈ ದೇಶದ ಜನ ಮೊಳೆ ಹೊಡೆದುಕೊಂಡು ಇಲ್ಲಿಯೇ ಕುಳಿತುಕೊಳ್ಳುತ್ತೇವೆ ಎಂದು ಯಾರಾದರೂ ತಿಳಿದುಕೊಂಡಿದ್ದರೆ ನಾವು ಈ ಪಕ್ಷದಲ್ಲಿರತಕ್ಕಂಥವರು ಹೇಗೆ ವಿವೇಕವನ್ನು ಪಡೆಯಬೇಕೋ, ನೀವು ಅಧಿಕಾರದಲ್ಲಿರತಕ್ಕಂಥವರುಗಳಿಗೆ ಜಾಸ್ತಿ ವಿವೇಕ ಇರಬೇಕಾದಂಥ ಅಗತ್ಯ ಇದೆ, ೫೦೦ ಮಂಡಲವನ್ನು ಏನೋ ಗೋಲ್‌ಮಾಲ್ ಮಾಡಿ ಹಿಡಿದಿಟ್ಟುಕೊಂಡ ಮಾತ್ರಕ್ಕೆ ನಿಮಗೆ ಬ್ಯಾಕ್‌ವರ್ಡ್ ಕ್ಲಾಸ್‌ನವರ ಪ್ರೀತಿ ಸಿಗುವುದಿಲ್ಲ. ಆ ಪ್ರೀತಿ ನಿಮಗೆ ಸಿಗಬೇಕು ಎಂದು ಇಲ್ಲವೂ ಇಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಎನ್ನತಕ್ಕಂಥದ್ದು ನಿಮಗೆ ನಿಮ್ಮ ಅಧಿಕಾರ ದಾಹವನ್ನು ತೃಪ್ತಿಪಡಿಸುವುದಕ್ಕೆ ಒಂದು ಚಿಲ್ಲರೆ ಶಬ್ದವಾಗಿದೆಯೇ ಹೊರತು ನಿಮಗೆ ರಾಜಕೀಯ ನೀತಿಯಾಗಲೀ, ಅಥವಾ ಕಾನ್‌ಸೆಪ್ಟ್ ಆಗಲೀ ಇಲ್ಲ, ನಿಮಗೆ ಮನಸ್ಸಿನಲ್ಲೂ ಅದು ಇಲ್ಲ ನಿಮ್ಮ ಹೃದಯದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಯಾವುದೇ ಸ್ಥಾನ ಇಲ್ಲ, ಆದರೆ ರಾಜಕೀಯವಾಗಿ ನೀವು ಆಟ ಆಡಬಹುದು, ಇದನ್ನು ಬಳಸಿಬಿಟ್ಟರೆ ಆಟ ಆಡಬಹುದು ಎಂದು ಮಾಡಿದ್ದಾರೆ. ಕಾಂಗ್ರೆಸ್‌ನವರು ಬ್ಯಾಕ್‌ವರ್ಡ್‌ಕ್ಲಾಸ್, ಬ್ಯಾಕ್‌ವರ್ಡ್ ಕ್ಲಾಸ್ ಎಂದು ಶಂಖ ಹೊಡೆಯುತ್ತಿದ್ದಾರೆ. ನನ್ನ ಮಕ್ಕಳು, ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಹೀಗೆ

ಇಟ್ಟುಬಿಟ್ಟರೆ ಏನು ಮಾಡುತ್ತಾರೋ ನೋಡೋಣ ಎಂದು ಈ ರೀತಿ ಮಾಡಿದ್ದಾರೆ. ಇದು ಬಹಳ ಚಿಲ್ಲರೆಯಾದ ತಂತ್ರ, ಈ ತಂತ್ರವನ್ನು ನೀವು ಮಾಡುವುದರಿಂದಾಗಿ ಯಾವ ಫಲಪುರುಷಾರ್ಥವೂ ಸಾಧನೆಯಾಗುವುದಿಲ್ಲ. ತಾತ್ಕಾಲಿಕವಾಗಿ ಒಂದು ೫೦೦ ಮಂಡಲಗಳನ್ನು ಹಿಡಿದಿಟ್ಟುಕೊಳ್ಳಬಹುದು, ಅದು ಆಗುತ್ತದೋ ಬಿಡುತ್ತದೋ ಬೇಡ. ಆದರೆ ಅದು ಆಯಿತು ಎಂದು ಹೇಳಿದರೂ ಕೂಡಾ ಶಾಶ್ವತವಾಗಿ ಮೊಳೆ ಹೊಡೆದುಕೊಂಡು ಬೋಲ್ಟು ನಟ್ಟು ಹಾಕಿ ಅಧಿಕಾರದಲ್ಲಿ ಕುಳಿತುಕೊಳ್ಳುತ್ತೇವೆಂದರೆ ಅದು ನಿಮ್ಮ ಭ್ರಮೆ. ಅವತ್ತು ಚುನಾವಣೆಯಾದಾಗ ಏನು ತಿಳಿದುಕೊಂಡಿದ್ದರು ಎಂದರೆ ಕಾಂಗ್ರೆಸ್‌ನವರು ದೀಕ್ಷಾಪಾಲು ಇದ್ದಾರೆ, ಅವರ ಹತ್ತಿರ ದುಡ್ಡು ಇಲ್ಲ, ಕಾಸೂ ಇಲ್ಲ, ವಾಲ್‌ಪೋಸ್ಟ್‌ಗೇ ದುಡ್ಡು ಇಲ್ಲ, ನಮ್ಮ ತರಹ ಕಾರು ಇಲ್ಲ ಎಂದು ಈಗ ನೀವು ಒಂದೊಂದು ಊರಿನಲ್ಲಿ ಮೂರು–ನಾಲ್ಕು ಛೇರ್ಮನ್‌ಗಳನ್ನು ಮಾಡಿ ಅವರುಗಳಿಗೆ ೩–೪ ಗೂಟದ ಕಾರನ್ನು ಕೊಟ್ಟಿದ್ದೀರಿ. ನನ್ನ ಊರಿನಲ್ಲಿ ನಾಲ್ಕು ಛೇರ್ಮನ್‌ಗಳು ಇದ್ದಾರೆ, ನಾನು ಆಟೋರಿಕ್ಷಾದಲ್ಲಿ ಓಡಾಡಿದರೆ ಅವರು ಕಾರು ಹಾಕಿಕೊಂಡು ಘೇರಾವೊ ಮಾಡುತ್ತಾರೆ, ಏನು ಸಾಯುವುದು ನಾನು. ನಮ್ಮ ಕೈಯಲ್ಲಿ ಒಂದು ಮುನಿಸಿಪಾಲಿಟಿ ಇದ್ದರೆ ಅಲ್ಲಿ ಪ್ರೆಸಿಡೆಂಟ್ ಇದ್ದವನನ್ನೂ ಕೂಡಾ ಆಜ್ಞೆ ಮಾಡಿ ಅವನನ್ನು ಕರೆದುಕೊಂಡು ಹೋಗಿ ರಾಜೀನಾಮೆ ಕೊಡಿಸಿದ್ದು ಆಯಿತು. ಈ ರೀತಿಯಾಗಿ ಈಗ ಒಂದೂವರೆ ತಿಂಗಳು ಆಯಿತು. ಇಲ್ಲಿಂದ ನಿರ್ದೇಶನ ಬರುವವರೆಗೆ ನಾವು ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕುವುದಿಲ್ಲ ಎಂದು ಹೇಳುತ್ತಾರೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಬೆಂಕಿ ಹಚ್ಚುವ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಇವೊತ್ತು ಅಲ್ಲಿ ಡೆಪ್ಯೂಟಿ ಕಮೀಷನರ್‌ರವರು ಬಂದು ಮೀಟಿಂಗ್ ಮಾಡುವುದಕ್ಕೆ ಅವಕಾಶ ಇಲ್ಲ. ಟೌನ್ ಮುನಿಸಿಪಲ್ ಕಮಿಟಿಯವರು ಬರುವುದಕ್ಕೆ ಅವಕಾಶ ಇಲ್ಲ ಅಲ್ಲಿ ಮೀಟಿಂಗ್ ನಡೆಯುವುದಕ್ಕೆ ಅವಕಾಶ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಇದೆ ಕೋರ್ಟಿನಲ್ಲಿ ಮ್ಯಾಂಡಮಸ್ ಕೇಳಿದರೆ ಪ್ರತಿ ವರ್ಷ ಗವರ್ನಮೆಂಟ್‌ನವರು ಬಂದು ನಮ್ಮ ಸೆಕ್ರೆಟರಿ ಇಲ್ಲ, ಅವನು ಇಲ್ಲ, ಇವನು ಇಲ್ಲ, ನಾಳೆ ಮಾಡುತ್ತೇವೆ ನಾಡಿದ್ದು ಮಾಡುತ್ತೇವೆ ಟೈಮು ಕೊಡಿ ಎನ್ನುತ್ತಾರೆ. ಒಂದು ತಿಂಗಳಾಯಿತು ಮುಂದೆ ಹೋಗಿ. ಯಾವುದೇ ಒಂದು ಭಂಡತನಕ್ಕೂ ಗಡಿ, ಮಿತಿ ಇರಬೇಕು ಅಧಿಕಾರದ ಲಾಲಸೆಯಿಂದ ಒಂದು ಪ್ಲಾನ್ ಮಾಡಿ ಎಲ್ಲಾ ಛೇರ್ಮನ್ ಸಿ ಐ.ಟಿ.ಡಿ. ಪ್ಲಾನಿಂಗ್ ಅಥಾರಿಟಿ ಹೀಗೆ ಎಲ್ಲಿ ವ್ಯವಸ್ಥೆ ಮಾಡಿಕೊಂಡು ಇವೊತ್ತು ನೀವು ಪುಷ್ಕಳವಾಗಿದ್ದೀರಿ ನೀವು ಈ ರೀತಿ ನೀತಿಯನ್ನು ಅನುಸರಿಸಬೇಡಿ. ನೀವು ಎರಡು ಹಳಿಯ ಮೇಲೆ ನಡೆದುಕೊಂಡು ದುರಾಸೆಗೆ ಹೋಗಬೇಡಿ ಎಲ್ಲಾ ವಿಚಾರದಲ್ಲಿ ಅಂದರೆ ರಾಜಕೀಯವಾದಂತಹ ವಿಚಾರದಲ್ಲಿ ಅಧಿಕಾರದ ಸ್ಥಾನಗಳನ್ನು ಕೂಡ ಸಂಪೂರ್ಣವಾಗಿ ನೀವು ಹಿಡಿದುಕೊಂಡು ಜನರು ಜೋತು ಬಿದ್ದ ಹಗ್ಗವನ್ನು ಹಿಡಿದುಕೊಂಡ ಹಾಗೆ ಅಧಿಕಾರದಲ್ಲಿ ಜೀ ಹುಜೂರ್ ಎನ್ನುವಂತಹ ಅಧಿಕಾರಿಗಳನ್ನು ಹಾಕಬೇಡಿ ಒಳ್ಳೆಯ ಅಧಿಕಾರಿಗಳು ಯಾರು ಇದ್ದಾರೆ, ಸ್ವತಂತ್ರವಾಗಿ ಯೋಚನೆ ಮಾಡುವವರು ಯಾರಿದ್ದಾರೆ ಯಾರು ಮಂತ್ರಿಗಳಿಗೆ ಡಿಫರ್ ಎಂದು ಹೇಳುತ್ತಾರೆ ಅಂಥ ಒಬ್ಬ ಅಧಿಕಾರಿಯನ್ನು ಸಂಭಾಳಿಸಿಕೊಂಡು ಹೋಗುವ ಮನಸ್ಸು ನಿಮಗೆ ಇಲ್ಲ. ಆತನನ್ನು ೨೪ ಗಂಟೆಯೊಳಗೆ ಟ್ರಾನ್ಸ್‌ಫರ್ ಮಾಡುತ್ತೀರಿ ಇಲ್ಲಿಂದ ಅಸಿಸ್ಟೆಂಟ್ ಕಮೀಷನರ ರವರಿಗೆ ಫೋನ್ ಮಾಡಿ ಕೆಲಸ ಮಾಡಬೇಡಿ ನಮ್ಮ ಅಧಿಕಾರದ ಕಾಲದಲ್ಲಿ ಇಂತಹ ಕೆಲಸಗಳನ್ನು ನಾವು ಮಾಡಿಲ್ಲ. I beg to differ, I think what the opposition man telling is allright ಎಂದು ಹೇಳಿದರೆ, ಆಯಿತಪ್ಪ ಎಂದು ಹೇಳುವುದು ನಮ್ಮ ಕಾಲದಲ್ಲಿ ಇತ್ತು ಆದರೆ ಇವೊತ್ತು ನೀವು ಏನು ಆಯಿತು ಎಂದು ಅಧಿಕಾರಿಯನ್ನು ಕೇಳಿದರೆ ಆತ ನಮ್ಮ ಮಾತು ಕೇಳುವುದೇ ಇಲ್ಲ ಅವನಿಗೆ ಇಲ್ಲದಿದ್ದುದ್ದನ್ನು ಹೇಳಲಿಲ್ಲ, ಮಾಡಬಾರದ್ದನ್ನು ಅಂದರೆ ಮರ್ಡರ್ ಮಾಡುವಂತಹ ಕೆಲಸ ಎಂದು ಹೇಳಲಿಲ್ಲ. ಮಾಡಬಾರದ ಕೆಲಸ ಮಾಡಿ ಎಂದು ಹೇಳಲಿಲ್ಲ ಅವರು ಆತ್ಮ ಪೂರಕ ಗೌರವ ಕೊಡುತ್ತಾರೆ. ಅವನಿಗೆ ಯಾವುದೇ ಆಶೋತ್ತರಗಳು ಇಲ್ಲ. ಅಂಥ ಮಂತ್ರಿಗಳು ದಿನನಿತ್ಯ ಇಲ್ಲಿಯೇ ಕುಳಿತುಕೊಂಡು ನಮ್ಮ ಪಕ್ಷದ ಕೆಲಸ ಮಾಡುವುದು ಬೇಡ ಇಂತಹ ಚಿತಾವಣೆ ಮಾಡುವುದಾದರೆ ಎಲ್ಲಿ ಅಧಿಕಾರಿಗಳು ಜೀ ಹುಜೂರ್ ಎಂದು ಹೇಳತಕ್ಕಂತವರು ಮಾಡುತ್ತಿದ್ದಾರೆ. ಈ ಚುನಾವಣೆಗಳನ್ನು ನೋಡಿದಾಗ ನನಗೆ ನಿಜವಾಗಿ ದಿಗ್ಭ್ರಮೆ ಆಯಿತು ಹಿಂದೆ ಏನು ಆಯಿತು ಎಂದರೆ ಕೊನೆಯ ಪಕ್ಷ ಆಡಳಿತ ಪಕ್ಷದಲ್ಲಿ ತುಂಬಾ ನಿಷ್ಠೆ ಇರುತ್ತಾ ಇತ್ತು. Some people are there who are more loyal than the king. ಅವ

ನಿಗಿಂತ ಅಂದರೆ ರಾಜನಿಗಿಂತ ಹೆಚ್ಚಿನ ರಾಜ ನಿಷ್ಠೆ ಇರತಕ್ಕ ಅಧಿಕಾರಿಗಳೂ ಇರುತ್ತಾರೆ ಕೊನೆಯಪಕ್ಷ ರಾಜನಿಗೆ ಅವರು ನಿಷ್ಠೆಯನ್ನು ತೋರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಆ ರೂಲ್‌ನಲ್ಲಿ ಹಾಗಿದೆ, ಈ ರೂಲ್‌ನಲ್ಲಿ ಹಾಗಿದೆ, ಎಂದು ಹೇಳುತ್ತಿದ್ದರು. ನಾನು ನೇರವಾಗಿ ನನ್ನ ಅಭಿಪ್ರಾಯ ವನ್ನು ಹೇಳುತ್ತೇನೆ ನೀವು ಇಲ್ಲಿ ಏನು ಹೇಳಿದರೂ ಮಾಡುವುದಕ್ಕಾಗುವುದಿಲ್ಲ, ನಿಮಗೆ ಗೊತ್ತಿದೆ ನೀವು ಬುದ್ಧಿವಂತರೆಂದು ತಿಳಿದುಕೊಂಡಿದ್ದೀರಿ ಎಂದು ಅಧಿಕಾರಿ ಹೇಳುತ್ತಾನೆ ಗ್ಲೇರಿಂಗ್ ಆಗಿ ರಿಜೆಕ್ಟ್ ಮಾಡ ಬೇಕಾದ ನಾಮಿನೇಷನ್ ಇದ್ದರೆ, ಅದನ್ನು ಎತ್ತಿ ಹಿಡಿದು ಯಾವುದಾದರೂ ಒಪ್ಪಿಕೊಳ್ಳಬೇಕಾದ ನಾಮಿನೇಷನ್ ಇದ್ದರೆ ಅದನ್ನು ರಿಜೆಕ್ಟ್ ಮಾಡುವುದು ಮತಗಳನ್ನು ಎಣಿಕೆ ಮಾಡಬೇಕಾದರೆ ಬಂಡಲ್ ಬಂಡಲ್‌ಗಳನ್ನೇ ಬದಲಾವಣೆ ಮಾಡಿದ ಪ್ರಸಂಗಗಳು ಇವೆ ಹೀಗಾಗಿ ಮರು ಎಣಿಕೆಗಾಗಿ ನಾನು ಹೋಗಿ ಕುಳಿತುಕೊಳ್ಳಬೇಕಾದ ಪ್ರಸಂಗ ಬಂತು ನಾನು ಹೋಗಿ ಕುಳಿತ ಮೇಲೆ ಅವನಿಗೆ ಸ್ವಲ್ಪ ಭಯ ಬಂತು. ನಿಮಗೆ ಬಂದ ೨೦೦ ಓಟುಗಳನ್ನು ಅವರಿಗೆ ಹಾಕಿಬಿಟ್ಟಿದ್ದಾರೆ, ಅವರಿಗೆ ಬಂದ ೭೦ ಓಟುಗಳನ್ನು ನಮ್ಮ ಲೆಕ್ಕಕ್ಕೆ ಹಾಕಿದ್ದಾರೆ, ಸುಮಾರು ೪೦೦ ಓಟಿನಲ್ಲಿ ನನ್ನ ಅಭ್ಯರ್ಥಿ ಗೆಲ್ಲತಕ್ಕ ಪರಿಸ್ಥಿತಿ ಬಂತು. ನಾನು ಏಕೆ ಇದನ್ನು ಹೇಳುತ್ತಾ ಇದ್ದೇನೆ ಅಂದರೆ ಆಕಸ್ಮಿಕತ್ತಾಗಿ ಆಗಿದ್ದರೆ ಖಂಡಿತವಾಗಿ ನಾನು ಇದನ್ನು ದೊಡ್ಡದು ಮಾಡಿ ಹೇಳುವುದಕ್ಕೆ ಬಯಸುತ್ತಾ ಇರಲಿಲ್ಲ ಇವರ ಕಾರ್ಯ ವೈಖರಿ ನೋಡಿ, ನನಗೆ ಅನಿಸುತ್ತದೆ ಉದ್ದೇಶ ಪೂರ್ವಕವಾಗಿಯೇ ಈ ರೀತಿ ಎಲ್ಲಾ ಅಧಿಕಾರಿಗಳನ್ನು ಆಯಕಟ್ಟಿನ ಜಾಗದಲ್ಲಿ ಇಟ್ಟು ಯಾರು ಜೀ ಹುಜೂರ್ ಅಧಿಕಾರಿಗಳು ಇದ್ದಾರೆ ಮತ್ತು ಎಲ್ಲಿ ಚುನಾವಣೆಗೆ ನಾಮಕರಣ ಮಾಡಲು ಅವಕಾಶಗಳು ಇವೆ ಅಲ್ಲಿ ಇವರನ್ನು ಇಟ್ಟುಕೊಂಡಿದ್ದಾರೆ ಪ್ರತಿಯೊಂದು ಕಮಿಟಿಯಲ್ಲಿಯೂ ನಿಮ್ಮ ಸದಸ್ಯರನ್ನು ಸಂಪೂರ್ಣ ನಾಮಕರಣ ಮಾಡಿಕೊಂಡಿದ್ದೀರಿ. ಕೊನೆಯಪಕ್ಷ ನಮಗೆ ಯಾವುದೇ ರಿಕ್ರೂಟ್‌ಮೆಂಟ್ ಕಮಿಟಿಯಲ್ಲಿಯೂ ಕೂಡ ನಾಮಕರಣ ಇಲ್ಲ ಇದೆಲ್ಲಾ ಸಾಯಲಿ ಕೆಲವರಿಗೆ ಏನು ಮಾಡಿದ್ದಾರೆ ಎಂದರೆ ಶಾಸಕರೇ ಅಧ್ಯಕ್ಷರು ಆಗಿರಬೇಕು ಎಂದು ಅಪ್ಪಿ ತಪ್ಪಿ ಬರೆದುಕೊಂಡಿದ್ದಾರೆ. There is hospital in Shimoga, which is a major hospital i.e., Megona hospital so far you have not constituted the board of visitors, If you constitute it than, I will become the Chairman. ನಾನು ಕಾನೂನು ಪ್ರಕಾರ ಛೇರ್ಮನ್ ಆಗುತ್ತೇನೆ. ಅದಕ್ಕೋಸ್ಕರ ಛೇರ್ಮನ್ ಆಗಿ ನಾನು ಗೂಟ ಹೊಡೆದು ಕೊಂಡಿರಲೇ ?

ಶ್ರೀ ಜಿ. ಬಸವಣ್ಣಪ್ಪ.—ಈಗ ಮಾನ್ಯ ಕೆ. ಹೆಚ್. ಶ್ರೀನಿವಾಸ್ ರವರು ಈ ಹಿಂದೆ ಮಂತ್ರಿಗಳಾಗಿದ್ದವರು ಹಾಗೂ ನುರಿತ ರಾಜಕಾರಣಿಗಳು ಇಂತಹವರು ಈ ರೀತಿ ಮಾತನಾಡುವುದೇ ಚುನಾವಣೆಯಲ್ಲಿ ಹಾಗೂ ಮತಗಳನ್ನು ಎಣಿಕೆ ಮಾಡತಕ್ಕ ಸಂದರ್ಭದಲ್ಲಿ ಹೆಚ್ಚು ಕಡಿಮೆ ಆಗಿದೆ, ಅಧಿಕಾರಿಗಳು ನಾವು ಹೇಳಿದಂತಹ ಮಾತುಗಳನ್ನು ಮಾತ್ರ ಕೇಳುತ್ತಾರೆ, ಹಾಗೆ ಮಾಡುತ್ತಿದ್ದಾರೆ, ಹೀಗೆ ಮಾಡುತ್ತಿದ್ದಾರೆ ಎಂದು ಆಪಾದನೆ ಮಾಡುವುದು ಸತ್ಯಕ್ಕೆ ದೂರವಾದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬ ಆಫೀಸರ್ ಬಂದು ಅಫಿಡವಿಟ್ ಕೊಟ್ಟಿದ್ದಾನೆ. ಅವನದು ತಪ್ಪಾಗಿದೆ ಎಂದು ಬರೆದು ಕೊಟ್ಟ ಮೇಲೆ ಎಲೆಕ್ಷನ್ ಪೋಸ್ಟ್ ಪೋನ್ ಆಗಿದೆ ಎಂದು ನಮಗೆ ವರದಿ ಬಂದಿದೆ.

ಶ್ರೀ ಜಿ. ಬಸವಣ್ಣಪ್ಪ.—ಈ ವಿಷಯದಲ್ಲಿ ಈ ಮನೆಯಲ್ಲಿ ಒಂದು ಮಾತನ್ನು ಪ್ರಾಮಾಣಿಕವಾಗಿ ಹೇಳುತ್ತೇನೆ. ನಾವು ಯಾರೂ ಇಂತಹ ಚಿಲ್ಲರೆ ರಾಜಕೀಯವನ್ನು ಮಾಡಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಈಗ ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ.

ಶ್ರೀ ಜಿ. ಬಸವಣ್ಣಪ್ಪ —ಅವರು ಅವರ ಪಕ್ಷಕ್ಕೆ ಕೆಲಸ ಮಾಡಿರಬಹುದು. ನಾವು ನಮ್ಮ ಪಕ್ಷಕ್ಕೆ ಕೆಲಸ ಮಾಡಿರಬಹುದು. ನಮ್ಮ ಪ್ರಗತಿಯ ಕೆಲಸಕಾರ್ಯಗಳನ್ನು ಈ ಸದನದಲ್ಲಿ ನಾವು ಹೇಳಿರಬಹುದು ಜನರಿಗೂ ಸಹ ಹೇಳಿದ್ದೇವೆ. ಆದರೆ ಇದರಲ್ಲಿ ಕೈವಾಡ ಮಾಡಿರಬಹುದೆಂದು ಶ್ರೀ ಕೆ. ಹೆಚ್ ಶ್ರೀನಿವಾಸ್ ಅವರು ಹೇಳುವಂಥದ್ದು ಸತ್ಯಕ್ಕೆ ದೂರವಾದುದು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಮ್ಮ ಊರಿನ ಆಸ್ಪತ್ರೆಗೆ ಬೋರ್ಡ್ ಆಫ್ ವಿಸಿಟರ್ ನೇಮಕ ಇವತ್ತಿನವರೆಗೆ ಮಾಡಿದ್ದೀರಾ ? ಏಕೆ ಮಾಡಲಿಲ್ಲ ? ಅದನ್ನು ಇಷ್ಟು ದಿವಸವಾದರೂ ಮಾಡುವುದಕ್ಕೆ ಏತಕ್ಕೆ ನಿಮಗೆ ಆಗಲಿಲ್ಲ ದಯವಿಟ್ಟು ನೀವು ಹೇಳಿ ಅದಕ್ಕೆ ನಾನು ಚೇರ್ಮನ್ ಆಗುತ್ತೇನೆಂದು ನಿಮಗೆ ಭಯವೇ ? ನಾನು ಚೇರ್ಮನ್ ಆಗಿ ನಾನು ಏನನ್ನೂ ಹೊತ್ತುಕೊಂಡು ಹೋಗುವುದಿಲ್ಲ. ಇದನ್ನು ಮಾಡಿದ್ದರೆ ಅಲ್ಲಿ ಕಸ ಹೊಡಿದರೋ ಇಲ್ಲವೋ ಅಥವಾ ಬಟ್ಟೆ ಕ್ಲೀನ್ ಮಾಡುತ್ತಿದ್ದಾರೋ ಇಲ್ಲವೋ ಎಂಬುದನ್ನು ನೋಡಬಹುದಾಗಿತ್ತು. ನನಗೆ ನಿಮ್ಮ ಕೃಪೆಯಿಂದ ರಾಜಕಾರಣ ಮಾಡುವಂಥ ದುಸ್ಥಿತಿ ಇನ್ನೂ ಬಂದಿಲ್ಲ. ನಿಮ್ಮ ಆಶೀರ್ವಾದದಿಂದ ರಾಜಕಾರಣ ಮಾಡುವಂಥ ಅಗತ್ಯವನ್ನು ದೇವರು ನನಗೆ ಕೊಟ್ಟಿಲ್ಲ. ಸ್ವಸಾಮರ್ಥ್ಯ ಇರುವವರೆವಿಗೂ ರಾಜಕಾರಣ ಮಾಡುತ್ತೇನೆ. ಇಲ್ಲದಿದ್ದರೆ ಗೌರವದಿಂದ ಈ ಸ್ಥಾನ ಬಿಟ್ಟು ಹೋಗುತ್ತೇನೆ. ಆದರೆ ನೀವು ಮಾಡಿರತಕ್ಕಂಥ ಕೆಲಸ ಎಷ್ಟು ಚಿಲ್ಲರೆ ಕೆಲಸ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಈಗ ನಾಮಕರಣ ಮಾಡಿರತಕ್ಕಂಥ ಬಾಡಿಗಳನ್ನು ಎಲ್ಲಾ ಕೈಗೆ ತೆಗೆದುಕೊಂಡಿದ್ದಾರೆ. ಈ ಬಗ್ಗೆ ನಾನು ಹೇಳತಕ್ಕಂಥದ್ದು ಇಷ್ಟೆ, ಈ ಚುನಾಯಿತ ಸಂಸ್ಥೆಗಳನ್ನು ನಾಮಕರಣ ಮಾಡಿ ತಮ್ಮ ಕೈವಶ ಮಾಡಿಕೊಂಡು ಅಲ್ಲಿ 'ಜೀ ಹುಜೂರ್' ಎನ್ನತಕ್ಕಂಥವ ಅಧಿಕಾರಿಗಳು ಇರಬೇಕು ಚುನಾಯಿತ ಸಂಸ್ಥೆಗಳೆಲ್ಲ ನಿಮ್ಮ ಕೈಯಲ್ಲಿ ಇರಬೇಕು. ಸರ್ಕಾರದ ಬೆನಿಫಿಟ್ ಏನು ಸಿಕ್ಕಬೇಕಾದರೆ ಅವರು ಜನತಾಪಾರ್ಟಿ ಮುಂದ್ರೆ ಹೊತ್ತುಕೊಂಡು ಅದನ್ನು ತೆಗೆದುಕೊಳ್ಳಬೇಕು. ಇದಕ್ಕೆ ತಮಗೆ ಎಲ್ಲಿಂದ ಸಲಹೆ ಬರುತ್ತಿದೆ ಎಂಬುದನ್ನು ನಾನು ಬಲ್ಲೆ. ಅದರ ವಿವರವನ್ನು ಇನ್ನೊಮ್ಮೆ ಇಡುತ್ತೇನೆ. ನನ್ನ ಪ್ರಶ್ನೆ ಏನೆಂದರೆ ಈ ಒಂದು ರೀತಿಯ ನೀತಿಯನ್ನು ಅನುಸರಿಸಿ ಶಾಶ್ವತವಾಗಿ ಕರ್ನಾಟಕ ರಾಜ್ಯವನ್ನು ಆಳುತ್ತೇವೆಂಬ ಭ್ರಮೆಯಿಂದ ಈ ಕೆಲಸ ಮಾಡುತ್ತಿದ್ದೀರಿ. ಈ ನಿಮ್ಮ ಭ್ರಮೆ ನಿರಸನವಾಗುತ್ತದೆ. ನೀವು ಯಾವ ನಾಮಿನೇಷನ್‌ನ್ನು ಮಂಡಲ ಪಂಚಾಯಿತಿಗೆ ಮಾಡಬೇಕೆಂದು ಹೊರಟಿದ್ದೀರೋ ಖಂಡಿತವಾಗಿ ಅದೇ ನಿಮಗೆ ಮೃತ್ಯುವಾಗುತ್ತದೆಂಬ ಎಚ್ಚರಿಕೆಯನ್ನು ಕೊಡುವುದಕ್ಕೆ ನಾನು ಬಯಸುತ್ತೇನೆ. ದಯವಿಟ್ಟು ನಿಮ್ಮ ಈ ಡೊಂಬರಾಟವನ್ನು ಸಾಕುಮಾಡಿ. ಇದು ಬೇಕಾಗಿಲ್ಲ ನೀವು ನಾಮಿನೇಷನ್ ಮಾಡಲೇಬೇಕೆಂದರೆ ಮತ್ತೊಮ್ಮೆ ವಿಮರ್ಶೆ ಮಾಡೋಣ. ಇಡೀ ಕಾನೂನನ್ನು ವಿಮರ್ಶೆಮಾಡಿ ಒಮ್ಮತದಿಂದ ಸರಿಪಡಿಸಿ ಪಾಸ್ ಮಾಡೋಣ. ಆ ಶಕ್ತಿ ಖಂಡಿತವಾಗಿ ಈ ಸದನಕ್ಕೆ ಇದೆ. ಆದರೆ ನಿಮಗೆ ಮಾತ್ರ ಮನಸಿಲ್ಲ. ನಿಮಗೆ ಬಹುಮತ ಇದೆ ಎನ್ನುವ ಒಂದೇ ಒಂದು 'ಅಹಂ' ಒಂದು 'ಠೇಂಕಾರ'ದಿಂದ ರೂಲ್‌ನ್ನು ಮಾಡಿ ಈ ಮಂಡಲಪಂಚಾಯಿತಿಗಳನ್ನು ಕೈವಶ ಮಾಡಿಕೊಳ್ಳತಕ್ಕಂಥ ಹವ್ಯಾಸಕ್ಕೆ ದಯವಿಟ್ಟು ಕೈಹಾಕಬೇಡಿ ಎಂದು ಬಹಳ ವಿನಯಪೂರ್ವಕವಾಗಿ, ಕಳಕಳಿಯಿಂದ ಕೇಳಿಕೊಂಡು ಹಾಗೂ ನಿಮಗೆ ಎಚ್ಚರಿಕೆಯನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಪಕ್ಷದ ಮುಖಂಡರು ಹಾಗೂ ಇತರರೆಲ್ಲರು ಈ ನಾಮಕರಣದ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿಸಿದ್ದಾರೆ. ಇದೊಂದು ರಾಜಕೀಯ ಭ್ರಷ್ಟಾಚಾರವೆಂದು ಹೇಳಲೇಬೇಕಾಗುತ್ತದೆ. ಕಾನೂನಿನಲ್ಲಿ ಇಲ್ಲದೆ ಹೋದರೂ ಸಹ ಜನ ತೀರ್ಪು ಕೊಟ್ಟರೂ ಕೂಡ, ಅತಿ ದುರಾಸೆಯನ್ನು ಮಾಡಿ ಈ ನಾಮಕರಣಕ್ಕೆ ಅವರ ಪಕ್ಷದ ಬೆಂಬಲಿಗರನ್ನು ಹಿತೈಷಿಗಳನ್ನು ಸೇರಿಸಿಕೊಳ್ಳುವಂಥದ್ದು ಒಂದು ರಾಜಕೀಯ ವ್ಯಭಿಚಾರವೆಂದು ಹೇಳಲೇಬೇಕಾಗುತ್ತದೆ. ಈಗಾಗಲೇ ನಾಮಕರಣದ ಬಗ್ಗೆ ಶಾಸನ ಇದ್ದು ಅದಕ್ಕೆ ತಿದ್ದುಪಡಿಗಳು ಇದ್ದರೂ ಕೂಡ, ಬೇಕಂತಲೇ ೪–೫ ನೂರು ಮಂಡಲಪಂಚಾಯಿತಿಗಳನ್ನು ವಶಪಡಿಸಿಕೊಳ್ಳಬೇಕಾದ ದಾಹ ಇದು ಇವರ ಈ ಕೆಟ್ಟ ಪ್ರವೃತ್ತಿಗೆ ನಾನು ಈ ಸಂದರ್ಭದಲ್ಲಿ ಒಂದು ಉದಾಹರಣೆ ಕೊಡಬೇಕಾಗುತ್ತದೆ. ೧೯೮೩ರಲ್ಲಿ ಕೂಡ ಜನತಾ ಸರ್ಕಾರ ರಚನೆಯಾದಾಗ ಮೊಟ್ಟಮೊದಲು ಮಾಡಿದ್ದು ಅದೇ ಕೆಲಸ. ರಾಮಕೃಷ್ಣ ಹೆಗಡೆಯವರು ಚುನಾಯಿತರಾದ ವಿಧಾನಸಭೆ ಸದಸ್ಯರಾಗದೆ, ಈ ಸರ್ಕಾರದ ಒಂದು ಮುಖ್ಯಮಂತ್ರಿ ಪದವಿಯನ್ನು ಪಡೆದಾಗಿನಿಂದ ಇದು ಶುರುವಾಯಿತು. ಅಲ್ಲಿಂದಲೇ ಈ ಜನತಾಪಕ್ಷಕ್ಕೆ ಪಕ್ಷಾಂತರ ಮಾಡಿಸಿಕೊಳ್ಳುವಂಥದ್ದು, ಪಕ್ಷಕ್ಕೆ ಸೇರಿಸಿಕೊಳ್ಳುವಂತಹ ದಾಹ ಶುರುವಾಯಿತು. ನಮ್ಮ ಶ್ರೀನಿವಾಸ್ ಅವರು ಹೇಳಿದ ಪ್ರಕಾರ ನಮ್ಮ ಪಕ್ಷದವರನ್ನೆಲ್ಲಾ, ಅಂದರೆ ಶಿವಮೊಗ್ಗ ಮುನ್ಸಿಪಾಲಿಟಿಯಲ್ಲಿ, ಸೊರಬ ತಾಲ್ಲೂಕಿನಲ್ಲಿ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ, ಪಕ್ಷಾಂತರ ಮಾಡಿಸಿದರು. ತಮ್ಮದು ಮೌಲ್ಯಾಧರಿತ ರಾಜಕಾರಣವೆಂದು ಹೇಳಿಕೊಂಡೇ ಇವರು ಪಕ್ಷಾಂತರಕ್ಕೆ ಬೆಂಬಲವನ್ನು ಕೊಟ್ಟರು. ಅದಕ್ಕೆ ಕಾನೂನಿನ ಬೆಂಬಲ ಇಲ್ಲದಿದ್ದರೂ ಕೂಡ ಈ ಕೆಲಸವನ್ನು ಮಾಡಿದರು. ಹೀಗೆ ನಮ್ಮ

೨-೦೦ ಪಿ.ಎಂ.

ಪಕ್ಷದವರನ್ನು ಎಲ್ಲಾ ಕಡೇ ಪಕ್ಷಾಂತರ ಮಾಡಿಸಿ ಅವರಿಗೆ ಅಧಿಕಾರದ ಆಸೆ ತೋರಿಸಿ, ಮಂಡಲ ಪಂಚಾಯತ್‌ಗಳಿಗೆ ನಿಮ್ಮನ್ನು ನಾಮಿನೇಟ್ ಮಾಡಿಸುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ ಈಗಾಗಲೇ ಯಾವ ಕಾನೂನು ಆಗದೇ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟರು, ತಹಸೀಲ್ದಾರರಿಗೆ ಆದೇಶ ಕೊಟ್ಟರು ತಹಸೀಲ್ದಾರರು ಇವತ್ತು ಎಷ್ಟು ನೀತಿಯನ್ನು ಬಿಟ್ಟು ಕೆಲಸ ಮಾಡುತ್ತಿದ್ದಾರೆ ಎಂದರೆ, ತಾವೇ ಜೀಪ್ ತೆಗೆದುಕೊಂಡು ಜನತಾಪಕ್ಷದ ಕಾರ್ಯಕರ್ತರ ಬಳಿಗೆ ಹೋಗಿ ನಾಮಿನೇಷನ್‌ಗೆ ಯಾರ ಯಾರ ಹೆಸರನ್ನು ಕಳುಹಿಸಬೇಕೆಂದು ಅವರ ಎದುರಿಗೆ ಕೇಳುತ್ತಿದ್ದಾರೆ ಎಂದರೆ ಅದಕ್ಕಿಂತ ಬೇರೆ ನಾಚಿಕೆಗೇಡಿನ ಕೆಲಸ ಬೇರೆ ಯಾವುದಿದೆ? ಈಗಾಗಲೇ ಅವರ ಪಕ್ಷದವರನ್ನೇ ನಾಮಕರಣ ಮಾಡಿದ್ದಾರೆ. ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಅವರ ಪಕ್ಷದವರನ್ನೇ ಮಾಡಿದ್ದಾರೆ. ಸಾಕಷ್ಟು ಭ್ರಷ್ಟಚಾರ, ಹತ್ಯಾಚಾರ ನಡೆಯುತ್ತಿದೆ. ಆರ್.ಟಿ.ಓ. ಕಮಿಟಿಗೆ ಹೋದರೆ ಅಲ್ಲಿಯೂ ಕೂಡ ಅವರನ್ನೇ ಹಾಕಿದ್ದಾರೆ.ನ್ಯಾಯಬೆಲೆ ಅಂಗಡಿಗಳಲ್ಲೂ ಜನತಾ ಪಕ್ಷದವರನ್ನೇ ಪೂರ್ತಿ ನೇಮಕ ಮಾಡಿದ್ದಾರೆ. ಈ ನ್ಯಾಯಬೆಲೆ ಅಂಗಡಿಯಲ್ಲಿ ಯಾವ ಸಿದ್ಧಾಂತವನ್ನು ಉಪಯೋಗಿಸಿಲ್ಲ. ವಿದ್ಯಾವಂತರಿಗೆ ಇವುಗಳನ್ನು ಕೊಡುತ್ತಿದ್ದೇವೆ, ಹಿಂದುಳಿದವರಿಗೆ ಆದ್ಯತೆ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಇಲ್ಲಿ ಹಿಂದುಳಿದವರ ಹೆಸರು ಸರ್ವೇ ಸಾಮಾನ್ಯವಾಗಿ ಬಳಸತಕ್ಕಂಥ ಒಂದು ಶಬ್ದ ಆಗಿದೆಯೇ ಹೊರತು ಇದರಿಂದ ಹಿಂದುಳಿದವರಿಗೆ ನಾವು ಯಾವ ಪ್ರಯೋಜನವೂ ಆಗಿಲ್ಲ ಆಗಿದ್ದರೆ ಈಗ ಜಿಲ್ಲಾಪರಿಷತ್ತಿನಲ್ಲಿ ಎಷ್ಟು ಜನ ಅಧ್ಯಕ್ಷರನ್ನು ಹಿಂದುಳಿದವರನ್ನು ಮಾಡಿದ್ದಾರೆ ? ಬೆಳಗಾಂನಲ್ಲಿ ಯಾರನ್ನು ಮಾಡಿದ್ದಾರೆ ? ಚಿತ್ರದುರ್ಗದಲ್ಲಿ ಯಾರನ್ನು ಮಾಡಿದ್ದಾರೆ ? ಕೋಲಾರದಲ್ಲಿ ಯಾರನ್ನು ಮಾಡಿದ್ದಾರೆ ? ಚಿತ್ರದುರ್ಗದಲ್ಲಿ ಈ ವಿಷಯದಲ್ಲಿ ಇನ್ನು ಸ್ಟೇ ಇದೆ. ತಮಗೆ ಗೊತ್ತಿರುವ ಹಾಗೆ ಅದರ ಬಗ್ಗೆ ಇಲ್ಲಿಯೂ ಕೂಡ ಚರ್ಚೆಯಾಯಿತು. ಆದರೆ ಕೊನೆ ಗಳಿಗೆಯಲ್ಲಿ ಏನೋ ಭ್ರಷ್ಟಚಾರ ಮಾಡಿ ಓಟ್‌ಲಿಸ್ಟ್‌ನಲ್ಲಿ ಸೇರಿಸಿಕೊಂಡರು ಎಂದು ಹೈಕೋರ್ಟಿನಲ್ಲೂ ಕೂಡ ವಿವಾದ ನಡೆಯುತ್ತಿದೆ. ಹೀಗೆ ಅಧಿಕಾರದ ದಾಹಕ್ಕೂ ಒಂದು ಮಿತಿ ಇರಬೇಕು. ಈ ಮೂರು ಬಿಟ್ಟವರೆಂದರೆ ಯಾರು ? ಎಂದು ಮಾನ್ಯ ರಾಮಪ್ಪನವರಿಗೆ ಕೇಳಿದೆ ಒಂದು ಪಕ್ಷಕ್ಕೆ ಅಥವಾ ಒಬ್ಬ ಮನುಷ್ಯನಿಗೆ ಮೂರು ಬಿಟ್ಟವರೆಂದು ಹೇಳುತ್ತಾರೆ ಅದರ ಅರ್ಥ ಏನು ? ಆದಕ್ಕೆ ಒಬ್ಬೊಬ್ಬರು ಒಂದೊಂದು ರೀತಿಯ ವಿಶ್ಲೇಷಣೆಯನ್ನು ಕೊಟ್ಟರು. ಕೆಲವರು ಹೇಳಿದರು ಮೂರು ಬಿಟ್ಟವರೆಂದರೆ, ಮಾನ, ಮರ್ಯಾದೆ ಮತ್ತು ಲಜ್ಜೆ ಇವುಗಳನ್ನು ಬಿಟ್ಟವರಿಗೆ ಮೂರು ಬಿಟ್ಟವರೆಂದು ಹೇಳುತ್ತಾರೆಂದು ಈ ಕಾರ್ಯಕ್ರಮಕ್ಕೆ ಈ ನೀತಿಗೆ ನಾವು ಮೂರು ಬಿಟ್ಟಕಾರ್ಯಕ್ರಮವೆಂದು ಹೇಳಬೇಕಾಗುತ್ತದೆ. ಜನತಾ ಸರ್ಕಾರ ಖಂಡಿತ ಈ ನೀತಿಯನ್ನು ಬಿಡಬೇಕು ಆದರೆ ಈ ಮೂರು ಬಿಟ್ಟದ್ದು ಎಂದರೆ ಅವು ಬಹಳ ಕನಿಷ್ಠ ಶಬ್ದಗಳಾದ್ದರಿಂದ ಅದನ್ನು ಈ ಸದನದಲ್ಲಿ ಹೇಳುವುದು ಸರಿಯಿರುವುದಿಲ್ಲ. ಮತ್ತೆ ಅಧ್ಯಕ್ಷರ ಮುಂದೆ ಹೇಳುವುದು ಒಳ್ಳೆಯದಲ್ಲವೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಈ ಕಾರ್ಯಕ್ರಮವನ್ನು ಈ ಸರ್ಕಾರ ಬಿಡಬೇಕು. ಸಾಕಷ್ಟು ಜನ ಆ ಕಡೆಯಿಂದ ಮತ್ತು ಈ ಕಡೆಯಿಂದ ಗೆದ್ದಿದ್ದಾರೆ. ಇದರಿಂದ ಸಾಕಷ್ಟು ಅತ್ಯಾಚಾರಕ್ಕೆ ಅವಕಾಶ ಆಗುತ್ತದೆ. ಮತ್ತೆ ಈ ಮಂಡಲಪಂಚಾಯತಿಯಲ್ಲಿ ಹಿಂದುಳಿದವರಿಗೆ ಬೆಂಬಲ ಕೊಡುತ್ತೇವೆಂದು ಹೇಳಿದರು. ಆದರೆ ಇಲ್ಲಿ ಹಿಂದುಳಿದವರು ಗೆದ್ದು ಬಂದಿದ್ದರೆ ಅವರಿಂದ ರಾಜೀನಾಮೆ ಕೊಡಿಸತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಅನೇಕ ಕಡೇ ರಾಜೀನಾಮೆಯನ್ನು ಕೊಡಿಸಿದ್ದಾರೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ ಹೊನ್ನಾಳಿ ತಾಲೂಕಿನಲ್ಲಿ ಹಿಂದುಳಿದ ಜನಾಂಗವನ್ನು ಗೆದ್ದು ಬಂದಿದ್ದರಿಂದ ಅವನಿಗೆ ನೀನು ನಮ್ಮ ಎದುರಿಗೆ ಗೆದ್ದುಬರುವುದೆಂದರೇನು ? ನೀನು ತಕ್ಷಣವೇ ರಾಜೀನಾಮೆ ಕೊಡಬೇಕು ಇಲ್ಲದಿದ್ದರೆ ನಿನ್ನ ಕಾಲು ತೆಗೆಸುತ್ತೇವೆ, ನಿನ್ನ ಕೈ ತೆಗೆಸುತ್ತೇವೆ, ನಿನ್ನ ಕಣ್ಣು ತೆಗೆಸುತ್ತೇವೆ, ನಿನ್ನ ಕುತ್ತಿಗೆ ತೆಗೆಸುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ. ಆದ್ದರಿಂದ ಅವನು ರಾಜೀನಾಮೆ ಕೊಟ್ಟಿದ್ದಾನೆ ರಾಜ್ಯದಲ್ಲಿ ಅನೇಕ ಕಡೇ ಈ ರೀತಿ ನಡೆದಿದೆ. ಅವನು ತನ್ನ ರಾಜೀನಾಮೆಯನ್ನು ತಹಸೀಲ್ದಾರರಿಗೆ ಕೊಟ್ಟಿದ್ದಾನೆ. ಅದಕ್ಕೆ ಶಾಸಕರ ಬಲ, ಬೆಂಬಲ ಮತ್ತು ಬೆದರಿಕೆ ಇದೆಯೆಂದು ತಿಳಿದಿದೆ ಅದನ್ನು ಅವನು ನನ್ನ ಹತ್ತಿರ ತಂದ ಮತ್ತೆ ತಹಸೀಲ್ದಾರರಿಗೆ ಅವನು ತನ್ನ ರಾಜೀನಾಮೆಯನ್ನು ಕೊಟ್ಟಾಗ ಅವರು ನನಗೆ ನೋಟಿಫಿಕೇಷನ್ ಬಂದಿಲ್ಲ ಎಂದು ಹೇಳಿದರು.

(ಗೊಂದಲ)

ಶ್ರೀ ಜಿ. ಬಸವಣ್ಣಪ್ಪ.—ಇದು ಸತ್ಯಕ್ಕೆ ದೂರವಾದುದು. ಇದನ್ನು ನೀವು ಬರೆದುಕೊಡಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಅವರು ಹೇಳಿದ್ದನ್ನು ಸರಿಯಲ್ಲವೆಂದು ಹೇಳುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ನೀವು ಅವರಿಗೆ ಬರೆದುಕೊಡಿ. ಯಾವ ತಾಲೂಕಿನಲ್ಲಿ, ಯಾವ ಹಳ್ಳಿಯಲ್ಲಿ, ಯಾವ ಮೆಂಬರ್‌ಗೆ, ಯಾರು ಬೆದರಿಕೆ ಹಾಕಿದರು ಅದನ್ನು ಬರೆದುಕೊಡಿ.

(ಗೊಂದಲ)

ಅಧ್ಯಕ್ಷರು.—ನೀವು ಬರೆದುಕೊಡಿರಿ.

(ಗೊಂದಲ)

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ನಾವು ಬರೆದುಕೊಟ್ಟರೆ, ಅವರು ಯಾವ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ? ಬಿ.ಡಿ.ಎ.ಗೆ ಬರೆದುಕೊಟ್ಟಿದ್ದಕ್ಕೆ ಏನು ಮಾಡಿದರು ? ತಾವು ಇದರ ಬಗ್ಗೆ ಏನು ಮಾಡುತ್ತೀರೆಂದು ಹೇಳುತ್ತೀರಾ ?

(ಗೊಂದಲ)

ಶ್ರೀ ಜಿ. ಬಸವಣ್ಣಪ್ಪ.—ಅಧ್ಯಕ್ಷರೇ, ನಾವು ಅದಕ್ಕೆ ಬೇಕಾದಂಥ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಅಲ್ಲರತಕ್ಕಂಥ ದೊಡ್ಡ ಮನುಷ್ಯರು ಹಿಂದುಳಿದ ಜನಾಂಗದವರು ಗೆದ್ದು ಬಂದರೆ ತಮಗೆ ಮತ್ತು ತಮ್ಮ ಅಂತಸ್ತಿಗೆ ಧಕ್ಕೆ ಬರುತ್ತದೆಂದು ಅವರಿಂದ ರಾಜೀನಾಮೆ ಕೊಡಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ಅವರು ಹೇಳುತ್ತಿರುವುದು ಅದೇ ಯಾರು ಹೇಳಿದರು, ಯಾರಿಗೆ ರಾಜೀನಾಮೆ ಕೊಡಿಸಿದರು ಬರೆದುಕೊಡಿ ಎಂದು ?

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ಈ ಸದನದಲ್ಲಿ ಹೇಳಿದ್ದನ್ನೆಲ್ಲಾ ಬರೆದುಕೊಡುವುದಕ್ಕೆ ಸಾಧ್ಯವೇ ? ನಾವು ಮಾಹಿತಿಗಳನ್ನು ಕೊಟ್ಟಿದ್ದೇವೆ. ಅವರಿಗೆ ಬರೆದುಕೊಡುವುದಕ್ಕೆ ನಾವು ಗುಮಾಸ್ತರ ಕೆಲಸ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ನೀವು ಬರೆದು ಕೊಡಿ. ಅವರು ಎನ್‌ಕ್ವಯರಿ ಮಾಡುತ್ತಾರೆ.

(ಗೊಂದಲ)

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ನಾವು ಬೇಕಾದರೆ ಛಾಪ ಕಾಗದದಲ್ಲಿ ಬರೆದುಕೊಡುತ್ತೇವೆ. ನಾವು ಬರೆದುಕೊಟ್ಟರೆ ಅದಕ್ಕೆ ಹೊಣೆಗಾರರಾದವರು ರಾಜೀನಾಮೆ ಕೊಡುತ್ತಾರೆಯೋ ? ಅಥವಾ ಸರ್ಕಾರ ರಾಜೀನಾಮೆ ಕೊಡುತ್ತದೆಯೋ ? ಎಂದು ನಾನು ಕೇಳುತ್ತೇನೆ.

(ಗೊಂದಲ)

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ನಾವು ಅದಕ್ಕೆ ಬೇಕಾದಂಥ ಕ್ರಮ ತೆಗೆದು ಕೊಳ್ಳುತ್ತೇವೆ. ಯಾರು ಈ ರೀತಿ ಎಲೆಕ್ಷನ್‌ನಲ್ಲಿ ಗೆದ್ದು ಬಂದ ಮೇಲೆ ಉದ್ಧಟತನದಿಂದ ಅವರಿಂದ ರಾಜೀನಾಮೆ ಕೊಡಿಸತಕ್ಕ ಪ್ರಯತ್ನ ನಡೆದಿದ್ದರೆ ಅದರ ಬಗ್ಗೆ ನಾವು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮ್ಮಿಂದ ನಡೆದಿಲ್ಲವೆಂದು ನಮಗೆ ಗೊತ್ತು, ಆದರೆ ಅಲ್ಲಿ ಇರತಕ್ಕಂಥ ಪುಢಾರಿಗಳು ಮಾಡತಕ್ಕಂಥ ಕೆಲಸ ಇದು.

(ಗೊಂದಲ)

ಅಧ್ಯಕ್ಷರು.—ಅವರ ಹೆಸರನ್ನೆ ಬರೆದು ಕೊಡಿ ?

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಒಂದು ಮಾತು ಈ ಸದನದಲ್ಲಿ ಯಾವುದೇ ಸದಸ್ಯರು ಮಾತನಾಡಿದರೆ until & unless it is true otherwise how he is responsible. ನಾವು ಇಲ್ಲಿ ಆಡುವಂತಹ ಶಬ್ದ ಬಹಳ ಗಹನವಾದುದು. ಅದನ್ನು ತಾವು ಬರೆದುಕೊಡಿ ಎಂದು ಕೇಳಬಾರದು ಏಕೆಂದರೆ......

(ಗೊಂದಲ)

ಅಧ್ಯಕ್ಷರು.—ಮಾನ್ಯ ಪಾಟೀಲ್‌ರೇ ನಮ್ಮ ಮಾತನ್ನು ಸ್ವಲ್ಪ ಕೇಳಿ. ತಾವು ಆಗ ಇಲ್ಲಿ ಇರಲಿಲ್ಲ. ಅವರು ಏನು ಹೇಳಿದರು ಎಂದು ತಮಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಯಾವ ಸಂದರ್ಭದಲ್ಲಿಯೂ ಬರೆದುಕೊಡಿ ಎಂದು ಕೇಳಬಾರದು. ಇಲ್ಲಿ ನಾವು ಏನು ಮಾತನಾಡುತ್ತೇವೆಯೋ ಅದಕ್ಕೆ ನಾವು ಬೈಂಡ್ ಆಗಿರುತ್ತೇವೆ. ಈ ಸದನದಲ್ಲಿ ನಾವು ಯಾವುದೇ ರೂಲ್ಸ್‌ಗೆ ವಿರುದ್ಧವಾಗಿ ನಡೆದುಕೊಂಡರೆ, ನೀವು ಪ್ರಿವಿಲೇಜ್ ಮಾಡಿ ನಮ್ಮನ್ನು ಹೊರಕ್ಕೆ ಹಾಕಬಹುದು. ನಮಗೆ ಇಲ್ಲಿ ಏನು ಹಕ್ಕು ಇದೆ ಅದನ್ನು ಅರಿತು ನಾವು ಇಲ್ಲಿ ಮಾತನಾಡುತ್ತೇವೆ. ಕೆಲವರಿಗೆ ಅರಿವು ಇಲ್ಲದೆ ಇರತಕ್ಕಂಥವರಿಗೆ ಬರೆದು ಕೊಡುತ್ತೇವೆ. ನಾವು ಈ ಮನೆಯಲ್ಲಿ ಒಬ್ಬ ಅಧಿಕಾರಿಯನ್ನು ಲಂಚಕೋರ ಎಂದು ಹೇಳುವುದಕ್ಕೆ ನಮಗೆ ಅಧಿಕಾರ ಇದೆ. ಆದರೆ ಅದು ತಪ್ಪು ಎಂದು ಹೇಳಿ ನಮ್ಮ ಈ ಸದನದಿಂದ ಹೊರಕ್ಕೆ ಹಾಕುವ ಹಾಗೂ ನಮ್ಮನ್ನು ಮೆಂಬರ್‌ಶಿಪ್‌ನಿಂದಲೇ ರದ್ದು ಮಾಡುವ ಅಧಿಕಾರ ತಮಗೆ ಇದೆ. ಅಂದರೆ ಸ್ಪೀಕರ್‌ಗೆ ಈ ಅಧಿಕಾರ ಇದೆ. ಆದ್ದರಿಂದ ಯಾರೇ ಆಗಲಿ ಸದಸ್ಯರು ಮಾತನಾಡುವಾಗ ಈ ಸದನದಲ್ಲಿಯಾಗಲೀ, ಅಥವಾ ಆ ಸದನದಲ್ಲೇ ಆಗಲೀ ಬರೆದು ಕೊಡಿ ಎಂದು ಕೇಳುವುದಕ್ಕೆ ಬದಲಾಗಿ ಅವರು ಏನು ಹೇಳುತ್ತಿದ್ದಾರೆ ಅದರ ಒಂದು ಕಾಪಿಯನ್ನು ತರಿಸಿಕೊಂಡು ಅದರ ಬಗ್ಗೆ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು. ಅವರು ಹೇಳುತ್ತಿರುವುದು ಹಿಂದುಳಿದವರು ಆರಿಸಿ ಬಂದಾಗ ಮುಂದುವರಿದಂತವರ ರಾಜೀನಾಮೆ ಕೊಡಿ ಎಂದು ಹೇಳಿದ್ದಾರೆ, ಇಲ್ಲದಿದ್ದರೆ ನಿಮ್ಮ ಕುತ್ತಿಗೆ, ಕಾಲು, ಕಣ್ಣು ತೆಗೆಸುತ್ತೇವೆಂದು ಯಾರು ಎದರಿಸಿದರು ಅವರು ಹೆಸರನ್ನು ಹೇಳಿ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಬರೆದು ಕೊಡಿ ಎಂದು ಅವರು ಕೇಳಿದ್ದಾರೆ ತಮ್ಮ ಎದುರಿಗೆ ಅವರು ಬರೆದು ಕೊಡಿ ಎಂದು ಕೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಅವರಿಗೆ ಬರೆದುಕೊಡುವುದು ಬೇಡ. ಅವರ ಹೆಸರನ್ನು ಹೇಳಿದರೆ ಸಾಕು. ಯಾರು, ಯಾವ ತಾಲ್ಲೂಕಿನಲ್ಲಿ ಯಾರಿಗೆ ಬೆದರಿಕೆ ಹಾಕಿದರು ಎಂದು ಹೇಳಿದರೆ ಅವರೇನು ಕೆಲಸದಿಂದ ರಿಟೈರ್ಡ್ ಆಗುತ್ತಾರೆಯೆ ?

(ಗೊಂದಲ)

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ. ಹೆಚ್. ಪಾಟೀಲ್‌ರವರು ಸಭೆಯ ಗಮನವನ್ನು ಸೆಳೆದಿದ್ದಾರೆ. ನಾನು ಅದೇ ಜಿಲ್ಲೆಯವನೇ, ಹೊನ್ನಾಳ್ಳಿ ತಾಲ್ಲೂಕ್ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಹೀಗೆ ಹಿಂದುಳಿದವರು ಗೆದ್ದು ಬಂದಿದ್ದರೂ ಕೂಡ ಅವರಿಂದ ರಾಜೀನಾಮೆ ಕೊಡಿಸತಕ್ಕಂಥದ್ದು ಭಾರತ ದೇಶದ, ಕರ್ನಾಟಕ ರಾಜ್ಯದ ಶಿವಮೊಗ್ಗ ತಾಲ್ಲೂಕಿನ ಹೊನ್ನಾಳಿಯಲ್ಲಿ ನಡೆದಿದೆ. ಮತ್ತೆ ಇವರು ಕಾಂಗ್ರೆಸ್ಸ್ ಪಾರ್ಟಿಯಿಂದ ಗೆದ್ದು ಬಂದಿದ್ದಾರೆ. ಅವರು ನೀನು ಕಾಂಗ್ರೆಸ್ ಪಾರ್ಟಿಯಿಂದ ಗೆದ್ದು ಬಂದಿರುವುದು ಬಹಳ ದೊಡ್ಡ ಅಪರಾಧವೆಂದು ಹೆದರಿಕೆ ಹಾಕಿದರು. ಆಗ ನಾನು ಮತ್ತು ಶಿವಮೊಗ್ಗ ಜಿಲ್ಲೆಯ ಶಾಸಕರು, ಮತ್ತು ಅದೇ ಕ್ಷೇತ್ರದ ಒಬ್ಬ ಪಾರ್ಲಿಮೆಂಟ್ ಸದಸ್ಯರೂ ಕೂಡ ಅವನನ್ನು ಕರೆದುಕೊಂಡು ಹೋಗಿ ಶಿವಮೊಗ್ಗ ಜಿಲ್ಲೆಯ ಶಾಸಕರು, ಮತ್ತು ಅದೇ ಕ್ಷೇತ್ರದ ಒಬ್ಬ ಪಾರ್ಲಿಮೆಂಟ್ ಸದಸ್ಯರೂ ಕೂಡ ಅವನನ್ನು ಕರೆದುಕೊಂಡು ಹೋಗಿ ಶಿವಮೊಗ್ಗ ಜಿಲ್ಲೆಯ ಎಸ್.ಪಿ.ಯವರ ಹತ್ತಿರ ಒಂದು ಕಂಪ್ಲೇಂಟ್‌ನ್ನು ಕೊಟ್ಟಿದ್ದೇವೆ. ಇನ್ನೂ ಹಲವಾರು ಕಡೆ ಈ ರೀತಿ ನಡೆದಿದೆ. ಇದನ್ನು ರುಜುವಾತು ಮಾಡಬೇಕೆಂದರೆ ಒಂದು ಸಮಿತಿಯನ್ನು ರಚನೆ ಮಾಡಿದರೆ ಇದರಲ್ಲಿ ಸತ್ಯಾಂಶ ಬಹಳಷ್ಟು ಹೊರಗಡೆ ಬರುತ್ತದೆ. ಉಸಿರು ಬಿಟ್ಟರೆ ಜೀವ ತೆಗೆಯುತ್ತೇವೆಂದು ಬೆದರಿಕೆ ಹಾಕಿರುವುದರಿಂದ ಅಲ್ಲಿ ಯಾರೂ ಏನು ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ಹಾಗಿದ್ದರೆ ಒಂದು ಪಿಟಿಷನ್ ಕಮಿಟಿಗೆ ಅರ್ಜಿ ಕೊಡಿರಿ. ನಾಳೆಯೇ ಅರ್ಜಿಯನ್ನು ಕೊಡಿಸಿ ಯಾರು ಬೇಡವೆಂದವರು.

(ಗೊಂದಲ)

† ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ನಾನು ಮತ್ತು ಶಿವಮೊಗ್ಗ ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರಾಗಿರತಕ್ಕ ಶ್ರೀ ಟಿ. ವಿ. ಚಂದ್ರಶೇಖರಪ್ಪನವರು ಎಸ್.ಪಿ.ಯವರ ಆಫೀಸ್‌ಗೆ ಹೋಗಿ ಕಂಪ್ಲೇಂಟ್ ಕೊಟ್ಟಿದ್ದೇವೆ. ಆದರೆ ಅಷ್ಟರಲ್ಲಿ ಆತ ತಹಸೀಲ್ದಾರರ ಬಳಿ ಹೋಗಿ ರೆಸಿಗ್‌ನೇಷನ್ ಕೊಟ್ಟುಬಿಟ್ಟ. ನಾನು ಬದುಕಿದ್ದರೆ ಸಾಕು ಆ ಪಂಚಾಯತ್‌ಗಿರಿಯೂ ಬೇಡ, ಚೇರ್‌ಮೆನ್‌ಗಿರಿಯೂ ಬೇಡವೆಂದು ರಾಜೀನಾಮೆ ಕೊಟ್ಟುಬಿಟ್ಟ. ಆದರೆ ಅಲ್ಲಿಯ ತಹಸೀಲ್ದಾರರು ಹೆದರಿಕೊಂಡು ಇನ್ನೂ ನೋಟಿಫಿಕೇಷನ್ ಆಗಿಲ್ಲ, ನಾನು ರೆಸಿಗ್‌ನೇಷನ್ ತೆಗೆದುಕೊಳ್ಳುವುದಿಲ್ಲವೆಂದು ಅದನ್ನು ಎಸ್.ಪಿ.ಯವರ ಹತ್ತಿರ ಕೊಡುವಂತೆ ಹೇಳಿದರು. ಆಮೇಲೆ ಅವನು ಅದನ್ನು ಜಿಲ್ಲಾಧಿಕಾರಿಗಳ ಬಳಿ ತೆಗೆದುಕೊಂಡು ಹೋಗಿ ಕೊಟ್ಟನೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಪ್ರಕರಣ ನಡೆದಿದ್ದಂತೂ ಸತ್ಯ. ಹೀಗೆ ಹಿಂದುಳಿದವರ ಹೆಸರಿನಲ್ಲಿ ನಾಮಕರಣ ಮಾಡಿ ಮತ್ತೆ ಅಧಿಕಾರವನ್ನು ಪಡೆಯುವಂಥ ಕೆಲಸ ಬಹಳ ಹೇಯವಾದುದಾಗಿದೆ. ಇದು ಅಷ್ಟು ಸರಿಯಲ್ಲ. ಪಕ್ಷದ ಪತಿಯಿಂದ ನಾಮಕರಣ ಮಾಡಿದ್ದಾರೆ. ನ್ಯಾಯ ಬೆಲೆ ಅಂಗಡಿಗಳಲ್ಲಿ ಇರತಕ್ಕಂಥವರೂ ಜನತಾ ಪಕ್ಷದವರು. ಮತ್ತೆ ಈ ಜನತಾ ಪಕ್ಷದವರಿಗೆ ಒಂದೇ ಮನೆಯಲ್ಲಿ ಮೂರು ಜನರಿಗೆ ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟಿದ್ದಾರೆ. ಅದೇರೀತಿ ಕಾರ್ಡ್‌ನ್ನು ಟಿ. ವಿ. ಇದ್ದವರಿಗೆ, ಟಿಲ್ಲರ್ ಇದ್ದವರಿಗೆ, ಜನತಾ ಪಕ್ಷದ ಹೆಸರು ಹೇಳಿದವರಿಗೆಲ್ಲ ಕೊಟ್ಟಿದ್ದಾರೆ. ಈಗಲೂ ಕೂಡ ಒಂದೆರಡು ಕಡಿಮೆ ಇರತಕ್ಕಂಥ ಸದಸ್ಯರೂ ಏನು ಇದ್ದಾರೆ ಅಥವಾ ಸಮಾ ಸಮಾ ಮಂದಿ ಇದ್ದಾರೆ ಅಂತಹವರಿಗೆ ಊರಿನಲ್ಲಿ ಅವಕಾಶ ಕಲ್ಪಿಸಿಕೊಡಬೇಕು. ಇಲ್ಲದಿದ್ದರೆ ಇದರಿಂದ ರಾಜಕೀಯ ತೇಜೋವಧೆ ಆಗುವುದಕ್ಕೆ ಸಾಧ್ಯವುಂಟು, ಆದುದರಿಂದ ತಾವು ಈ ವಿಷಯವನ್ನು ಕೈಬಿಡಬೇಕೆಂದು ನಾನು ಹೇಳುತ್ತೇನೆ. ಇದನ್ನು ನೀವು ಮಾಡಿಯೇ ಮಾಡುತ್ತೇವೆಂದರೆ, ನಿಮ್ಮ ಪಾಪವನ್ನು ಆ ನಾಮಕರಣ ಮಾಡುವುದರ ಬಗ್ಗೆ ಸೇರಿಸುತ್ತೇವೆಂದರೆ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ನಾವು ಎಷ್ಟೇ ಹೇಳಿದರೂ ಇದರ ಬಗ್ಗೆ ಈಗಾಗಲೇ ಮಂಕಿತ್ತಾಯವಾಗಿವೆ, ಆದುದರಿಂದ ಇದರ

ಬಗ್ಗೆ ನಮ್ಮ ಆಕ್ಷೇಪಣೆ ಏನೂ ಇಲ್ಲ. ಆದರೆ ನಾವು ಆಕ್ಷೇಪಣೆ ಮಾಡುವುದು ಏತಕ್ಕಾಗಿ ಎಂದರೆ, ತತ್ವದ ಪ್ರಕಾರ, ಸಿದ್ಧಾಂತದ ಪ್ರಕಾರ ಇದು ಕೂಡದು ಎಂದು.

ಇನ್ನು ನಾಮನಿರ್ದೇಶನ ಮಾಡುವ ವಿಚಾರದಲ್ಲಿ ಹೇಳಬೇಕಾದರೆ, ಆರ್ಟಿಸಾನ್ಸ್ ಎಂದು ಹೇಳುವ ಸ್ಲೋಗನ್ಸ್ ಏನು ಇದೆ, ಇದರ ಬಗ್ಗೆ ಈಗಾಗಲೇ ಹೇಳಿದ್ದಾರೆ. ನಿಮ್ಮ ಒಂದೇ ಒಂದು ದಾರಿ ನಿಮಗೆ ಯಾವ ರೀತಿಯಾಗಿ ಅನುಕೂಲವಾಗಿ ಕಂಡು ಬರುತ್ತದೆ ಅಂದರೆ, ನಿಮ್ಮ ಪ್ರಕಾರ ನೇಗಿಲು ಹಿಡಿಯುವವನೂ ಸಹ ಆರ್ಟಿಸಾನ್ಸ್ ಆಗುತ್ತಾನೆ, ಮರಮುಟ್ಟು ಕೆಲಸ ಮಾಡುವವರೂ ಆರ್ಟಿಸಾನ್ಸ್ ಆಗುತ್ತಾರೆ, ಕ್ಷೌರಿಕರನ್ನು ಸಹ ನಾಮಕರಣ ಮಾಡಬೇಕು ಎಂದರೆ ಅವರೂ ಆರ್ಟಿಸಾನ್ಸ್ ಆಗುತ್ತಾರೆ. ಎಲ್ಲಿ ಜನತಾ ಪಾರ್ಟಿಯವರು ಇದ್ದಾರೆ ಅವರನ್ನೇ ಮಾಡಿಕೊಳ್ಳಬೇಕು ಎಂದರೆ ಹೇಗಾದರೂ ಮಾಡಿಕೊಳ್ಳಬಹುದು. ಏತಕ್ಕೆಂದರೆ ನಿಮಗೆ ಬಹುಮತ ಇದೆ, ನೀವು 150 ಜನರು ಇದ್ದೀರಿ, ನಮ್ಮವರು ಎಲ್ಲೆಲ್ಲಿ ಇಲ್ಲ ಅಲ್ಲೆಲ್ಲಾ ನೀವೇ ನಾಮಕರಣ ಮಾಡಿಕೊಳ್ಳಬಹುದು. ಆದರೆ ನೀವು ಇದರಲ್ಲಿ ಒಂದು ಶಬ್ದ ಏನು ಸೇರಿಸಿದ್ದೀರಿ ಅದು ಶೋಭೆ ತರತಕ್ಕಂಥಾದ್ದಲ್ಲ. ನಮಗೆ ಭವಿಷ್ಯ ಇದೆ ನಿಮ್ಮ ಅನುಕೂಲಕ್ಕೋಸ್ಕರವಾಗಿ ಇದನ್ನೆಲ್ಲಾ ಮಾಡಿಕೊಂಡಿದ್ದೀರಿ ಎಂದು ಹೇಳುತ್ತೇನೆ. ಬಹುಶಃ ಇದು ನಿಮಗೆ ಮುಂಚಿತವಾಗಿ ಹೊಳೆಯಲಿಲ್ಲ ಎಂದು ಕಾಣುತ್ತದೆ. ನಿಮಗೆ ಮುಂಚಿತವಾಗಿ ಇದರ ಬಗ್ಗೆ ಏನಾದರೂ ಹೊಳೆದಿದ್ದರೆ ಆವಾಗಲೇ ಮಾಡುತ್ತಿದ್ದರೋ ಏನೋ ? ಈಗ ಸೌತ್ ಕೆನರಾದಲ್ಲಿ, ಕೊಡಗಿನಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದ್ದರೂ ಸಹ ನಾಮಿನೇಷನ್ ಮಾಡುವುದಾದರೆ ಮಾಡಿಕೊಳ್ಳಬಹುದು. ಈಗ ಚಿತ್ರದುರ್ಗದ್ದು ಕೋರ್ಟಿನಲ್ಲಿದೆ. ಈಗ ಬೆಂಗಳೂರಿನಲ್ಲಿರುವ ಮಂತ್ರಿಗಳು ಒಂದು ಆರ್ಡರ್‌ನ್ನು ತೆಗೆದುಕೊಂಡು ಹಳ್ಳಿಯಲ್ಲಿ ಬಂದು ಕೆಲಸ ಮಾಡಿದರೆ ಅದು ಕೆಟ್ಟ ಕೆಲಸವಾಗುತ್ತದೆ, ಅದು ಫೋರ್ಜರಿಯಾಗುತ್ತದೆ, ಆ ಜನರು ಮಾಡಬೇಕಾದ ಕೆಲಸವನ್ನು ಇವರು ಮಾಡಬಾರದು. ನಿಮಗೆ ಅಧಿಕಾರ ಇರಲಿ ಇಲ್ಲದೇ ಇರಲಿ, ಇಂಥಾ ಕೆಲಸವನ್ನು ಸರ್ಕಾರ ಮಾಡಬಾರದು. ನಾವೇ ಆಗಲಿ, ನೀವೆ ಆಗಲಿ ಈ ನಾಮಕರಣ ಮಾಡುವುದನ್ನು ಮಾಡಬಾರದು. ನಾವು ಇದ್ದಾಗ ಈ ರೀತಿಯಾಗಿ ನಾಮಕರಣ ಮಾಡಿರಲಿಲ್ಲ. ಈ ಮಾತನ್ನು ನಾನು ಪದೇ ಪದೇ ಮಾನ್ಯ ಮಂತ್ರಿಗಳಿಗೆ ಹೇಳುತ್ತಾ ಇದ್ದೇನೆ. ನಾವು ಇದ್ದಾಗ ಏತಕ್ಕಾಗಿ ಎಲ್ಲಿಗಾಗಿ ನಾಮಕರಣ ಮಾಡುತ್ತಿದ್ದೆವು ಎಂದರೆ, ಕೆಲವು ಸೊಸೈಟಿಗಳಿಗೆ, ಕೆಲವು ಸಂಸ್ಥೆಗಳಿಗೆ ಹೆಚ್ಚು ಬಂಡವಾಳ ಎಲ್ಲಿ ಇರುತ್ತದೋ ಉದಾಹರಣೆಗೆ ಸಕ್ಕರೆ ಕಾರ್ಖಾನೆಗೆ ಇನ್ನು ಬೇರೆ ಬೇರೆ, ಯಾವುದರಲ್ಲಿ ಸರ್ಕಾರೀ ಬಂಡವಾಳ ಇರುತ್ತದೋ ಅದರ ಒಂದು ಭದ್ರತೆಗೋಸ್ಕರವಾಗಿ ನಾಮಕರಣ ಮಾಡುತ್ತಿದ್ದೆವು. ಆದರೆ ಎಲೆಕ್ಷನ್ ಆಗೀತಕ್ಕಂಥಾ ಮಂಡಲ ಪಂಚಾಯಿತಿಗಳಿಗೆ, ಜಿಲ್ಲಾ ಪರಿಷತ್‌ಗಳಿಗೆ ಈ ಕೆಲಸ ಮಾಡುವುದು ಎಂದರೆ ಇದು ಹೇಯವಾದುದು. ಈ ಕೆಲಸ ಮಾಡಬಾರದು. ಇದಕ್ಕೆ ನಾಮಕರಣ ಮಾಡುವ ಪದ್ಧತಿಯನ್ನು ನಿಲ್ಲಿಸಬೇಕು. ಈಗ ಡಿ. ಎಲ್. ಆರ್. ಸಿ., ಆರ್. ಟಿ. ಒ, ಭೂ ಸುಧಾರಣಾ ಸಮಿತಿಗಳು ಮತ್ತು ಲ್ಯಾಂಡ್ ಟ್ರಿಬ್ಯೂನಲ್ ಮೆಂಬರ್ ಆಗಿ ಯಾವ್ಯಾವುದಕ್ಕೆ ನಾಮಕರಣ ಮಾಡಿದ್ದೀರಿ, ಅಲ್ಲೂ ಕೂಡ ಭ್ರಷ್ಟಾಚಾರ ನಡೆದಿದೆ. ಅದು ರಂಜುಮಾತಾಗಿದೆ. ಎಲ್ಲರಿಗೂ ಗೊತ್ತಿರುವ ಹಾಗೆ ಈಗ ಡಿ. ಎಲ್. ಆರ್. ಸಿ ಗೆ ತಡೆ ತಂದಿದ್ದೀರಿ. ನಮ್ಮವರನ್ನು ಇದರ ಬಗ್ಗೆ ದೂರ ಇಟ್ಟಿದ್ದರೂ ಕೂಡ, ಅಲ್ಲಿ ಒಂದೇ ಪಕ್ಷದವರು ನಿಮ್ಮವರೇ ಇದ್ದರೂ ಕೂಡ ಅದರಲ್ಲಿ ಭ್ರಷ್ಟಾಚಾರ ನಡೆದಿದೆ. ಈ ಮಾತು ಜನರಿಗೆ ಹೇಳುವುದಕ್ಕೆ ಕೂಗಾಡುವುದಕ್ಕೆ ನಿಮ್ಮಿಂದಲೇ ಉತ್ತರ ಸಿಕ್ಕಿತು. ಡಿ. ಎಲ್. ಆರ್. ಸಿ ಯಲ್ಲಿ ಮೋಸ ನಡೆದಿದೆ. ಇಲ್ಲಿ ನಿಮ್ಮ ಪಾರ್ಟಿಯವರು ಇದ್ದರೂ ಹೀಗಾಗಿದೆ ಎಂದು ಜನರು ಹೇಳಿಕೊಳ್ಳುತ್ತಿದ್ದಾರೆ. ಒಂದು ಮಾತು ಹೇಳುತ್ತೇನೆ ಏನೆಂದರೆ ಶ್ರೀಮಾನ್ ದೇವರಾಜು ಅರಸುರವರು ಇದ್ದಾಗ ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ಏನು ರಚನೆ ಮಾಡಿದರು ಅದರಿಂದಾಗಿ ರೈತರಿಗೆ ಆ ಜಮೀನುಗಳು ದಕ್ಕಿತು. ಅಂಥಾದ್ದು ಈವೊತ್ತಿನ ದಿವಸ ನೋಡಿದರೆ ಈ ಬಡವರಿಗೆ, ಗೇಣಿದಾರರಿಗೆ ಈವೊತ್ತು ಏನು ಭೂಮಿ ಇದೆಯೋ ಅದೆಲ್ಲಾ ಪೂರ್ಣವಾಗಿ ಕೈಬಿಟ್ಟು ಹೋಗುವ ಸಂದರ್ಭ ಇದೆ. ಅದಕ್ಕೆ ಸರಿಯಾಗಿ ದಾಖಲೆಗಳನ್ನು ಇಡದೇ ಹೋದರೆ ಈವೊತ್ತು ಅವನು ಭೂಮಿಯ ಒಡೆಯ ಏನಾಗಿದ್ದಾನೋ ಅದು ಅವನ ಕೈಬಿಟ್ಟು ಹೋಗುತ್ತದೆ. ನೀವು ಜನತಾ ಪಾರ್ಟಿ ಕಾರ್ಯಕರ್ತರಿಗೆ ಅನುಕೂಲ ಮಾಡಿಕೊಡುತ್ತೇವೆಂದರೆ ಮಾಡಿಕೊಡಿ. ನೀವು ಅವರಿಗೆ ಏನೇನು ಅನುಕೂಲತೆ ಮಾಡಿಕೊಟ್ಟಿದ್ದೀರಿ ಅನ್ನುವುದಕ್ಕೆ ನಮ್ಮಲ್ಲಿ

ಸಾಕಷ್ಟು ದಾಖಲಾತುಗಳಿವೆ. ಬೇಕಾದರೆ ಕೊಡುತ್ತೇನೆ, ಅವರ ಹೆಸರೂ ಸಹ ನಮ್ಮಲ್ಲಿದೆ, ಬೇಕಾದರೆ ಕೊಡುತ್ತೇನೆ.

ಶ್ರೀ ರಮೇಶ್ ಕುಮಾರ್.— ಮಾನ್ಯ ಸದಸ್ಯರು ಇಲ್ಲಿ ಮನಸ್ಸಿಗೆ ಬಂದಂತೆ ಮಾತನಾಡುವುದು ಬೇಡ. ನಾಲಿಗೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳದೆ ರೈಲು ಬಿಡುತ್ತಾ ಇರುವ ಹಾಗೆ ನೀವು ಮಾತನಾಡುತ್ತಾ ಇರುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ರಾಮಪ್ಪ.— ಭ್ರಷ್ಟಾಚಾರವನ್ನು ತಡೆಗಟ್ಟುವುದಕ್ಕೆ ಇವರ ಕೈಯಲ್ಲಿ ಆಗುತ್ತಿಲ್ಲ.

(ಗೊಂದಲ)

ಶ್ರೀ ರಮೇಶ್ ಕುಮಾರ್.— ಯಾರು ಲಂಚ ತೆಗೆದುಕೊಂಡಿದ್ದಾರೆ ಎಂದು ಹೆಸರು ಹೇಳಲಿ. ಅದನ್ನು ಬಿಟ್ಟು ಜನತಾ ಪಾರ್ಟಿಯವರು ಎಂದು ಹೇಳಿದರೆ ಹೇಗೆ ?

(ಗೊಂದಲ)

ಶ್ರೀ ಎಂ. ರಾಮಪ್ಪ.— ಮಾನ್ಯ ಅಧ್ಯಕ್ಷರೇ, ತಾವು ಇಲ್ಲಿ ಒಂದು ಸಲಕ್ಕೆ ಒಬ್ಬರೇ ಮಾತನಾಡ ಬೇಕೆಂದು ಹೇಳಿದ್ದೀರಿ. ಆದರೆ ಈಗ ಅವರು ತಮ್ಮ ಆದೇಶದ ಪ್ರಕಾರ ನಡೆದುಕೊಳ್ಳು ತ್ತಿದ್ದಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಒಂದು ವೇಳೆ ಮಾನ್ಯ ಸದಸ್ಯರು ಏನಾದರೂ ತಪ್ಪಾಗಿ ಮಾತನಾಡಿದರೆ. ಅದಕ್ಕೆ ಮಂತ್ರಿಗಳು ಉತ್ತರ ಕೊಡಬೇಕೇ ಹೊರತು ಇವರು ಏತಕ್ಕೆ ಉತ್ತರ ಕೊಡಬೇಕು ?

(ಗೊಂದಲ)

ಶ್ರೀ ಕೆ. ಮಲ್ಲಪ್ಪ.— ಮೊನ್ನೆ ಜಿಲ್ಲಾಪರಿಷತ್ ಸದಸ್ಯರನ್ನು ಮತ್ತು ಮಂಡಲ್ ಪಂಚಾಯತ್ ಸದಸ್ಯರನ್ನು ಬೆಂಗಳೂರಿಗೆ ಕರೆಯಿಸಿದ ಸಂದರ್ಭದಲ್ಲಿ ಇವರು ತಮ್ಮ ಪಕ್ಷದ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿದರು. ತಮ್ಮ ಪಕ್ಷದ ಪ್ರಚಾರಕ್ಕೋಸ್ಕರವಾಗಿ ಆ ಒಂದು ಸಂದರ್ಭವನ್ನು ಉಪಯೋ ಗಿಸಿಕೊಂಡಿದ್ದು ನಾಚಿಕೆಗೇಡಿನ ಕೆಲಸವಲ್ಲವೇ ? ಈಗಲೂ ಸಹ ಅವರು ಕೇವಲ ತಮ್ಮ ಪಕ್ಷದ ಪ್ರಚಾರಕ್ಕಾಗಿ ಈ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಅವರಿಗೆ ಮಾತನಾಡಲು ಅನುಮತಿ ಕೊಟ್ಟಿದ್ದಿರಾ ?

ಅಧ್ಯಕ್ಷರು.— ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹಾಗಿದ್ದರೆ ನಿಮ್ಮ ಅನುಮತಿ ಇಲ್ಲದೆ ಅವರು ಯಾವ ರೀತಿ ಮಾತನಾಡುತ್ತಾರೆ ?

ಅಧ್ಯಕ್ಷರು.—ಇಲ್ಲಿಯವರೆಗೆ ೭ ಜನ ಸದಸ್ಯರು ಮಾತನಾಡಿದರು. ಯಾವ ಒಂದು ತಕರಾರು ಸಹ ಬರಲಿಲ್ಲ. ಆದರೆ ಈಗ ಏತಕ್ಕೆ ಬಂತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅದಕ್ಕೆ ನೀವೇ ಉತ್ತರ ಕೊಡಿ.

ಅಧ್ಯಕ್ಷರು.—ತಾವು ಆ ರೀತಿ ಜನರಲ್ ಆಗಿ ಹೇಳುವುದು ಸರಿಯಲ್ಲ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ವಾಮಿರಾವ್ ಅವರು ಈ ಸದನದ ಸದಸ್ಯರಾಗಿದ್ದಾರೆ. ಆದ್ದರಿಂದ ಅವರು ನಾಮಕರಣ ಸದಸ್ಯರ ಬಗ್ಗೆ ಹೇಳುತ್ತಿದ್ದಾರೆ. ಭೂನ್ಯಾಯ ಮಂಡಲಿಗಳಲ್ಲಿ ಮತ್ತು ಬೇರೆ ಕಡೆಗಳಲ್ಲಿ ಭ್ರಷ್ಟಾಚಾರ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಅವರು ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ಆ ರೀತಿ ಸರ್ಕಾರದ ಗಮನಕ್ಕೆ ತರುವುದು ಅವರ ಹಕ್ಕಾಗಿದೆ. ಆದರೂ ಸಹ ಮಾನ್ಯ ರಮೇಶ್ ಕುಮಾರ್ ಅವರು ಮಧ್ಯೆ ಮಾತನಾಡಿ ಇದಕ್ಕೆ ಸಾಕ್ಷಿ

ಮತ್ತು ಪುರಾವೆ ಎಲ್ಲಿದೆ ಎಂದು ಹೇಳಿ, ಮಾನ್ಯ ಸದಸ್ಯರು ಇಲ್ಲಿ ರೈಲು ಬಿಡುತ್ತಿದ್ದಾರೆಂದು ಹೇಳಿದರು. ಕೆಲವು ಅಧಿಕಾರಿಗಳ ಪ್ರಾಮಾಣಿಕತೆ ಇವರಿಗೆ ಏನು ಗೊತ್ತಿದೆ? ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳ ಪರವಾಗಿ ಇವರು ಏನಾದರೂ ಇಲ್ಲಿ ವಾದ ಮಾಡುತ್ತಿದ್ದಾರೆಯೇ ಹೇಗೆ? ಭೂನ್ಯಾಯ ಮಂಡಲಿಯಲ್ಲಿ ಲಂಚ ಹೊಡೆಯುವವರ ವಿವರಗಳನ್ನು ಬೇಕಾದರೆ ನಾವು ಕೊಡುತ್ತೇವೆ. ಅಂತಹವರ ಬಗ್ಗೆ ಇವರು ಏನಾದರೂ ಕ್ರಮ ಕೈಕೊಳ್ಳುತ್ತಾರೆಯೇ? ಮಾನ್ಯ ಸದಸ್ಯರು ಎಲ್ಲೆಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಈಗ ಹೇಳುತ್ತಿದ್ದಾರೆ. ಆದರೆ ಆ ರೀತಿ ಹೇಳಬಾರದು ಎಂದರೆ ಹೇಗೆ? ಹೊಸ ನಗರ, ತೀರ್ಥಹಳ್ಳಿ, ಸೊರಬ ಮುಂತಾದ ಕಡೆ ಇರುವಂತಹ ಭೂನ್ಯಾಯ ಮಂಡಲಿಗಳಿಂದ ಬಡವರಿಗೆ ಅನ್ಯಾಯವಾಗುತ್ತಿದೆ. ಅಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿರುವುದೇ ಇದಕ್ಕೆ ಕಾರಣ. ಇದರ ಬಗ್ಗೆ ನಾವು ವಿವರಗಳನ್ನು ಬೇಕಾದರ ಕೊಡುತ್ತೇವೆ. ಮೊನ್ನೆ ಇಲ್ಲಿ ಒಬ್ಬರು ಬಿ. ಡಿ. ಒ. ಬಗ್ಗೆ ಪ್ರಸ್ತಾಪ ಮಾಡಿದಾಗ ಸರ್ಕಾರದವರು ಅವರ ಮೇಲೆ ಏನು ಕ್ರಮ ತೆಗೆದುಕೊಂಡರು?

ಶ್ರೀ ರಮೇಶ್ ಕುಮಾರ್.—ಮಾನ್ಯ ರತ್ನಾಕರ್ ಅವರು ತಮ್ಮದೇ ಆದ ಅರ್ಥದಲ್ಲಿ ಈ ಬಗ್ಗೆ ಹೇಳಿ ನನ್ನ ತಲೆಮೇಲೆ ಗೂಬೆ ಕೂರಿಸುವುದಕ್ಕೆ ಹೊರಟಿದ್ದಾರೆ. ಜನತಾಪಕ್ಷದ ಎಲ್ಲಾ ಸದಸ್ಯರು ಲಂಚ ಹೊಡೆಯುತ್ತಿದ್ದಾರೆಂದು ಮಾನ್ಯ ಸ್ವಾಮಿರಾವ್ ಅವರು ಹೇಳಿದ್ದುದು ಸರಿಯೇ?

(ಗೊಂದಲ)

ಅಧ್ಯಕ್ಷರು.—ಜನರಲ್ ಆಗಿ ಹೇಳಿದ್ದು ಸರಿಯಲ್ಲ. ಯಾರು ಯಾರು ತೆಗೆದುಕೊಳ್ಳುತ್ತಾರೆ ಎಂಬುದನ್ನು ಸ್ಪೆಸಿಫಿಕ್ ಆಗಿ ಹೇಳಬೇಕು.

ಶ್ರೀ ಎಂ. ರಾಮಪ್ಪ.—ಈಗ ಮಾನ್ಯ ಸ್ವಾಮಿರಾವ್ ಅವರು ಹೇಳಿದ್ದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ.

ಅಧ್ಯಕ್ಷರು.—ಎಲ್ಲರೂ ಲಂಚ ತೆಗೆದುಕೊಳ್ಳುತ್ತಾರೆಂದು ಹೇಳಿದರೆ ಹೇಗೆ?

(ಗೊಂದಲ)

ಶ್ರೀ ರಮೇಶ್ ಕುಮಾರ್.—ಅವರು ಹೇಳಿದರು. ನಾನು ಯಾವ ಭ್ರಷ್ಟ ಅಧಿಕಾರಿಗೆ ಗುತ್ತಿಗೆ ಹಿಡಿದುಕೊಂಡು ಕುಳಿತಿಲ್ಲ. ಅವರಿಗೆ ವಕಾಲತ್ತು ಹಾಕಲಿಕ್ಕೆ ನಾನು ಇಲ್ಲಿಗೆ ಬಂದಿಲ್ಲ. ತಮ್ಮ ಪ್ರಾಂತ್ಯದಲ್ಲಿ ಸೀಮಿತವಾಗಿ ಸ್ಪಷ್ಟವಾಗಿ, ಖಚಿತವಾಗಿ ಮಾಹಿತಿ ಇರುವುದಕ್ಕೆ ಹೇಳುವುದಕ್ಕೆ ನಾನು ಅಡ್ಡ ಬರುವುದಿಲ್ಲ, ಅದು ನನ್ನ ಕೆಲಸ ಅಲ್ಲ. ಆದರೆ ಎಲ್ಲರ ಮೇಲೂ ಹೇಳಿದಾಗ, ನಾನೂ ಕೂಡ ಜನತಾಪಕ್ಷದಲ್ಲಿದ್ದೇನೆ, ನಮ್ಮಲ್ಲಿ ಇರತಕ್ಕವರೆಲ್ಲರಿಗೂ ಕೂಡ ಇದು ಅನ್ವಯಿಸುತ್ತದೆ. ಅದಕ್ಕಾಗಿ ನಾನು ಅವರಿಗೆ ಅಬ್ಜಕ್ಟ್ ಮಾಡಿದ್ದೇ ಹೊರತು ಭ್ರಷ್ಟಾಚಾರದ ಬಗ್ಗೆ ಮಾತನಾಡಬಾರದು ಎಂದು ಹೇಳಲಿಲ್ಲ ಅಥವಾ ನಾವು ಹೇಳಿದಹಾಗೆ ಮಾತನಾಡಬೇಕು ಎಂದು ಹೇಳಲಿಲ್ಲ. ಈಗ ಇವರು ಭೂಸುಧಾರಣೆ ಬಗ್ಗೆ ಹೇಳುತ್ತಾರೆ. ನಮ್ಮ ಪಕ್ಷದವರು ಮಾಡಿದ್ದನ್ನು ವಿರೋಧ ಮಾಡಿ ಹೇಳುವಂಥ ಗಂಡಸ್ತನ ನನಗೆ ಇದೆ. ಬ್ಯಾಕ್‌ವರ್ಡ್‌ಕ್ಲಾಸಸ್ ವಿಚಾರ ಬಂದಾಗ, ಭೂಸುಧಾರಣೆ ಪ್ರಶ್ನೆ ಬಂದಾಗ ಯಾವುದೇ ಪಕ್ಷದ ಗುಲಾಮನಾಗಿ ನಾನು ಇರುವುದಿಲ್ಲ. ನನ್ನ ಸಿದ್ಧಾಂತಕ್ಕೆ ಕಟ್ಟುಬಿದ್ದು ನಾನು ಕೆಲಸ ಮಾಡುತ್ತೇನೆ. ನಾನು ತಮ್ಮಿಂದ ತಿಳುವಳಿಕೆ ಪಡೆಯತಕ್ಕ ಸ್ಥಿತಿಗೆ ನನ್ನ ಜನ್ಮದಲ್ಲಿ ನಾನು ಬರುವುದಿಲ್ಲ. ಭ್ರಷ್ಟರಿಗೆ ಇಲ್ಲಿ ವಕಾಲತ್ತು ವಹಿಸತಕ್ಕಂಥ ಸ್ಥಿತಿ ನನಗೆ ಬಂದರೆ ನಾನು ಹೊರಗೆ ಹೋಗಿ ನೇಣು ಹಾಕಿಕೊಳ್ಳುತ್ತೇನೆ. ಇಲ್ಲಿ ಕುಳಿತು ಕೊಳ್ಳುವುದಿಲ್ಲ. ದಯಮಾಡಿ ಅಂತಹ ಒಂದು ಅರ್ಥ ಬರುವ ರೀತಿ ತಮ್ಮ ಮಾತಿನ ಬುದ್ಧಿವಂತಿಕೆಯನ್ನು ಪ್ರದರ್ಶನ ಮಾಡಬಾರದು ಎಂದು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ನಾನು ಹೇಳಿರುವುದು ಜನತಾಪಕ್ಷದ ಬಗ್ಗೆ......

(ಗೊಂದಲ)

ಶ್ರೀ ರಮೇಶ್ ಕುಮಾರ್.—ನಮ್ಮ ಊರಿನಲ್ಲಿ ಒಬ್ಬ ಕ್ಷೌರ ಮಾಡುವವರನ್ನು ಮಂಡಲ ಪಂಚಾಯಿತಿಗೆ ನಿಲ್ಲಿಸಿದರೆ ಅಲ್ಲಿನ ಕಾಂಗ್ರೆಸ್ಸಿನವರು ಅವನು ಕ್ಷೌರ ಮಾಡುವುದನ್ನು ನಿಲ್ಲಿಸಬೇಕು ಎಂದು

ಕಟ್ ಮಾಡಿದ್ದಾರೆ, ಅದಕ್ಕೆ ಏನು ಹೇಳುತ್ತೀರಿ. ಅವನು ಕ್ಷೌರ ಮಾಡಬಾರದು ಅಂದರೆ ಅವರಿಗೆ ಜೀವನವೇ ಇಲ್ಲದಹಾಗೆ ಆಗುತ್ತದೆ.

(ಗೊಂದಲ)

ಅಧ್ಯಕ್ಷರು.—ರಮೇಶ್ ಕುಮಾರ್‌ರವರೇ, ತಮ್ಮ ಅಬ್ಜಕ್ಷನ್ ಕರೆಕ್ಟಾಗಿದೆ.

ಶ್ರೀ ರಮೇಶ್ ಕುಮಾರ್.—ನಾನು ತಮಗೆ ಅಡ್ಡಿ ಮಾಡುತ್ತಾ ಇಲ್ಲ. ಬ್ಯಾಕ್‌ವರ್ಡ್‌ಕ್ಲಾಸ್ ವಿಚಾರಕ್ಕೆ ಒಂದು ನಿಮಿಷ ಅವಕಾಶ ಕೊಡಿ ಅಧ್ಯಕ್ಷರೆ, ನಾನು ಯಾವಾಗಲೂ ಕೇಳುವುದಿಲ್ಲ.

ಅಧ್ಯಕ್ಷರು.—ನೀವು ಹೇಳಿದ ಅಬ್ಜಕ್ಷನ್' ಕರೆಕ್ಟ್ ಇದೆ. ಸ್ವಾಮಿರಾವ್‌ರವರೇ, ಇನ್ನು ಮುಂದೆ ಮಾತನಾಡುವಾಗ ಸ್ಪೆಸಿಫಿಕ್ಕಾಗಿ ಹೇಳಿ.

ಶ್ರೀ ಬಿ. ಸ್ವಾಮಿರಾವ್.—ನಾನು ಇನ್ನೊಂದುಸಾರಿ ಸ್ಪಷ್ಟಪಡಿಸುತ್ತೇನೆ. ನಾಮಿನೇಷನ್ ಮಾಡುವಾಗ ಪಕ್ಷದ ಹಿತೈಷಿಗಳನ್ನು, ಪಕ್ಷದವರನ್ನು ಮಾಡಿದಾಗ ಬಹುತೇಕ ಜನ ಅದಕ್ಕಾಗಿ ಆಶೆ ಪಟ್ಟವರನ್ನು ನಾಮನಿರ್ದೇಶನ ಮಾಡುವಾಗ ಯೋಗ್ಯರು ಎಂದು ಪಕ್ಷ ತಿಳಿದು ಅಥವಾ ಯಾರಾದರೂ ಯೋಗ್ಯರು ಎಂದು ತಿಳಿದು ಮಾಡತಕ್ಕಂಥಾದ್ದಲ್ಲ. ಅವನು ಬಂದು ಬೇಡುತ್ತಾನೆ ನನ್ನನ್ನು ಹಾಕಿಸಿ ಹಾಕಿಸಿ ಎಂದು ಹೇಳಿ ಹಾಕಿಸಿಕೊಂಡು ಹೋಗಿರುವುದನ್ನು ನೋಡಿದ್ದೇವೆ. ಅವರು ದುಡ್ಡು ತಿಂದದ್ದು ನೋಡಿದ್ದೇವೆ. ಬಹುತೇಕ ಜನ ಹಾಗೆ ಆಗಿದ್ದಾರೆ. ಆದುದರಿಂದ ಪಕ್ಷದ ಹೆಸರಿಟ್ಟು ಹೇಳಿದೆ. ಮೊನ್ನೆ ಟೈಪಿಸ್ಟ್ಸ್‌ರು ನಡೆಯಿತು. ಇಡೀ ರಾಜ್ಯದ ತುಂಬ ಗಲಾಟೆಯಾಯಿತು. ಲಕ್ಷಾಂತರ ರೂಪಾಯಿ ವಸೂಲು ಮಾಡಿದ್ದಾರೆ. ಅಲ್ಲಿ ನಮ್ಮ ಪಕ್ಷದವರು ಯಾರು ಇಲ್ಲ. ನಮ್ಮ ಪಕ್ಷದವರು ಆಗಿದ್ದರೆ ನಾವು ಅವರನ್ನು..............

ಅಧ್ಯಕ್ಷರು.—ನಾಮಿನೇಷನ್ ಬಗ್ಗೆ ಹೇಳಿ.

ಶ್ರೀ ಬಿ. ಸ್ವಾಮಿರಾವ್.—ನಾಮಿನೇಷನ್‌ನಲ್ಲಿ ಇದೆಲ್ಲಾ ಬರುತ್ತದೆ ಅಧ್ಯಕ್ಷರೆ, ಪ್ರತಿಯೊಂದು ನಾಮಿನೇಷನ್ ಹಾಗೇ ಆಗಿದೆ. ನಮ್ಮ ಪಕ್ಷದವರು ಖಂಡಿತ ಅಲ್ಲ ಅವರು. ಬೇರೆಯವರು ಇರುತ್ತಾರೆ. ಯಾರೋ ಒಬ್ಬಿಬ್ಬರು ಇರಬಹುದು. ನಾನು ಮಾನ್ಯ ರಮೇಶ್ ಕುಮಾರ್‌ರವರನ್ನು ಕುರಿತು ಹೇಳಲಿಲ್ಲ. ಟೈಪಿಸ್ಟ್ಸ್ ದು ಹೀಗೆ ಆಯಿತು.

ಅಧ್ಯಕ್ಷರು.—ನೀವು ಡೀವಿಯೇಷನ್ ಆಗುತ್ತಿದ್ದೀರಿ.

ಶ್ರೀ ಬಿ. ಸ್ವಾಮಿರಾವ್.—ನಾನು ಡೀವಿಯೇಷನ್ ಆಗುತ್ತಾ ಇಲ್ಲ ಅಧ್ಯಕ್ಷರೆ.

ಅಧ್ಯಕ್ಷರು —ಮಂಡಲ ಪಂಚಾಯತ್ ನಾಮಿನೇಷನ್ ಬಗ್ಗೆ ಹೇಳಿ.

ಶ್ರೀ ಬಿ. ಸ್ವಾಮಿರಾವ್.—ಈಗ ನಾನು ಟೈಪಿಸ್ಟ್‌ಗಳ ನೇಮಕಾತಿಯ ಬಗ್ಗೆ ಹೇಳುತ್ತೇನೆ. ಲಕ್ಷಾಂತರ ರೂಪಾಯಿ ವಸೂಲು ಮಾಡಿದ್ದಾರೆ.

ಅಧ್ಯಕ್ಷರು.—ಟೈಪಿಸ್ಟ್ಸ್‌ರು ತೆಗೆದುಕೊಂಡು ಏನು ಮಾಡುತ್ತೀರಿ. ಮಂಡಲ್ ಪಂಚಾಯತ್ ನಾಮಿನೇಷನ್ ಬಗ್ಗೆ ಹೇಳಿ.

ಶ್ರೀ ಬಿ ಸ್ವಾಮಿರಾವ್.—ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಹೀಗೆಯೇ ಆಯಿತು.

ಅಧ್ಯಕ್ಷರು.—ಈಗ ಇದಿನಬ್ಬ ಅವರು ಮಾತನಾಡಲಿ.

ಶ್ರೀ ಬಿ. ಸ್ವಾಮಿರಾವ್.—ಅದಕ್ಕೋಸ್ಕರ ಈ ಮಂಡಲ್ ಪಂಚಾಯಿತಿಗೂ ನಾಮಿನೇಷನ್ ಮಾಡುವುದರಿಂದ ಇದೇ ತರಹ ಆಗುತ್ತದೆ. ಅದು ಖಂಡಿತ ಕೂಡದು. ದೇಶದ ದೃಷ್ಟಿಯಿಂದ, ಬಡವರ ದೃಷ್ಟಿಯಿಂದ, ಹಿಂದುಳಿದವರ ದೃಷ್ಟಿಯಿಂದ ಅದು ಖಂಡಿತ ಒಳ್ಳೆಯದಾಗುವುದಿಲ್ಲ. ಇದು ಒಂದು ಸಂಪೂರ್ಣವಾಗಿ ಭ್ರಷ್ಟಾಚಾರದ ಕೈಗೆ ಕೈಹಾಕಿದ್ದೀರಿ. ಮಂಡಲ ಪಂಚಾಯಿತಿ ಚುನಾವಣೆಯಾಗಿ ಎಷ್ಟು ದಿವಸ ಆಯಿತು ಅಧ್ಯಕ್ಷರೆ. ಮಂಡಲ ಪಂಚಾಯಿತಿ ಚುನಾವಣೆಯಾಗಿದ್ದು ಜನವರಿ ೨೦ನೇ ತಾರೀಖು. ಇವತ್ತು ಎಷ್ಟು ತಾರೀಖು, ಏಕೆ ಮಾಡಲಿಲ್ಲ. ಕಾನೂನಿನಲ್ಲಿ ಇದೆಯಲ್ಲಾ, ೪ ವಾರದಲ್ಲಿ ಪ್ರಧಾನ ಉಪಪ್ರಧಾನರನ್ನು ಮಾಡಬೇಕು ಎಂದು ಇದ್ದರೂ ಸಹ ನಾಮಿನೇಷನ್ ಮಾಡಿ ನಿಮ್ಮ ಪಾರ್ಟಿ

ಯವರನ್ನು ಸೇರಿಸುವುದಕ್ಕೋಸ್ಕರ, ನಿಮ್ಮ ಪಕ್ಷದವರನ್ನು ಹುಡುಕುವುದಕ್ಕೋಸ್ಕರ ಅದಕ್ಕೆ ಒಂದು ಕಾನೂನು ಮಾಡಿ ನಮ್ಮ ಕೈಕಟ್ಟಿ ಇಸನ್ನು ಮಾಡುವುದಕ್ಕೋಸ್ಕರ ಇಷ್ಟು ದಿವಸ ತಡೆದರಲ್ಲ, ಇದು ಸರಿಯೇ. ಆ ಎಲೆಕ್ಟ್ ಆದ ಮೆಂಬರ್ಸ್‌ಗೆ ಅವಮಾನ ಆಗಲಿಲ್ಲವೇ.

ಅಧ್ಯಕ್ಷರು.--ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಬಿ. ಸ್ವಾಮಿರಾವ್.--ಕುಳಿತುಕೋಳ್ಳಿ ಅಂದರೆ ಕುಳಿತುಕೊಳ್ಳುತ್ತೇನೆ. ನನಗೇನೂ ಅಭ್ಯಂತರ ವಿಲ್ಲ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಇದಕ್ಕೋಸ್ಕರ ೮-೧೦ ದಿವಸ ಧರಣಿ ಮಾಡಿದ್ದೇವೆ. ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಸಾಕಷ್ಟು ಚರ್ಚೆ ವಾದವಿವಾದ ನಡೆದಿದೆ. ತಾವು ಕೂಡ ದಿವಸ ನಿಗದಿ ಮಾಡಿದ್ದೀರಿ. ಈಗ ಮಾತನಾಡುವಾಗ ಮತ್ತೆ ಬೆಲ್ ಹೊಡೆದರೆ ನಮಗೆ ಸ್ವಲ್ಪ ಗಾಬರಿಯಾಗುತ್ತದೆ.

ಅಧ್ಯಕ್ಷರು.—ನಿಮ್ಮ ಗಾಡಿ ಹಳಿ ತಪ್ಪುವುದಕ್ಕೆ ಹತ್ತಿದೆ. ಈಗಾಗಲೇ ೭ ಜನ ಮಾತನಾಡಿದ್ದಾರೆ ಚನ್ನಾಗಿ ಮಾತನಾಡಿದ್ದಾರೆ.

ಶ್ರೀ ಬಿ. ಸ್ವಾಮಿ ರಾವ್.— ಹಳಿ ತಪ್ಪುತ್ತಿಲ್ಲ. ನಾನು ಸುಳ್ಳು ಹೇಳುತ್ತಿಲ್ಲ. ರಾಜೀನಾಮೆ ಕೊಡಿಸಿದ್ದು ನಿಜ. ಸದನದ ಸಮಿತಿ ಮಾಡಿ ಸಿ.ಓ.ಡಿ.ಗೆ ಸಿ. ಬಿ. ಐ.ಗೆ ರೆಫರ್ ಮಾಡಿ ತನಿಖೆ ಮಾಡಿಸಿ ನೂರಾರು ಕೇಸುಗಳು ಬೆಳಕಿಗೆ ಬರಬಹುದು. ಚುನಾವಣೆಯಾಗಿ ಮೂರು ತಿಂಗಳಾದರೂ ಕೂಡ ಮಂಡಲ ಪ್ರಧಾನ ಮತ್ತು ಉಪ ಪ್ರಧಾನರ ಚುನಾವಣೆ ಮಾಡಿಲ್ಲ. ಈ ಕಾನೂನನ್ನು ತಿರುಗಿಸುವುದಕ್ಕೆ ಟ್ವಿಸ್ಟ್ ಮಾಡುವುದಕ್ಕೋಸ್ಕರ ಇದರ ಹಿಂದೆ ರಾಜಕೀಯ, ಭ್ರಷ್ಟಾಚಾರ, ರಾಜಕೀಯ ವ್ಯಭಿಚಾರ ದೊಡ್ಡ ಪ್ರಮಾಣದಲ್ಲಿ ಇದೆಯೆಂದು ಹೇಳುತ್ತೇನೆ. ಈ ಮೂರು ಇಲ್ಲದೇ ಇರತಕ್ಕ ಶಬ್ಧಗಳು ರಾಜಕೀಯ ಪಕ್ಷಕ್ಕೆ, ಸರ್ಕಾರಕ್ಕೆ ಇರುವುದಾದರೆ, ಇದನ್ನು ಕೈಬಿಡಬೇಕೆಂದು ಹೇಳಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡತಕ್ಕ ವಿಷಯ ಈ ಸದನದಲ್ಲಿ ಘನಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ನಾಮಂಕರಣ ಮಾಡತಕ್ಕ ವಿಚಾರ ಸರಿಯಲ್ಲವೆಂದು ವಿರೋಧ ಪಕ್ಷದವರು ಹೇಳಿದರೂ ಕೂಡ, ನಾಮಕರಣ ಮಾಡತಕ್ಕ ಹಠ ಆಳುವ ಪಕ್ಷಕ್ಕೆ ಬಹಳ ಜೋರಾಗಿ ಇದೆ. ನಾನು ಈ ವಿಚಾರದಲ್ಲಿ ಹೇಳುವುದಾದರೆ, ಈ ಪರಿಷತ್ತಿನ ಚುನಾವಣೆ, ಮಂಡಲ ಪಂಚಾಯಿತಿ ಚುನಾವಣೆಗಳು ಬಹಳ ಅವಸರವಾಗಿಯೇ ನಡೆದವು. ಮಹಾತ್ಮ ಗಾಂಧೀಜಿಯವರು ಹೇಳಿದಂಥ ರಾಮರಾಜ್ಯ, ಗ್ರಾಮ ರಾಜ್ಯ ಹಾಗೂ ಪಂಚಾಯಿತಿ ರಾಜ್ಯ ಆಗಬೇಕಾದರೆ, ಗ್ರಾಮಗಳಲ್ಲಿ ಅದಕ್ಕೆ ತಕ್ಕ ವಾತಾವರಣವನ್ನು ಕಲ್ಪಿಸತಕ್ಕಂಥ ಪರಿಸ್ಥಿತಿ ಇರಬೇಕು. ಅಲ್ಲಿರತಕ್ಕ ಜನ ಕೂಡ ಇದಕ್ಕೆ ಸರಿಯಾಗಿ ಹೊಂದಿಕೊಂಡು ಆ ನೆಲ ಕೂಡ ಹಸನಾಗಿರಬೇಕು. ಅಲ್ಲಿನ ಜನರ ಆರ್ಥಿಕ ಪರಿಸ್ಥಿತಿ ಕೂಡ ಒಳ್ಳೆಯದಾಗಿರಬೇಕು, ಆ ಗ್ರಾಮದ ಜನರು ಸಮೃದ್ಧಿ ಉಳ್ಳವರಾದ ಮೇಲೆ ಪಂಚಾಯಿತಿ ರಾಜ್ಯ, ರಾಮರಾಜ್ಯ, ಗ್ರಾಮರಾಜ್ಯ ಆಗುವಂತಾದರೆ ಅನುಕೂಲವಾಗುತ್ತದೆ ಇದು ಯಾವುದನ್ನು ಮಾಡದೆ, ಅವಸರ ಅವಸರವಾಗಿ ಮಾಡಿದ್ದೀರಿ. ಇದಕ್ಕಿಂತಲೂ ಮೊದಲು ನಮ್ಮ ರಾಜ್ಯದಲ್ಲಿ ಪಂಚಾಯಿತಿ, ಡಿಸ್ಟ್ರಿಕ್ಟ್ ಬೋರ್ಡು ಮತ್ತು ತಾಲ್ಲೂಕು ಬೋರ್ಡುಗಳು ಇದ್ದವು. ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದವು. ಅಷ್ಟೇ ಅಲ್ಲ ಇಷ್ಟೆಲ್ಲಾ ಹಣ ಕೂಡ ಖರ್ಚು ಮಾಡುತ್ತಿರಲಿಲ್ಲ, ಆಗ ಅಧ್ಯಕ್ಷರಿಗೆ ಉಪಾಧ್ಯಕ್ಷರಿಗೆ ಸಂಬಳ ಇರಲಿಲ್ಲ ಕಾರುಗಳು ಇರಲಿಲ್ಲ, ಆದರೂ ಕೂಡ ನಡೆಸಿಕೊಂಡು ಬಂದಿದ್ದಾರೆ. ಆದರೆ, ಅವರಿಗೆ ಹೆಚ್ಚು ಅಧಿಕಾರ ಮತ್ತು ಹಣ ಕೊಟ್ಟಿರಲಿಲ್ಲ. ಇವತ್ತು ಹೆಸರು ಬದಲಾಯಿಸಿ ಮಂಡಲ ಪಂಚಾಯಿತಿ ಜಿಲ್ಲಾಪರಿಷತ್ತು ಎಂದು ಹೇಳಿದರೂ ಕೂಡ ಇದೇ ಅಧಿಕಾರವನ್ನು ಹಣವನ್ನು ಕೊಟ್ಟಿದ್ದರೆ. ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ಇವತ್ತು ಮಾನ್ಯ ನಜೀರ್ ಸಾಹೇಬರ ಕನಸು, ನನಸಾಗಬೇಕೆಂಬ ಹಠ ಹಿಡಿದು ತುದಿಗಾಲ ಮೇಲೆ ನಿಂತಿದ್ದು ಕೆಲಸವಾಯಿತು ಚಿಂತೆ ಇಲ್ಲ, ಮುಂದೆ ಭವಿಷ್ಯತ್ತಿನಲ್ಲಿ ಯಾವ ರೂಪದಲ್ಲಿ, ಮಂಡಲ ಮತ್ತು ಜಿಲ್ಲಾಪರಿಷತ್ತುಗಳು ನಡೆಯುತ್ತವೆಂಬುದನ್ನು ನೋಡಬೇಕಾಗಿದೆ ಹಿಂದೆ ಪ್ರತಿ ಗ್ರಾಮದಲ್ಲಿಯೂ ಒಂದು ಪಂಚಾಯಿತಿ ಇರುತ್ತಿತ್ತು. ಈಗ ನಾಲ್ಕೈದು ಪಂಚಾಯಿತ್ತಿಗಳನ್ನು ಸೇರಿಸಿ ಮಂಡಲ ಮಾಡಿದ್ದಾರೆ. ಈಗಾಗಲೇ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ

ಪೈಪೋಟಿ ಶುರುವಾಗಿದೆ. ನನ್ನ ಗ್ರಾಮಂದವನಾಗಬೇಕು, ನನ್ನ ಗ್ರಾಮದವನಾಗಬೇಕೆಂದು ಹೊರಟಿದ್ದಾರೆ. ಮುಂದೆ ಅಭಿವೃದ್ಧಿ ಕೆಲಸಗಳ ವಿಚಾರದಲ್ಲಿಯೂ ನನ್ನ ಗ್ರಾಮಕ್ಕೆ ಆಗಬೇಕು. ನನ್ನ ಗ್ರಾಮಕ್ಕೆ ಆಗಬೇಕೆಂಬ ತಾಕಲಾಟಗಳು ಬರುತ್ತವೆ. ಇಷ್ಟೆಲ್ಲಾ ಮಾಡಿ ೨೦ ದಾಮಾಷಾ ಪ್ರಕಾರ ಮಹಿಳೆಯರಿಗೆ, ೧೮ ದಾಮಾಷಾ ಪ್ರಕಾರ ಪರಿಶಿಷ್ಟ ವರ್ಗದವರಿಗೆ ಚುನಾವಣೆಯಲ್ಲಿ ಮೀಸಲಿಟ್ಟು, ಆ ರೀತಿಯಲ್ಲಿ ಆರಿಸಿಬಂದಮೇಲೆ ಕೂಡ ನಾಮಕರಣ ಮಾಡತಕ್ಕ ಒಂದು ಪಟ್ಟು ಆಳುವ ಪಕ್ಷಕ್ಕೆ ಏತಕ್ಕೆ ಬಂತು? ಈ ವಿಚಾರದಲ್ಲಿ ವಿರೋಧ ಪಕ್ಷದ ಮುಖಂಡರುಗಳಾದ ವೀರಪ್ಪ ಮೊಯ್ಲಿಯವರು, ಶ್ರೀನಿವಾಸರವರು, ಪಕ್ಷದ ನಾಯಕಿಯವರಾದ ನಾಗರತ್ನಮ್ಮನವರು, ಸ್ವಾಮಿರಾಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನನ್ನ ಅನಿಸಿಕೆ ನಾಮಕರಣ ವಿಷಯದಲ್ಲಿ ಈ ಸದನದಲ್ಲಿ ನಿಲುವಳಿ ಸೂಚನೆ ತರತಕ್ಕ ಆಲೋಚನೆ ಮಾಡಿದಾಗ ನಿಲುವಳಿ ಸೂಚನೆಯನ್ನು ತರಲಿಕ್ಕೆ ಅವಕಾಶವಿಲ್ಲ ಎನ್ನುವ ವಾದವನ್ನು ಆಳುವ ಪಕ್ಷ ಮಾಡಿದ್ದರಿಂದ ದೊಡ್ಡ ಕೋಲಾಹಲ ಆಯಿತು. ಆ ಸಂದರ್ಭದಲ್ಲಿ ಆದಿವಸ ಏನಾಯಿತು ಎಂಬುದು ತಮಗೆಲ್ಲಾ ಗೊತ್ತಿದೆ. ಅದು ನೆನಸಾಗುವಾಗ ನನಗೆ ಮೈ ಜುಂ ಎಂದು ಅನಿಸುತ್ತದೆ, ಅದು ಆಗಬಾರದು. ಆದ್ದರಿಂದ ಇಷ್ಟೊಂದು ಕೋಲಾಹಲಕ್ಕೆ ಕಾರಣವಾಗಿರತಕ್ಕಂಥ ಈ ನಾಮಕರಣ ಅದರಲ್ಲೂ ಹಿಂದುಳಿದ ವರ್ಗದವರು ಯಾರು ಎಂದು ಮೊದಲೇ ನಿಶ್ಚಿತ ಮಾಡಿದ್ದಾರೆ. ಸರ್ಕಾರ ಇಂತಹವರೇ ಆಗಬೇಕೆಂದು ಹೇಳಿ ಈ ತಿದ್ದುಪಡಿ, ಕುಶಲಕರ್ಮಿಗಳು ಆಗಬೇಕೆಂದು, ಕೃಷಿ ಕಾರ್ಮಿಕರು ಆಗಬೇಕೆಂದು ಹೇಳತಕ್ಕಂಥ ಒಂದು ತಿದ್ದುಪಡಿಯನ್ನು ತಂದುಕೊಂಡು ಮಾಡಿದ್ದಾರೆ. ಇದರ ಒಳಗುಟ್ಟು ಏನು ಎಂದು ಮತ್ತೆ ನಾನು ಹೇಳಬೇಕಾಗಿಲ್ಲ. ಇದರಿಂದ ಏನಾಗುತ್ತದೆ ಎಂದರೆ ಸುಮಾರು ೪೦೦-೫೦೦ ಮಂಡಲ ಪಂಚಾಯಿತಿಗಳು ಆಳುವ ಪಕ್ಷದ ಬಲೆಗೆ, ಜೇಲದೊಳಕ್ಕೆ ಬೀಳುತ್ತವೆ. ಇಷ್ಟು ಅಲ್ಲದೇ ಮತ್ತೇನೂ ಇಲ್ಲ. ಇವರು ಅಂತಹ ಒಂದು ಮೋಹ ಹಿಂದುಳಿದ ವರ್ಗದವರ ಬಗ್ಗೆ ಉಂಟು ಎಂದು ಹೇಳಿದ್ದಾರೆ. ಇವರು ಹೇಳತಕ್ಕದ್ದರಲ್ಲಿ ಯಾವ ಪುರುಷಾರ್ಥವೂ ಇಲ್ಲ. ಮಾನ್ಯ ಸದಸ್ಯರು ರಾಜ್ಯ ಸಭೆಗೆ ನಾಮಕರಣ ಆಗುವುದಿಲ್ಲವೇ ಎಂದು ಹೇಳಿದ್ದನ್ನು ನೋಡಿದ್ದೇನೆ. ಇಡೀ ಭಾರತ ದೇಶದಲ್ಲಿ ರಾಜ್ಯಸಭೆ ಇರುವಂಥಾದ್ದು ಒಂದೇ ಒಂದು. ಇದು ಹಾಗೆ ಅಲ್ಲ, ಇಷ್ಟು ಸಾವಿರ ಮಂಡಲ ಪಂಚಾಯಿತಿಗಳಿಗೆ ಎಷ್ಟು ಸಾವಿರ ಜನರನ್ನು ನೀವು ನಾಮಕರಣ ಮಾಡಬೇಕಾಗುತ್ತದೆ. ಅದರಲ್ಲಿ ೬, ೪೦೦ ರೂಪಾಯಿಗಳ ಆದಾಯದ ಬಗ್ಗೆ ಹೇಳಿದ್ದೀರಿ, ತನಿಖೆ ಮಾಡುವಾಗ ಎಷ್ಟು ಮೋಸ ಆಗಲಿಕ್ಕೆ ಉಂಟು, ಎಷ್ಟು ವಂಚನೆ ಆಗಲಿಕ್ಕೆ ಉಂಟು. ಅದನ್ನು ಒಳಗಿಂದಲೇ ನೋಡಿದರೆ ಅನೇಕ ದೋಷ ಮೋಸ ಆಗಲಿಕ್ಕೆ ಸಾಧ್ಯ ಉಂಟು. ಇಷ್ಟೆಲ್ಲಾ ಆಗುವುದಕ್ಕೆ ನಾವು ಆರಂಭದಲ್ಲಿಯೇ ಮಾತನಾಡುವಾಗ, ವಿಚಾರ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳ ಮನಸ್ಸಿನಲ್ಲಿ, ಈ ನಾಮಕರಣದ ವಿಚಾರ ನಾವು ವಿರೋಧ ಮಾಡುವಾಗ ಬಹುಶಃ ಅದಕ್ಕೆ ಅವರು ಒಪ್ಪುತ್ತಾರೆ ಎನ್ನುವ ಪರಿಸ್ಥಿತಿ ಇತ್ತು. ಈಗ ಅವರು ರಾಜಕೀಯ ಪಟ್ಟು ಹಿಡಿದುಕೊಂಡಿದ್ದಾರೆ. ಅಲ್ಲಿ ಕೆಲವು ಮಂತ್ರಿಗಳು, ಪಂಚಾಯತ್ ರಾಜ್ ಮಂತ್ರಿಗಳಾದ ನಜೀರ್ ಸಾಬ್ ಅವರು ತುದಿಗಾಲಿನಲ್ಲಿ ನಿಂತಿದ್ದಾರೆ. ಇಲ್ಲಿಯವರೆಗೆ ಎಲ್ಲಾ ಆಯಿತು, ಕೊನೆಯವರೆಗೂ ಗೆಲ್ಲಬೇಕೆಂದು ಇದ್ದಾರೆ. ಇಲ್ಲಿ ಗೆಲ್ಲುವ ಪ್ರಶ್ನೆ ಅಲ್ಲ ನೀವು ಸಾವಿರಾರು ಗಟ್ಟಲೆ ಮಂಡಲ್ ಪಂಚಾಯಿತಿಗಳಲ್ಲಿ ನಾಮಕರಣ ಮಾಡುವಾಗ ಎಷ್ಟೋ ಸಾವಿರ ಜನರನ್ನು ನಾಮಕರಣ ಮಾಡುವ ಪರಿಸ್ಥಿತಿಗೆ ಬರುವಾಗ ಇದರಲ್ಲಿ ಯಾವ ತರಹ ಪುರುಷಾರ್ಥ ಇಲ್ಲ. ತಾವು ರಾಜ್ಯಸಭೆಯ ಉದಾಹರಣೆ ಕೊಡುವುದು ಅಲ್ಲ, ಅಲ್ಲಿ ಕಲಾವಿದರನ್ನು, ಸಾಹಿತಿಗಳನ್ನು, ಮೇಧಾವಿಗಳನ್ನು ಮಾಡುವಂತಾದ್ದು ಇದೆ. ನಾವು ನಿಲುವಳಿ ಸೂಚನೆಯನ್ನು ತಂದಾಗ ಇದನ್ನು ತರಲಿಕ್ಕೆ ಯೋಗ್ಯ ಇಲ್ಲ ಎಂದು ಹೇಳಿದಂಥ ಜನ, ಕಡೆಗೆ ಒಂದು ರೀತಿಯಲ್ಲಿ ಇದು ಆದಮೇಲೆ ಎರಡು ಮೂರು ದಿವಸ ನಿಮಗೆ ವಿಪುಲವಾಗಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿ ಮಾಡಿಕೊಟ್ಟಿದ್ದಾರೆ. ಈ ಚರ್ಚೆಗೆ ಆಳುವ ಪಕ್ಷದವರು ಅವಕಾಶ ಮಾಡಿಕೊಟ್ಟಿದ್ದರೂ ಅವರ ತಲೆಯಲ್ಲಿ ಏನಿದೆಯೋ ಗೊತ್ತಿಲ್ಲ. ನಿಜವಾಗಿ ಹೇಳಬೇಕೆಂದರೆ, ಇವೊತ್ತು ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ. ಇದಕ್ಕೆ ಸಂಬಂಧಪಟ್ಟ ಗ್ರಾಮೀಣಾಭಿವೃದ್ಧಿ ಸಚಿವರಾದಂಥ ಮಾನ್ಯ ನಜೀರ್ ಸಾಬ್ ಅವರು ಇಲ್ಲಿ ಇಲ್ಲ. ಆದರೆ ಮಾನ್ಯ ಕಾನೂನು ಸಚಿವರು ಮಾತ್ರ ಇದ್ದಾರೆ ಬಹಳ ಸಂತೋಷ, ಈಗ ಇಲ್ಲಿ ಸುಮಾರು ೧೪೦ ಜನ ಇರಬೇಕಾದ್ದರಲ್ಲಿ, ಬಹಳಷ್ಟು ಕಡಿಮೆ ಜನ ಇದ್ದೇವೆ. ಇಷ್ಟು ಗಂಭೀರವಾದಂಥ ವಿಚಾರಕ್ಕೆ ಎರಡು ದಿವಸಗಳ ಕಾಲ ಚರ್ಚೆಗೆ ಅವಕಾಶವನ್ನು ಕೊಟ್ಟಿರುವಾಗ, ಇಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ಕೇಳಬೇಕಾಗುತ್ತದೆ. ನಾವು ಹೇಳುವುದನ್ನು ಇವರು ಮಾಡಲಿ, ಮಾಡದೇ ಇರಲಿ, ಹೇಳುವಂಥಾದ್ದು

ಕೇಳಬೇಕಾಗುತ್ತದೆ. ಈಗ ನಿಮ್ಮ ತಲೆಯಲ್ಲಿ ಏನಿದೆ ಎಂದರೆ, ನಾವು ಏನಾದರೂ ಮಾಡಿ ಪಾಸ್ ಮಾಡುತ್ತೇವೆ, ಇದನ್ನು ಜಾರಿಯಲ್ಲಿ ತರುತ್ತೇವೆ ಎನ್ನುವ ಭಾವನೆ ಖಂಡಿತ ಇದ್ದುದರಿಂದ ಈ ತರಹದ ತಾತ್ಸಾರ, ಉದಾಸೀನತೆ ಆಗಿದೆ. ಈ ರೀತಿಯಲ್ಲಿ ಒಂದು ನಾಮಕರಣ ಮಾಡಿ ಪಂಚಾಯಿತಿಗಳನ್ನು ಹಿಡಿದುಕೊಳ್ಳತಕ್ಕಂಥ ಒಂದು ಪರಿಸ್ಥಿತಿ ಯಾವಾಗಲೂ ಒಳ್ಳೆಯದಲ್ಲ. ಈಗಾಗಲೇ ಇದರ ಬಗ್ಗೆ ಮಾನ್ಯ ಮೊಯಿಲಿಯವರು, ಮಾನ್ಯ ಶ್ರೀನಿವಾಸ್ ಅವರು ಬಹಳ ವಿಸ್ತಾರವಾಗಿ ಹೇಳಿದ್ದಾರೆ. ಅದರ ಬಗ್ಗೆ ನಾನು ಮತ್ತೆ ಪುನಃ ಚರ್ವಿತ ಚರ್ವಣ ಮಾಡಬೇಕಾಗಿಲ್ಲ. ಇಷ್ಟು ಕೋಲಾಹಲಕ್ಕೆ ಕಾರಣವಾದ ಇಷ್ಟು ಗಂಭೀರ ಪರಿಸ್ಥಿತಿಗೆ ಕಾರಣವಾದ, ೪೬ ಜನರನ್ನು ಹೊತ್ತು ಹೊರಹಾಕತಕ್ಕ ಪರಿಸ್ಥಿತಿಯನ್ನು ನಿರ್ಮಿಸಿದ ಇಂತಹ ವಿಚಾರಕ್ಕೆ ಎರಡು ದಿವಸಗಳಕಾಲ ವಿಪುಲವಾದ ಚರ್ಚೆಗೆ ಅವಕಾಶ ಮಾಡಿಕೊಟ್ಟಿರುವಾಗ ಇವೊತ್ತು ಸಂಬಂಧಪಟ್ಟ ಮಂತ್ರಿಗಳು ಇಲ್ಲವಲ್ಲ ಎಂದು ನನಗೆ ದುಃಖ ಉಂಟಾಗಿದೆ. ಇದರ ಬಗ್ಗೆ ನಾವು ಎಷ್ಟು ಮಾತನಾಡಿದರೂ, ಎಷ್ಟು ಕಂಠ ಶೋಷಣೆ ಮಾಡಿದರೂ, ಎಷ್ಟೇ ಪುಸ್ತಕಗಳ ನಿದರ್ಶನ ಕೊಟ್ಟರೂ ಅವರು ಕೇಳುವ ಹಾಗೆ ಇಲ್ಲ. ಮಾನ್ಯ ಮೊಯಿಲಿಯವರು, ಮಾನ್ಯ ಶ್ರೀನಿವಾಸ್ ಅವರು ಏನು ಹೇಳಿದ್ದಾರೆ, ಯಾವುದನ್ನು ಹೇಳಿದ್ದಾರೆ, ಅದರ ಬಗ್ಗೆ ಇವರು ಏನು ಕೇಳುವ ಹಾಗೆ ಇಲ್ಲ. ಇದು ಏನಾಗಿದೆ ಎಂದರೆ ಗೋರ್‌ಕಲ್ ಮೇಲೆ ಮಳೆಗರೆದಂಥ ಪರಿಸ್ಥಿತಿ ಆಗುತ್ತಿದೆ. ಅವರ ಒಳಗಿನ ಅಭಿಪ್ರಾಯವನ್ನು ಈಗಾಗಲೇ ಹೇಳಿದ್ದಾರೆ. ಇವೊತ್ತು ನೀವು ಪಾಸ್ ಮಾಡಿಕೊಳ್ಳುತ್ತೀರಿ, ಇದರಿಂದಾಗ ೪೫೦ ಮಂಡಲ್‌ಗಳು ನಿಮಗೆ ಸಿಕ್ಕುತ್ತದೆ. ಇವೊತ್ತು ತಾವು ರಾಜ್ಯಸಭೆ ಏನು ಉದಾಹರಣೆಯನ್ನು ಕೊಟ್ಟಿದ್ದೀರಿ ಅದು ಸರಿಯಲ್ಲ, ವಿಧಾನ ಪರಿಷತ್ತು ಉದಾಹರಣೆ ಕೊಟ್ಟಿದ್ದೂ ಸರಿಯಲ್ಲ,

೨–೩೦ ಪಿ. ಎಂ.

ಒಂದು ರಾಜ್ಯದಲ್ಲಿ ಒಂದೇ ಒಂದು ವಿಧಾನಪರಿಷತ್ತು ಇರತಕ್ಕದು. ಆದರೆ ಇದು ಹಾಗಲ್ಲ. ೪ ಸಾವಿರ ಮಂಡಲ ಪಂಚಾಯತ್‌ಗಳಿವೆ. ಒಂದೊಂದು ಮಂಡಲ ಪಂಚಾಯತ್‌ಗೆ ಇಬ್ಬರಂತೆ ನಾಮಕರಣ ಮಾಡಿದರೂ ೮ ಸಾವಿರ ಜನರಾಗುತ್ತಾರೆ. ಹಿಂದೆ ನಾವು ತೀರ್ಮಾನ ಮಾಡಿದ್ದೇವೆ. ಅದನ್ನು ಇವತ್ತು ಮತ್ತೊಂದು ರೀತಿಯಲ್ಲಿ ಕುಶಲ ಕರ್ಮಿಗಳು, ಕೃಷಿ ಕಾರ್ಮಿಕರ ಬಗ್ಗೆ ಬಹಳ ದೊಡ್ಡ ಮೋಹ, ದೊಡ್ಡ ಪ್ರೀತಿ ಇರುವಂತೆ ನೀವು ತೋರಿಸಿಕೊಳ್ಳುತ್ತಿದ್ದೀರಿ. ಇದು ನಿಜವಾಗಿಯೂ ನಿಮ್ಮ ಹೃದಯದಲ್ಲಿರತಕ್ಕ ಭಾವನೆಯಲ್ಲ. ಸುಮಾರು ೪೫೦–೫೦೦ ಮಂಡಲ ಪಂಚಾಯಿತಿಗಳನ್ನು ಒಳಗೆ ಹಾಕಿಕೊಳ್ಳತಕ್ಕ, ನಿಮ್ಮ ಪಕ್ಷದ ಹತೋಟಿಗೆ ಬರುವಂತೆ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ನೀವು ಇದನ್ನು ಮಾಡಬಾರದು. ದಯವಿಟ್ಟು ಈ ಪದ್ಧತಿಯನ್ನು ಬಿಡಬೇಕು. ಇದುವರೆಗೆ ಮಾನ್ಯ ಸದಸ್ಯರು ಹೇಳಿದಂಥ ಎಲ್ಲ ಅಂಶಗಳನ್ನೂ ಮಾನ್ಯ ಕಾನೂನು ಸಚಿವರು ಟಿಪ್ಪಣಿ ಮಾಡಿಕೊಂಡಿದ್ದಾರೆ. ನೀವು ಒಳ್ಳೆಯ ರೀತಿಯಲ್ಲಿ ಈ ನಾಮಕರಣ ಪದ್ಧತಿಯನ್ನು ಕೈಬಿಡಬೇಕು. ನನಗೆ ಇಲ್ಲಿ ಒಂದು ದುಃಖ ಏನೆಂದರೆ ನೀವು ನಾಮಕರಣ ಮಾಡಬಾರದೆಂದು ನಾನು ಒಂದು ನಿಲುವಳಿ ಸೂಚನೆಯನ್ನು ತಂದಾಗ ಅದಕ್ಕೆ ಇಲ್ಲಿ ಅವಕಾಶವಿಲ್ಲವೆಂದು ಭಾರೀ ಕೋಲಾಹಲ ಉಂಟು ಮಾಡುತ್ತಿರುವುದನ್ನು ನೋಡಿದರೆ ಇಂಥ ವಿಚಾರದಲ್ಲಿ ನಿಮಗೆ ಒಳ್ಳೆಯ ಮಮಕಾರ, ಒಳ್ಳೆಯ ಸಹಕಾರ ಮನೋಭಾವನೆ ಮೂಡಿ ಬರಲಿಲ್ಲ ಎಂದು ಹೇಳುವುದಾದರೆ ಇನ್ನು ಯಾವಾಗ ಇದೆಲ್ಲಾ ಬರುತ್ತದೋ ನನಗಂತೂ ಗೊತ್ತಿಲ್ಲ. ಈ ಮಂಡಲ ಪಂಚಾಯತ್‌ಗಳಿಗೆ ಸಲೀಸಾಗಿ ೨೦ ದಾಮಾಷಾ ಪ್ರಕಾರ ಮಹಿಳೆಯರು, ೧೮ ದಾಮಾಷಾ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಆರಿಸಿ ಬಂದಿದ್ದಾರೆ. ಅಷ್ಟೇ ಅಲ್ಲ ಬಡತನ ರೇಖೆಗೆ ೬೫೦೦ ರೂಪಾಯಿಗಳು ಗರಿಷ್ಟ ಎಂದು ಏನು ಮಿತಿಯನ್ನು ನೀವು ನಿಗದಿ ಮಾಡಿದ್ದೀರಿ ಈ ಅಂಕಿಗಳ ಕೆಳಗೆ ಇರತಕ್ಕ ಅನೇಕ ಜನರು ಸದಸ್ಯರಾಗಿ ಆರಿಸಿ ಬಂದಿದ್ದಾರೆ. ಈ ಮಂಡಲ ಪಂಚಾಯಿತಿಗಳಲ್ಲಿ ಹೆಚ್ಚಿನ ರೀತಿಯಲ್ಲಿ ಬಡವರೆ ನಿಂತಿದ್ದರು. ನಮ್ಮ ಕಡೆಯಂತೂ ಬಡವರೇ ಹೆಚ್ಚು ಮಂದಿ ನಿಂತಿದ್ದರು. ಆದರೆ ನಿಮ್ಮ ಕಡೆ ಹೇಗೋ ಏನೋ ನನಗೆ ಗೊತ್ತಿಲ್ಲ. ನಾಮಕರಣ ಮಾಡುವ ಮೂಲಕ ಬಹಳ ದೊಡ್ಡ ಉಪಕಾರವನ್ನು ನಾವು ಮಾಡುತ್ತೇವೆಂಬ ಸೋಗನ್ನು ನೀವು ಹಾಕುವುದಕ್ಕೆ ಹೋಗಬೇಡಿ. ಇದ್ದಕ್ಕೆ ಸಂಬಂಧಪಟ್ಟಂತೆ ಮೊನ್ನೆ ನಾನು ಬರೆದಂಥ ಒಂದು ಕವಿತೆಯನ್ನು ಇಲ್ಲಿ ಹೇಳಬೇಕೆಂದಿದ್ದೇನೆ. ೪೬ ಜನ ಸದಸ್ಯರನ್ನು ಇಲ್ಲಿಂದ ಹೊರಗೆ ಎತ್ತಿಕೊಂಡು ಹೋಗಿ ಹೊರಹಾಕಿದ ಬಗ್ಗೆ ನಾನು ಒಂದು ಕವಿತೆಯನ್ನು ಏನು ಬರೆದಿದ್ದೇನೆ ಅದನ್ನು ಇಲ್ಲಿ ಓದುತ್ತೇನೆ......

ಅಧ್ಯಕ್ಷರು.—ನೀವು ಹೇಳಿ ಅವರು ಕೇಳುತ್ತಾರೆ.

ಶ್ರೀ ಬಿ. ಎಂ. ಇದಿನಬ್ಬ.—ನಾನು ಕೊನೆಯದಾಗಿ ಈ ನನ್ನ ಕವಿತೆಯನ್ನು ಓದಿ ಮುಗಿಸಿ ಬಿಡುತ್ತೇನೆ.

"ಒಂದು ವಾರ ಏನಾಯಿತು ? ಧರಣಿ ಏನಾಯ್ತು ?
ಪಂಚಾಯತ್ ನಾಮಕರಣದ ಪಟ್ಟು ಜೋಳ್ಳಾಯ್ತು,
ನಾಮಕರಣ ತರವಲ್ಲ, ನಾಮಕರಣ ತರವಲ್ಲ,
ಎಂದು ವಿರೋಧಿಸಿದರೂ – ಸತ್ಯಕ್ಕೆ ಬೆಲೆಯಿಲ್ಲ.
ಕಾವಲು ಭೈರರು ಹೊತ್ತು ಹೊರಹಾಕಿದ ದೃಶ್ಯ
ಅನಾವಶ್ಯಕ, ಅವಸರದ ಈ ಕರಾಳ ದೃಶ್ಯ
ಮುಂದೆ ಹೀಗಾಗದಂತೆ ಸಹನೆ ಇರಲಿ ಸರಕಾರಕ್ಕೆ,
ಎಂದೆಂದೂ ಬೆಲೆಬರಲಿ, ಗೌರವ ಇರಲಿ ಈ ಸದನಕ್ಕೆ"

ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವೇನೋ ಈ ಕವಿತೆಯನ್ನು ಹೇಳಿದಿರಿ. ಆದರೆ ಅವರು ಏನಾದರೂ ಇದನ್ನು ಒಪ್ಪಿಕೊಂಡರೆ ? ಮಾಡಲು ಅವರಿಗೆ ಅನವು ಮಾಡಿಕೊಡಬೇಕು ಎನ್ನುವ ವಿಚಾರ ಇತ್ತು. ಆದರೆ ಈಗ ಆರ್ಟಿಸಾನ್ಸ್, ಅಗ್ರಿಕಲ್ಚರ್ ಲೇಬರ್ ಎನ್ನುವ ಒಂದು ವಿಷಯವನ್ನು ತೆಗೆದುಕೊಂಡುಬಂದು, ಅಂಥವರನ್ನು ಬ್ಯಾಕ್‌ವರ್ಡ್‌ಕ್ಲಾಸ್ ಎಂದು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ. ನನಗಂತೂ ಯಾವುದೇ ಒಂದು ಕ್ಲಾಸ್ ತೆಗೆದುಕೊಂಡರೂ ಅದರಲ್ಲಿ ಜಾತಿ ಬರುವುದಿಲ್ಲ. ಮಾನ್ಯ ಮೊಯಿಲಿಯವರು ಹೇಳಿದಹಾಗೆ ಕ್ಲಾಸ್ ಎಂದರೆ ಪ್ರತಿಯೊಂದು ಜಾತಿಯಲ್ಲೂ ಕ್ಲಾಸ್ ಇದೆ. There are only two classes· Have and Havenots. There is contradiction between these classes. ಜಾತಿಯನ್ನು ತೆಗೆದುಕೊಂಡರೆ, ಜಾತಿ ಜಾತಿಗೆ ಪ್ರಾತಿನಿಧ್ಯವನ್ನು ಕೊಡುವಾಗ ಯಾರನ್ನು ಬ್ಯಾಕ್‌ವರ್ಡ್‌ಕ್ಲಾಸ್ ಎಂದು ತಿಳಿದುಕೊಳ್ಳಬೇಕು? ಮೊದಲು ಹಾವನೂರ್ ಕಮಿಷನ್ ತೆಗೆದುಕೊಂಡ ಜಾತಿಯೋ, ಅಥವಾ ವೆಂಕಟಸ್ವಾಮಿ ಕಮಿಷನ್ ತೆಗೆದುಕೊಂಡ ಜಾತಿಯೋ ? ಜನತಾ ಸರ್ಕಾರ ಬಂದಮೇಲೆ ೯೪ ಪರ್ಸೆಂಟ್ ಬ್ಯಾಕ್‌ವರ್ಡ್‌ಕ್ಲಾಸ್ ಎಂದು ತೆಗೆದುಕೊಂಡರೆ, ತಾವು ತೆಗೆದುಕೊಂಡ ಮಂಡಲ್ ಪಂಚಾಯತಿಯಲ್ಲಿ ಒಂದು ಪರ್ಸೆಂಟ್ ಇಡಿ ಜಿಲ್ಲೆಯ ಟೋಟಲ್ ಇರಬೇಕು. ಕೆಳಗಡೆ ಇರಬಾರದು, ಅಂಥವರನ್ನು ಬಿ.ಸಿ. ಎಂದು ಕನ್‌ಸೀಡರ್ ಮಾಡುತ್ತೀರಾ ? ಈ ವಿಷಯವನ್ನು ತಾವು ಏನು ಹೇಳಲಿಲ್ಲ. ಯಾವ ಜನ ಬ್ಯಾಕ್‌ವರ್ಡ್ ಕ್ಲಾಸ್ ಎಂದು. ದಯವಿಟ್ಟು ಕ್ಲಾರಿಫಿಕೇಷನ್ ಆಗಬೇಕು. ಲಿಂಗಾಯತರಲ್ಲಿ ಅಗ್ರಿಕಲ್ಚರ್ ಲೇಬರರ್ಸ್ ಇದ್ದಾರೆ. ಒಕ್ಕಲಿಗರಲ್ಲಿ ಇದ್ದಾರೆ, ಹರಿಜನರಲ್ಲಿ ಲ್ಯಾಂಡ್‌ಲಾರ್ಡ್‌ಗಳು ಇದ್ದಾರೆ. ಹರಿಜನರಲ್ಲಿ ಅಗ್ರಿಕಲ್ಚರ್ ಲೇಬರರ್ಸ್ ಇದ್ದಾರೆ. ಕುರುಬರಲ್ಲಿ ಅಗ್ರಿಕಲ್ಚರ್, ಅವರೆಲ್ಲರೂ ಅಗ್ರಿಕಲ್ಚರ್ ಲೇಬರ್ಸ್. ಅಗ್ರಿಕಲ್ಚರ್ ಲೇಬರರ್ಸ್ ಎಂದು ಹೇಳಿ ಅವರನ್ನು ಮಂಡಲ್ ಪಂಚಾಯತ್‌ಗಳಿಗೆ ಒಯ್ದು ಮಂಡಲ್‌ಗಳ ಅಧಿಕಾರವನ್ನು ಕೊಡಬೇಕೆಂದು ಯೋಚನೆ ಮಾಡಿದ್ದೀರಾ ? ನನಗೆ ತಿಳಿದಮಟ್ಟಿಗೆ ಜಾತಿಯ ಆಧಾರದಮೇಲೆ ಆರ್ಟಿಸಾನ್ಸ್, ಅಗ್ರಿಕಲ್ಚರ್ ಲೇಬರರ್ಸ್ ಎಂದು ಯಾವುದೇ ಜನರನ್ನು ಸೇರಿಸಲಿಕ್ಕೆ ಇದು ಒಂದು ಕುತಂತ್ರ ನಡೆಯುತ್ತಿದೆ ಎಂದು ನನಗನಿಸುತ್ತಿದೆ.

ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಸನ್ಮಾನ್ಯ ಅಧ್ಯಕ್ಷರೇ ಮೊಟ್ಟಮೊದಲನೆಯದಾಗಿ ಈ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ೨೦೮ನೇಸೆಕ್ಷನ್ (೧)ಗೆ ಅಮೆಂಡ್‌ಮೆಂಟ್ ತಂದಿರುತ್ತೀರಿ. ಇದು ಜರೂರು ಇತ್ತೆ ಎನ್ನುವುದು ಪ್ರಶ್ನೆ ? ಇದನ್ನು ಎಲ್ಲರೂ ಒಪ್ಪಿ ಒಮ್ಮತದಿಂದ ಪಾಸು ಮಾಡುವಾಗ ಇದರ ಬಗ್ಗೆ ಹಿಂದುಳಿದ ಜನ ಯಾರು ಎನ್ನುವುದನ್ನು ಗುರುತಿಸಿ, ಆಗಿನ ಪರಿಸ್ಥಿತಿಯಲ್ಲಿ ನಾವು ಹಿಂದುಳಿದ ಜನರಿಗೆ ಪ್ರಾತಿನಿಧ್ಯ ಸಿಗಬೇಕು ಎನ್ನುವ ದೃಷ್ಟಿಯಿಂದ ಇಡೀ ಸದನ ಇದನ್ನು ಒಪ್ಪಿತು. ಅನಂತರ ಈ ಜನತಾ ಸರ್ಕಾರವು ಬಂದ ನಂತರ ಚುನಾವಣೆಗಳನ್ನು ನಡೆಸಿ ರಾಜ್ಯ ಆಡಳಿತ ನಡೆಸುವುದಕ್ಕೆ ವಿಕೇಂದ್ರೀಕರಣ ಮಾಡಬೇಕೆಂದು ಹೇಳಿ, ರಾಜ್ಯದ ಯಾವುದೇ ಆಡಳಿತವನ್ನು ನಡೆಸಲಿಕ್ಕೆ ಪ್ರತಿನಿಧಿಗಳು ಬೇಕೆಂದು ತೀರ್ಮಾನ ಮಾಡಿತು. ಸುಮಾರು ೮–೧೦ ವರ್ಷಗಳಿಂದ ಪಂಚಾಯಿತಿಗಳಿಗೆ ಆಗಲಿ, ಅಥವಾ

ತಾಲ್ಲೂಕ್ ಬೋರ್ಡ್‌ಗಳಿಗೆ ಆಗಲಿ ಎಲೆಕ್ಷನ್ ಮಾಡಿರಲಿಲ್ಲ, ತಾವು ಬಂದ ನಂತರ ಬೆಂಗಳೂರಿನಲ್ಲಿ ರತಕ್ಕಂಥ ಜನರು ಗುಲ್ಬರ್ಗಾಕ್ಕೆ ಬರಲಿಕ್ಕೆ ಆಗುವುದಿಲ್ಲವೆಂದು, ಅದಕ್ಕಾಗಿ ಈ ಮಸೂದೆಯನ್ನು ತಂದು ಅದೇ ಜನ ಆಡಳಿತ ತಂತ್ರವನ್ನು ಕೈಯಲ್ಲಿ ಇಟ್ಟುಕೊಳ್ಳಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಿದಿರಿ. ಬಹಳ ಒಳ್ಳೆಯ ಕೆಲಸ ಮಾಡಿದಿರಿ. ಇದರ ಬಗ್ಗೆ ಅನೇಕ ವಿಧವಾಗಿ ಇಲ್ಲಿ ನಾವು ಚರ್ಚೆ ಮಾಡಿದ್ದೇವೆ. ಹಿಂದುಳಿದ ಜನಾಂಗ ಮಂಡಲ್ ಪಂಚಾಯತ್‌ಗಳಲ್ಲಿ ಇರಬೇಕು ಎನ್ನತಕ್ಕಂಥ ಕಾಯಿದೆ ಇದೆ. ಮೊನ್ನೆ ಹಾವನೂರ್ ಕಮಿಷನ್ ಪ್ರಕಾರ ಅದರಲ್ಲಿ ಬಂದಂಥ ಜನ ಯಾವುದೇ ಹಳ್ಳಿಯಲ್ಲಿ ಪ್ರಾತಿನಿಧ್ಯ ಸಿಕ್ಕದೆ ಇದ್ದಲ್ಲಿ ಅಂಥ ಜನರನ್ನು ನಾಮಕರಣ ಮಾಡುತ್ತಾರೆ ಎನ್ನುವ ವಿಷಯ ಇತ್ತು. ಮೊದಲನೆಯದಾಗಿ ಯಾವುದೇ ಒಂದು ಸಂಘಟನೆ ಅಥವಾ ಪ್ರಜಾತಂತ್ರದ ಒಂದು ತಳಹದಿಯಿಂದ ಆರಿಸಿಬಂದ ಜಿಲ್ಲಾ ಪರಿಷತ್ತಿಗೆ ಮಂಡಲ್ ಪಂಚಾಯತ್‌ಗಳಿಗೆ ನಾಮಿನೇಷನ್ ಮಾಡುವುದು ಸೂಕ್ತವೆನ್ನುವುದನ್ನು ನಾನು ಒಪ್ಪುವುದಿಲ್ಲ ೬೮ ಸಾವಿರ ಮಂಡಲ್ ಪಂಚಾಯತಿಗಳಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಜನರು ಇದ್ದಾರೆ ಎಂದು ಪರಿಗಣಿಸಿದ್ದೀರಿ. ಆ ಜನರು ಇವೊತ್ತು ಆರಿಸಿ ಬಂದಿದ್ದಾರೆ. ನಮ್ಮ ಕಡೆಯಲ್ಲಿ ಕುರುಬ ಉಪ್ಪಾರಜನ ಯಾವುದೇ ಒಂದು ಹಳ್ಳಿಯಲ್ಲಿ ಪ್ರಾತಿನಿಧ್ಯವಿದ್ದು ಈ ಜನ ಒಂದು ವೇಳೆ ಮಂಡಲ್ ಪಂಚಾಯತ್‌ಗೆ ಬರದೆ ಇದ್ದಲ್ಲಿ ಸರ್ಕಾರ ಆ ಜನರನ್ನು ನಾಮಕರಣ ಮಾಡಬೇಕು, ಆ ಜನಾಂಗಕ್ಕೆ ಪ್ರಾತಿನಿಧ್ಯ ಸಿಗಬೇಕು, ಆ ಜನಾಂಗದ ಬಗ್ಗೆ ವಿಚಾರ ವಿನಿಮಯ ಆಗಬೇಕು ತಾವು ಏನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತುಗಳ ಚುನಾವಣೆಗಳನ್ನು ಮಾಡಿದ್ದೀರಿ ಇದರ ಉದ್ದೇಶ ಸಫಲವಾಗಬೇಕು. ಜನರಿಂದ ಆರಿಸಿದ ಜನರೇ ರಾಜಕೀಯ ಮಾಡಬೇಕೆಂದು ಜನ ಹೇಳುವಾಗ ನಾಮಿನೇಷನ್ ಏತಕ್ಕೆ ? ಇಡೀ ಕರ್ನಾಟಕ ರಾಜ್ಯದಲ್ಲಿ ಹೈಯಸ್ಟ್ ಮೆಜಾರಿಟಿಯಲ್ಲಿ ಈ ಜನರನ್ನು ಆರಿಸಿ ಕಳುಹಿಸಿದ್ದಾರೆ, ೧೮-೧೯ ಜಿಲ್ಲಾ ಪರಿಷತ್ತುಗಳು ತಮ್ಮ ಕೈಯಲ್ಲಿವೆ. ಸಾವಿರಾರು ಮಂಡಲ ಪಂಚಾಯಿತಿಗಳು ಸಿಕ್ಕಿವೆ. ಮೊನ್ನೆ ಖರ್ಗೆಯವರೊಡನೆ ಮಾತನಾಡುವಾಗ ಅವರು ಹೇಳುತ್ತಿದ್ದರು, ೩೬೦ ಮಂಡಲ ಪಂಚಾಯಿತಿಗಳೂ ಬ್ಯಾಲೆನ್ಸಿಂಗ್‌ನಲ್ಲಿವೆ. ಜನತಾ ಪಕ್ಷದವರು ನಾಮಿನೇಷನ್ ಮಾಡಿದರೆ ೩೬೦ ಮಂಡಳ ಪಂಚಾಯಿತಿಗಳೂ ಜನತಾದವರ ಫೇವರ್ ಆಗಬಹುದು. ಆನಂತರ ಪ್ರಧಾನ ಮತ್ತು ಉಪಪ್ರಧಾನದ ಚುನಾವಣೆ ಮಾಡಿ ಮುಂಬರುವ ಕೌನ್ಸಿಲ್ ಚುನಾವಣೆಗೆ ಓಟು ಹಾಕುವ ಅಧಿಕಾರ ಕೊಡುವ ಸಲುವಾಗಿ ವಿಚಾರ ಮಾಡಿದ್ದಾರೆಂದು ಹೇಳಿದರು, ಇರಬಹುದು. ಮುಂದೆ ಕೌನ್ಸಿಲ್ ಚುನಾವಣೆಯಲ್ಲಿ ಓಟು ಹಾಕುವ ಪದ್ಧತಿ ಇರುವಾಗ ಈಗಿನಿಂದಲೇ ತಯಾರಿ ಮಾಡಿಕೊಂಡು ಹೋಗುವುದು ಸರಿಯಲ್ಲ. ಪ್ರತಿಯೊಂದು ಮಂಡಲ ಪಂಚಾಯಿತಿಯಲ್ಲಿ ಇಬ್ಬರನ್ನು ಆರಿಸುವ ಜವಾಬ್ದಾರಿಯನ್ನು ಯಾರಿಗೆ ಕೊಟ್ಟಿದ್ದೀರಿ ? ೬೪೦೦ ರೂಪಾಯಿಗಳ ವಾರ್ಷಿಕ ವರಮಾನ ಇರದವರನ್ನು ಆರಿಸಿಕೊಳ್ಳುತ್ತಿದ್ದೀರಿ. ಇವರನ್ನು ಆರಿಸುವವರು ತಮ್ಮ ಪಕ್ಷದವರೆ. ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರಾಗಿರಬಹುದು ಅಥವಾ ಕಾರ್ಯದರ್ಶಿಯಾಗಿರಬಹುದು. ಜನತೆಯಿಂದ ಅರಿಸಿಬಂದಂತಹ ಸದಸ್ಯರು ತಮಗೆ ಹೆಸರು ಕೊಡಬಹುದು. ಇಷ್ಟೆಲ್ಲಾ ಮಾಡುವಾಗ ತಾವು ಕ್ಲಾಜ್ ಹಾಕಿದಂತೆ ಅಂದರೆ ೬೪೦೦ ರೂಪಾಯಿಗಳಿಗೆ ಜಾಸ್ತಿ ವರಮಾನ ಇರಬಾರದು, ಒಂದು ಪರ್ಸೆಂಟಿಗಿಂತ ಕಡಿಮೆ ಇರಬಾರದು ಇದೆಲ್ಲವನ್ನು ನೋಡಿಕೊಂಡು ಮಾಡುತ್ತಾರೆಯೆ ? ಇದು ಆಗುವುದಿಲ್ಲ. ಈ ರೀತಿ ಮಾಡುವುದಕ್ಕೆ ಹೋಗಬಾರದು. ಮಂಡಲ ಪಂಚಾಯಿತಿಗೆ ನಾಮಿನೇಷನ್ ಮಾಡಬೇಕೆಂದು ಏನು ನಿರ್ಣಯ ತರುತ್ತಿದ್ದೀರಿ ಅದನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳಿ ಈ ವಿಷಯದ ಬಗ್ಗೆ ಬಹಳಷ್ಟು ಚರ್ಚಿಸುವುದಕ್ಕೆ ಮನಸಿಲ್ಲ, ಹಾಡಿದ್ದೇ ಹಾಡೋ ಕಿಸು ಬಾಯಿದಾಸ, ಅಂದ ಹಾಗೆ ಹೇಳಿದ್ದನ್ನೇ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ನೀವು ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಹೇಳಿದ್ದೀರಿ, ನಾನು ಹೊರಗಡೆ ಹೋದಾಗ ಅಂದರೆ ಮಂಗಳೂರು ಗುಲ್ಬರ್ಗಾ, ಚಿತ್ರದುರ್ಗದ ಕಡೆ ನಾಮಿನೇಷನ್‌ಗೆ ವ್ಯವಸ್ಥೆ ಆಗಿ ೧೦ ೧೧ನೇ ತಾರೀಖು ಪ್ರಧಾನ ಉಪ ಪ್ರಧಾನ ಚುನಾವಣೆ ಮಾಡಬೇಕೆಂದು ತೀರ್ಮಾನವಾಗಿದೆ. ಈ ಪರಿಸ್ಥಿತಿ ಇದ್ದಲ್ಲಿ ನನಗನ್ನಿಸಿದ ಮಟ್ಟಿಗೆ ಈ ವಿಷಯದ ಮೇಲೆ ಚರ್ಚೆ ಮಾಡುವುದಕೆ ಅನುಮತಿ ಕೊಟ್ಟಿರುವುದು ಅಷ್ಟು ಸಮಂಜಸವಲ್ಲ ಅನ್ನಿಸುತ್ತದೆ. ಏಕೆಂದರೆ ಆ ಕಡೆ ಕೆಲಸ ನಡೆದಿರುವಾಗ ಈ ಒಂದು ವ್ಯವಸ್ಥೆ ಸರಿಯಾಗುವುದಿಲ್ಲ. ನಾನು ನೋಡಿದ ಹಾಗೆ ಎ. ಪಿ. ಎಂ. ಸಿ. ಮತ್ತಿತರ ಸಂಘ ಸಂಸ್ಥೆಗಳಲ್ಲಿ ಹಿಂದಿನ ಸರ್ಕಾರದವರು ನಾಮಿನೇಷನ್ ಮಾಡಿದ್ದರು. ತಾಲ್ಲೂಕು ಬೋರ್ಡುಗಳಿಗೆ ನಾಮಿನೇಷನ್ ಇರಲಿಲ್ಲ ಮುನಿಸಿಪಾಲಿಟಿ ಎಲೆಕ್ಷನ್ ಅನ್ನು ತಾವು ಮಾಡಿದ್ದೀರಿ ತಾವು ಬಂದ ನಂತರ ಚುನಾವಣೆ ಮಾಡಿದ ಮುನಿಸಿಪಾಲಿಟಿಗಳಲ್ಲಿ ಇದುವರೆಗೆ ಯಾರನ್ನೂ ನಾಮಿನಿ ಎಂದು ತಂಬಲಿಲ್ಲ. ಆ ಒಂದು ಸಂಸ್ಥೆಯಲ್ಲಿ

ಮಾಡಿದ್ದನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತಿಗೆ ಅನುಸರಿಸಬೇಕೆಂಬ ಸದುದ್ದೇಶವನ್ನಿಟ್ಟು ಕೊಂಡಿದ್ದರೆ ಆರ್ಟಿಸಾನ್ಸ್ ಅಗ್ರಿಕಲ್ಚರಲ್ ಲೇಬರರ್ಸ್ ಎಂದು ಏನು ಆ್ಯಡ್ ಮಾಡಿದ್ದೀರಿ ಅದನ್ನು ತೆಗೆದು ಹಾವನೂರ್ ಕಮೀಷನ್ ವರದಿಗೆ ಪ್ರಾತಿನಿಧ್ಯ ಕೊಟ್ಟರೆ ನಮ್ಮ ಅಭ್ಯಂತರ ಇಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್).— ಮಾನ್ಯ ಅಧ್ಯಕ್ಷರೆ, ಸುಮಾರು ೫–೬ ದಿನಗಳ ಕಾಲ ಧರಣಿ ಮಾಡಿ ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ತು ಮತ್ತು ತಾಲ್ಲೂಕು ಪಂಚಾಯಿತಿ ಅಡಿಯಲ್ಲಿ ಏನು ರೂಲ್ಸ್ ಮಾಡಿ ಕೆಲವು ಸದಸ್ಯರನ್ನು ನಾಮಿನೇಟ್ ಮಾಡತಕ್ಕ ತಿದ್ದುಪಡಿಯನ್ನು ತಂದಿದ್ದಾರೆ ಅದನ್ನು ವಿರೋಧ ಮಾಡಿದೆವು, ಈ ನಾಮಿನೇಷನ್ ಮಾಡತಕ್ಕ ಅವಶ್ಯಕತೆ ಇಲ್ಲವೆಂಬ ವಾದವನ್ನು ಪ್ರತಿ ಪಕ್ಷದ ನಾಯಕರು ಮತ್ತು ಅನೇಕ ಮಾನ್ಯ ಮಿತ್ರರು ಈಗಾಗಲೇ ಮಂಡಿಸಿದ್ದಾರೆ. ಪದೇಪದೇ ಸರ್ಕಾರದವರು ಹೇಳತಕ್ಕದ್ದು ಏನೆಂದರೆ ಜಿಲ್ಲಾ ಪರಿಷತ್, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯತಿ ಕಾನೂನು ಮಾಡುವಾಗ ಅದರಲ್ಲಿ ಮ್ಯಾಂಡೇಟರಿ ಪ್ರಾವಿಷನ್ ಮಾಡಿದೆ. ಆ ಪ್ರಾವಿಷನ್ ಪ್ರಕಾರ ಇವತ್ತು ನಾವು ನಾಮಿನೇಟ್ ಮಾಡುತ್ತಿದ್ದೇವೆ ಮತ್ತು ಈ ಕಾನೂನಿಗೆ ಈಗಾಗಲೇ ನೀವು ಒಪ್ಪಿಗೆಯನ್ನು ಕೊಟ್ಟಿದ್ದೀರಿ. ಪುನಃ ನಾಮಿನೇಷನ್ ಬೇಡ ಎಂದರೆ ಇದರಲ್ಲಿ ನಿಮ್ಮ ದುರುದ್ದೇಶ ಇದೆ ಎಂಬ ಮಾತನ್ನು ಅವರು ಹೇಳಿ ನಮ್ಮ ಮೇಲೆ ಚಾರ್ಜ್ ಮಾಡುತ್ತಿದ್ದಾರೆ. ಆದರೆ ಅಧ್ಯಕ್ಷರೇ, ಈ ಕಾನೂನು ಮಾಡುವಾಗ ಒಂದು ಪರಿಸ್ಥಿತಿ ಇತ್ತು. ಆಗ ಹಾವನೂರ್ ಕಮೀಷನ್ ರಿಪೋರ್ಟ್ ಜಾರಿಯಲ್ಲಿತ್ತು. ಹಾವನೂರ್ ಕಮಿಷನ್ ವರದಿ ಪ್ರಕಾರ ಯಾವ ಯಾವ ಜಾತಿಗಳನ್ನು ಯಾವ ಯಾವ ವರ್ಗಗಳನ್ನು ಹಿಂದುಳಿದವರು ಎಂದು ಪರಿಗಣಿಸಿದ್ದರು ಆ ಎಲ್ಲಾ ಜಾತಿಗಳವರು ತುಳಿತಕ್ಕೆ, ಶೋಷಣೆಗೆ ಒಳಪಟ್ಟಂಥ ಮತ್ತು ರಾಜಕೀಯವಾಗಿ ಮೇಲೆ ಬರತಕ್ಕ ಅವಕಾಶ ಇಲ್ಲದಂಥವರು. ಆ ಕಾರಣದಿಂದ, ಅವರಿಗೆ ಕೂಡ ಸಹಾಯ ಆಗಬೇಕೆಂಬ ದೃಷ್ಟಿಯಿಂದ ಅಂದಿನ ಕಾಲದಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದನ್ನು ಒಪ್ಪಿದ್ದಾರೆ. ಆದರೆ ಇವತ್ತು ಪರಿಸ್ಥಿತಿಯೇ ಬೇರೆ ಇದೆ. ಇವತ್ತು ಒಂದು ವೇಳೆ ವೆಂಕಟಸ್ವಾಮಿ ರಿಪೋರ್ಟನ್ನು ಈ ಸರ್ಕಾರದವರು ಒಪ್ಪಿಕೊಂಡು ಅದನ್ನು ಜಾರಿಯಲ್ಲಿ ತಂದಿದ್ದರೆ ಮತ್ತು ವೆಂಕಟಸ್ವಾಮಿ ರಿಪೋರ್ಟ್ ಪ್ರಕಾರ ಬ್ಯಾಕ್‌ವರ್ಡ್‌ಕ್ಲಾಸ್ ಜನರನ್ನು ನಾಮಿನೇಟ್ ಮಾಡುತ್ತೇವೆ ಎಂದರೆ ಅದು ಬೇರೆಯಾಗುತ್ತಿತ್ತು. ಆದರೆ ವೆಂಕಟಸ್ವಾಮಿ ರಿಪೋರ್ಟ್ ಜಾರಿಗೇ ಬರಲೇ ಇಲ್ಲ. ತಮಗೆ ಅನುಕೂಲವಾಗುವ ರೀತಿಯಲ್ಲಿ ಎ, ಬಿ, ಸಿ, ಡಿ, ಇ ಎಂದು ಗ್ರೂಪ್ಸ್ ಮಾಡಿ ೯೨ ಪರ್ಸೆಂಟ್ ಜನ ಬ್ಯಾಕ್‌ವರ್ಡ್ ಕ್ಲಾಸ್ ಎಂದು ಹೇಳಿ ಘೋಷಣೆ ಮಾಡಿ ಇವತ್ತು ಪುನಃ ಅದೂ ಸರಿಹೋಗುವುದಿಲ್ಲ ಎಂದು ಇನ್ನೊಂದು ಅರ್ಥವನ್ನು ಕಾನೂನಿನ ಪ್ರಕಾರ ಮಾಡಿದ್ದಾರೆ. ಸೆಕ್ಷನ್ ೨ ಸಬ್‌ಕ್ಲಾಸ್ ೨ರ ಪ್ರಕಾರ ಬ್ಯಾಕ್‌ವರ್ಡ್‌ಕ್ಲಾಸ್ ಎಂದರೆ ಏನು ಎಂದು ಹೇಳಿ ಅದನ್ನು ಹಿಡಿದುಕೊಂಡು ಪುನಃ ಆ ಡೆಫನಿಷನ್ ಬದಲಾವಣೆ ಮಾಡಿ ಹೊಸ ಆಜ್ಞೆಯನ್ನು ಹೊರಡಿಸತಕ್ಕದ್ದು, ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಂಡಂತಾಗಿದೆ. ಇದರಿಂದ ಅವರ ಉದ್ದೇಶ ಏನು ಎಂದು ಅರ್ಥವಾಗುತ್ತದೆ. ಅವರಿಗೆ ಬ್ಯಾಕ್‌ವರ್ಡ್ ಕ್ಲಾಸ್ ಜನರಿಗೆ ಸಹಾಯ ಮಾಡಬೇಕೆಂಬ ಉದ್ದೇಶ ಇಲ್ಲ. ಆ ಉದ್ದೇಶ ಇದ್ದಿದ್ದರೆ, ನಿಜವಾಗಿ ಬ್ಯಾಕ್‌ವರ್ಡ್ ಕ್ಲಾಸ್ ಜನರಿಗೆ ಸಹಾಯ ಮಾಡಬೇಕೆಂಬ ಇಚ್ಛೆ ಇದ್ದಿದ್ದರೆ ಮೊಟ್ಟ ಮೊದಲನೆಯದಾಗಿ ವೆಂಕಟಸ್ವಾಮಿ ರಿಪೋರ್ಟನ್ನು ಇಲ್ಲಿ ಚರ್ಚೆಗೆ ತರುತ್ತಿದ್ದೀರಿ, ಅಥವಾ ವೆಂಕಟಸ್ವಾಮಿ ರಿಪೋರ್ಟನ್ನು ಅಕ್ಸೆಪ್ಟ್ ಮಾಡಿ ಯಾರು ಯಾರಿಗೆ ನ್ಯಾಯ ಕೊಡಬೇಕಾಗಿತ್ತೋ ಅದರ ಬಗ್ಗೆ ಯೋಚನೆ ಮಾಡುತ್ತೇವೆ ಎಂದು ಹೇಳಬಹುದಾಗಿತ್ತು. ಆದರೆ ಆ ತರಹ ಮಾಡಲಿಲ್ಲ. ವೆಂಕಟಸ್ವಾಮಿ ರಿಪೋರ್ಟನ್ನು ರಿಜೆಕ್ಟ್ ಮಾಡಿ ಎಲ್ಲರಿಗೂ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿ ಏನು ಮಾಡಿದ್ದಾರೆ? ವೆಂಕಟಸ್ವಾಮಿ ಅವರು ಹೇಳಿದ್ದನ್ನು ಭೂಪತಿಯವರು ಕೋಟ್ ಮಾಡಿದ್ದಾರೆ. ಒಂದು ಹಂಡೆ ನೀರಿನಲ್ಲಿ ಸ್ವಲ್ಪ ಹಾಲು ಹಾಕಿ ಎಲ್ಲರಿಗೂ ಕುಡಿಯಿರಿ ಎಂದು ಹೇಳಿದ ಹಾಗೆ ಆಗಿದೆ ಎಂದು ಅವರು ಹೇಳಿದ್ದಾರೆ. ೪೭ ಪರ್ಸೆಂಟ್ ಜನರಿಗೆ ಆಗತಕ್ಕ ಅನುಕೂಲವನ್ನು ೯೨ ಪರ್ಸೆಂಟ್ ಜನರಿಗೆ ಕೊಟ್ಟು ಇದನ್ನು ನಾವು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಇದರಿಂದ ಏನಾಗಿದೆ ಎಂದರೆ ಈ ನಾಮಿನೇಷನ್‌ನಲ್ಲಿ ಯಾರಿಗೆ ನೀವು ಸಹಾಯ ಮಾಡಬೇಕೆಂಬ ಮನಸ್ಸಿದೆ ಅದು ಆಗುವುದಕ್ಕೆ ಸಾಧ್ಯವಿಲ್ಲ. ಮತ್ತು ಆ ಪ್ರಾಮಾಣಿಕತನದಿಂದ ಈ ಕಾನೂನನ್ನು ತಂದಿಲ್ಲ. ಕೇವಲ ರಾಜಕೀಯ ಉದ್ದೇಶದಿಂದ ಮಂಡಲ ಪಂಚಾಯಿತಿಗಳನ್ನು

ತಮ್ಮ ವಶಕ್ಕೆ ಪಡೆದುಕೊಳ್ಳಬೇಕು ಎಂಬ ದುರುದ್ದೇಶದಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಇದರಲ್ಲಿ ಏನು ಹೇಳುತ್ತಾರೆ? ಬ್ಯಾಕ್‌ವರ್ಡ್ ಕ್ಲಾಸಸ್ ಎಂಬುದಕ್ಕೆ ಟೆಸ್ಟ್ ಏನು ಎನ್ನತಕ್ಕಂತಹದ ಬಗ್ಗೆ ಕೂಡ ಕಾನ್ಸಿಟಿಟ್ಯೂಷನಲ್ ಎಕ್ಸ್‌ಫರ್ಟ್ಸ್ ಶ್ರೀ ದುರ್ಗಾದಾಸ್ ಅವರೂ ಕೂಡ ಹೇಳಿದ್ದಾರೆ. ಶ್ರೀಮಾನ್ ಕೆ. ಎಚ್. ಶ್ರೀನಿವಾಸ್ ಅವರು ಅದನ್ನು ಓದಿ ಹೇಳಿದ್ದಾರೆ. ಒಂದು ಭಾಗವನ್ನು ಅವರು ರೆಫರ್ ಮಾಡಲಿಲ್ಲ. ಅದನ್ನು ನಾನು ಓದಿ ಹೇಳುತ್ತೇನೆ. ಅವರು ಏನು ಹೇಳಿದ್ದಾರೆಂಬುದರ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಏಕೆಂದರೆ ಮಾನ್ಯ ಮಂತ್ರಿಗಳಾದ ಲಕ್ಷ್ಮೀಸಾಗರ್‌ರವರಿಗೆ ಇದು ಗೊತ್ತಿದೆ. ಏಕೆಂದರೆ ಅವರು ಪ್ರೊಫೆಸರ್ ಆಗಿದ್ದು ಇದನ್ನು ಯಾವಾಗಲೂ ಹುಡುಗರಿಗೆ ಪಾಠ ಹೇಳಿಕೊಡುತ್ತಿದ್ದಂತಹವರು. ಆದರೆ ಇದನ್ನು ಆಚರಣೆಗೆ ತರುವಾಗ, ಇದನ್ನು ಇಂಪ್ಲಿಮೆಂಟ್ ಮಾಡುವಾಗ ಇದನ್ನು ಬಿಟ್ಟುಬಿಡುತ್ತಾರೆಯೋ? ಪಾಠ ಮಾಡುವಾಗ ಹೇಳುತ್ತಾರೆ. ಭಾಷಣ ಮಾಡುವಾಗ ಹೇಳುತ್ತಾರೆ. ಜನರಿಂದ ಮತ ಬೇಕಾದಾಗ ಇದನ್ನೆಲ್ಲಾ ಹೇಳುತ್ತಾರೆ. ಇದರಿಂದಾಗಿ ಯಾರಿಗೆ ಅನ್ಯಾಯವಾಗುತ್ತಿದೆ ಯಾರಿಗೆ ಸಹಾಯಕ ವಾಗುತ್ತಿದೆ ಎಂಬುದನ್ನು ಹೇಳುವುದರ ಬಗ್ಗೆ ಬಹಳ ಮೌನವಾಗಿದ್ದಾರೆ.

"It is to be noted that while Article 16 (4) simply mentions any backward class of citizens, Article 15 (4) qualifies the expression by the words 'socially and educationally'. In order to satisfy the requirement of Article 15 (4) the class must be both socially and educationally backward. This mere educational backwardness is not enough if the class has no social backwardness and vice-versa."

ಹೇಳಿ ಮುಂದೆ,

"Scheduled Caste and Tribe being mentioned together with the Backward Classes in Article 15(4), it is evident that by the expression backward classes, the clause refers to classes of persons other than the members of the scheduled caste and tribe. At the same time it is also clear such class may be classified backward or in the matter of backward class comparable to scheduled caste and tribe.

ಇಂತಹವರಿಗೆ ಮಾತ್ರ ಯಾರು those who can be comparable with Scheduled Caste and Scheduled Tribe, they should be considered as backward classes. ಇಂತಹವರಿಗೆ ಬ್ಯಾಕ್‌ವರ್ಡ್ ಕ್ಲಾಸ್ ಎಂದು ತೆಗೆದುಕೊಳ್ಳಬೇಕು. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಯಾರು ಹಿಂದುಳಿದವರು ಎಂದು ಕ್ಲಿಯರ್ ಕಟ್ಟಾದ ಕ್ರೈಟೀರಿಯಾ ಇದೆ. ಇದನ್ನು ಆಧಾರವಾಗಿಟ್ಟುಕೊಂಡೇ ವೆಂಕಟಸ್ವಾಮಿ ಆಯೋಗದವರು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟರು. ನಿಮ್ಮಲ್ಲಿ ಶಕ್ತಿ ಇದ್ದರೆ, ನಿಮ್ಮಲ್ಲಿ ಆ ಒಂದು ಹಾನೆಸ್ಟಿ, ಸಿನ್ಸಿಯಾರಿಟಿ ಪರ್ಪಸ್ ಇದ್ದರೆ, ತಾವು ಅದನ್ನು ಇಂಪ್ಲಿಮೆಂಟ್ ಮಾಡಬೇಕಾಗಿತ್ತು. ಏಕೆ ತಾವು ಇಂಪ್ಲಿಮೆಂಟ್ ಮಾಡಲಿಲ್ಲ ಎಂದು ನಾನು ತಮ್ಮನ್ನು ಕೇಳುತ್ತೇನೆ. ನಾಮಿನೇಷನ್‌ಗೋಸ್ಕರ ಒಂದು ಡೆಫಿನೇಷನ್ ಅನ್ನು ಒಂದು ಸಾರಿ ಕೊಡುತ್ತಾರೆ. ಇನ್ನೊಂದು ಸಾರಿ ಇನ್ನೊಂದು ಡೆಫೆನಿಷನ್ ಅನ್ನು ಕೊಡುತ್ತಾರೆ. ಪ್ರಾರಂಭದಲ್ಲಿ ಏನು ಡೆಫ್ನೆನಿಷನ್ ಕೊಟ್ಟಿದ್ದಾರೆಂಬುದನ್ನು ಈಗಾಗಲೇ ಮಾನ್ಯ ಸದಸ್ಯರು ಓದಿ ಹೇಳಿದ್ದಾರೆ. ಪುನಃ ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. In Rule-2 they have said:

"Backward Class means the backward community, backward castes and backward tribes notified by the Government

in Order No. DPAR I SBC 77 dated 4th March 1977 or any such other order as may be issued from time to time."

ಎಂದು ಹೇಳಿದ್ದಾರೆ. ಇವತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಆಧಾರ ಏನು? ಅದು ಎಲ್ಲಿದೆ? ಒಂದು ಡೆಫೆನಿಷನ್ ಅನ್ನು ೧೯೭೭ರಲ್ಲಿ ಹೊರಡಿಸಿದ ಪ್ರಕಾರ ಒಪ್ಪಿಕೊಂಡಿದ್ದೇವೆ.

"Such other order" ಹೊಸದಾಗಿ ಬರತಕ್ಕಂತಹದ್ದು ಯಾವುದು? ನೀವೇ ಹೊಸದಾಗಿ ಇನ್ನೊಂದನ್ನು ಸೃಷ್ಟಿ ಮಾಡಿ, ವೆಂಕಟಸ್ವಾಮಿ ಕೊಟ್ಟಂತಹ ವರದಿಯನ್ನೇ ಬಿಟ್ಟುಬಿಟ್ಟು, ಎ, ಬಿ, ಸಿ, ಡಿ, ಎಂಬುದಾಗಿ ಕೆಟಗರಿಮಾಡಿ ೧೩-೧೦-೧೯೮೬ರಲ್ಲಿ ಆರ್ಡರ್ ಹೊರಡಿಸಿದರು. ಆ ಆರ್ಡರ್‌ನಲ್ಲೇ ಇವೆಲ್ಲಾ ಬರಬೇಕು. ನಂತರ ಡ್ರಾಫ್ಟ್ ಆರ್ಡರ್ ಎಂದು ೨೫-೨-೧೯೮೭ರಲ್ಲಿ ಕೊಟ್ಟರು. ತಕ್ಷಣ ಏನು ವ್ಯತ್ಯಾಸ ಇತ್ತು ಅದರಲ್ಲಿ ಎಂದರೆ, ನನಗನ್ನಿಸಿದ ಹಾಗೆ ಮೇಲ್ಮನೆಯಲ್ಲಿ ಒಬ್ಬ ಸದಸ್ಯರು ಇದರ ಬಗ್ಗೆ ಎಕ್ಸೆಪ್ಷನ್ ತೆಗೆದುಕೊಂಡರು. ಆ ರೀತಿ ಎಕ್ಸೆಪ್ಷನ್ ತೆಗೆದುಕೊಂಡಾಗ ಇದರಲ್ಲಿ ಸುಧಾರಣೆಯನ್ನು ತರುತ್ತೇವೆಂದು ಡ್ರಾಫ್ಟ್ ನೋಟೀಫಿಕೇಷನ್ ಏನು ಇತ್ತು ಅದನ್ನು ಬದಲಾವಣೆ ಮಾಡಿ ಹೊಸದಾಗಿ ಈ ರೀತಿಯಾದ ನೋಟಿಫಿಕೇಷನ್ ಅನ್ನು ತಂದಿದ್ದಾರೆ. ಯಾವುದು ಎಂದರೆ,

Provided that no person shall be deemed to belong to a backward class unless the population of the caste or tribe to which he belongs is less than one percent of the total population of the District."

ಮೊದಲು ಏನಿತ್ತು ಆ ಒಂದು ರೂಲ್‌ಗೆ ಫರ್ದರ್ ಅಮೆಂಡ್‌ಮೆಂಟ್ ತಂದು ೨೬-೩-೧೯೮೭ಕ್ಕೆ ಫೈನಲ್ ನೋಟಿಫಿಕೇಷನ್ ಇಷ್ಯೂ ಮಾಡಿ ಇವತ್ತು ನಾಮಿನೇಟ್ ಮಾಡಿ ಎಂದು ಹೇಳಿ, ಆದೇಶವನ್ನು ಕೊಟ್ಟಿದ್ದೀರಿ. ಜಿಲ್ಲಾಪರಿಷತ್ತುಗಳಿಗೆ ಸಂಪೂರ್ಣ ಅಧಿಕಾರ ಇದೆ ಅವರು ನಾಮಿನೇಟ್ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದೀರಿ. ಇನ್ನೊಂದು ಕಡೆ ನೀವು ಚುನಾವಣೆಗಳನ್ನು ವಿತ್‌ಹೆಡ್ ಮಾಡಿ ನಾವು ಕ್ಲಾರಿಫಿಕೇಷನ್ ಕೊಡುತ್ತೇವೆ, ಕ್ಲಾರಿಫಿಕೇಷನ್ ಕೊಟ್ಟನಂತರ ನೀವು ಮುಂದೆ ನಾಮಿನೇಟ್ ಮಾಡತಕ್ಕ ಎಕ್ಸರ್‌ಸೈಸ್ ಮಾಡಬೇಕೆಂದು ಟೆಲೆಕ್ಸ್ ಕೊಟ್ಟಿರಿ. ಜಿಲ್ಲಾಪರಿಷತ್ತುಗಳಿಗೆ ಹಕ್ಕು ಇದ್ದಾಗ ಅವರಲ್ಲೇ ಇರತಕ್ಕ ಗೌರ್ನಮೆಂಟ್ ಆರ್ಡರ್ ಆಧಾರದ ಮೇಲೆ ಅವರು ನಾಮಿನೇಷನ್ ಮಾಡುತ್ತಿದ್ದರು. ಅದು ೧೯೭೭ರ ಆಧಾರ ಇರಬಹುದು ಅಥವಾ ೧೯೮೬ ಆಧಾರ ಇರಬಹುದು. ತಾವು ಯಾರ ಇಂಟರೆಸ್ಟ್‌ಗೆ ಇದನ್ನು ಮಾಡಿದಿರಿ ? ಹೊಸ ಒಂದು ಲಿಸ್ಟ್ ಕೊಡುತ್ತೇವೆ, ಹೊಸ ವ್ಯಾಖ್ಯಾನ ಕೊಡುತ್ತೇವೆ ಆ ಡೆಫನೇಷನ್ ಪ್ರಕಾರ ಅದನ್ನು ತಿಳಿದುಕೊಂಡು ನಾಮಿನೇಷನ್ ಮಾಡಿ ಈ ಮಂಡಲ ಪಂಚಾಯಿತಿಗಳನ್ನು ತಮ್ಮ ಕಬ್ಜದಲ್ಲಿ ತೆಗೆದುಕೊಳ್ಳಿ, ತಮ್ಮ ವಶದಲ್ಲಿ ತೆಗೆದುಕೊಳ್ಳಿ ಎನ್ನುವ ಅರ್ಥದಲ್ಲಿ ಟೆಲೆಕ್ಸ್ ಮೆಸೇಜನ್ನು ಕೊಟ್ಟಿದ್ದೀರಿ. ಬ್ಯಾಕ್‌ವರ್ಡ್ ಕ್ಲಾಸ್‌ನವರನ್ನು ಉದ್ಧಾರ ಮಾಡುವವರೇ ನೀವು ? ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಆಸಕ್ತಿ ವಹಿಸಿ ನಿಜವಾದ ರೆಪ್ರಸೆಂಟೇಷನ್ ಕೊಡಬೇಕೆಂಬ ಉದ್ದೇಶದಿಂದ ನೀವು ಮಾಡಿದ್ದೀರಾ ? ಇಲ್ಲ. ಇವತ್ತು ಕಾಂಗ್ರೆಸ್‌ನವರು ಮಾತನಾಡಿದರೆ, ಏನೋ ಅವರು ಇದಕ್ಕೆ ವಿರುದ್ಧ ಆಗಿದ್ದಾರೆ, ನಾಮಿನೇಷನ್‌ಗೆ ವಿರುದ್ಧ ಆಗಿದ್ದಾರೆ, ಎಂದು ಹೇಳುವುದು, ಈ ಉದ್ದೇಶ ನಮಗೆ ಇಲ್ಲ. ಇವತ್ತು ತಾವು ಮೂರು ಸಲ ಇದನ್ನು ಬದಲಾವಣೆ ಮಾಡಿದ್ದೀರಿ. ೪-೩-೧೯೮೭ರಲ್ಲಿ ಒಂದು ಡೆಫನೇಷನ್ ಕೊಟ್ಟಿರಿ, ೨೫ನೇ ಫೆಬ್ರುವರಿಯಲ್ಲಿ ಒಂದು ಡೆಫನೇಷನ್ ಬಂತು. ಪುನಃ ಅದಕ್ಕೆ ಮತ್ತೊಂದು ಸೇರಿಸಿ ೨೬ನೇ ಮಾರ್ಚಿಯಲ್ಲಿ ಒಂದು ಹೊಸದಾಗಿ ತಂದಿದ್ದೀರಿ. ಎಂದರೆ ನಾವು ಏನು ಹೇಳಬೇಕು ? ನಿಜವಾಗಿಯೂ ಇವತ್ತು ಪ್ರಜಾಪ್ರಭುತ್ವವನ್ನು ಮುಗಿಸಬೇಕು, ಪ್ರಜಾ ಪ್ರಭುತ್ವವನ್ನು ಕೊಲೆ ಮಾಡಬೇಕು; ಏನು ಪ್ರಜಾಪ್ರಭುತ್ವ ನೀತಿ ನಿಯಮದ ಪ್ರಕಾರ ಚುನಾಯಿತವಾಗಿರುವ ಮಂಡಲ ಪಂಚಾಯಿತಿಗಳು ಇವೆ ಅವನ್ನು ವಶಪಡಿಸಿಕೊಳ್ಳಬೇಕು ಎನ್ನುವ ಧ್ಯೇಯದಿಂದ, ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ದುರುದ್ದೇಶದಿಂದ ಈ ಕಾನೂನನ್ನು ತಂದಿದ್ದೀರಿ. ಇನ್ನೊಂದು ವಿಷಯವನ್ನು ನಾನು ಇವತ್ತು ಹೇಳುತ್ತೇನೆ ಅಧ್ಯಕ್ಷರೇ. ನಮಗೆ ಬಹುಮಂತ ಸಿಕ್ಕಿದೆ, ನಾವು ಏನು

ಬೇಕಾದರೂ ಮಾಡಬಹುದು ಎಂದು ಯಾವಾಗಲೂ ಹೇಳತಕ್ಕ ಇವರಿಗೆ ನಿಜವಾಗಿಯೂ ಬಹುಮತ ಇಲ್ಲ. ಇದುವರೆವಿಗೂ ಇವರಿಗೆ ಸಿಕ್ಕಿದ್ದು ಎಷ್ಟು ? ಅಧ್ಯಕ್ಷರೇ ಮಂಡಲಪಂಚಾಯಿತಿಯ ಒಟ್ಟು ಸ್ಥಾನಗಳು ೫೪ ೮೯೪ ಇವುಗಳಲ್ಲಿ ಜನತಾ ಪಕ್ಷದವರು ಚುನಾಯಿತರಾಗಿರುವುದು ೨೭ ಸಾವಿರ, ಕಾಂಗ್ರೆಸ್‌ನವರು ಚುನಾಯಿತರಾಗಿರುವುದು ೨೦,೬೭೯, ಬಿಜೆಪಿ.ಯವರು ಚುನಾಯಿತರಾಗಿರುವುದು ೫೭೬ ಹಾಗೂ ಇತರರು ೫೭೮೩ ಸ್ಥಾನಗಳಲ್ಲಿ, ಒಟ್ಟು ೫೪,೩೭೧ ಸ್ಥಾನಗಳು ಆಗುತ್ತವೆ. ಇದರಲ್ಲಿ ಟೋಟಲ್ ಪರ್ಸೆಂಟೇಜ್ ಆಫ್ ಓಟ್ ಸೆಕ್ಯೂರ್ಡ್ ಜನತಾ ಪಕ್ಷ ೫೦.೩ ಆದರೆ ಇತರರು ೪೯.೭ ಪರ್ಸೆಂಟ್ ಆಗಿದ್ದಾರೆ. ಎಂದರೆ ಇವರಿಗೆ ಸರಿಸಮಾನವಾಗಿ ವಿರೋಧಪಕ್ಷದವರೂ ಬಂದಿದ್ದಾರೆ. ತಾವು ಎಷ್ಟು ಮತಗಳನ್ನು ಪಡೆದಿದ್ದೀರೋ ಅಷ್ಟೇ ಮತಗಳನ್ನು ಸರಿಸಮಾನವಾಗಿ ವಿರೋಧ ಪಕ್ಷದವರೂ ಪಡೆದಿದ್ದಾರೆ. ಇದನ್ನು ಅಸ್ತವ್ಯಸ್ತ ಮಾಡಬೇಕೆಂದು ಹೇಳಿ ಇವತ್ತು ಅವರು ನಾಮಿನೇಟ್ ಮಾಡಿ ತಮ್ಮದೇ ಆದ ನಿರ್ಣಯವನ್ನು ಹೇರಬೇಕೆಂದು ಇವರು ಬರುತ್ತಿದ್ದಾರೆ. ಅಧ್ಯಕ್ಷರೇ ಇಡೀ ರಾಜ್ಯದಲ್ಲಿ ಸುಮಾರು ೨,೫೨೩ ಮಂಡಲಪಂಚಾಯಿತಿಗಳು ಇವೆ. ಇವುಗಳ ಪೈಕಿ ಇವರ ಪಕ್ಷಕ್ಕೆ ಸೇರಿದ್ದು ೧೧೫೦ ಆದರೆ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದು ೮೦೦. ಸುಮಾರು ೪೦೦ ಚಿಲ್ಲರೆ ಮಂಡಲ ಪಂಚಾಯಿತಿಗಳು ಇಂಡಿ-ಪೆಂಡೆಂಟ್ಸ್ ವಶದಲ್ಲಿವೆ. ಎಂದರೆ ನಾನು ಹೇಳತಕ್ಕದ್ದು ಏನೆಂದರೆ ೨,೫೨೩ ರಲ್ಲಿ ಇವರಿಗೆ ೧೧೫೦.

೩-೦೦ ಪಿ.ಎಂ.

(ಶ್ರೀಮತಿ ಮನೋರಮ್ಮ ಮಧ್ವರಾಜ್‌ರವರು ಅಧ್ಯಕ್ಷ ಪೀಠದಲ್ಲಿದ್ದರು)

ನಿಮಗೆ ಎಷ್ಟು ಸೀಟುಗಳು ಮಂಡಲ ಪಂಚಾಯಂತಿಗಳಲ್ಲಿ ಬಂದಿವೆ, ಕಾಂಗ್ರೆಸ್‌ನವರಿಗೆ ಎಷ್ಟು ಬಂದಿವೆ ಪಕ್ಷೇತರರಿಗೆ ಎಷ್ಟು ಬಂದಿವೆ ? ಸ್ವಲ್ಪದರಲ್ಲಿ ವ್ಯತ್ಯಾಸವಾಗಿದೆ. ಎಲ್ಲಿ ನಿಮಗೆ ಕಡಿಮೆ ಸೀಟುಗಳು ಬಂದಿವೆ ಅಂತಹ ಕಡೆಗಳಲ್ಲಿ ನಾಮಿನೇಟ್ ಮಾಡಿ ಆ ಮಂಡಲ ಪಂಚಾಯಂತಿಗಳನ್ನು ವಶಪಡಿಸಿಕೊಳ್ಳಬೇಕು ಹಾಗೆಯೇ ಮುಂದೆ ಬರತಕ್ಕ ಕೌನ್ಸಿಲ್ ಚುನಾವಣೆಯಲ್ಲಿ ಮಂಡಲ ಪಂಚಾಯಿತಿ ಅಧ್ಯಕ್ಷರು ಮತ್ತು ಜಿಲ್ಲಾ ಪರಿಷತ್ ಸದಸ್ಯರೆಲ್ಲರೂ ಕೂಡ ವೋಟರ್ಸ್ ಎಂದು ಮಾಡುತ್ತಾ ಇದ್ದೀರಿ. ಅದನ್ನು ಮಾಡಿದ ಮೇಲೆ ಖಂಡಿತವಾಗಿಯೂ ಎಲ್ಲಾ ಜಿಲ್ಲೆಗಳಲ್ಲಿಯೂ ಲೋಕಲ್ ಅಥಾರಿಟೀಸ್ ಎಲೆಕ್ಷನ್ ಏನು ಬರುತ್ತದೆ ಅದರಲ್ಲಿ ಎಂ.ಎಲ್.ಸಿ.ಗಳನ್ನು ಗೆಲ್ಲಿಸ ಬೇಕೆನ್ನುವ ಉದ್ದೇಶದಿಂದ ಮಂಡಲ ಪಂಚಾಯತಿಗಳನ್ನು ವಶಪಡಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಒಂದು ದುರುದ್ದೇಶದಿಂದ ನಾಮಿನೇಷನ್ ಮಾಡುತ್ತಿದ್ದೀರಿ. ಆದರೆ ಬಡವರಿಗೆ ಸಹಾಯ ಮಾಡಬೇಕೆನ್ನುವ ದೃಷ್ಟಿಯಿಂದ ಇದನ್ನು ನೀವು ತಂದಿಲ್ಲ ಇದು ಬಡವರಿಗೆ ವಿರುದ್ಧವಾದ ಕಾನೂನು ಆಗಿದೆ ಅದಕ್ಕಾಗಿ ನಾನು ಒಪ್ಪುತ್ತಿಲ್ಲ. ಈಗ ನೀವೇನು ಕಾನೂನನ್ನು ತಂದಿದ್ದೀರಿ ಅದು ಕಾನೂನಿಗೆ ತದ್ವಿರುದ್ಧವಾದ ಕಾನೂನು ಆಗುತ್ತದೆ ಆದ್ದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳಿ, ಇದನ್ನು ಬಿಟ್ಟುಬಿಡಿಯೆಂದು ನಾವು ಹೇಳಿದರೂ, ನೀವು ಏನೇ ಹೇಳಿದರೂ ನಾವು ಮಾಡಿದ್ದೆ ಮಾಡುತ್ತೇವೆಂದರೆ, ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಸರ್ಕಾರ ತಮ್ಮ ಕೈಯಲ್ಲಿದೆ, ನಿಜವಾಗಿಯೂ ಬಡವರಿಗೆ ಸಹಾಯ ಮಾಡಬೇಕು, ಹಿಂದುಳಿದ ವರ್ಗದವರಿಗೆ ಸಹಾಯ ಮಾಡಬೇಕು ಎನ್ನುವ ಒಂದು ಮನಸ್ಸು ಇದ್ದರೆ ಇದನ್ನು ವಾಪಸ್ಸು ತೆಗೆದುಕೊಂಡು ನಾಮಿನೇಷನ್ ಮಾಡದ ಹಾಗೆ ನೋಡಿಕೊಳ್ಳುವುದು ನಿಮ್ಮ ಕರ್ತವ್ಯ. ಸುಮ್ಮನೆ ರಾಜಕೀಯ ದುರುದ್ದೇಶಕ್ಕಾಗಿ ಮಾಡುತ್ತೇವೆಂದರೆ ಖಂಡಿತವಾಗಿಯೂ ಇದು ಒಳ್ಳೆಯದಲ್ಲ. ಜನ ಇದರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಕೂಡ ತಾಳುವುದಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದೇನೆ. ಇನ್ನೊಂದು ವಿಶೇಷವಾದ ವಿಚಾರ ಏನೆಂದರೆ ಜಿಲ್ಲಾ ಪರಿಷತ್‌ನ ರಿಸಲ್ಟ್ ನೋಡಿದರೆ ಗೊತ್ತಾಗುತ್ತದೆ. ಮಂಡಲ ಪಂಚಾಯಂತಿ ರಿಸಲ್ಟ್ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಕೊನೆಯ ಪಕ್ಷ ಮೆಜಾರಿಟಿ ೬೦-೫೦ ಇದ್ದರೂ ಜನ ನಮ್ಮ ಜೊತೆಯಲ್ಲಿದ್ದಾರೆ. ಅದಕ್ಕಾಗಿ ನಾವು ನಾಮಿನೇಟ್ ಮಾಡುತ್ತೇವೆಂದು ಹೇಳಿದ್ದರೆ ಅದೊಂದು ತರಹ. ಜನ ನಿಮ್ಮ ಜೊತೆಯಲ್ಲಿಲ್ಲ. ಅಧಿಕಾರ ಕೂಡ ನಿಮ್ಮ ಜೊತೆಯಲ್ಲಿಲ್ಲ. ಕಾನೂನು ನಿಮ್ಮ ಜೊತೆಯಲ್ಲಿಲ್ಲ. ಕಾನೂನು ಪ್ರಕಾರ ಮಾಡುವ ಹಕ್ಕು ನಿಮಗೆ ಸಿಕ್ಕಿಲ್ಲ. ಏಕೆಂದರೆ ಇವತ್ತು ನಾಮಿನೇಷನ್ ಮಾಡಬೇಕೆಂದು ಬರುತ್ತಾ ಇದ್ದರೂ ದಿನಾಂಕ ೦೩-೧೦-೧೯೮೬ರಲ್ಲಿ ಹೊರಡಿಸಿರತಕ್ಕ ಆದೇಶದ ಮೇರೆಗೆ ನೀವು ಹೋಗಬೇಕಾಗುತ್ತದೆ. ಈ ಆದೇಶದ ಮೇರೆಗೆ ಇವತ್ತು ನಾಮಿನೇಟ್ ಮಾಡತಕ್ಕ ಹಕ್ಕು ನಿಮಗೆ ಬರುವುದಿಲ್ಲ. ಎಲ್ಲಾ ಕಡೆ ಚುನಾವಣೆಯಾಗಿದೆ ಎಲ್ಲಾ ಜನತೆಯು

ಜನಾಂಗದವರು ಎಲ್ಲಾ ಸಮಾಜದ ಜನರು ಚುನಾಯಿತರಾಗಿದ್ದಾರೆ. ಇವತ್ತು ಹೊಸದಾಗಿ ಈ ಕಾನೂನು ತಂದು ಜನರನ್ನು ಮೋಸ ಮಾಡತಕ್ಕದ್ದು ವಂಚನೆ ಮಾಡತಕ್ಕದ್ದು ಮಾಡಬಾರದೆಂದು ಸ್ಪಷ್ಟವಾಗಿ ಹೇಳುತ್ತೇನೆ. ಕೊನೆಯದಾಗಿ ನಿಮ್ಮ ಈ ಬ್ಯಾಕ್‌ವರ್ಡ್‌ಕ್ಲಾಸ್ ಡೆಫಿನಿಷನ್ ಸಂವಿಧಾನದ ಪ್ರಕಾರ ಕೂಡ ನೀವು ಮಾಡತಕ್ಕದ್ದು ಡೆಫಿನಿಷನ್‌ಗೆ ವಿರೋಧವಾಗಿದೆ. ಒಂದು ಕ್ಲಾಸ್ ಏನಿದೆ ರೂರಲ್ ಆರ್ಟಿಜನ್, ಅಗ್ರಿಕಲ್ಚರಲ್ ಲೇಬರ್ ಕ್ಲಾಸ್ ಎಂದು ಒಂದು ಡೆಫಿನಿಷನ್ ಇಟ್ಟುಕೊಂಡು ಒಂದು ಪರ್ಸೆಂಟ್ ಇರತಕ್ಕ ಜನರಿಗೆ ನೀವು ನಾಮಿನೇಟ್ ಮಾಡುತ್ತೇವೆಂದು ಹೊರಟ್ಟಿದ್ದೀರಿ. ಕಾನೂನಿನ ಪ್ರಕಾರ ನಿಮಗೆ ಮಾಡಲಿಕ್ಕೆ ಅವಕಾಶವಿಲ್ಲ. ಈಗ ಸೋಷಿಯಲ್‌ಲಿ ಮತ್ತು ಎಜುಕೇಶನಲಿ ಬ್ಯಾಕ್‌ವರ್ಡ್‌ಗೆ ೧೫ (೪) ೧೬ (೪) ರಿಸರ್ವೇಶನ್ ಇಟ್ಟಿದ್ದೀರಿ ಆದರಿಂದ ಸರ್ಕಾರಿ ನೌಕರಿಗಳಲ್ಲಿ ವಿದ್ಯಾಭ್ಯಾಸ ಮಾಡಲಿಕ್ಕೆ ಸೀಟುಗಳ ಹಂಚಿಕೆಯಲ್ಲಿ ಕೆಲವೊಂದು ಸ್ಥಾನಮಾನಗಳನ್ನು ಕೊಡತಕ್ಕ ವ್ಯವಸ್ಥೆಯಿದೆ. ಈಗಾಗಲೇ ಒಂದು ಪಟ್ಟಿ ಇದೆ, ಪುನಃ ಹೊಸದಾಗಿ ಪಟ್ಟಿಯನ್ನು ತಯಾರು ಮಾಡಿ ಅವರಿಗೆ ಸಹಾಯ ಮಾಡುತ್ತೇವೆಂದರೆ ಇದು ಕೇವಲ ಅವರಿಗೆ ಸಹಾಯ ಮಾಡುವುದಕ್ಕೋಸ್ಕರವಲ್ಲ ರಾಜಕೀಯವಾಗಿ ನಿಮಗೆ ಸಹಾಯವಾಗಲಿಯೆಂದು ಮಾಡಿಕೊಂಡಿರತಕ್ಕದ್ದು.

ಹಿಂದುಳಿದವರಿಗೆ ಅನುಕೂಲ ಮಾಡಬೇಕು ಎಂದು ಮೊದಲೇ ನೀವು ಈ ಡೆಫಿನಿಶನ್ ಇಟ್ಟಿದ್ದರೆ ಯಾರೂ ಕೂಡ ವಿರೋಧ ಮಾಡುತ್ತಿರಲಿಲ್ಲ, ಒಂದು ಕಡೆ ನಾಮಿನೇಶನ್ ಮಾಡುವುದು ಸರಿಯಲ್ಲವೆಂದು ಮುಂಚಿನಿಂದಲೂ ಹೇಳುತ್ತಿದ್ದೀರಿ. ನಾವು ಕೋ-ಆಪರೇಟಿವ್ ಸೊಸೈಟಿಯಲ್ಲಿ, ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಮಾಡಿರಲಿಲ್ಲವೇ ಎಂದು ಪದೆ ಪದೇ ಕೇಳುತ್ತಿದ್ದಾರೆ ಆ ವಾತಾವರಣ ಏನಿತ್ತು?, ಆ ಸಮಯ ಏನಿತ್ತು? ಆ ಪರಿಸ್ಥಿತಿಯಲ್ಲಿ ಒಬ್ಬ ಹಿಂದುಳಿದ ವರ್ಗಕ್ಕೆ ಸೇರಿದವರು ಸಾಮಾನ್ಯವಾಗಿ ಕೋಆಪರೇಟಿವ್ ಸೊಸೈಟಿಗೆ ಎಲೆಕ್ಟ್ ಆಗಿ ಬರತಕ್ಕದು ಸಾಧ್ಯವಿರಲಿಲ್ಲ, ಅಂತಹ ಸಂದರ್ಭ ಇರಲಿಲ್ಲ. ೭೨ನೇ ಇಸವಿಯಲ್ಲಿ ಅಂತಹ ಒಂದು ವಾತಾವರಣವನ್ನು ತಯಾರು ಮಾಡಿ ಶ್ರೀಮಾನ್ ದೇವರಾಜ ಅರಸು ಅವರ ಕಾಲದಲ್ಲಿ ಎಲ್. ಜಿ. ಹಾವನೂರ್ ಅವರ ವರದಿಯ ಆಧಾರದ ಮೇಲೆ ಹಿಂದುಳಿದ ಜನಾಂಗಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಅನೇಕ ಸೊಸೈಟಿಗಳಲ್ಲಿ, ಅನೇಕ ಡಿಪಾರ್ಟಮೆಂಟ್‌ಗಳಲ್ಲಿ ನಾಮಿನೇಟ್ ಮಾಡಿ ಅವರಿಗೆ ಅವಕಾಶ ಮಾಡಿಕೊಡತಕ್ಕ ಒಂದು ಕೆಲಸವನ್ನು ಮಾಡಿದರು. ಅದನ್ನು ಆಧಾರವಾಗಿಟ್ಟುಕೊಂಡು ನಾವೂ ಏಕೆ ಮಾಡಬಾರದು ಎಂದು ಕೇಳಿದರೆ, ನೀವು ಮಾಡುತ್ತಿರುವುದಾದರೂ ಕಾನೂನು ಪರವಾಗಿದೆಯೆ? ಕಾನೂನು ಪ್ರಕಾರ ಗವರ್ನಮೆಂಟ್ ಆರ್ಡರ್ ಅನ್ನು ಇಂಪ್ಲಿಮೆಂಟ್ ಮಾಡಿ, ೬೪೦೦ ರೂಪಾಯಿ ಇನ್‌ಕಮ್ ಲಿಮಿಟ್ ಹಾಕಿ ಒಂದು ಪರ್ಸೆಂಟ್‌ಗಿಂತ ಕಡಿಮೆ ಇರಬಾರದೆನ್ನುವ ಷರತ್ತು ಹಾಕಿ ಮಾಡಿ. ಅದಕ್ಕೆ ನಾನು ಹೇಳುತ್ತಿದ್ದೇನೆ, ಏನೆಂದರೆ ನಿಮಗೆ ಒಂದು ವೇಳೆ ನಿಜವಾಗಿಯೂ ಹಿಂದುಳಿದ ವರ್ಗಗಳ ಬಗ್ಗೆ ಆಸಕ್ತಿ ಇದ್ದರೆ ಮೊಟ್ಟ ಮೊದಲನೆಯ ಕೆಲಸ ಏನು ಮಾಡಬೇಕು ಎಂದರೆ, ನಾಮಿನೇಶನ್ ಮಾಡುವುದನ್ನು ಸ್ವಲ್ಪ ತಡೆಹಿಡಿಯಿರಿ. ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಚರ್ಚೆ ಮಾಡೋಣ ಯಾರು ನಿಜವಾಗಿಯೂ ಬ್ಯಾಕ್‌ವರ್ಡ್ ಎನ್ನುವುದಕ್ಕೆ ವೆಂಕಟಸ್ವಾಮಿ ರಿಪೋರ್ಟನ್ನು ಸದನದಲ್ಲಿ ಇಡಿ. ಚರ್ಚೆಮಾಡಿ ಈ ಸದನದ ಒಪ್ಪಿಗೆಯನ್ನು ತೆಗೆದುಕೊಂಡು ತದನಂತರ ಒಂದು ಹೊಸ ವ್ಯಾಖ್ಯಾನ ಮಾಡಿ ಆವಾಗ ನಾಮಿನೇಟ್ ಮಾಡಿ. ಅದನ್ನು ಎಲ್ಲರೂ ಒಪ್ಪೋಣ. ಆದರೆ ಸೈಂಟಿಫಿಕ್ ಆಗಿ ತಯಾರಾದಂಥ ವರದಿಯನ್ನು ತಿರಸ್ಕಾರ ಮಾಡಿ, ಅದನ್ನು ಮೂಲೆಗೊತ್ತಿ ಪದೆ ಪದೇ ಎಜ್ಯುಕೇಶನ್ ಪರ್ಪಸ್‌ಗೆ ಬೇರೆ ಗವರ್ನಮೆಂಟ್ ಆರ್ಡರ್, ಬೇರೆ; ಮಾಡಿದರೆ ಹೇಗೆ? ಈಗ ಹೊಸದಾಗಿ ಬಾಕ್‌ವರ್ಡ್ ಕ್ಲಾಸಸ್ ಪಾಪ್ಯುಲೇಷನ್ ಯಾವರೀತಿ ಇಟ್ಟುಕೊಳ್ಳಬೇಕೆನ್ನುವುದಾದರೆ ಎಕ್ಸಪ್ಲನೇಟರಿ ನೋಟ್ ಕೊಟ್ಟಿದ್ದೀರಿ ? For the purpose of this rule the population shall be the population as estimated by the Kaınataka Back wards Classes Commission 1975. ಚುನಾವಣೆಗೆ ೭೧ರ ಜನಗಣತಿ ಬೇಕು. ಡೆಫಿನಿಶನ್‌ಗೆ ಮಾತ್ರ ೮೭ರದ್ದು ಬೇಕು. ವೆಂಕಟಸ್ವಾಮಿ ಆಯೋಗ ಮಾಡಿದ್ದು ಬೇಡ, ಹಾವನೂರ್ ಆಯೋಗ ಮಾಡಿದ್ದು ಬೇಡ. ನಿಮಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಡೆಫಿನಿಶನ್ ಮಾಡಿ ಇವತ್ತಿನ ದಿವಸ ದೊಡ್ಡ ಅನ್ಯಾಯವನ್ನು, ಈ ಬ್ಯಾಕವರ್ಡ್ ಕ್ಲಾಸಸ್ ಮೇಲೆ ಮಾಡುತ್ತಿದ್ದೀರಿ. ಏಕೆಂದರೆ ಇದೇ ಒಂದು ನೆಪ ತೆಗೆದು ಕೊಂಡು ಬೇರೆಯವರು ಡಿಫೆಂಡ ಮಾಡಬಹುದು. ಇದು ಮುಂದೆ ಇದೂ ಒಂದು ಪ್ರಿಸಿಡೆಂಟ್ ಆಗಿಬಿಡುತ್ತದೆ. ಮುಂದೆ ಬರತಕ್ಕವರು, ಹಿಂದೆ ಆ ರೀತಿ ಮಾಡಿದ್ದಾರೆ, ನಾವು ಕೂಡ

ಮಾಡಿ ಈ ಕೆಲಸವನ್ನು ಮಾಡೋಣ ಎಂದು ಮಾಡಬಹುದು. ಆದ್ದರಿಂದ ಈ ರೀತಿ ನಾಮಿನೇಶನ್ ಮಾಡುವುದರಿಂದ ಹಿಂದುಳಿದ ಜನಾಂಗಕ್ಕೆ ಯಾವ ಲಾಭವೂ ಇಲ್ಲ. ಇದು ಕೇವಲ ರಾಜಕೀಯ ಉದ್ದೇಶಕ್ಕಾಗಿ ನಿಮ್ಮ ಪಕ್ಷವನ್ನು ಬಲಪಡಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಮಾಡಿದ್ದಾರೆಂದು ಇದನ್ನು ನಾವು ಖಂಡಿಸಬೇಕಾಗುತ್ತದೆ. ಇದು ಒಳ್ಳೆಯ ಕ್ರಮ ಅಲ್ಲವೆನ್ನುವ ಮಾತನ್ನು ಇವತ್ತು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆದ್ದರಿಂದ ಇಷ್ಟು ಮಾತ್ರ ಅವರ ಗಮನಕ್ಕೆ ತಂದಿದ್ದೇನೆ. ಇದಕ್ಕಿಂತ ಹಿಂದೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ನಾಮಿನೇಷನ್ ಮಾಡುವುದು ಕಾನೂನು ವಿರುದ್ಧವಾಗಿ ಇದೆ, ಸಂವಿಧಾನ ವಿರುದ್ಧವಾಗಿ ಇವರು ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿ, ಇದನ್ನು ತಮ್ಮ ಅನುಕೂಲಕ್ಕೆ ತಕ್ಕಹಾಗೆ ಮಾಡುತ್ತಿದ್ದಾರೆ, ಇದು ಜನ ವಿರೋಧಿ ಕಾಯಿದೆಯಾಗಿದೆ ಇದನ್ನು ಮೊದಲು ವಿತ್‌ಡ್ರಾ ಮಾಡತಕ್ಕಂಥ ಬುದ್ಧಿ ಇವರಿಗೆ ಬರಲಿ ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷಿಣಿಯವರೇ, ಪಂಚಾಯತ್ ರಾಜ್ಯದಲ್ಲಿ ಪಕ್ಷ ಭೇದ ಬೇಡ, ಇದು ಈ ಕವನದ ತಿರುಳು.

"ನಾವೆಲ್ಲಾ ಒಂದೇ
ಕಟ್ಟುವೆವು ನಾವೆಲ್ಲಾ ಪಂಚಾಯತ್ ರಾಜ್ಯ
ಇದಕ್ಕೆ ಏಕೆ ನಮಗೆ ಇಲ್ಲಸಲ್ಲದ ವ್ಯಾಜ್ಯ,
ಮಲಗಲು ಸೂರಿಲ್ಲ, ತಿನ್ನಲು ಕೂಳಿಲ್ಲ.
ಬೆನ್ನು ಬಾಗಿಹುದು, ನಮ್ಮ ಬೆನ್ನೆಲುಬು ರೈತನಿಗೆ,
ರೈತರ ಚಿಂತೆಯಲ್ಲಿ ನಾವೆಲ್ಲ ಒಂದೇ,
ನಿಲ್ಲುವೆವು ಒಟ್ಟಾಗಿ ಅವಗಾಗಿ ಮುಂದೆ,
ನಮಗೇಕೆ ನೇಗಿಲು, ಹಸ್ತದ ಭೇದ,
ರೈತನ ಒಳಿತೇ ನಮಗೆಲ್ಲಾ ವೇದ.
ಹೊಸನಾಡ ಕಟ್ಟಿದೆವು ಶಿಲ್ಪಿಗಳು ನಾವೆಲ್ಲಾ,
ಇತಿಹಾಸ ಬರೆಯುವುದು ಸ್ವರ್ಣದಕ್ಷರಗಳಲ್ಲಿ,
ಕೊಟ್ಟಿಹೆವು ಎಲ್ಲಡೆಯೂ ರೈತರಿಗೆ ಅಧಿಕಾರ,
ಇದೇ ಗಾಂಧಿ ಜೆಪಿ ನೆನೆಸಿದ್ದ ಸರ್ಕಾರ."

ಶ್ರೀ ಜಿ. ರಾಜೂಗೌಡ (ಹಾನೂರು).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಸದನದ ಮುಂದೆ ಚರ್ಚೆಯಾಗುತ್ತಿರತಕ್ಕಂಥ ಮಂಡಲ್ ಪಂಚಾಯತ್ ನಾಮಕರಣದ ಬಗ್ಗೆ ಒಂದೆರಡು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಮಂಡಲ್ ಪಂಚಾಯ್ತಿಗೆ ನಾಮಕರಣ ಮಾಡಲು ಜಿಲ್ಲಾ ಪರಿಷತ್ತಿಗೆ ಅಧಿಕಾರ ಕೊಟ್ಟಿರತಕ್ಕಂಥಾದ್ದು ಈ ಮಾನ್ಯ ಸದನ, ಆಗ ಜಿಲ್ಲಾಪರಿಷತ್ ಶಾಸನದಲ್ಲಿ, Back ward clasees means such clauses as may be prescribed. ಎಂದು ಇದೆ. ಅಂದರೆ ಯಾವ ರೀತಿ ಸರ್ಕಾರ ಹಿಂದುಳಿದ ವರ್ಗಗಳನ್ನು ಗುರುತಿಸಬೇಕೆಂಬ ಅರ್ಥ ಬರುವ ರೀತಿಯಲ್ಲಿ ಮಾಡಿಕೊಂಡಿದೆ. ಹಿಂದೆ ಸರ್ಕಾರ ಅಧಿಕೃತವಾಗಿ ಸೂಚಿಸದೇ ಇದ್ದರೂ ಸಹ ನಿರ್ದಿಷ್ಟವಾಗಿ ಹಿಂದುಳಿದ ವರ್ಗಗಳನ್ನು ಸೃಷ್ಟಿ ಮಾಡಿಕೊಳ್ಳಬಹುದು ಎಂಬುದನ್ನು ತಾವು ಕಾನೂನಿನಲ್ಲಿ ಅಳವಡಿಸಿಕೊಂಡಿದ್ದೀರಿ. ಹಿಂದೆ ನಾವೆಲ್ಲಾ ಒಪ್ಪಿಗೆ ಕೊಟ್ಟಿದ್ದೇವೆ. ಈ ಸದನ ಪರಿಪೂರ್ಣವಾಗಿ ಒಪ್ಪಿಗೆ ಕೊಟ್ಟಿದೆ. ಜಿಲ್ಲಾ ಪರಿಷತ್, ಮಂಡಲ್ ಪಂಚಾಯಿತಿಗಳಿಗೆ ನಾಮಕರಣ ಮಾಡುವಂಥ ಅಧಿಕಾರವನ್ನು ಸರ್ಕಾರ ಪಡೆದಿದೆ.

> "Where no person belonging to backward classes is elected to Mandal panchayats, the Zilla Parishad shall nominate 2 persons belonging to such classes to Mandal Panchayats".

ಯಾವ ಮಂಡಲ್ ಪಂಚಾಯಿತಿಯಲ್ಲಿ ಕೃಷಿ ಕಾರ್ಮಿಕರು, ಅಥವಾ ಕುಶಲಕರ್ಮಿಗಳು ಚುನಾಯಿತರಾಗಿಲ್ಲವೋ ಅಂತಹ ಮಂಡಲ್ ಪಂಚಾಯಿತಿಗೆ ಇಬ್ಬರು ಸದಸ್ಯರನ್ನು ನಾಮಕರಣ ಮಾಡತಕ್ಕಂಥ ಕಾನೂನು ಜಿಲ್ಲಾಪರಿಷತ್ತಿನಲ್ಲಿ ಇದೆ. ತಾವು ಹಿಂದುಳಿದ ಪಟ್ಟಿಯಲ್ಲಿ ಏನು ನಮೂದು ಮಾಡಿದ್ದೀರಿ.

ಕೃಷಿ ಕಾರ್ಮಿಕರಾಗಿರತಕ್ಕಂಥ, ಕುಶಲಕರ್ಮಿಗಳಾಗಿರತಕ್ಕಂಥ, ವರಮಾನ ೬,೫೦೦ ಕ್ಕಿಂತ ಕಡಿಮೆ ಇರಬೇಕೆಂದು ಹೇಳಿದ್ದೀರಿ. ಕರ್ನಾಟಕದಲ್ಲಿ ೨,೫೮೯ ಪಂಚಾಯಿತಿಗಳಿಗೆ ತಾವು ಏನು ನಮೂದು ಮಾಡಿದ್ದೀರಿ, ಇಂತಹ ಸದಸ್ಯರು ಆಯ್ಕೆಯಾಗಿ ಬರಲಿಲ್ಲವೇ ? ಎನ್ನುವುದರ ಬಗ್ಗೆ ತಾವು ತನಿಖೆ ಮಾಡಿದ್ದೀರಾ ? ಯಾವ ಪಂಚಾಯಿತಿಯಲ್ಲಿ ಹಿಂದುಳಿದ ವರ್ಗದವರು, ಕುಶಲಕರ್ಮಿಗಳು, ಕೃಷಿ ಕಾರ್ಮಿಕರು ಚುನಾಯಿತರಾಗಿ ಬಂದಿಲ್ಲ ಎನ್ನುವುದರ ಬಗ್ಗೆ ನಿಮಗೆ ಖಚಿತವಾದ ಮಾಹಿತಿ ಬಂದಿದೆಯೇ? ನೀವು ೬,೫೦೦ ರೂಪಾಯಿಗಳಿಗಿಂತ ವರಮಾನ ಕಡಿಮೆ ಇರಬೇಕೆಂದು ಏನು ಹೇಳುತ್ತೀರಿ.......

ಶ್ರೀ ಯು. ಭೂಪತಿ.—ಕರ್ನಾಟಕ ರಾಜ್ಯದಲ್ಲಿ ಮಂಡಲ್ ಪಂಚಾಯಿತಿಗಳಿಗೆ ನಾಮಕರಣ ಮಾಡುವ ವಿಷಯದಲ್ಲಿ ಚರ್ಚೆ ನಡೆಯುತ್ತಿದೆ. ಆದರೆ ಸದನದಲ್ಲಿ ಕೋರಂ ಇಲ್ಲ, ಆದ್ದರಿಂದ ದಯಮಾಡಿ ಸಭೆಯನ್ನು ಮುಂದೆ ಹಾಕಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಭಾಧ್ಯಕ್ಷಿಣಿಯವರೇ, ಕೋರಂ ಇದೆ, ಸಭೆ ನಡೆಸಬಹುದು ಸದಸ್ಯರು ಬರುತ್ತಿರುತ್ತಾರೆ, ಹೋಗುತ್ತಿರುತ್ತಾರೆ.

ಛೇರ್ಮನ್.—ಆಯಿತು ತಾವು ಮಾತನಾಡಿ.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಇವತ್ತಿನ ದಿವಸ ತಾವೆಲ್ಲರೂ ಕೂಡ ನೋಡುತ್ತಿದ್ದೀರಿ. ಸುಮಾರು ೯೮ ಪರ್ಸೆಂಟ್‌ನಷ್ಟು ಜನ ಹಿಂದುಳಿದವರು ಎಂದು ಗುರುತು ಮಾಡಿದ್ದಾರೆ. ನಿಜವಾದ ಹಿಂದುಳಿದ ವರ್ಗದವರಿಗೆ ಸಿಗಬೇಕಾಗಿದ್ದಂತಹ ಸೌಲಭ್ಯಗಳನ್ನು ಬಲಿಷ್ಟರು ಪಡೆಯುತ್ತಿದ್ದಾರೆ. ತಾವು ಒಂದು ದೃಷ್ಟಿ ಕೋನವನ್ನು ನಿರೂಪಣೆ ಮಾಡಿದ್ದೀರಿ. ಆ ನಿರೂಪಣೆ ಹೇಗಿದೆ ಎಂದರೆ ದನಗಳನ್ನೆಲ್ಲಾ ಒಟ್ಟಿಗೆ ಒಂದು ಕಡೆ ಸೇರಿಸಿ ಒಂದೇ ಕಡೆ ಹುಲ್ಲು ಹಾಕಿದರೆ ಆಗ ಏನಾಗುತ್ತದೆ ಎಂದರೆ ಬಲಿಷ್ಟವಾಗಿರತಕ್ಕ ದನಗಳು ಆ ಹುಲ್ಲನ್ನೆಲ್ಲಾ ಒಂದೇ ಸಾರಿ ಕಬಳಿಸುತ್ತವೆ. ಬೇರೆ ಸಣ ಸಣ್ಣ ಕರುಗಳಿಗೆ ಹುಲ್ಲು ಸಿಗುವುದೇ ಇಲ್ಲ. ಆ ರೀತಿಯಲ್ಲಿ ತಾವು ಇವತ್ತು ೯೮ ಪರ್ಸೆಂಟ್‌ನಷ್ಟು ಜನ ಹಿಂದುಳಿದವರು ಎಂದು ಗುರುತು ಮಾಡಿದ್ದೀರಿ. ಇವರಲ್ಲಿ ಯಾರು ಬಲಿಷ್ಟರಾಗಿರುತ್ತಾರೋ ಅವರು ಎಲ್ಲಾ ಸೌಲಭ್ಯಗಳನ್ನು ಕಬಳಿಸಿಕೊಳ್ಳುತ್ತಾರೆ. ತಾವು ಮಾಡಿರುವ ನೀತಿ ಸರಿಯಾದುದು ಅಲ್ಲ. ತಾವೀಗ ನಾಮಕರಣ ಮಾಡುವುದಕ್ಕೆ ಒಂದು ನೀತಿಯನ್ನು ಅನುಸರಿಸುತ್ತಿದ್ದೀರಿ, ಅದೇನೆಂದರೆ ಕೃಷಿ ಕಾರ್ಮಿಕರು ಯಾರಿದ್ದಾರೆ, ಕುಶಲಕರ್ಮಿಗಳು ಯಾರಿದ್ದಾರೆ ಅವರ ವಾರ್ಷಿಕ ವರಮಾನ ೬,೪೦೦ ರೂಪಾಯಿಗಳಿಗೆ ಮೀರಿರಬಾರದು, ಅಂತಹವರನ್ನು ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡತಕ್ಕಂಥದ್ದು ಎಂದು ಆದರೆ ಇಂತಹ ವರ್ಗದವರ ಮಾಹಿತಿಯನ್ನು ತಾವು ತಮ್ಮ ಜನತಾ ಪಕ್ಷದ ಮತಿಯಿಂದ ತರಿಸಿಕೊಂಡು ಮಾಡುವುದು ಸರಿಯಲ್ಲ. ಈ ಮಾಹಿತಿಯನ್ನು ತಾವು ಕಂದಾಯ ಇಲಾಖಾಧಿಕಾರಿಗಳಿಂದ ತರಿಸಿಕೊಂಡು ನಿಜವಾಗಿಯೂ ಆತ ಕೃಷಿ ಕಾರ್ಮಿಕನಾಗಿದ್ದು ಅವನ ವಾರ್ಷಿಕ ಆದಾಯ ೬,೪೦೦ ರೂಪಾಯಿಗಳಿಗಿಂತ ಕಡಿಮೆ ಇದ್ದರೆ ಅಂತಹವರನ್ನು ಪರಿಶೀಲನೆ ಮಾಡಿ ಇಲ್ಲದಿದ್ದರೆ ಅಂತಹವರನ್ನು ತಾವು ನಾಮಕರಣ ಮಾಡುವುದನ್ನು ಕೈಬಿಡಬೇಕು. ಮತ್ತೆ ಅನೇಕ ಮಂಡಲ ಪಂಚಾಯಿತಿಗಳಲ್ಲಿ ಕೃಷಿ ಕಾರ್ಮಿಕರು ಮತ್ತು ಆರ್ಟಿಸನ್ಸ್‌ಗಳು ಚುನಾಯಿತರಾಗಿರುತ್ತಾರೆ, ಮತ್ತು ಅವರ ವಾರ್ಷಿಕ ಆದಾಯ ೬,೪೦೦ ರೂಪಾಯಿಗಳಿಗಿಂತ ಕಡಿಮೆ ಇರುತ್ತದೆ ಅಂತಹ ಪಂಚಾಯಿತಿಗಳಿಗೆ ತಾವು ನಾಮಕರಣ ಮಾಡುವುದನ್ನು ಸಹ ನಿಲ್ಲಿಸಬೇಕು. ಜನಗಳ ಅಭಿಲಾಷೆಗೆ ತಕ್ಕ ಕೆಲಸವನ್ನು ತಾವು ಮಾಡಬೇಕು. ಇನ್ನು ನೇರವಾಗಿ ಚುನಾವಣೆಯಲ್ಲಿ ಯಾರು ಚುನಾಯಿತರಾಗಿರುತ್ತಾರೋ ಅಂತಹವರನ್ನು ಹಿಂದಕ್ಕೆ ತಳ್ಳಿ ಚುನಾವಣೆಯ ಮೂಲಕ ಚುನಾಯಿತರಾಗದೆ ಇರುವವರನ್ನು ಮೇಲೆ ಕೂರಿಸತಕ್ಕಂಥ ಕೆಲಸವನ್ನು ದಯಮಾಡಿ ಮಾಡಬೇಡಿ. ಆ ರೀತಿ ಏನಾದರೂ ತಾವು ಮಾಡುವುದಾದರೆ ಅದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಸರ್ಕಾರಕ್ಕೆ ಒಂದು ನಿಲುವು ಇರಬೇಕು. ಅದರಲ್ಲಿಯೂ ಸ್ಪಷ್ಟವಾದ ನಿಲುವು ಇರಬೇಕು. ಹಿಂದುಳಿದ ವರ್ಗ ವಿಚಾರದಲ್ಲಂತೂ ಸ್ಪಷ್ಟವಾದಂತಹ ಒಂದು ನಿಲುವು ಇರಬೇಕು. ಇವತ್ತು ಕಾಲೇಜು ಸೀಟು ಹಂಚಿಕೆಯನ್ನು ಮಾಡತಕ್ಕಂಥದ್ದರಲ್ಲಿ ಒಂದು ನಿಲುವು ಉದ್ಯೋಗವನ್ನು ಕೊಡತಕ್ಕಂಥದ್ದರಲ್ಲಿ ಇನ್ನೊಂದು ನಿಲುವು ಸೌಲಭ್ಯಗಳನ್ನು ಪಡೆಯುತಕ್ಕಂಥದಕ್ಕೆ ಒಂದು ನಿಲುವು ಮಂಡಲ ಪಂಚಾಯಿತಿಗಳಿಗೆ ಸದಸ್ಯರನ್ನು ನಾಮಕರಣ ಮಾಡುವಂತಾದ್ದಕ್ಕೆ ಒಂದು ನಿಲುವು ಇದು ಯಾವ ನ್ಯಾಯವೆಂದು ನಾನು ಕೇಳುವುದಕ್ಕೆ

ಇಷ್ಟಪಡುತ್ತೇನೆ. ವೈಜ್ಞಾನಿಕವಾಗಿ ಸರ್ಕಾರ ನೇಮಿಸಿದಂತಹ ವೆಂಕಟಸ್ವಾಮಿ ಆಯೋಗದ ವರದಿಯನ್ನು ಸರ್ಕಾರ ಮೂಲೆ ಗುಂಪು ಮಾಡಿತು. ಆ ವರದಿಯನ್ನು ಈ ಸದನದ ಮುಂದೆ ಕೂಡ ತರದೆ ಸರ್ಕಾರವೇ ಒಂದು ನಿಲುವನ್ನು ತೆಗೆದುಕೊಂಡಿತು. ಕೆಲವರು ರಾಜಕಾರಣಕ್ಕಾಗಿ ಕೆಲವು ಪ್ರಬಲ ಕೋಮಿನವರು ಬಸ್ಸಿಗೆ ಬೆಂಕಿ ಕೊಟ್ಟರು ಎನ್ನುವ ಒಂದೇ ಒಂದು ಕಾರಣಕ್ಕಾಗಿ ವೆಂಕಟಸ್ವಾಮಿ ವರದಿಯನ್ನು ಮೂಲೆ ಗುಂಪು ಮಾಡಿ ಹಿಂದುಳಿದ ವರ್ಗಕ್ಕೆ ಒಂದು ಹೊಸದಾದ ಆಯಾಮವನ್ನು ಕೊಡಲಾಯಿತು. ಈ ರಾಜ್ಯದಲ್ಲಿ ರಾಜಕೀಯ ಭದ್ರತೆಗಾಗಿ ಸಾಮಾಜಿಕ ಭದ್ರತೆಗೆ ಬೆಂಕಿಯನ್ನು ಇಟ್ಟಿದ್ದಾರೆನ್ನುವ ವಿಚಾರವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದೃಷ್ಟಿಯಲ್ಲಿ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗಿದೆ ಎನ್ನುವುದು ಇವರ ಸರ್ಕಾರೀ ಆಜ್ಞೆಯಿಂದಲೇ ಕಾಣುತ್ತದೆ. ಜಿಲ್ಲಾ ಪರಿಷತ್ತು ಮೂಲಕ ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡುವಂತಹ ತತ್ವ ಏನಿದೆ ಅದು ಅಂಗೀಕಾರ ಪಡೆದಿದ್ದು ಒಂದು ರೀತಿಯಲ್ಲಿ ಅದನ್ನು ಸರ್ಕಾರ ಉಪಯೋಗಿಸಿಕೊಳ್ಳುತ್ತಿರುವುದು ಒಂದು ರೀತಿ. ದಿನಾಂಕ ೫-೩-೧೯೮೭ ರಲ್ಲಿ ಅನೇಕ ಮಂದಿ ಮಾನ್ಯ ಸದಸ್ಯರು ಹೇಳಿದ ಹಾಗೆ ಸೆಕ್ರೆಟರಿ, ರೂರಲ್ ಡೆವಲಪ್‌ಮೆಂಟ್ ಅಂಡ್ ಪಂಚಾಯಿತ್ ರಾಜ್ ಕರ್ನಾಟಕ ಸರ್ಕಾರ ಇವರು ಚೀಫ್ ಸೆಕ್ರೆಟರಿ ಜಿಲ್ಲಾ ಪರಿಷತ್ ಇವರುಗಳಿಗೆ ಒಂದು ಟೆಲೆಕ್ಸ್ ಸಂದೇಶವನ್ನು ಕಳುಹಿಸಿದರು. ಆ ಟೆಲೆಕ್ಸ್ ಸಂದೇಶದಲ್ಲಿ ಏನು ಹೇಳಿದ್ದಾರೆಂದರೆ ೫ (ಬಿ) ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಮಸೂದೆಗೆ ಒಂದು ತಿದ್ದುಪಡಿ ಬರುತ್ತದೆ. ಅದರ ಪ್ರಕಾರ ಯಾರು ಅಗ್ರಿಕಲ್ಚರ್ ಲೇಬರ್ಸ್ ಮತ್ತು ಆರ್ಟಿಸಾನ್ಸ್ ಇರುತ್ತಾರೋ ಅವರ ವಾರ್ಷಿಕ ಆದಾಯ ೬,೪೦೦ ರೂಪಾಯಿಗಳಿಗಿಂತ ಹೆಚ್ಚು ಇರಬಾರದು ಅಂತಹವರನ್ನು ನಾಮಕರಣ ಮಾಡಬೇಕಾಗುತ್ತದೆ, ಈ ಬಗ್ಗೆ ತಾವು ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಿ ಮತ್ತು ಈಗಾಗಲೇ ಯಾವ ಯಾವ ಮಂಡಲ್ ಪಂಚಾಯಿತಿಗಳಲ್ಲಿ ಅಗ್ರಿಕಲ್ಚರ್ ಲೇಬರರ್ಸ್ ಮತ್ತು ಆರ್ಟಿಸಾನ್ಸ್ ಇರುತ್ತಾರೋ ಅವರ ವಾರ್ಷಿಕ ವರಮಾನ ೬,೪೦೦ ರೂಪಾಯಿಗಳಿಗಿಂತ ಕಡಿಮೆ ಇರುತ್ತದೆಯೋ ಅವರು ಚುನಾಯಿತರಾಗಿರುತ್ತಾರೋ ಅವರನ್ನು ಸಹ ಗುರುತು ಮಾಡಿಕೊಳ್ಳಿ ಎಂದೂ ಮತ್ತು ಇನ್ನೇನು ಹೇಳಿದ್ದಾರೆಂದರೆ, ''Please note that the nominations are intended to be made before the Mandal Pradhan and Upa-pradhan elections''. ಎಂದು ಚೀಫ್ ಸೆಕ್ರೆಟರಿಗೆ ಸಂದೇಶ ಕೊಟ್ಟರು. ಜಿಲ್ಲಾ ಪರಿಷತ್ತು ಚುನಾವಣೆಯಲ್ಲಿ ರೆವಿನ್ಯೂ ಅಧಿಕಾರಿಗಳು ಇದ್ದರು. ಸ್ವಾಮಿ, ಈಗ ತಾವು ೨೫೦೦ ಮಂಡಲ್ ಪಂಚಾಯತ್‌ಗಳಿಗೆ ನಾಮಕರಣ ಮಾಡುತ್ತಿದ್ದೀರಿ. ಯಾವ ಮಂಡಲ್ ಪಂಚಾಯಿತಿಯೊಳಗೆ, ಈ ಕುಶಲಕರ್ಮಿಗಳು ಮತ್ತು ಕೃಷಿ ಕಾರ್ಮಿಕರು ಗೆದ್ದು ಬಂದಿಲ್ಲ ಎನ್ನತಕ್ಕಂಥಾದ್ದರ ಬಗ್ಗೆ ತಾವೇನಾದರೂ ಮಾಹಿತಿ ಮಾಡಿಕೊಂಡಿದ್ದೀರಾ ? ೬೪೦೦ ರೂಪಾಯಿಗಳ ವರಮಾನಕ್ಕಿಂತ ಕಡಿಮೆ ವರಮಾನ ಇರತಕ್ಕಂಥಾದ್ದರ ಬಗ್ಗೆ ದೃಢೀಕರಣ ಪತ್ರ ಕೊಡಬೇಕಾದರೆ, ಅದನ್ನು ಕಂದಾಯ ಇಲಾಖೆಯ ಅಧಿಕಾರಿಗಳು ಕೊಡಬೇಕು. ಇದರ ಬಗ್ಗೆ ಮಾಹಿತಿಯನ್ನು ತಾವು ತರಿಸಿಕೊಂಡಿದ್ದೀರಾ ? ಅದನ್ನು ಬಿಟ್ಟು ಸುಮ್ಮನೆ ಪ್ರತಿಯೊಂದು ಮಂಡಲ ಪಂಚಾಯಿತಿಗೂ ಇಬ್ಬರನ್ನು ನಾಮಕರಣ ಮಾಡಿ, ತನ್ಮೂಲಕ ೫ ಸಾವಿರ ಜನಗಳನ್ನು ಜನತಾ ಪಕ್ಷದವರನ್ನಾಗಿ ಮಾಡಿಕೊಂಡು, ಆದರ ಮೂಲಕ ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಬೇಕೆನ್ನತಕ್ಕಂಥ ಮಂಸಂಕಿನೊಳಗಿನ ಗುದ್ದಾಟವನ್ನು ಮಾಡುತ್ತೀರಾ ಎಂದು ನಾನು ನೇರವಾಗಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನೇರವಾಗಿ ಚುನಾವಣೆಯಲ್ಲಿ ಜಯಗಳಿಸಲಿಕ್ಕೆ ಸಾಧ್ಯ ಇಲ್ಲದೇ, ನಾಮಕರಣದ ಮೂಲಕವಾಗಿ ನಿಮ್ಮ ಪ್ರತಿಷ್ಟೆಯನ್ನು ಬೆಳೆಸಿಕೊಳ್ಳತಕ್ಕಂಥ ಸಾಹಸಕ್ಕೆ ತಾವು ಕೈಹಾಕಿರತಕ್ಕಂಥಾದ್ದು ಸರಿಯಲ್ಲ. ಮಾನ್ಯ ಕಾನೂನು ಸಚಿವರನ್ನು ನಾನು ನೇರವಾಗಿ ಪ್ರಶ್ನೆ ಮಾಡುತ್ತೇನೆ. ಸ್ವಾಮಿ, ಯಾವ ಒಂದು ಕಾಯಿದೆಗೆ ತಿದ್ದುಪಡಿ ತಂದಾಗ, ಆ ತಿದ್ದುಪಡಿಯಿಂದ ಮೂಲ ಕಾಯಿದೆಯ ಲಕ್ಷಣವನ್ನೇ, ಮೂಲ ಕಾಯಿದೆಯ ಸ್ವರೂಪವನ್ನೇ, ಬದಲಾಯಿಸುವ ಹಾಗೆ ಇದ್ದರೆ, ಮೂಲ ಕಾಯಿದೆಯ ಅರ್ಥವೇ ವಿಭಿನ್ನವಾಗತಕ್ಕ ರೀತಿ ಇದ್ದರೆ, ಅಂತಹ ತಿದ್ದುಪಡಿಯನ್ನು ತರುವುದಕ್ಕೆ ಆಗುತ್ತದೆಯೋ, ಅಂತಹ ತಿದ್ದುಪಡಿಯನ್ನು ತಂದರೂ ಕೂಡಾ ಅದು ಕೋರ್ಟಿನಲ್ಲಿ ನಿಲ್ಲುತ್ತದೆಯೋ ಎಂದು ಕೇಳುತ್ತೇನೆ. ಈ ರೀತಿಯಾಗಿ ಚುನಾವಣಾ ಫಲಿತಾಂಶವನ್ನು ಅಸ್ತವ್ಯಸ್ಥಗೊಳಿಸತಕ್ಕಂಥ, ಏರುಪೇರು ಮಾಡತಕ್ಕಂಥ ನಾಮಕರಣ ಮಾಡತಕ್ಕ ಪದ್ಧತಿ ಏನಿದೆ ಅದನ್ನು ಮಾಡತಕ್ಕದ್ದು ಒಳ್ಳೆಯದೇ ಎಂದು ಕೇಳುತ್ತೇನೆ. ಪ್ರಜಾಪ್ರಭುತ್ವಕ್ಕೆ ಮತ್ತು ಪ್ರಜೆಗಳ ಅಶೋತ್ತರಕ್ಕೆ ಸ್ಪಂಧಿಸತಕ್ಕ ಸರಕಾರ ಎಂದು ತಾವು ಏನು ಹೇಳಿಕೊಳ್ಳುತ್ತೀರಿ. ಆ ಪ್ರಜೆಗಳು

ಏನು ತಮ್ಮ ಅಭಿಮತವನ್ನು ವ್ಯಕ್ತಪಡಿಸಿದ್ದಾರೆ, ಏನು ಅವರ ಇಂಗಿತ ಇದೆಯೋ ಅದನ್ನು ಕಾರ್ಯರೂಪಕ್ಕೆ ತರುವ ಬದಲು, ಅದನ್ನು ಜಾರಿಗೆ ತರುವ ವ್ಯವಸ್ಥೆ ಮಾಡುವುದಕ್ಕೆ ಬದಲು, ಈ ರೀತಿ ಮಾಡಿದ್ದೀರಿ. ನಿಮ್ಮ ಪ್ರಭಾಪ್ರಭುತ್ವ ಪದ್ಧತಿ ಎಲ್ಲಿ ಹೋಯಿತು ? ನಿಮ್ಮ ಮೌಲ್ಯಾಧಾರಿತ ರಾಜಕಾರಣ ಎಲ್ಲಿ ಹೋಯಿತು ? ಪ್ರಜೆಗಳ ಹಿತಕ್ಕಾಗಿ ಅವರ ಅಭಿಮತಕ್ಕೆ ಸ್ಪಂದಿಸುತ್ತೇವೆ ಎಂದು ಹೇಳುತ್ತೀರಿ, ಮಂಡಲ್ ಪಂಚಾಯತ್ ಚುನಾವಣೆ ನಡೆದಿದೆ, ಒಂದು ಮಂಡಲ ಪಂಚಾಯತಿಯಲ್ಲಿ ಕಾಂಗ್ರೆಸ್‌ನವರಿಗೆ ಅಧಿಕಾರ ಕೊಡಬೇಕೆಂದು ಜನರು ಹೇಳಿದ್ದಾರೆ, ಆದರೆ ನಿಮ್ಮ ನಾಮಕರಣ ಪದ್ಧತಿಯಿಂದ ಜನತೆಗನುಗುಣವಾಗಿ ಆಡಳಿತ ನಡೆಯುತ್ತದೆಯೋ ? ಅಂದಮೇಲೆ ಪ್ರಜೆಗಳು ಆಯ್ಕೆ ಮಾಡಿದ ಪ್ರಜಾಪ್ರತಿನಿಧಿಗಳಿಗೆ ಆಡಳಿತ ಕೊಟ್ಟಂತೆ ಆಯಿತೇ, ಅವರ ಅಭಿಮತಕ್ಕೆ ಅನುಗುಣವಾಗಿ ನಡೆಯುತಕ್ಕಂತೆ ಆಯಿತೇ, ಇದರಿಂದ ನಿಮ್ಮ ಮೂಲಭೂತ ತತ್ವ ಬದಲಾವಣೆ ಆದಂತೆ ಆಗಲಿಲ್ಲವೇ ಎಂದು ಕೇಳುತ್ತೇನೆ. ನಾವು ಇಲ್ಲಿ ೨೨೪ ಸದಸ್ಯರಿದ್ದೇವೆ, ಇಲ್ಲಿ ಈ ಸಭೆಗೆ ಒಬ್ಬರನ್ನು ನಾಮಕರಣ ಮಾಡತಕ್ಕಂಥ ಸನ್ನಿವೇಶ ಇದೆ, ಸರಕಾರ ರಚನೆ ಆದಮೇಲೆ, ಇಲ್ಲಿಗೆ ಒಬ್ಬರು ಆಂಗ್ಲೋ ಇಂಡಿಯನ್ನರನ್ನು ನಾಮಕರಣ ಮಾಡಲಿಕ್ಕೆ ನಾವು ಗೌರ್ನರ್‌ಗೆ ವರದಿ ಕಳುಹಿಸುತ್ತೇನೆ. ಅದೇ ರೀತಿ ಪ್ರಧಾನ ಮತ್ತು ಉಪಪ್ರಧಾನರ ಆಯ್ಕೆ ಆದಮೇಲೆ, ಮಂಡಲ ಪಂಚಾಯತಿಗೆ ಇಬ್ಬರನ್ನು ನಾಮಕರಣ ಮಾಡತಕ್ಕಂಥ ಸನ್ನಿವೇಶಕ್ಕೆ ಕೈ ಹಾಕಿದ್ದರೆ, ನಿಮಗೆ ನಿಜವಾಗಿಯೂ ಹಿಂದುಳಿದವರ್ಗದವರ ಬಗ್ಗೆ ಕಳಕಳಿ ಇದೆ, ನಿಜ ಎಂದು ಒಪ್ಪಿಕೊಳ್ಳುತ್ತಿದ್ದೆವು. ಆದರೆ ಚುನಾವಣೆಗೆ ಮೊದಲೇ ಇಬ್ಬರನ್ನು ನಾಮಕರಣ ಮಾಡತಕ್ಕಂಥ ಏನು ಒಂದು ಪದ್ಧತಿಯನ್ನು ತಾವು ಅಳವಡಿಸಿಕೊಂಡಿದ್ದೀರಿ, ಇಂತಹ ಒಂದು ದುಷ್ಟ ಪದ್ಧತಿ ಬೇರೆಲ್ಲೂ ಇಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜನಗಳ ಅಭಿಮತವನ್ನು ವಿರೋಧಿಸತಕ್ಕಂಥ ಕಾರ್ಯಕ್ಕೆ ಏನು ಕೈಹಾಕಿದ್ದೀರಿ ಇದು ಸರಿಯಲ್ಲ. ಇದರಿಂದ ತಾವು ಏನು ಹೆಸರು ಗಳಿಸಿಕೊಂಡಿದ್ದೀರಿ ಅದಕ್ಕೆ ಕುಂದು ಬರುತ್ತದೆ. ರಾಜ್ಯದಲ್ಲಿ ಪಂಚಾಯತ್ ರಾಜ್ಯ ಪರಿಕಲ್ಪನೆಯನ್ನು ಮೂಡಿಸಿ, ಇದರ ಬಗ್ಗೆ ಮಸೂದೆಯನ್ನು ತಂದು, ಚುನಾವಣೆಗಳನ್ನು ನಡೆಸಿ, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳನ್ನು ಅಸ್ತಿತ್ವಕ್ಕೆ ತಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಆದರೆ ಆ ಹೆಸರನ್ನು ತಾವು ಉಳಿಸಿಕೊಳ್ಳಬೇಕು. ಜನತಾ ಸರಕಾರ ಈ ಕೆಲಸವನ್ನು ಮಾಡಿದೆ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಜನವರಿ ೩೧ನೇ ತಾರೀಖು ಚುನಾಯಿತ ಪ್ರತಿಧಿಗಳ ಒಂದು ಬೃಹತ್ ಸಭೆ ಏನು ನಡೆಯಿತು. ಆ ಸಭೆಯನ್ನು ನೋಡಿ, ಬಹುಶಃ ನನ್ನ ಜೀವಮಾನದಲ್ಲಿ ಇಷ್ಟು ಸಂತೋಷ ಯಾವತ್ತೂ ಆಗಿಲ್ಲ, ಏಕಕಾಲದಲ್ಲಿ ೬೦ ಸಾವಿರ ಚುನಾಯಿತ ಪ್ರತಿನಿಧಿಗಳನ್ನು ನಾನು ಎಲ್ಲೂ ನೋಡಿಲ್ಲ, ಇದನ್ನು ನೋಡಲು ಸಾಧ್ಯವಾಯಿತು, ಇದರಿಂದ ನಾನು ಬಹಳ ಸಂತೋಷ ಪಡುತ್ತೇನೆ ಎಂದು ಹೇಳಿದರು. ನಿಜ ನಾವು ಒಪ್ಪಿಕೊಳ್ಳುತ್ತೇವೆ, ಸಂತೋಷ ಪಡಬೇಕಾದುದು ಧರ್ಮ, ಕಾರ್ಯಕ್ರಮ ಮಾಡಿದಿರಿ, ಚುನಾವಣೆ ನಡೆಸಿದಿರಿ, ಚುನಾಯಿತ ಪ್ರತಿನಿಧಿಗಳು ಬಂದಿದ್ದರು, ಪ್ರಜೆಗಳ ಕೈಗೆ ಅಧಿಕಾರವನ್ನು ಕೊಡತಕ್ಕಂಥ ಒಂದು ದೊಡ್ಡ ದೃಷ್ಟಿಯಿಂದ ಈ ಕಾರ್ಯ ಮಾಡಿದಿರಿ. ಇವತ್ತಿನ ದಿವಸ ಚುನಾವಣೆಯಲ್ಲಿ ಗೆದ್ದಿರತಕ್ಕಂಥ ಪ್ರತಿನಿಧಿಗಳಿಗೆ, ನಾಮಕರಣ ಮಾಡುವುದರ ಮೂಲಕ ಅಸಮಾಧಾನವನ್ನು ಮಾಡಿದಹಾಗೆ ಆಗುತ್ತದೆ ಅವರ ಅಸಂತುಷ್ಟಿಯನ್ನು ಗಳಿಸಿದಹಾಗೆ ಆಗುತ್ತದೆ. ಆದುದರಿಂದ ದಯಮಾಡಿ ಇದನ್ನು ಯೋಚನೆ ಮಾಡಬೇಕು ಇದರಿಂದ ತಮಗೆ ಒಂದು ೧೦೦–೨೦೦ ಮಂಡಲಗಳಲ್ಲಿ ಅಧಿಕಾರ ಬರಬಹುದು, ಹೋಗಬಹುದು, ಆದರೆ ಒಂದು ಸಿದ್ಧಾಂತವನ್ನು ಒಂದು ತತ್ವವನ್ನು ತಾವು ಒಪ್ಪಿಕೊಂಡ ಮೇಲೆ ಅದರ ಪ್ರಕಾರ ಕೆಲಸ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಈಗ ತಹಶೀಲ್ದಾರ್‌ರವರಿಗೆ ಮೆಸೇಜ್‌ಗಳನ್ನು ಕೊಟ್ಟು ನಾಮಿನೇಷನ್ ಮಾಡುವುದಕ್ಕೆ ಬೇಕಾದ ಫಾರಂಗಳನ್ನು ಕಳುಹಿಸಿಕೊಟ್ಟಿದ್ದಾರೆ. ಈ ಚುನಾವಣೆ ಬಗ್ಗೆ ಪರ್ಸನಲ್ ಅಟೆನ್‌ಷನ್ ಕೊಡಬೇಕೆಂದು ತಹಶೀಲ್ದಾರ್‌ಗಳಿಗೆ ಸೂಚನೆಗಳನ್ನು ಕೊಟ್ಟಿದ್ದಾರೆ. ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡುವುದಕ್ಕೆ ಈಗಾಗಲೇ ಹೆಸರುಗಳನ್ನು ಸಿದ್ಧಪಡಿಸಲಾಗಿದೆ ಎಂದು ತಿಳಿದು ಬಂದಿದೆ. ಸರ್ಕಾರಿ ಅಧಿಕಾರಿಗಳು ಮಂಡಲ ಪಂಚಾಯಿತಿಗೆ ಮೆಂಬರ್ಸ್‌ಗಳನ್ನು ಗುರುತಿಸಬೇಕೆಂದು ಬಹಳ ದಿನಗಳ ಹಿಂದೆಯೇ ಸೂಚನೆಯನ್ನು ಕೊಡಲಾಗಿತ್ತು. ಯಾರು ಹಿಂದುಳಿದವರು, ಯಾರು ಅಗ್ರಿಕಲ್ಚರಲ್ ಲೇಬರ್ಸ್ ಎಂದು ಗುರುತಿಸುವುದು ಬಹಳ ಕಷ್ಟ. ನಾಮಕರಣ ಮಾಡುವುದಕ್ಕೆ ಹೋದರೆ ಮುಂದುವರಿದ ಜನಾಂಗ

ದವರೇ ಸ್ಥಾನಗಳನ್ನು ತೆಗೆದುಕೊಂಡು ಬಿಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನಾಂಕ ೨೮-೩-೮೭ ರಂದು ಜಿಲ್ಲಾ ಪರಿಷತ್ತಿನ ಸಭೆ ಆಯಿತು. ಮೊನ್ನೆ ನಡೆದ ಸಭೆಯಲ್ಲಿ ನಾಮಿನೇಷನ್ ಮಾಡುವಂಥ ಯಾವ ವಿಚಾರ ಇತ್ತೋ, ಅದನ್ನು ದಯವಿಟ್ಟು ಮುಂದೂಡಬೇಕೆಂದು ಆಫೀಸ್ ನೋಟ್ ಬಂದಿದೆ. ಇದರ ಕುರಿತು ಪುನಃ ಚಿಂತನೆ ಮಾಡಲಾಗುತ್ತಿದೆ. ಇನ್ನೂ ಯಾವುದೇ ಅಂತಿಮ ನಿರ್ಧಾರ ಆಗಿಲ್ಲ ಮತ್ತೆ ಸಭೆಯನ್ನು ಈ ತಿಂಗಳ ೮ನೇ ತಾರೀಖಿಗೆ ಮುಂದೂಡಲಾಗಿದೆ. ೮ನೇ ತಾರೀಖು ಜಿಲ್ಲಾ ಪರಿಷತ್ತಿನ ಸಭೆ ಸೇರಿ ೧೦ನೇ ತಾರೀಖು ಮಂಡಲ ಪಂಚಾಯಿತಿಗೆ ಸದಸ್ಯರುಗಳನ್ನು ನಾಮಕರಣ ಮಾಡುವುದಕ್ಕೆ ಪ್ರಯತ್ನ ನಡೆದಿದೆ. ಜಿಲ್ಲಾ ಪರಿಷತ್ತಿನವರು ಮಂಡಲ ಪಂಚಾಯಿತಿಗಳಿಗೆ ಸದಸ್ಯರುಗಳನ್ನು ನಾಮಕರಣ ಮಾಡುವುದಕ್ಕೆ ಏನೇನು ಕ್ರಮಗಳನ್ನು ಮಾಡಬೇಕೋ ಅದೆಲ್ಲವನ್ನೂ ಮಾಡಲಾಗಿದೆ. ಜಿಲ್ಲಾ ಪರಿಷತ್ತಿನಿಂದ ಮಂಡಲ ಪಂಚಾಯಿತಿಗೆ ಯಾರನ್ನು ನಾಮಕರಣ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ಒಂದು ತಿದ್ದುಪಡಿಯನ್ನು ಮಾಡಿದೆ. ೬,೦೦೦ ರೂಪಾಯಿಗಳಿಗಿಂತ ಕಡಿಮೆ ಆದಾಯವನ್ನು ವರ್ಷಕ್ಕೆ ಹೊಂದಿರುವ ಅಗ್ರಿಕಲ್ಚರಲ್ ಲೇಬರರ್ಸ್‌ಗಳು ಮತ್ತು ಆರ್ಟಿಸಾನ್‌ಗಳನ್ನು ನಾಮಕರಣ ಮಾಡಬೇಕು ಎಂದು ಕಾನೂನನ್ನು ಮಾಡಲಾಗಿದೆ. ಹಾವನೂರ್ ಕಮಿಷನ್ ರಿಪೋರ್ಟ್ ಪ್ರಕಾರ ಯಾರು ಹಿಂದುಳಿದವರು ಎಂಬುದನ್ನು ಸರಿಯಾಗಿ ಗುರುತಿಸಬಹುದಾಗಿತ್ತು. ಆದರೆ ಈಗ ವೆಂಕಟಸ್ವಾಮಿ ರಿಪೋರ್ಟ್ ಬಂದ ಮೇಲೆ ಅದನ್ನು ಅನುಷ್ಠಾನಕ್ಕೆ ತರದೇ ಎಲ್ಲಾ ಜಾತಿಯವರೂ ಹಿಂದುಳಿದ ವರ್ಗಕ್ಕೆ ಸೇರಿದವರೆಂದು ಹೇಳಲಾಗಿದೆ. ಅಂದ ಮೇಲೆ ಮಂಡಲ ಪಂಚಾಯಿತಿ ಚುನಾವಣೆಯಲ್ಲಿ ಎಲ್ಲಾ ವರ್ಗದ ಜನರೂ ಎಲೆಕ್ಟ್ ಆಗಿ ಬಂದಿದ್ದಾರೆ. ಎಲ್ಲಾ ವರ್ಗದವರೂ ಎಲೆಕ್ಟ್ ಆಗಿ ಬಂದ ಮೇಲೆ ಪುನಃ ನಾಮಕರಣ ಮಾಡುವುದಕ್ಕೆ ಯಾವುದೇ ಕಾರಣ ಇಲ್ಲ. ಇವರು ಮಾಡುತ್ತಿರುವುದು ನಿಜವಾಗಿ ದ್ರೋಹವೆಂದು ನಾನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ನೀತಿಯೆಂದು ಹೇಳಬೇಕಾಗುತ್ತದೆ. ಮಂಡಲ ಪಂಚಾಯಿತಿಗಳಲ್ಲಿ ಎಲ್ಲಾ ಜಾತಿಯವರು ಆರಿಸಿ ಬಂದಿರುವುದರಿಂದ ಪುನಃ ಇವರು ಅದೇ ಜಾತಿಯ ಜನರನ್ನು ನಾಮಕರಣ ಮಾಡುವ ಅವಶ್ಯಕತೆ ಇರುವುದಿಲ್ಲ. ನಾಮಕರಣ ಮಾಡಿದರೆ, ಅದರಿಂದ ಜನತಾ ಸರ್ಕಾರಕ್ಕೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶದಿಂದ ಮಾತ್ರ ಮಾಡುವುದಕ್ಕೆ ಹೊರಟಿದ್ದಾರೆಯೇ ಹೊರತು ನಿಜವಾಗಿ ಹಿಂದುಳಿದವರಿಗೆ ಸಹಾಯ ಮಾಡಬೇಕೆಂದು ಅಲ್ಲ. ಹಿಂದುಳಿದವರನ್ನು ಅಭಿವೃದ್ಧಿ ಮಾಡಬೇಕು ಎನ್ನುವ ಉದ್ದೇಶ ಇದ್ದರೆ, ಸದಸ್ಯರುಗಳನ್ನು ನಾಮಕರಣ ಮಾಡುವುದರಿಂದ ಮಾತ್ರ ಸಾಧ್ಯವಾಗುತ್ತದೆ ಎನ್ನುವುದು ತಪ್ಪಾಗುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೮೭ ಜಾತಿಯ ಜನರು ಇದ್ದಾರೆ. ೧೮೭ ಜಾತಿಗಳಲ್ಲಿ ಎಲ್ಲಾ ಜಾತಿಯ ಜನರೂ ಮಂಡಲ ಪಂಚಾಯಿತಿ ಚುನಾವಣೆಗಳಲ್ಲಿ ಗೆದ್ದು ಬಂದಿದ್ದಾರೆ ಎಲ್ಲಾ ಜಾತಿಯವರು ಗೆದ್ದು ಬಂದಿರುವಾಗ ಮತ್ತೆ ಅದೇ ಜಾತಿಯವರನ್ನು ಮಂಡಲ ಪಂಚಾಯಿತಿಗೆ ಸದಸ್ಯರಾಗಿ ನಾಮಕರಣ ಮಾಡುವ ಉದ್ದೇಶವಾದರೂ ಏನು ? ಜನತೆಯ ಕೈಗೆ ಅಧಿಕಾರವನ್ನು ಕೊಡುತ್ತೇವೆಂದು ಹೇಳಿಕೊಂಡು ಸರ್ಕಾರವೇ ಅಧಿಕಾರ ಇಟ್ಟುಕೊಳ್ಳುವುದು ಸರಿಯಲ್ಲ. ಆದುದರಿಂದ ನಾನು ಹೇಳುವುದೇನೆಂದರೆ, ಹಿಂದುಳಿದ ವರ್ಗದವರನ್ನು ಗುರುತಿಸಿ ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡುತ್ತೇವೆ ಎನ್ನುವ ವಿಷಯವನ್ನು ಸರ್ಕಾರದವರು ಬಿಡುವುದು ಒಳ್ಳೆಯದು. ಇಲ್ಲದಿದ್ದರೆ ಜನತೆಗೆ ದ್ರೋಹ ಮಾಡಿದಂತಾಗುತ್ತದೆ. ನಾವು ಇಲ್ಲಿ ಕುಳಿತು ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡಬೇಡಿ ಎಂದು ಚರ್ಚೆ ಮಾಡುತ್ತಿದ್ದರೆ, ಈಗಾಗಲೇ ನಾಮಕರಣ ಮಾಡುವುದಕ್ಕೆ ಎಲ್ಲಾ ಕೆಲಸಗಳನ್ನು ಸರ್ಕಾರದವರು ಮಾಡಿಕೊಳ್ಳುತ್ತಿದ್ದಾರೆ. ಈಗಲಾದರೂ ಸರ್ಕಾರದವರು ಸದಸ್ಯರುಗಳನ್ನು ನಾಮಕರಣ ಮಾಡುವುದನ್ನು ಕೈಬಿಡಬೇಕು.

೩.೩೦ ಪಿ.ಎಂ.

೯ ಜಾತಿಗಳು ಎಲ್ಲಾ ಮಂಡಲ ಪಂಚಾಯತ್ ಪ್ರದೇಶಗಳಲ್ಲೂ ಸಿಕ್ಕುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಮೋಧರ ಎನ್ನುವಂಥ ಜಾತಿ ಇದೆ. ಇದು ಬರುವುದಿಲ್ಲ. ಅದೇ ರೀತಿ ದಕ್ಷಿಣ ಕನ್ನಡದ ಕರಾವಳಿಯಲ್ಲಿ ಮೊಗವೀರರು ಯಾರಿದ್ದಾರೆ ಅವರು ಇದರಲ್ಲಿ ಬರುವುದಿಲ್ಲ. ಕುಶಲ ಕಾರ್ಮಿಕರು ಕೃಷಿ ಕಾರ್ಮಿಕರಾಗಿ ಕೆಲಸ ಮಾಡತಕ್ಕವರು ಕಾಲು ಪರ್ಸೆಂಟ್, ಅರ್ಧ ಪರ್ಸೆಂಟ್ ಇದ್ದರೆ ಹೆಚ್ಚಿಗೆ ಆಯಿತು ಎನ್ನತಕ್ಕ ಕಾರಣದಿಂದ ಬಲ್ಲವರಿಗೆ ಇನ್ನೂ ಬೇರೆ ಜನರಿಗೆ ಇದರಲ್ಲಿ ಅವಕಾಶವೇ ಇಲ್ಲವಾಗಿದೆ. ಅದೇ ರೀತಿ ದೇವಾಡಿಗ ಎಂಬುದು ಒಂದು ಕೀಳುಜಾತಿ ಇದೆ. ಬಹುಶಃ ರಾಜಕೀಯ ಕ್ಷೇತ್ರ

ದಲ್ಲಿ ಮೊಯಿಲಿಯವರನ್ನು ಬಿಟ್ಟರೆ ಈ ಮಂಡಲ ಪಂಚಾಯತ್‌ನಲ್ಲಿ ಅವರ ಜಾತಿಯವರು ಯಾರು ಇಲ್ಲವೆಂದು ನಾನು ಭಾವಿಸುತ್ತೇನೆ. ಕೃಷಿ ಕಾರ್ಮಿಕರನ್ನು ತೆಗೆದುಕೊಳ್ಳುವುದಾದರೆ, ಕುಶಲಕರ್ಮಿಗಳನ್ನು ತೆಗೆದುಕೊಳ್ಳುವುದಾದರೆ ಹಳ್ಳಿಯಲ್ಲಿರತಕ್ಕ ಮಡಕೆಯನ್ನು ಮಾಡತಕ್ಕ ಕುಂಬಾರ, ಮರದ ಕೆಲಸವನ್ನು ಮಾಡತಕ್ಕ ಬಡಗಿ, ಕಬ್ಬಿಣದ ಕೆಲಸ ಮಾಡತಕ್ಕ ಕಮ್ಮಾರ ಈ ವರ್ಗದ ಜನರಿಗೆ ಯಾರಿಗೂ ಕೂಡ ಅವಕಾಶವೇ ಇಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್, ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನ್ನು ಒಟ್ಟಿಗೇ ಸೇರಿಸಿಕೊಂಡು ಇದನ್ನು ಮಾಡುತ್ತಿದ್ದೀರಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಮೀಸಲಾತಿ ಇದೆ, ಇವರ ಜೊತೆಗೆ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಇಟ್ಟಂಥ ಸೀಟುಗಳನ್ನೂ ಕೂಡ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೇ ಕೊಟ್ಟು ವರ್ಗ ಸಂಘರ್ಷವನ್ನು ಉಂಟು ಮಾಡತಕ್ಕ ಆಲೋಚನೆ ಇದೆಯೋ ವಿನಹ ಇದರಲ್ಲಿ ಬೇರೆ ಏನೂ ಇಲ್ಲ. ಯಾವ ಜಾತಿ ಆ ಜಿಲ್ಲೆಯಲ್ಲಿ ೧ ಪರ್ಸೆಂಟ್‌ಗಿಂತ ಕಡಿಮೆ ಇದೆ ಅವುಗಳಿಗೆ ಇಲ್ಲಿ ಅವಕಾಶ ಇಲ್ಲ. ಅಂದರೆ ಅವಕಾಶ ಸಿಕ್ಕಿದ ಜಾತಿಗಳು ಹೆಚ್ಚಿಗೆ ಉಳಿಯುತ್ತವೆ. ಹಿಂದುಳಿದ ವರ್ಗದವರಿಗೆ ಈ ಸರ್ಕಾರ ಅನುಕೂಲ ಮಾಡಿಕೊಡುತ್ತದೆ ಎಂದು ಏನು ಹೇಳುತ್ತಿದೆ ಆ ಜಾತಿಯವರ ಶಾಪಕ್ಕೆ ನೀವು ಗುರಿಯಾಗುತ್ತೀರಿ. ಸ್ವಾಮಿ, ಮುಂಗಾರು ಪತ್ರಿಕೆಯಲ್ಲಿ ವರದಿಯಾಗಿರುವಂತೆ ೮ನೇ ತಾರೀಖಿನೊಳಗೆ ನಾಮಕರಣವನ್ನು ಮಾಡಲೇಬೇಕೆಂದು ಸರ್ಕಾರದವರು ಒಂದು ಸಂದೇಶವನ್ನೂ ಕೂಡ ಕೊಟ್ಟಿದ್ದಾರೆ. ೯ನೇ ತಾರೀಖು ಜಿಲ್ಲಾ ಪರಿಷತ್ತಿನ ಸಭೆ ನಡೆಯುತ್ತದೆಂದು ಗೊತ್ತಿದ್ದರೂ ೮ನೇ ತಾರೀಖಿನೊಳಗೆ ನಾಮಕರಣವನ್ನು ಮಾಡಬೇಕೆಂದು ಹೇಳಿರುವುದಾದರೆ ಇದರಲ್ಲಿ ಸರ್ಕಾರದ ಸ್ಪಷ್ಟವಾದ ದುರುದ್ದೇಶ ಇದೆಯೆಂಬುದು ಕಂಡು ಬರುತ್ತದೆ. ಇಂಥ ಕರಾಳ ಕಾರಾಸ್ಥಾನ ಇದಾಗಿದೆ. ಇಲ್ಲಿ ನಾಮಕರಣದ ಬಿಲ್ ಪಾಸ್ ಆಗದಿದ್ದರೂ ಆರ್ಡಿನೆನ್ಸ್ ಮೂಲಕ ಮಾಡಬಹುದೆಂಬ ಶಂಕೆ ನಮಗಿದೆ. ಸ್ವಾಮಿ, ನಾನು ತಮಗೆ ಹೇಳುತ್ತೇನೆ ಒಂದು ವೇಳೆ ಅಂಥ ಸಂದರ್ಭ ಬಂದಾಗ ದಕ್ಷಿಣ ಕನ್ನಡ ಜಿಲ್ಲೆಯ ಜನರ ಉಗ್ರವಾದ ಪ್ರತಿಭಟನೆ ಬರುತ್ತದೆಂದು ತಮಗೆ ಹೇಳಬಯಸುತ್ತೇನೆ.

ಸ್ವಾಮಿ, ಇನ್ನೊಂದು ವಿಚಾರ ಎಂದರೆ ಜಿಲ್ಲಾ ಪರಿಷತ್ ಸಭೆಯಲ್ಲಿ ಒಬ್ಬ ಜವಾಬ್ದಾರಿ ಜನತಾ ಪಕ್ಷದ ಸದಸ್ಯರೊಬ್ಬರು ಮಾತನಾಡುತ್ತಾ ಇದನ್ನು ನಾಮಕರಣ ಮಾಡುವುದಕ್ಕೆ ಇನ್ನೊಂದು ಸಮಿತಿ ರಚನೆಯಾಗಿದೆ. ಅದರಲ್ಲಿ ಆ ಜಿಲ್ಲೆಯ ಉಸ್ತುವಾರಿ ನೋಡಿಕೊಳ್ಳುವ ಮಂತ್ರಿಗಳು, ಜನತಾ ಪಕ್ಷದ ಅಧ್ಯಕ್ಷರು, ಜಿಲ್ಲಾ ಪರಿಷತ್ ಅಧ್ಯಕ್ಷರು ಇರುವಂಥ ಒಂದು ಸಮಿತಿ ನೇಮಕವಾಗಿ ಅದರ ಪ್ರಕಾರ ನಾಮಕರಣವಾಗುತ್ತದೆಂದು ಅವರು ಹೇಳಿದರು. ಹೀಗೆಲ್ಲಾ ಆಗುವುದಾದರೆ ಇದು ಯಾವರೀತಿಯ ರಾಜಕೀಯ ಸ್ವಾಮಿ? ಜನರ ಕೈಗೆ ಅಧಿಕಾರವನ್ನು ಕೊಡುತ್ತೇವೆಂದು ಹೇಳಿ ಕಾನೂನನ್ನು ಮಾಡಿದ್ದೇವೆಂದು ಮಹಾತ್ಮ ಗಾಂಧಿಯವರ ಹೆಸರಿನಲ್ಲಿ, ಜಯಪ್ರಕಾಶ ನಾರಾಯಣ್‌ರವರ ಹೆಸರಿನಲ್ಲಿ, ಲೋಹಿಯಾರವರ ಹೆಸರಿನಲ್ಲಿ ಗಂಟೆಗಟ್ಟಲೆ ಭಾಷಣವನ್ನು ಕೇಳಿಕೊಂಡು ಕೊನೆಗೆ ಜನರ ಕೈಯಿಂದ ಅಧಿಕಾರವನ್ನು ಕಸಿದುಕೊಳ್ಳುವ ಹೇಯವಾದ ಕರಾಳವಾದ ಕಾರಾಸ್ಥಾನ ಇಲ್ಲಿ ನಡೆಯುವುದಾದರೆ, ಈ ಅಧಿಕಾರವನ್ನು ತಮ್ಮ ಕೈಯಲ್ಲಿ ಪಡೆದುಕೊಳ್ಳಬೇಕೆಂಬ ಅಧಿಕಾರ ಲಾಲಸೆ ಈ ಸರ್ಕಾರಕ್ಕೆ ಮತ್ತು ಸರ್ಕಾರವನ್ನು ನಡೆಸತಕ್ಕ ಪಕ್ಷಕ್ಕೆ ಇದೆಯೆಂದು ಹೇಳುವುದಾದರೆ ಇದಕ್ಕೆ ನಾವು ಏನು ಹೇಳಬೇಕೋ ಗೊತ್ತಿಲ್ಲ.

ಮಾನ್ಯ ಅಧ್ಯಕ್ಷರೆ, ಇನ್ನು ಕೊನೆಯದಾಗಿ ಹೇಳುವುದಾದರೆ, ಇದರಲ್ಲಿ ರಾಜಕಾರಣದ ಪ್ರಧಾನ ಪಾತ್ರವಿದೆ. ಆದ್ದರಿಂದ ನಾನು ಒಂದು ಮಾತನ್ನು ಕವಿತೆಯ ಮೂಲಕ ಹೇಳಬಯಸುತ್ತೇನೆ. ಅದು ಈ ರೀತಿ ಇದೆ.

"ಮಂಡಲ ಪಂಚಾಯಿತಿಗೆ ನಾಮಕರಣ,
ಇದಕ್ಕೆ ಕಾರಣ—
ಬರಿಯ ರಾಜಕಾರಣ,
ದಲಿತ, ದುರ್ಬಲ ದನಿಯಾದ
ವೆಂಕಟಸ್ವಾಮಿ,
ವರದಿ ತಿಪ್ಪೆಗೆ ಎಸೆದ

ತಮ್ಮ ಕಳಕಳಿ ಏನು ಸ್ವಾಮಿ?
ಜನರ ಕೈಗೆ ಕೊಟ್ಟ ಅಧಿಕಾರ
ಅಧಿಕಾರಿ ಕೈಯಲ್ಲಿ ಒಂದು ಸಾಕ್ಷಾತ್ಕಾರ
ಮಂಡಲ ಪಂಚಾಯಿತಿಗೆ ನಾಮಕರಣ
ಇದಕ್ಕೆ ಕಾರಣ
ಬರಿಯ ರಾಜಕಾರಣ
ನಮಸ್ಕಾರ

ಶ್ರೀ ಜಿ. ರಾಮಕೃಷ್ಣ (ಕಮಲಾಪುರ). —ಸನ್ಮಾನ್ಯ ಅಧ್ಯಕ್ಷಿಣಿಯವರೇ ಈ ಸದನದಲ್ಲಿ ಸುಮಾರು ೮ ದಿವಸಗಳ ಕಾಲ ಸತತವಾಗಿ ಧರಣಿ ಮಾಡಿದ ಮೇಲೆ ನಮ್ಮ ಬೇಡಿಕೆಗೆ ಈ ಸರ್ಕಾರ ಒಪ್ಪಿ ಸದನ ಮುಗಿಯುವ ವೇಳೆಗೆ ಇವರಿಗೆ ಮಾತನಾಡಲು ಅವಕಾಶ ಕೊಡೋಣ ಎಂಬ ದೃಷ್ಟಿಯಿಂದ ಅನುವು ಮಾಡಿಕೊಟ್ಟಿದ್ದಾರೆ. ನಿಜವಾಗಿ ನೋಡಿದರೆ ಇದುವರೆಗೂ ಮಾತನಾಡಿರುವ ಬಹಳಷ್ಟು ಸದಸ್ಯರು ಅವರವರ ಅನಿಸಿಕೆಗಳನ್ನು ಬಹಳಷ್ಟು ತಿಳಿಯಾಗಿ ಸದನದ ಮುಂದಿಟ್ಟಿದ್ದಾರೆ. ಎದ್ದು ಕಾಣುತ್ತಿರುವುದೇನೆಂದರೆ ಈ ನಾಮಕರಣ ಮಾಡುವ ಮೂಲಕ ಹಿಂದುಳಿದ ವರ್ಗದ ಹೆಸರಿನ ಇವರ ಕಾರ್ಯಕರ್ತರನ್ನು ನೇಮಿಸುವುದೇ ಹೊರತು ಬೇರೆ ಏನಲ್ಲ ಎಂಬುದು ಎಲ್ಲರಿಗೂ ಗೊತ್ತು. ಇದು ಈ ಸದನಕ್ಕಷ್ಟೇ ಅಲ್ಲ ಹಳ್ಳಿಗಳಲ್ಲಿನ ಜನರಿಗೂ ಗೊತ್ತಿದೆ. ಈ ಸರ್ಕಾರ ಏನು ಮಾಡುತ್ತಿದೆ, ಇದರ ಉದ್ದೇಶ ಏನಿದೆ, ಏಕೆ ನಾಮಕರಣ ಮಾಡುತ್ತಿದೆ ಎಂಬುದು ರಾಜ್ಯದ ಎಲ್ಲರಿಗೂ ಎದ್ದು ಕಾಣುತ್ತಿದೆ. ಬಹುಶಃ ನಾವು ಏನು ಮಾಡಿದರೂ ಜನ ಸಹಿಸುತ್ತಾರೆ ನಾವು ಮಾಡಿದಕ್ಕೆಲ್ಲ ಒಪ್ಪಿಗೆ ಕೊಡುತ್ತಾರೆಂದು ಇವರು ತಿಳಿದುಕೊಂಡಿರಬಹುದು. ಆದರೆ ರಾಜ್ಯದ ಜನ ಬಹಳಷ್ಟು ಬುದ್ಧಿವಂತರು. ಸರಿಯಾದ ಸಮಯ ಬಂದಾಗ ಒಳ್ಳೆಯ ನಿರ್ಣಯವನ್ನು ಅವರು ತೆಗೆದುಕೊಳ್ಳುತ್ತಾರೆ. ಜನತಾ ಪಕ್ಷ ಒಂದು ಪಕ್ಷ ಬಹುಮತ ಗಳಿಸದೇ ಇದ್ದಿದ್ದರೆ ಈ ನಾಮಕರಣ ಕ್ರಿಯೆಗೆ ಕೈ ಹಾಕುತ್ತಲೇ ಇರಲಿಲ್ಲ. ನಿಜವಾಗಿಯೂ ಇವರು ಕೃಷಿಕಾರರಿಗೆ ಮತ್ತು ಇತರೆಯವರಿಗೆ ಪ್ರಾತಿನಿಧ್ಯ ಕೊಡಬೇಕೆಂದು ಮಾಡಿದ್ದರೆ ಸದನದಲ್ಲಿ ಅದಕ್ಕೆ ಅರ್ಥವಾದರೂ ಬರುತ್ತಿತ್ತು. ಆದರೆ ಇವರ ಉದ್ದೇಶವೆಲ್ಲ ಎಷ್ಟು ಮಂಡಲಗಳನ್ನು ಸ್ವಾಧೀನಕ್ಕೆ ತಂದುಕೊಳ್ಳಬಹುದು ಎನ್ನುವುದು ಇವರು ಮೊದಲೆಲ್ಲ ಅಂದರೆ ಅಸೆಂಬ್ಲಿ ಎಲೆಕ್ಷನ್ ಮುಂಚೆ, ಲೋಕಸಭೆ ಎಲೆಕ್ಷನ್ ಮುಂದೆ ಜಿಲ್ಲಾ ಪರಿಷತ್ ಎಲೆಕ್ಷನ್ ಮುಂಚೆ ಏನು ಹೇಳಿದರು ಎಂದರೆ ನಾವು ಜನತೆ ಏನು ಅಣತಿ ಕೊಡುತ್ತಾರೋ ಅದನ್ನು ಪಾಲಿಸುತ್ತೇವೆ ವಿರುದ್ಧ ಹೋಗುವುದಿಲ್ಲ ಎಂದರು. ಇದೇ ಮೌಲ್ಯಾಧಾರಿತ ರಾಜಕಾರಣ ಎಂದರು ಆದರೆ ಇವತ್ತು ಜನತೆಯ ವೋಟಿನ ತೀರ್ಮಾನಕ್ಕೆ ವಿರುದ್ಧವಾಗಿ ಹಿಂದುಳಿದ ವರ್ಗಗಳ ಹೆಸರಿನಲ್ಲಿ ಇವರ ಜನರನ್ನು ಅಧಿಕಾರದಲ್ಲಿ ಕೂರಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ ? ಇದೇ ಏನು ಮೌಲ್ಯಾಧಾರಿತ ರಾಜಕಾರಣ ಒಂದು ವೇಳೆ ಇವರೇ ಇರಬೇಕೆಂದಿದ್ದರೆ ಜನತೆಯೇ ಹಾಗೆ ತೀರ್ಮಾನ ಕೊಡುತ್ತಿದ್ದರು. ಆದರೆ ಜನತೆ ಹಾಗೆ ಮಾಡಲಿಲ್ಲ. ಇವರು ಯಾವುದು ಪಕ್ಷದ ಸರ್ಕಾರದ ತೀರ್ಮಾನ ಮೌಲ್ಯಾಧಾರಿತ ತೀರ್ಮಾನ ಎಂದು ಹೇಳಿಕೊಂಡು ಬಂದರೋ ಅದಕ್ಕೆ ವಿರುದ್ಧವಾಗಿ ಇಂದು ಜನರ ತಲೇಮೇಲೆ ಭಾರ ಹಾಕುವ ಕಾರ್ಯ ಮಾಡುತ್ತಿದ್ದಾರೆ. ಅಧಿಕಾರದಲ್ಲಿರತಕ್ಕಂತಹ ಪಕ್ಷದವರು ಮೋಸ ಮಾಡಿ ಅಧಿಕಾರವನ್ನು ಉಳಿಸಿಕೊಂಡು ಹೋಗಬೇಕೆಂದು ಮಾಡುತ್ತಿದ್ದಾರೆ ಇದು ಅಷ್ಟು ಸರಳವಾಗಿ ನಡೆಯುವುದಿಲ್ಲ. ವಿರೋಧ ಪಕ್ಷದಲ್ಲಿ ಕುಳಿತವರು ಎಷ್ಟು ಹೇಳಿದರೂ ಅದನ್ನು ಅಲಕ್ಷ್ಯ ಮಾಡಿ ನಮ್ಮ ಮಾತಿಗೆ ಬೆಲೆ ಕೊಡಲಾರದೆ ಮಾಡಲಿಕ್ಕೆ ಹೊರಟಿದ್ದೀರಿ ಎಂಬುದು ಈಗಾಗಲೇ ಗೊತ್ತಿದೆ ರಾಜ್ಯದ ಜನತೆಗೂ ಗೊತ್ತಿದೆ. ಎಷ್ಟು ವಿರೋಧ ಮಾಡಿದರೂ ಸಹ ಅಧಿಕಾರದಲ್ಲಿರತಕ್ಕಂತಹ ಪಕ್ಷದವರು ನಾಮಕರಣ ಮಾಡಿಯೇ ತೀರುತ್ತಾರೆ ಎನ್ನತಕ್ಕಂತಹ ಭಾವನೆ ಈವೊತ್ತು ಪ್ರತಿಯೊಬ್ಬರಿಗೂ ಮೂಡಿ ಬಂದಿದೆ. ಅದಕ್ಕಾಗಿ ಬಹಳ ಎಚ್ಚರಿಕೆಯಿಂದ ಈ ನಾಮಕರಣದ ಬಗ್ಗೆ ಪಾತ್ರ ವಹಿಸಬೇಕಾದಂತಹ ಸಂದರ್ಭ ಬಂದಿದೆ, ನಾಮಕರಣ ಮಾಡುವುದನ್ನು ಕೈ ಬಿಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಇನ್ನು ಹಿಂದುಳಿದವರ ಬಗ್ಗೆ ಕಳಕಳಿ ತೋರಿಸುತ್ತಿದ್ದೀರಿ ನ್ಯಾಯ್ಯ ಹಾವನೂರ್‌ರವರ ವರದಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದೆ ಇನ್ನೊಂದು ವರದಿಯನ್ನು ತರಿಸಬೇಕೆಂದು ವೆಂಕಟಸ್ವಾಮಿ ಆಯೋಗವನ್ನು ನೇಮಕ ಮಾಡಿ ಅವರು ಸಲ್ಲಿಸಿದ ವರದಿಯನ್ನೂ ಕೂಡ ಒಪ್ಪಲಿಲ್ಲ, ಅದನ್ನು ಮೂಲೆಗೊತ್ತಿ ಬೇರೆ ರೀತಿಯಾದಂತಹ ಒಂದು ವರದಿದಿಯನ್ನು ತಯಾರು ಮಾಡುವುದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಹಾವನೂರ್ ವರದಿ ಸರಿಯಾದುದಲ್ಲ

ವೆಂಕಟಸ್ವಾಮಿ ಆಯೋಗದ ವರದಿ ಬಂದ ಮೇಲೆ ಒಳ್ಳೆಯ ರೀತಿಯಲ್ಲಿ ನಿರ್ಣಯ ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಹಿಂದುಳಿದವರ ಬಗ್ಗೆ ಎಂದು ಹೇಳಿದ್ದೀರಿ ಆದರೆ ಅದನ್ನು ಬದಿಗೊತ್ತಿ ನಿಮ್ಮದೇ ಆದಂತಹ ಒಂದು ವರದಿಯನ್ನು ನಿಮಗೆ ಬೇಕಾದಂತಹ ವರದಿಯನ್ನು ನಿಮಗೆ ಅನುಕೂಲವಾಗುವಂತಹ ವರದಿಯನ್ನು ತಯಾರು ಮಾಡಿಕೊಂಡು ನಾಮಕರಣ ಮಾಡಲು ಹೊರಟಿದ್ದೀರಿ. ನೀವು ಏನು ಹೇಳಿಕೊಳ್ಳುತ್ತೀರೆಂದರೆ ಹಗಲೂ ರಾತ್ರಿ ದುಡಿದು ನಮ್ಮ ಪಕ್ಷ ಇಂಥಾದ್ದು ಮಾಡಿದೆ ಇಂಥಾದ್ದನ್ನು ಹಿಂದೆಂದೂ ಯಾವ ಸರ್ಕಾರವೂ ಮಾಡಿಲ್ಲವೆಂದು ಕೆಲವು ಸದಸ್ಯರು ಮಾತನಾಡುವಾಗ ಹೇಳಿದರು. ಕಾಂಗ್ರೆಸ್ ಸರ್ಕಾರ ೩೫ ವರ್ಷಗಳ ಕಾಲ ಅಧಿಕಾರ ಮಾಡಿದರೂ ಸಹ ನೀವು ಏನು ಮಾಡಿದ್ದೀರಿ ಏನೂ ಮಾಡಿಲ್ಲ, ನಾವು ಮೂರ್ನಾಲ್ಕು ವರ್ಷದಲ್ಲಿ ಮಾಡಿದ್ದೇವೆ ಎಂಬ ಭಾವನೆಯನ್ನು ಇಟ್ಟುಕೊಂಡು ಮಾತನಾಡತಕ್ಕಂತಹ ಸದಸ್ಯರು ರಾಜ್ಯದ, ರಾಷ್ಟ್ರದ ಪ್ರಗತಿ ಏನಾಗಿದೆ ಎಂದು ನೋಡಿದರೆ ಗೊತ್ತಾಗುತ್ತದೆ ಪ್ರತಿ ಸಲ ಹೇಳುತ್ತೀರಿ ಬೋರ್‌ವೆಲ್ ಹಾಕಿ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ ಎಂದು ಬೋರ್‌ವೆಲ್ ಬಿಟ್ಟರೆ ಬೇರೆನೂ ಮಾಡಿಲ್ಲ ಅದೂ ಕೆಲವು ಕಡೆಗಳಲ್ಲಿ ಕೆಟ್ಟು ಹೋಗಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಒಂದು ತಂಬಿಗೆ ನೀರಿಗೆ ಪರದಾಡುತ್ತಿದ್ದಾರೆ ಅಲ್ಲಿ ನೀರಿನ ವ್ಯವಸ್ಥೆ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತಿಲ್ಲ ನೀವು ಹೇಳಿಕೊಳ್ಳಬಹುದು ಹೇಳುವುದೇನೂ ದೊಡ್ಡದಲ್ಲ ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಇವತ್ತು ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ನಾಮಿನೇಷನ್ ಮಾಡುವುದನ್ನು ಕೈ ಬಿಡಿ ಎಷ್ಟೋ ಹಳ್ಳಿಗಳಲ್ಲಿ ನಮ್ಮ ಸದಸ್ಯರು ತಮ್ಮ ನಾಮಿನೇಷನ್ ಪತ್ರವನ್ನು ಕೊಡಲು ಹೋದರೆ ಆ ಪೇಪರ್ ಅನ್ನು ಕಸಿದುಕೊಂಡು ಜನತಾ ಪಕ್ಷದ ವತಿಯಿಂದ ಅರ್ಜಿಯನ್ನು ತುಂಬಿ ಅದನ್ನು ಕೊಡುತ್ತೇನೆ, ಇದನ್ನು ಕೊಡುತ್ತೇನೆಂದು ಬಿ ಫಾರಂ ಅನ್ನು ಕೊಟ್ಟು ಜಬರ್‌ದಸ್ತಿನಿಂದ ಮಾಡಿದ್ದಾರೆ. ಇವತ್ತು ಪಕ್ಷದ ಕಾರ್ಯಕರ್ತರಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಜಗಳ ಇದೆ, ಪ್ರತಿ ಮನೆಯಲ್ಲಿ ಕೂಡ ಜಗಳ ಇದೆ. ನೆಮ್ಮದಿಯಿಂದ ಕೂಲಿ ಮಾಡಿಕೊಂಡು ಒಂದು ಹೊತ್ತಿನ ಊಟವನ್ನು ಮಾಡಿಕೊಂಡು ನೆಮ್ಮದಿಯಿಂದ ಇರುತ್ತಿದ್ದರು. ಅಲ್ಲಿ ರಾಜಕೀಯ ಮಾಡಿ ಪಕ್ಷವನ್ನು ಬಲಗೊಳಿಸಬೇಕು ಈ ರಾಜ್ಯದಲ್ಲಿ ನಮ್ಮ ಪಕ್ಷ ಬೆಳೆಯಬೇಕೆನ್ನುವ ದೃಷ್ಟಿಯಿಂದ ಹಳ್ಳಿ ಹಳ್ಳಿಯಲ್ಲೂ ಮನೆ ಮನೆಗೂ ರಾಜಕೀಯವನ್ನು ಒಯ್ದಿದ್ದೀರಿ. ಕೂಲಿ ಕೆಲಸ ಮಾಡಿಕೊಂಡು ನೆಮ್ಮದಿಯಿಂದ ಇರುತ್ತಿದ್ದರು. ಇವತ್ತು ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಇದೇ ಪರಿಸ್ಥಿತಿ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮೇಡಂರವರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ ನಾನು ತಮ್ಮ ಮುಖಾಂತರವಾಗಿ ಅವರಲ್ಲಿ ಮನವಿ ಮಾಡುವುದೇನೆಂದರೆ ವಿಷಯದ ಮೇಲೆ ಮಾತನಾಡಲಿ ಎಂದು.

ಶ್ರೀ ಜಿ. ಎನ್. ರಾಮಕೃಷ್ಣ.—ಒಂದು ವೇಳೆ ಹಿಂದುಳಿದವರ ಮೇಲೆ ಅಭಿಮಾನ ಇದ್ದದ್ದೇ ಆದರೆ ಅವರಿಗೆ ನಾಮಿನೇಷನ್ ಮಾಡುವಾಗ ಒಂದು ವಿಚಾರವನ್ನು ಹೇಳುತ್ತೇನೆ. ಎಷ್ಟು ಮಂಡಲಗಳು ನಿಮ್ಮಲ್ಲಿವೆ ಆ ಎಲ್ಲ ಮಂಡಲಗಳ ಅಧ್ಯಕ್ಷರನ್ನಾಗಿ ಹಿಂದುಳಿದವರನ್ನು ಮಾಡಿ. ಎಷ್ಟು ಮಂಡಲಗಳು ನಿಮ್ಮ ಕೈಯಲ್ಲಿದೆ, ಎಷ್ಟು ಕಡೆ ಬಹುಮತ ಇದೆ, ನಾಮಿನೇಷನ್ ಮಾಡಿದಮೇಲೆ ಎಷ್ಟು ಕಡೆ ನಿಮಗೆ ಬಹುಮತ ಬರುತ್ತದೆ ಆ ಎಲ್ಲಾ ಮಂಡಲಗಳ ಅಧ್ಯಕ್ಷರನ್ನಾಗಿ ಹಿಂದುಳಿದವರನ್ನು ಮಾಡಿ ನೋಡೋಣ ಅದು ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ದಯಮಾಡಿ ತಾವು ನಾಮಕರಣ ಮಾಡಬಾರದೆಂದು ನಾನು ಒತ್ತಾಯಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವ ತತ್ವವನ್ನು ನಾವು ಒಪ್ಪಿದವರು. ಪ್ರಜಾಪ್ರಭುತ್ವ ತತ್ವವನ್ನು ಅನುಸರಿಸಿ ಮಂಡಲ ಪಂಚಾಯಿತಿಯಲ್ಲಿ ಸದಸ್ಯರನ್ನು ಚುನಾಯಿಸಿದ್ದೇವೆ. ಆದ್ದರಿಂದ ಅವರಿಂದಲೇ ಪ್ರಧಾನರು ಮತ್ತು ಉಪ ಪ್ರಧಾನರ ಆಯ್ಕೆ ಆಗಬೇಕೇ ಹೊರತು ನಾಮಿನೇಟ್ ಮಾಡಿಕೊಳ್ಳುವುದು ಪ್ರಜಾಪ್ರಭುತ್ವದ ತತ್ವ ಅಲ್ಲ ಎಂದು ನಮ್ಮ ಪಾರ್ಟಿ ಪರವಾಗಿ ಸ್ಪಷ್ಟವಾಗಿ ಹೇಳುತ್ತೇನೆ. ಒಂದು ವಿಷಯವನ್ನು ನಾವು ಮರೆಯಬಾರದು. ವಿಪರೀತ ಅಧಿಕಾರ ವಿಕೇಂದ್ರೀಕರಣ ಮಾಡಿ ಶ್ರೀಮತಿ ಇಂದಿರಾಗಾಂಧಿಯವರು ಎಲ್ಲರನ್ನೂ ನಾಮಿನೇಟ್ ಮಾಡುವುದಕ್ಕೆ ಶುರು ಮಾಡಿದರು, ತಮಗೆ ಬೇಕಾದವರನ್ನು ಚೀಫ್ ಮಿನಿಸ್ಟರ್

ಮಾಡಿದರು. ಇದು ಜಾಸ್ತಿಯಾಗಿ ಎಮರ್ಜೆನ್ಸಿ ತಂದಾಗ ವಿರೋಧಪಕ್ಷಗಳೆಲ್ಲಾ ಒಂದಾಗಿ ಜನತಾಪಾರ್ಟಿ ಶುರು ಆಯಿತು. ಶ್ರೀಮತಿ ಇಂದಿರಾಗಾಂಧಿಯವರು ಪಾರ್ಟಿ ಪ್ರೆಸಿಡೆಂಟ್ ಹುದ್ದೆಗೂ ನಾಮಿನೇಷನ್ ಪಿ. ಸಿ. ಸಿ. ಪ್ರೆಸಿಡೆಂಟ್ ಹುದ್ದೆಗೂ ನಾಮಿನೇಷನ್ ಅಪೋಸಿಷನ್ ಲೀಡರ್‌ಗೂ ನಾಮಿನೇಷನ್, ಮಿನಿಸ್ಟರ್‌ಗೂ ನಾಮಿನೇಷನ್ ಮಾಡುವುದಕ್ಕೆ ಶುರು ಮಾಡಿದರು. ಅವರು ಮಾಡಿದ ಒಂದು ತಪ್ಪಿನಿಂದ ಎಲ್ಲ ವಿರೋಧಪಕ್ಷಗಳು ಒಂದು ಗೂಡಿ ತುರ್ತುಪರಿಸ್ಥಿತಿ ಸಮಯದಲ್ಲಿ 'ನಾಮಿನೇಷನ್ ರಾಜ್ಯ ಹೋಗಬೇಕು, ಪ್ರಜಾಪ್ರಭುತ್ವ ರಾಜ್ಯ ಬರಬೇಕು' ಎಂದು ಜನತಾಪಕ್ಷ ಸೃಷ್ಟಿಯಾಯಿತು. ಕೇಂದ್ರದಲ್ಲಿ ಕೂಡ ಅದು ಅಧಿಕಾರಕ್ಕೆ ಬಂತು. ೧೯೮೩ ರಿಂದ ಜನತಾ ಪಕ್ಷ ಇಲ್ಲಿ ರಾಜ್ಯಭಾರ ಮಾಡುತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರು ಏನು ನಾಮಕರಣ ಮಾಡಿ ರಾಜ್ಯಭಾರ ಮಾಡಿದರು ಅವರು ಮಾಡಿದ ತಪ್ಪಿನಿಂದ ಅವರು ಅಧಿಕಾರ ಕಳೆದುಕೊಂಡರು. ಅಂಥ ತಪ್ಪು ನೀವು ಮಾಡುವುದು ಬೇಡ. ನೀವು ನಾಮಕರಣ ಮಾಡುವ ಹವ್ಯಾಸವನ್ನು ಬಿಡಬೇಕು ಎಂದು ಸ್ಪಷ್ಟವಾಗಿ ಹೇಳುತ್ತೇನೆ. ನಾಮಕರಣದ ಬಗ್ಗೆ ವಿಶ್ಲೇಷಣೆ ಮಾಡುವಾಗ ಅವರು ಕೊಟ್ಟಿರುವ ಆರ್ಡರ್‌ನಲ್ಲಿ ಒಂದು ಪರ್ಸೆಂಟ್‌ಗಿಂತ ಕಡಿಮೆ ಇರುವ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಮಾತ್ರ ನಾಮಿನೇಷನ್‌ಗೆ ಅವಕಾಶ ಕೊಡಬೇಕು ಎಂದು ಹೇಳುತ್ತಾರೆ. ಯಾವ ರೀತಿ ಜಾತಿಗಳಿವೆ ಎಂಬುದನ್ನು ಮಾನ್ಯ ಲಕ್ಷ್ಮೀಸಾಗರ್ ಅವರು ತಿಳಿದುಕೊಂಡರೆ ಒಳ್ಳೆಯದು. ಅರಸು, ಭಟ್ಟರು, ದರ್ಜಿ, ದೇವಾಂಗ, ಗಂಗಕುಲ, ಗಂಗ, ಗಾರುಡಿ, ಗೋಸಾಯಿ, ಗುಜರಾತಿ, ಈಡಿಗ ಕ್ಷತ್ರಿಯ, ಕುಂಬಾರ, ಮರಾಠ, ಮಲೆಯಾಳಿ, ನಟುವ, ನಾಯರ್, ರಜಪೂತ್, ಸನ್ಯಾಸಿ, ಸಾತಾನಿ, ಜೈನ, ಸಿಕ್ ಇಷ್ಟು ಜಾತಿಯವರಿಗೆ ನಾಮಿನೇಷನ್ ಮಾಡಿಸಿಕೊಳ್ಳುವ ಶಕ್ತಿ ಬಂದಿದೆ. ಆದರೆ ಮಾನ್ಯ ಲಕ್ಷ್ಮೀಸಾಗರ್ ಅವರು ಇವರನ್ನು ಹುಡುಕಿಕೊಂಡು ಹೋಗಬೇಕು. ಸಿಕ್ಸ್ ಕೆ. ಜಿ. ಎಫ್. ನಲ್ಲಿ ೮ ಜನ ಇರಬಹುದು. ಗ್ರಾಮಾಂತರ ಪ್ರದೇಶದಲ್ಲಿ ಇಲ್ಲವೇ ಇಲ್ಲ ಬುದ್ಧಿಸ್ಟ್ ಇಲ್ಲ. ಜೈನ್ಸ್ ಎಂದರೆ ಮಾರ್ವಾಡಿಗಳು. ಅವರನ್ನು ನಾಮಿನೇಟ್ ಮಾಡಿದರೆ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಸಹಾಯ ಮಾಡಿದಂತಾಗುವುದಿಲ್ಲ. ನಾನು ಹೇಳಿದ ಜಾತಿಗಳಲ್ಲಿ ಗಂಗಕುಲ ಮತ್ತು ಕುಂಬಾರ ಈ ಎರಡು ಜಾತಿಯವರು ಕೋಲಾರದಲ್ಲಿ ಸಿಗಬಹುದು. ಬೇರೆ ಯಾವ ಜಾತಿಯೂ ಅಲ್ಲಿಲ್ಲ. ಲಿಂಗಾಯಿತರು ಇರುವುದು ೧.೬೪ ಪರ್ಸೆಂಟ್. ಇವರು ಅಲ್ಲಿ ಮೈನಾರಿಟಿ. ಮೈನಾರಿಟೀಸನ್ನು ಅಲ್ಲಿ ಹುಡುಕಿಕೊಂಡು ಹೋಗಬೇಕು. ಕುಂಬಾರರ ಮನೆ ಒಂದಿರುತ್ತದೆ. ಅವರನ್ನೂ ಊರಿನಲ್ಲಿ ಹುಡುಕಿಕೊಂಡು ಹೋಗಬೇಕು. ಗಂಗಕುಲ, ಬೆಸ್ತರು ಇವರನ್ನೂ ಹುಡುಕಿಕೊಂಡು ಹೋಗಬೇಕು. ಆದುದರಿಂದ ಇದು ಏನಾಗುತ್ತದೆ ಎಂದರೆ ಇದರ ಉದ್ದೇಶ ಏನು ಇದೆಯೋ ಅದು ಸಫಲವಾಗುವುದಿಲ್ಲ ಒಂದು ಪರ್ಸೆಂಟ್ ಇದ್ದುದನ್ನು ೨ ಪರ್ಸೆಂಟ್ ಮಾಡಿದ್ದರೆ ಸ್ವಲ್ಪ ಜಾಸ್ತಿ ಸಿಕ್ಕುತ್ತಿತ್ತು. ಉಪ್ಪಾರ, ಬುದ್ಧಿಸ್ಟ್, ರಜಪುತ್ಸ, ನಾಯರ್ಸ್. ಈ ಪಟ್ಟಿಯಲ್ಲಿ ಇವರೆಲ್ಲಾ ಇದ್ದಾರೆ. ಇದರಲ್ಲಿ ಮಲೆಯಾಳಿಗಳೂ ಇದ್ದಾರೆ. ಈ ಮಲೆಯಾಳಿಗಳು ಮಲಬಾರ್‌ನಿಂದ ಬಂದವರಲ್ಲ, ಇವರ ಜಾತಿ ೦.೧೧೮ ಇದೆ ಹಾವನೂರು ಕಮೀಷನ್ ಪ್ರಕಾರ ಅಫಿಷಿಯಲ್ ಆಗಿಯೇ ಇದನ್ನು ಮಾಡಿದ್ದಾರೆ. ಇವರು ಎಲ್ಲಾ ಜಿಲ್ಲೆಯಲ್ಲೂ ಇಲ್ಲ, ಇವರು ಬ್ಯಾಕ್‌ವರ್ಡ್ ಕ್ಲಾಸಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶ ಇದೆಯೋ ನಿಜವಾಗಿಯೂ ಇದರಿಂದ ಸಹಾಯ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. Section 5 (3) is very clear :

> "Where no person belonging to backward classes is elected to a Mandal Panchayat, the Zilla Parishad shall nominate two persons belonging to the said classes to the Mandal Panchayat".

ನಾನು ಮತ್ತೊಂದು ಸಾರಿ ಡಿಲಿಗೇಟೆಡ್ ಪವರ್ಸ್ ಬಗ್ಗೆ ಜಾಸ್ತಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ನಮ್ಮ ಸ್ನೇಹಿತರು ಶ್ರೀ ಎ ಲಕ್ಷ್ಮೀಸಾಗರ್‌ರವರು, ಲಾ ಪ್ರೊಫೆಸರ್ ಅವರು, ಈ ಡಿಲೇಗೇಟೆಡ್ ಪವರ್ಸ್ ಅನ್ನು ಎಲ್ಲಿಗೆ ತೆಗೆದುಕೊಂಡು ಹೋಗಿದ್ದಾರೆ ಎಂದರೆ there should be direct impart when they delegate powers.

According to Salmond,

> "Subordinate legislation is that which proceeds from any authority other than the sovereign power and is therefore dependent for its continued existence and validity on some superior or supreme authority".

Here Section 5 (3) is the supreme authority. The delegation should be within that framework.

> "Effective control over subordinate legislation is diminished, States Allen, when the scope of authority passes from the delegate to a sub-delegate and this constantly happens, sometimes without it.

> "The Interpretation Act 1889 adds to the power of making rules, regulations, bye-laws the implied authority to amend or revoke them. This means that if the rule making power is subject to a requirement of laying before Parliament amendments and repeals must also be laid before Parliament. This is constantly done and odds enormously to the bulk of instruments which are laid.

> "Legislative powers were too freely delegated by Parliment without the Members of the two Houses realising what was being done."

ಇದನ್ನು ಮಾಡುವಾಗ ನಮ್ಮನ್ನು ಕೇಳಲಿಲ್ಲ. ಮಾಡಂತ್ತಾ ಮಾಡುತ್ತಾ ಈಗ ಇಲ್ಲಿಗೆ ಬಂದಿದ್ದೀರಿ. Supreme legislation is Section 5 (3). Again I quote from page 147 :

> "Whether there should be any further inquiry and whether there is any doubt as to the vires of the instruments is within the powers of the enabling statute."

ಈ ರೀತಿ ಹೇಳಿದ್ದಾರೆ. ಇದು ೫ (೩)ಕ್ಕೆ ಸಂಬಂಧ ಇದ್ದರೆ ಮಾತ್ರ ಬರಬೇಕು. ಇಲ್ಲದೇ ಹೋದರೆ ಅದಕ್ಕೂ ಇದಕ್ಕೂ ಸಂಬಂಧ ಬರುವುದಿಲ್ಲ. ಇದಕ್ಕೆ ಸಂಬಂಧ ಬರದೇಹೋದರೆ ಇದನ್ನು ನೀವು ಮಾಡಿದರೂ ಪ್ರಯೋಜನವಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ನೀವು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸಹಾಯ ಮಾಡುತ್ತೇವೆಂದು ಹೇಳುತ್ತೀರಿ. ಅವರಿಗೆ ಏನು ಸಹಾಯ ಮಾಡುತ್ತೀರೋ ಅವರನ್ನು ಏನು ಉದ್ಧಾರ ಮಾಡುತ್ತೀರೋ ಎನ್ನುವುದಂತೂ ನನಗೆ ಗೊತ್ತಿಲ್ಲ.

In the preface of the book 'A new deal for Backward Classes in Karnataka' it is written :

> "The very first measure for the welfare of the backward classes announced by the present Govrenment which came to power in January 1983 as the constitution of the Second Backward Classes Commission. This was also in fulfilment of the commitment made by the previous Government before the Supreme Court. The Commission as constitut d in April 83 to determine the backward classes for the purpose of reser-

vation under article 15 (4) and 16 (4) of the Constitution. It gave its report in the beginniug of 1986 which was tabled in the Legislature on August 30, 1986. This document provoked strong protests from the major communities of the State''.

ವೆಂಕಟಸ್ವಾಮಿ ಆಯೋಗದ ವರದಿ ಸರಿಯಿಲ್ಲ. ಅದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರು ರಾಜಿನಾಮೆ ಕೊಟ್ಟರು. ಇದಾದ ನಂತರ ಜನತಾ ಪಾರ್ಟಿಯ ಕೆಲವು ಸದಸ್ಯರು ಸಹ ಇದೇ ಕಾರಣದ ಮೇಲೆ ರಾಜಿನಾಮೆ ಕೊಟ್ಟರು. ಈ ಹಿಂದುಳಿದ ವರ್ಗದ ಜನರನ್ನು ರಕ್ಷಣೆ ಮಾಡುವ ಸಲುವಾಗಿ ಆ ಸಮಯದಲ್ಲಿ ಎರಡು ಪಕ್ಷಗಳವರು ಒಂದಾದರು. ಆ ಸಮಯದಲ್ಲಿ ಈ ಜನರಿಗೆ ಕ್ಲಾಸ್ ಇಂಟರೆಸ್ಟ್ ಇತ್ತೇ ಹೊರತು ಕ್ಯಾಸ್ಟ್ ಇಂಟರೆಸ್ಟ್ ಇರಲಿಲ್ಲ. ಹಿಂದುಳಿದ ವರ್ಗದ ಜನರು ಏನಾದರು ಮುಂದೆ ಬಂದು ಬಿಟ್ಟರೆ ತಮಗೆ ತೊಂದರೆ ಆಗುತ್ತದೆ ಎಂಬ ಉದ್ದೇಶ ಇಟ್ಟುಕೊಂಡು ಈ ಎರಡು ಪಕ್ಷಗಳವರು ಸೇರಿಕೊಂಡು ವೆಂಕಟಸ್ವಾಮಿ ಆಯೋಗದ ವರದಿ ವಿರುದ್ಧ ಹೋರಾಟ ಮಾಡಿದರು. ಇದಕ್ಕೂ ಮೊದಲು ಹಾವನೂರು ಕಮಿಷನ್ ವರದಿ ಪ್ರಕಾರ ಶೇಕಡಾ ೩೭ ರಿಂದ ಶೇಕಡಾ ೪೦ರಷ್ಟು ಹಿಂದುಳಿದ ವರ್ಗದ ಜನರು ಅನುಕೂಲ ಪಡೆದಿದ್ದರು. ಆದರೆ ಇತ್ತೀಚೆಗೆ ಸರ್ಕಾರದವರು ಶೇಕಡಾ ೯೨ರಷ್ಟು ಜನರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆಂದು ಒಂದು ಆದೇಶ ಹೊರಡಿಸಿದ ಮೇಲೆ ಈ ಮೊದಲು ಯಾರು ಯಾರು ಹಾವನೂರ್ ಕಮಿಷನ್ ವರದಿ ಪ್ರಕಾರ ಅನುಕೂಲ ಪಡೆಯುತ್ತಿದ್ದರೋ, ಅವರಿಗೆಲ್ಲಾ ತೊಂದರೆ ಆಯಿತು. ಈ ಜನರಿಗೆ ಇದ್ದಂಥ ಅನುಕೂಲಗಳು ಹೋದವು. ಇಲ್ಲಿ ಜನತಾ ಪಕ್ಷದ ಸದಸ್ಯರು ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರು ಹಿಂದುಳಿದ ವರ್ಗದವರಿಗೆ ಸಹಾಯ ಮಾಡಬೇಕೆಂದು ಹೇಳುತ್ತಾರೆ. ಆದರೆ ಈಗ ಆಗುರುವುದಾದರೂ ಏನು ? ಈ ಎರಡು ಪಕ್ಷಗಳವರು ಸೇರಿಕೊಂಡು ಈ ಹಿಂದುಳಿದ ಜನರನ್ನು ಕೈಬಿಟ್ಟಿದ್ದಾರೆ. ಈಗ ಈ ಜನರ ಬಗ್ಗೆ ಹೇಳುವವರು ಮತ್ತು ಕೇಳುವವರು ಇಲ್ಲವಾಗಿದೆ. ಈ ಹಿಂದುಳಿದ ಜನರ ಬಗ್ಗೆ ಏನು ಅಭಿಪ್ರಾಯ ಇದೆ ಎಂದರೆ. It should have been more on economic status. That is Sri Chandrasekhar, Janata party President also feels. So reservation. should be based only on economic and social backwardness. There is an interview under the heading "Karnataka Chief Minister Ramakrishna Hegde spoke to Chidananda Raj Ghattas" Another heading is, ''The system of reservation has been abused.'' ಕೊನೆಗೆ ಒಂದು ರೀತಿಯ ಒತ್ತಡವನ್ನು ಸರ್ಕಾರದ ಮೇಲೆ ತಂದರು. ಲಿಂಗಾಯಿತರು ಮತ್ತು ಒಕ್ಕಲಿಗರು ಮುಂದುವರೆದ ಜನಾಂಗದವರಾಗಿ ಇರುವುದಕ್ಕೆ ಬದಲು ಹಿಂದುಳಿದವರ ಗುಂಪಿಗೆ ಸೇರಿಬಿಟ್ಟರೆ ಬಹಳ ಒಳ್ಳೆಯದು ಎಂಬ ಉದ್ದೇಶವನ್ನಿಟ್ಟುಕೊಂಡು ಮತ್ತು ಆಸೆಯನ್ನಿಟ್ಟುಕೊಂಡು ಸರ್ಕಾರದ ಮೇಲೆ ಸಾಕಷ್ಟು ಒತ್ತಡ ತಂದರು ಇವರ ಒತ್ತಡಕ್ಕೆ ಮಣಿದ ಸರ್ಕಾರ ನಾಲ್ಕೈದು ಜಾತಿಗಳನ್ನು ಬಿಟ್ಟು ಇನ್ನುಳಿದ ಎಲ್ಲ ಜಾತಿಗಳು ಹಿಂದುಳಿದ ವರ್ಗಕ್ಕೆ ಸೇರಿದವು ಎಂಬ ಆದೇಶವನ್ನು ಹೊರಡಿಸಿತು. ಮಾರ್ವಾಡಿ, ಜೈನರು, ವೈಶ್ಯರು ಹೀಗೆ ನಾಲ್ಕೈದು ಜಾತಿಗಳು ಮಾತ್ರ ಈಗ ಮುಂದುವರೆದ ಜನಾಂಗಕ್ಕೆ ಸೇರಿವೆ. ಹೀಗೆ ಎಲ್ಲರೂ ಹಿಂದುಳಿದ ವರ್ಗಕ್ಕೆ ಸೇರಿದ ಮೇಲೆ ಹಿಂದುಳಿದ ವರ್ಗದವರಿಗೆ ಮತ್ತೆ ಸಹಾಯ ಮಾಡಬೇಕು, ಇವರಿಗೆ ರಿಜರ್ವೇಷನ್ ಇಡಬೇಕು ಎಂದು ಹೇಳುತ್ತಿದ್ದಾರೆ. ಹಿಂದುಳಿದ ವರ್ಗದವರಿಗೆ ಇವರು ರಿಜರ್ವೇಷನನ್ನು ದಾನವಾಗಿ ಕೊಡುತ್ತಿಲ್ಲ. Article 16(4) of the Indian Constitution provides that backward classes should be given protection because they are economically and socially backward. ಇಲ್ಲಿ ಇವರು ಹಿಂದುಳಿದ ವರ್ಗದವರಿಗೆ ನಾಮಕರಣ ಮಾಡುವ ಮೂಲಕ ಸೂಕ್ತ ಪ್ರಾತಿನಿಧ್ಯ ಕೊಡಬೇಕಾಗಿಲ್ಲ. ಈಗ ಯಾರು ಯಾರು ಹಿಂದುಳಿದವರ ಪಟ್ಟಿಯಲ್ಲಿ ಸೇರಿಕೊಂಡು ಚುನಾವಣೆಯಲ್ಲಿ ಗೆದ್ದಿದ್ದಾರೆ. ಅಂತಹವರಿಗೆ ನಾಮಕರಣದ ಮೂಲಕ ಪ್ರಾತಿನಿಧ್ಯ ಕೊಡುವುದಕ್ಕಾಗುವುದಿಲ್ಲ. ಈಗ ಕೆಲವು ಕಡೆಗಳಲ್ಲಿ ಚುನಾವಣೆಯಲ್ಲಿ ಗಾಣಿಗರು, ಕುಂಬಾರರು ಆರಿಸಿ ಬಂದಿದ್ದಾರೆ. ವೆಸ್ಟೆಡ್ ಇಂಟರೆಸ್ಟ್ ಇರುವ ಕಡೆಗಳಲ್ಲಿ ಇಂತಹವರು ಆರಿಸಿ ಬಂದಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಹಿಂದುಳಿದ ವರ್ಗದವರಿಗೆ ಸೂಕ್ತ ಪ್ರಾತಿನಿಧ್ಯ ನೀಡುವುದರಲ್ಲಿ ತಪ್ಪೇನು ಇಲ್ಲ,

ಇದಕ್ಕೆ ನನ್ನ ವಿರೋಧ ಇಲ್ಲ. ಆದರೆ ಇವರನ್ನು ನಾಮಕರಣ ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಇದನ್ನು ನಾನು ವಿರೋಧ ಮಾಡುತ್ತೇನೆ. ಇದು ನಮ್ಮ ಪ್ರಜಾಪ್ರಭುತ್ವ ಪದ್ಧತಿಗೆ ವಿರುದ್ಧವಾಗಿದೆ. ಆದ್ದರಿಂದ ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ವಿಧಾನಸಭೆಯ ಇತಿಹಾಸದಲ್ಲಿ ಇಂತಹ ಚರ್ಚೆ ಯಾವಾಗಲೂ ನಡೆದಿಲ್ಲ. ಏಕೆಂದರೆ, ಯಾವ ಒಂದು ಕಾನೂನನ್ನು ಸರ್ಕಾರದವರು ಈಗಾಗಲೇ ಜಾರಿಯಲ್ಲಿ ತಂದಿದ್ದಾರೋ, ಅದರ ಮೇಲೆ ಮತ್ತೆ ಇಲ್ಲಿ ಚರ್ಚೆ ಮಾಡುವುದರಿಂದ ಯಾವ ಉಪಯೋಗವೂ ಇಲ್ಲ ಎಂದು ನಮಗೆಲ್ಲಾ ಗೊತ್ತಿದ್ದರೂ ಸಹ ನಾವು ಈಗ ಅದೇ ವಿಷಯದ ಮೇಲೆ ಚರ್ಚೆ ಮಾಡುತ್ತಿದ್ದೇವೆ ಇಂತಹ ಒಂದು ಚರ್ಚೆಯಲ್ಲಿ ನಾವು ಭಾಗವಹಿಸುವುದು ಎಷ್ಟರಮಟ್ಟಿಗೆ ಸರಿ ಎಂದು ನನಗೆ ಅರ್ಥವಾಗುವುದಿಲ್ಲ. ಈ ವಿಷಯದ ಮೇಲೆ ಮಾತನಾಡಿದಂಥ ವಿರೋಧ ಪಕ್ಷದ ಪ್ರಮುಖರು ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಒಂದು ಅವಕಾಶ ಸಿಕ್ಕಿದೆ ಎಂದು ಹೇಳಿದರು. ಇದೇ ದೃಷ್ಟಿಯಿಂದ ನಾನು ಸಹ ನನ್ನ ಅಭಿಪ್ರಾಯಗಳನ್ನು ತಿಳಿಸಬೇಕಾಗಿದೆ. ಇಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಏನೆಂದರೆ, ದಿನಾಂಕ ೨೬-೩-೧೯೮೭ ರಂದು ಸರ್ಕಾರದವರು ಇದಕ್ಕೆ ಸಂಬಂಧಪಟ್ಟಂತೆ ಏನು ಒಂದು ನೋಟಿಫಿಕೇಷನ್ ಹೊರಡಿಸಿದ್ದಾರೆ, ಇದರ ಹಿನ್ನಲೆಯಾದರೂ ಏನು ? ಇದರ ಉದ್ದೇಶವಾದರೂ ಏನು ? ಈಗಾಗಲೇ ನಮಗೆಲ್ಲಾ ತಿಳಿದಿರುವಂತೆ ಹಿಂದುಳಿದ ವರ್ಗದವರು ಯಾರು ಎಂಬ ಬಗ್ಗೆ ಸರ್ಕಾರ ಒಂದು ಘೋಷಣೆಯನ್ನು ಹೊರಡಿಸಿದೆ. ಆದರೂ ಸಹ ಈಗ ಮತ್ತೆ ಈ ವಿಧಾನಸಭೆ ನಡೆಯುತ್ತಿರುವ ಕಾಲದಲ್ಲಿ ಯಾರು ಯಾರು ವರ್ಷಕ್ಕೆ ೬೪೦೦ ರೂಪಾಯಿಗಳ ಆದಾಯವನ್ನು ಪಡೆಯುತ್ತಿದ್ದಾರೆ, ಅಂತಹ ಕೃಷಿ ಕಾರ್ಮಿಕರು, ಕುಶಲಕರ್ಮಿಗಳು ಈ ಹಿಂದುಳಿದ ವರ್ಗದವರ ಪಟ್ಟಿಯಲ್ಲಿ ಸೇರುತ್ತಾರೆ ಎಂಬತಕ್ಕಂಥ ವಿವರಣೆಯನ್ನು ಕೊಟ್ಟಿದ್ದೀರಿ.

೪-೦೦ ಪಿ.ಎಂ.

ಈ ವಿಧಾನಸಭೆಯಲ್ಲಿ ಕಾರ್ಯಕಲಾಪ ನಡೆಯುವಂಥ ಸಂದರ್ಭದಲ್ಲಿ ಈ ರೀತಿ ಸರ್ಕಾರ ತೀರ್ಮಾನ ಕೈಗೊಳ್ಳಲು, ಸದನದ ಅಭಿಪ್ರಾಯವನ್ನು ತೆಗೆದುಕೊಂಡು ಒಂದು ಪರ್ಸೆಂಟ್ ಇರಬೇಕೋ ಎರಡು ಪರ್ಸೆಂಟ್ ಇರಬೇಕೋ, ಯಾವುದು ಸರಿ ಯಾವುದು ತಪ್ಪು ಎನ್ನುವುದರ ಬಗ್ಗೆ ಚರ್ಚೆಮಾಡಿ ನಮ್ಮ ಅಭಿಪ್ರಾಯವನ್ನು ತೆಗೆದುಕೊಳ್ಳುವಂಥ ಧಾರಾಳತನ ಸರ್ಕಾರಕ್ಕೆ ಇರಲಿಲ್ಲವಲ್ಲ ಎಂದು ದುಃಖ ವಾಗಿದೆ. ಈ ರೀತಿ ಮಾಡಲು ಇದರ ಹಿನ್ನೆಲೆ ಏನು ಇದರ ಉದ್ದೇಶವೇನು ಎನ್ನುವುದನ್ನು ನಾವೂ ಸಹ ಪ್ರಶ್ನೆ ಮಾಡಬೇಕಾಗಿದೆ. ಈಗಾಗಲೇ ನಾವು ಜಿಲ್ಲಾಪರಿಷತ್ತಿನ ಮಸೂದೆಯನ್ನು ಒಪ್ಪಿಕೊಳ್ಳುವಂಥ ಸಂದರ್ಭದಲ್ಲಿ ಹಿಂದುಳಿದ ಜನಾಂಗದವರ ನಾಮಿನೇಷನ್ನನ್ನು ಒಪ್ಪಿದ್ದೇವೆ, ನಿಜ. ಆದರೆ ಸದನದಲ್ಲಿ ಈ ಬಗ್ಗೆ ಚರ್ಚೆಯಾದಾಗ ಏನು ಅಭಿಪ್ರಾಯ ಬರುತ್ತಿತ್ತು ಅಂದರೆ ಕರ್ನಾಟಕ ರಾಜ್ಯದ ಯಾವುದೇ ಒಂದು ಮಂಡಲ ಪಂಚಾಯಿತಿಯನ್ನು ತಾವು ಉದಾಹರಣೆಗೆ ತೆಗೆದುಕೊಂಡರೂ ಸಹ ಈ ರೀತಿ ಹಿಂದುಳಿದ ಜನಾಂಗದ ಪ್ರತಿನಿಧಿ ಇಲ್ಲದೇ ಇರತಕ್ಕ ಒಂದೇ ಒಂದು ಮಂಡಲದ ಉದಾಹರಣೆ ಯನ್ನು ತಾವು ಕೊಡುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ನೀವು ನಾಮಿನೇಷನ್ ಮಾಡಿಕೊಳ್ಳುವಂಥಾದ್ದು ತಪ್ಪಿ ಹೋಗಬಹುದು ಎಂದು ನಿಮ್ಮದೇ ಆದಂಥ ಒಂದು ಅಭಿಪ್ರಾಯವನ್ನು ತಾವು ಕೊಟ್ಟು ಈ ರೀತಿ ನಾಮಿನೇಷನ್ ಮಾಡುವುದಕ್ಕೆ ಹೊರಟಿದ್ದೀರಿ ಸ್ವಾಮಿ, ನಾನು ಈ ಸದನದಲ್ಲಿ ಕಳೆದ ೩-೪ ವರ್ಷ ಗಳಿಂದ ಭಾಗವಹಿಸುತ್ತಾ ಇರುವಂಥ ಸಂದರ್ಭದಲ್ಲಿ ಕಂಡಂಥ ಅಂಶ ಏನೆಂದರೆ, ಹಿರಿಯರಾದ ಮಾನ್ಯ ಹೆಚ್. ಕೆ. ಪಾಟೀಲರು ಮತ್ತು ಮಾನ್ಯ ಬಸವಲಿಂಗಪ್ಪನವರು ಪದೇ ಪದೇ ಏನು ಹೇಳುತ್ತಾ ಇದ್ದಾರೆ ಅಂದರೆ ನಾವು ತಪ್ಪುಗಳನ್ನು ಮಾಡಿ ಈ ಕಡೆ ಬಂದಿದ್ದೇವೆ ನೀವು ಆ ತಪ್ಪನ್ನು ಮಾಡಬೇಡಿ ಎಂದು ಅವರು ಈ ಮಾತನ್ನು ಪದೇಪದೇ ಹೇಳುತ್ತಾ ನಿಮಗೆ ಸಲಹೆಗಳನ್ನು ಕೊಡುತ್ತಾ ಇದ್ದಾರೆ ಆದರೆ ನೀವು ಏನು ಹೇಳುತ್ತೀರಿ ಅಂದರೆ, ನೀವು ಅಧಿಕಾರದಲ್ಲಿದ್ದಾಗ ಏನು ಮಾಡಿದಿರಿ ಅದನ್ನೇ ನಾವು ಏಕೆ ಮಾಡ ಬಾರದು ಎಂದು ಹೇಳಿ ಅವರ ಬಾಯಿ ಮುಚ್ಚಿಸುವಂಥ ಪ್ರಯತ್ನವನ್ನು ತಾವು ಮಾಡುತ್ತಾ ಇದ್ದೀರಿ, ಖಂಡಿತ ಇದು ಸಲ್ಲದು. ಮೊನ್ನೆ ಆಂಧ್ರದಲ್ಲಿ ಚುನಾವಣೆ ನಡೆಯಿತು. ಆ ಚುನಾವಣೆಯಲ್ಲಿ ಜಿಲ್ಲಾ ಪರಿಷತ್, ಮಂಡಲ ಪಂಚಾಯಿತಿಗಳಿಗೆ ಯಾರು ಅಧ್ಯಕ್ಷರಾಗಬೇಕು ಎಂದು ನೇರವಾಗಿ ಅಲ್ಲಿರುವಂಥ

ಜನ ಅಧ್ಯಕ್ಷರನ್ನು ಆರಿಸುವಂಥ ಹೊಸ ವಿಧಾನವನ್ನು ಅನುಸರಿಸುತ್ತಿದ್ದಾರೆ. ಬೇರೆ ರಾಜ್ಯದವರು ಈ ರೀತಿ ಹೊಸ ವಿಧಾನವನ್ನು ಅನುಸರಿಸುತ್ತಿರುವಂಥ ಕಾಲದಲ್ಲಿ, ಯಾವುದೋ ಒಂದು ೪೦೦, ೫೦೦ ಮಂಡಲಗಳು ನಮ್ಮ ಕೈಗೆ ಸಿಗಬೇಕು ಎನ್ನುವ ಒಂದೇ ಒಂದು ಅಧಿಕಾರದ ದಾಹದಿಂದ ನಾಮಕರಣ ಮಾಡುತ್ತೇವೆ ಎಂದು ನಾಮಕರಣ ಮಾಡುವಂಥ ಪ್ರಯತ್ನ ತಾವು ಏನು ಮಾಡುತ್ತಿದ್ದೀರಿ, ಖಂಡಿತ ಇದನ್ನು ಜನ ಕ್ಷಮಿಸುವುದಿಲ್ಲ. ಇದರಲ್ಲಿ ವಿರೋಧಪಕ್ಷದವರು ಏನೇ ಮಾತನಾಡಿದರೂ ಬಹುಮತ ಇರುವುದರಿಂದ ನೀವು ಒಪ್ಪುವುದಿಲ್ಲ. ಜನಗಳ ಅಭಿಪ್ರಾಯ ಏನಿದೆ ಎಂದು ಮಾಹಿತಿ ಸಂಗ್ರಹಣೆ ಮಾಡುವುದಕ್ಕೆ ಸಮಿತಿಗಳಿವೆ, ಸಿಐಡಿ ಇರಬಹುದು, ಸಿಓಡಿ ಇರಬಹುದು, ಅವರಿಂದ ರಿಪೋರ್ಟ್‌ಗಳನ್ನು ತರಿಸಿಕೊಂಡರೆ ಜನಗಳ ಅಭಿಪ್ರಾಯ ಏನಿದೆ ಎಂದು ತಿಳಿಯುತ್ತದೆ. ನನಗನ್ನಿಸುತ್ತದೆ, ಜನತಾಪಕ್ಷದ ನಿಮ್ಮ ಅನೇಕ ಶಾಸಕರನ್ನು ಸೇರಿಸಿಕೊಂಡು ಇವತ್ತು ನಾಮಿನೇಷನ್ ಮಾಡುವುದಕ್ಕೆ ಹೊರಟಿದ್ದೀರಿ, ಇದು ಸರಿಯಲ್ಲ ಎನ್ನುವ ಅಭಿಪ್ರಾಯವನ್ನು ಗ್ರಾಮಾಂತರ ಪ್ರದೇಶದಲ್ಲಿ ಜನ ವ್ಯಕ್ತಪಡಿಸುತ್ತಾ ಇರುವಂಥಾದ್ದು ತಮಗೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ತಮ್ಮ ಉದ್ದೇಶವಾದರೂ ಏನು ? ಹಿಂದುಳಿದ ಜನಾಂಗದವರಿಗೆ ಪ್ರಾತಿನಿಧ್ಯ ಕೊಡಬೇಕು ಎನ್ನುವಂಥ ಉದ್ದೇಶ ತಮ್ಮದಲ್ಲ ಎಂಬ ಅಭಿಪ್ರಾಯವನ್ನು ಅನೇಕ ಜನ ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಜಾಪ್ರಭುತ್ವ ಪದ್ಧತಿಯನ್ನು ತಾವು ಒಪ್ಪಿಕೊಂಡ ಮೇಲೆ ಈ ಚುನಾವಣೆಯಲ್ಲಿ ಗೆದ್ದು ಬಂದಂಥ ಜನ ಮಂಡಲದ ಪ್ರಧಾನ, ಉಪ ಪ್ರಧಾನರಾಗಿ ಕೆಲಸ ಮಾಡುವುದಕ್ಕೆ ಏಕೆ ಅವಕಾಶ ಮಾಡಿಕೊಡುವುದಿಲ್ಲ ? ಹಿಂದೆ ಪಂಚಾಯಿತಿಗಳ, ತಾಲ್ಲೂಕು ಬೋರ್ಡ್‌ಗಳ ವ್ಯವಸ್ಥೆ ಇತ್ತು. ಆ ಸಮಯದಲ್ಲಿ ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದ ಸಮಯದಲ್ಲಿ ಎಲ್ಲಾ ಅಧಿಕಾರ ನಮಗೆ ಬೇಕು ಎಂಬ ದಾಹ ಅವರಿಗೆ ಇದ್ದರೂ ಸಹ ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯಿತಿಗಳಿಗೆ ನಾಮಿನೇಷನ್ ಮಾಡುವಂಥ ಧೈರ್ಯ ಅವರು ಮಾಡಿರಲಿಲ್ಲ. ಆದರೆ ಅದಕ್ಕಿಂತ ಎರಡು ಹೆಜ್ಜೆ ಮುಂದೆ ಹೋಗಿ ಈ ರೀತಿ ತಾವು ಏನು ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ, ಅದು ಸರಿಯಲ್ಲ. ಬಹುಶಃ ನಾಳೆ ಜನ ಕೇಳಬಹುದು. ಈ ಬಗ್ಗೆ ಕಾಂಗ್ರೆಸ್‌ನಲ್ಲಿ ಧರಣಿ ಎಲ್ಲಾ ಆಯಿತು, ನಾವೆಲ್ಲಾ ನಾಮಿನೇಷನ್ ಮಾಡುವುದು ತಪ್ಪು ಎನ್ನುವುದಕ್ಕೆ ಬೆಂಬಲ ಕೊಟ್ಟೆವು ಆಗ ರಾಜ್ಯದ ಜನತೆಗೆ ತಾವು ಏನು ಹೇಳಿದಿರಿ, ಹಿಂದುಳಿದ ಜನಾಂಗದವರನ್ನು, ಕೂಲಿಕಾರ್ಮಿಕರನ್ನು ಹಾಗೂ ಬಡವರನ್ನು ನಾವು ನಾಮಿನೇಷನ್ ಮಾಡುವುದಕ್ಕೆ ಬಂದಾಗ ಕಾಂಗ್ರೆಸ್‌ನವರು ಮತ್ತು ಇತರ ವಿರೋಧ ಪಕ್ಷದವರು ಅಡ್ಡಿ ಮಾಡುವಂಥ ಪ್ರಯತ್ನ ಮಾಡುತ್ತಾ ಇದ್ದಾರೆ ಎಂದು ರಾಜ್ಯದ ಜನತೆಗೆ ಹೇಳುವಂಥ ಪ್ರಯತ್ನ ಮಾಡಿದಿರಿ. ನಾಮಿನೇಷನ್ ಮಾಡುವುದಕ್ಕೆ ವಿರೋಧ ಇಲ್ಲ. ತಾವು ನಾಮಿನೇಷನ್ ಹೆಸರಿನಲ್ಲಿ ವಿರೋಧಪಕ್ಷದವರು ಗೆದ್ದಿರುವಂಥ ಸ್ಥಳವನ್ನೂ ಸಹ ಆಕ್ರಮಿಸಿಕೊಳ್ಳುವಂಥ ಒಂದು ಪ್ರಯತ್ನವನ್ನು ಏನು ಪ್ರಜಾಪ್ರಭುತ್ವ ನೀತಿಯ ವಿರುದ್ಧವಾಗಿ ತಾವು ಮಾಡಲು ಹೊರಟಿದ್ದೀರಾ ಅದು ತಪ್ಪು ಎಂದು ತಿಳಿಸುವ ಸಲುವಾಗಿ ನಾವು ಹಾಗೆ ಮಾಡಿದ್ದೇವೆಯೇ ಹೊರತು ಹಿಂದುಳಿದ ಜನಾಂಗದವರಿಗೆ ಪ್ರಾತಿನಿಧ್ಯ ಸಿಗಬಾರದು, ನಾಮಿನೇಷನ್ ಮಾಡಬಾರದು ಎನ್ನುವ ಉದ್ದೇಶದಿಂದ ಅಲ್ಲ. ಸ್ವಾಮಿ, ನಾನು ಹೇಳುತ್ತೇನೆ, ನಿಜವಾಗಿ ಕೃಷಿಕಾರ್ಮಿಕರು, ಒಂದು ಪರ್ಸೆಂಟ್‌ಗಿಂತ ಒಳಗೆ ಬರುವ ಬಡವರು ಯಾರಿದ್ದಾರೆ, ಅವರು ಅಧಿಕಾರಕ್ಕೆ ಬರಬೇಕು ಎಂಬ ಆಗ್ರಹ ತಮಗೆ ಇದ್ದಿದ್ದರೆ ಜಿಲ್ಲಾ ಪರಿಷತ್ ಮಸೂದೆ ಮಾಡುವಂಥ ಸಂದರ್ಭದಲ್ಲೇ ಮಂಡಲ್‌ಗೆ ಕನಿಷ್ಠ ಒಬ್ಬರಾದರೂ ಒಂದು ಪರ್ಸೆಂಟ್ ಒಳಗೆ ಇರುವವರು ಗೆದ್ದು ಬರಬೇಕು ಎನ್ನುವಂಥ ಕಾನೂನನ್ನು ಅವತ್ತು ಮಾಡಬೇಕಾಗಿತ್ತು. ಅಂದರೆ ಯಾವ ರೀತಿ ತಮ್ಮ ಅನುಕೂಲಕ್ಕೆ ತಕ್ಕಂತೆ ಈ ಕೆಲಸವನ್ನು ಮಾಡುತ್ತಿದ್ದೀರಿ ಅದು ಸರಿಯಲ್ಲ. ತಾವು ಜನತೆಗೆ ಹೇಳಬಹುದು. ಕಾಂಗ್ರೆಸ್‌ನವರು ವಿರೋಧ ಮಾಡಿದರು ಎಂದು. ೨-೩ ಜಿಲ್ಲಾ ಪರಿಷತ್ ಅವರ ಕೈಯಲ್ಲಿದೆ. ತಮಗೆ ಅಧಿಕಾರ ದಾಹ ಎಲ್ಲಿಯವರೆಗೆ ಇತ್ತು ಅಂದರೆ, ಜಿಲ್ಲಾ ಪರಿಷತ್‌ಗೆ ನಾಮಕರಣ ಮಾಡುವಂಥ ಅಧಿಕಾರ ಏನಿತ್ತು ಅದನ್ನು ಕೂಡ ಸರ್ಕಾರವೇ ತೆಗೆದುಕೊಳ್ಳಬೇಕೆಂಬ ತೀರ್ಮಾನ ಮಾಡಿದಿರಿ, ಕಾರಣ ಏನೋ ಗೊತ್ತಿಲ್ಲ, ವಾಪಸ್ಸು ತೆಗೆದುಕೊಂಡಿರಿ. ೨-೩ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಜಿಲ್ಲಾ ಪರಿಷತ್‌ನಲ್ಲಿ ಅಧಿಕಾರ ತೆಗೆದುಕೊಂಡಿದೆ. ಇದು ಬಹಳ ಮಿತಿಮೀರಿದ ಕೆಲಸ ವೆಂದು ನಿಮಗೆ ಜ್ಞಾನೋದಯವಾಗಿರಬೇಕು. ಜನ ನಮ್ಮನ್ನು ಕ್ಷಮಿಸುವುದಿಲ್ಲವೆಂದು ತಿಳಿದು, ನಾಳೆ ನಮ್ಮನ್ನು ಪ್ರಶ್ನೆ ಮಾಡಬಹುದೆಂದು ತಿಳಿದು ಸುಮ್ಮನಾಗಿ ಬಿಟ್ಟಿದ್ದೀರಿ. ಜನ ಹೊಸದಾಗಿ ಅಪೇಕ್ಷೆ ಪಟ್ಟಂತಹ ಕಾಲದಲ್ಲಿ, ಹೊಸ ವಿಷಯಗಳನ್ನು ಕೇಳಿ ನಿಮಗೆ ಮತ ಕೊಟ್ಟು ಗೆಲ್ಲಿಸಿ ಕಳುಹಿಸಿದ ಮೇಲೆ ರಾಜ್ಯಕ್ಕೆ ಮಾತ್ರವಲ್ಲ ಇಡೀ ದೇಶಕ್ಕೆ ಮಾದರಿಯಾಗುವಂಥ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿತ್ತು.

ಇವತ್ತು ಹಿಂದುಳಿದ ವರ್ಗದವರನ್ನು ನಾಮಿನೇಷನ್ ಮಾಡುವ ದಿಕ್ಕಿನಲ್ಲಿ ಹೊರಟಿದ್ದೀರಿ. ಹಿಂದುಳಿದ ವರ್ಗದ ಇಬ್ಬರು ಪ್ರತಿನಿಧಿಗಳನ್ನು ನಾಮಕರಣ ಮಾಡುವ ಕೆಲಸಕ್ಕೆ ಕೈಹಾಕಿದ್ದೀರಿ. ಆದರೆ, ನೀವು ಅವರಿಗೆ ವೋಟಿಂಗ್ ಪವರ್ಸ್ ಕೊಡುವುದಿಲ್ಲ ಎಂದು ಹೇಳಬೇಕಾಗಿತ್ತು. ಕಾರ್ಯಕ್ರಮಗಳಲ್ಲಿ ಮಾತ್ರ ಭಾಗವಹಿಸುವುದಕ್ಕೆ ಅಧಿಕಾರ ಇದೆ ಎಂದು ಹೇಳಬೇಕಾಗಿತ್ತು. ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯ ಕೊಡಬೇಕೆಂಬ ಕಳಕಳಿ ನಿಮಗಿದ್ದರೆ ಹಾಗೆ ಮಾಡಬಹುದಿತ್ತು. ಇವತ್ತು ಸೊಸೈಟಿಗಳು ಇರಲಿ, ಸಂಘ ಸಂಸ್ಥೆಗಳು ಇರಲಿ, ಜಿಲ್ಲಾ ಪರಿಷತ್ ಇರಬಹುದು, ಮಂಡಲ್ ಪಂಚಾಯಿತಿಗಳು ಇರಬಹುದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯ ಮೂಲಕ ಜನತೆಯಿಂದ ಮತ ಪಡೆದು ಬಂದವರು ಮಾತ್ರ ಅಧಿಕಾರ ನಡೆಸಬೇಕೇ ಹೊರತು, ಹಿಂದಿನ ಬಾಗಿಲಿನಿಂದ ಬಂದು ಕೂತುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯ ಪದ್ಧತಿಯಲ್ಲ. ಹೊಸ ವಿಚಾರವನ್ನು ರಾಜ್ಯದ ಜನತೆಯ ಮೂಲಕ ದೇಶದ ಜನತೆಗೆ ಹೇಳಿದ್ದೀರಿ. ಕಾಂಗ್ರೆಸ್‌ನವರು ನಾಮಿನೇಷನ್ ಮಾಡುವಂಥ ಒಂದು ತಪ್ಪು ದಾರಿಗೆ ಹೋಗಿದ್ದರೆ, ಆ ಮಾತು ಬೇರೆಯಾಗಿತ್ತು. ಅಂಥ ಸಂದರ್ಭದಲ್ಲಿ ಜನ ನಿಮ್ಮನ್ನು ಮೆಚ್ಚುತ್ತಿದ್ದರು ಆದರೆ, ಅವರು ಆ ಕೆಲಸ ಮಾಡಲಿಲ್ಲ. ಆದರೆ, ನೀವು ಒಳ್ಳೆಯ ಕೆಲಸ ಮಾಡುತ್ತೀರೆಂದು ನಾನು ಅಂದುಕೊಂಡಿದ್ದೆ. ಆ ಕೆಲಸ ಮಾಡಲಿಲ್ಲ, ತರಾತುರಿಯಲ್ಲಿ ನಾಮಿನೇಷನ್ ಮಾಡಬೇಕೆಂಬ ಉದ್ದೇಶ ದಿಂದ ಏನು ಹೊರಟಿದ್ದೀರಿ ಆ ಕೆಲಸವನ್ನು ದಯವಿಟ್ಟು ಮಾಡಬಾರದೆಂದು ವಿನಂತಿಸಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ಏಕಾ ಏಕಿ ಅಧಿಕಾರ ಇದೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ತಮ್ಮದೇ ಆದಂಥ ವ್ಯಾಖ್ಯಾನ ಕೊಟ್ಟು ನಾಮಿನೇಷನ್ ಮಾಡುವುದು ಸಾಧುವಾದುದಲ್ಲ. ಒಂದು ಪರ್ಸೆಂಟ್ ಒಳಗಡೆ ಇರತಕ್ಕವರನ್ನು ನಾಮಿನೇಷನ್ ಮಾಡಲಾಗುವುದೆಂದು ಹೇಳಿದ್ದೀರಿ. ಉದಾಹರಣೆಗೆ ಶಿಕಾರಿಪುರ ತಾಲ್ಲೂಕಿನಲ್ಲಿ ಕುರುಬ ಮೈನಾರಿಟಿ ಕಮ್ಯುನಿಟಿ ಇದೆ. ಅಲ್ಲಿ ಅವರು ಕಡಿಮೆ ಸಂಖ್ಯೆ ಯಲ್ಲಿದ್ದರೂ ನಿಮ್ಮ ಕಾನೂನಿನ ಪ್ರಕಾರ ನಾಮಿನೇಷನ್ ಮಾಡುವುದಕ್ಕೆ ಅವಕಾಶ ಇಲ್ಲ. ಜನತಾ ಪಾರ್ಟಿ ಇರಬಹುದು, ಕಾಂಗ್ರೆಸ್ ಪಾರ್ಟಿ ಇರಬಹುದು, ಮತ್ತೊಂದು ಪಾರ್ಟಿ ಇರಬಹುದು. ಹತ್ತು ಮನೆ ಇರಬಹುದು, ಅವರನ್ನು ಕಳುಹಿಸಿಕೊಟ್ಟರೆ ಯಾರ ಹಿತ ಸಾಧಿಸಬಹುದು, ತಾವು ಈ ವಿಚಾರದಲ್ಲಿ ಮುಂದಾಲೋಚನೆ ಇಲ್ಲದೆ, ತಮ್ಮದೇ ಆದಂಥ ತಕ್ಕಡಿಯಲ್ಲಿ ತೂಕವನ್ನು ಮಾಡಿ, ಅಳತೆಯನ್ನು ಮಾಡಿ, ಇದೇ ರೀತಿ ನಡೆದುಕೊಳ್ಳಬೇಕೆಂದು ಆದೇಶ ಹೊರಡಿಸಿರುವಂತಾದ್ದು, ಕೇವಲ ತಮ್ಮ ಅಧಿಕಾರ ವನ್ನು ಉಳಿಸಿಕೊಳ್ಳುವ ಪ್ರಯತ್ನವಲ್ಲದೇ ಬೇರೇನೂ ಅಲ್ಲ, ಈ ಸದನದಲ್ಲಿ ಅನೇಕ ಸಾರಿ ಚರ್ಚೆಯಾಗಿ ಸರ್ಕಾರದ ಗಮನ ಸೆಳೆಯುವಂಥ ಸಂದರ್ಭದಲ್ಲಿ ನಾವು ಎಷ್ಟೇ ಪ್ರಾಮಾಣಿಕ ಪ್ರಯತ್ನ ಮಾಡಿದರೂ, ಅಧಿಕಾರದಲ್ಲಿದ್ದಂಥ ಮಹಾತ್ಮಗಾಂಧೀಜಿಯವರ, ಜಯಪ್ರಕಾಶ್ ನಾರಾಯಣ್‌ರವರು ಮಾಡಿದ ಭಾಷಣದ ದಾಖಲೆಗಳನ್ನು ಓದಿ ತಿಳಿಸಿದರೂ ಸಹ ಕನ್‌ವಿನ್ಸ್ ಆಗುವಂಥ ಸ್ಥಿತಿಯಲ್ಲಿ ನೀವು ಇಲ್ಲ. ನೀವು ವಿರೋಧ ಪಕ್ಷಗಳಿಗೆ ಹೆದರುವುದು ಬೇಡ. ಜನತೆ ಏನು ಅಪೇಕ್ಷೆಪಟ್ಟಿದ್ದಾರೆ, ಹಾಗೂ ಜನಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ತಾವು ನಡೆದುಕೊಳ್ಳುವಂತಾದ್ದು ಸರಿಯಾದುದಲ್ಲ. ತಾವೇನು ನಾಮಿನೇಷನ್ ಮಾಡುವಂಥ ತೀರ್ಮಾನ ಕೈಗೊಂಡು ಮುಂದೆ ಹೋಗಿದ್ದೀರಿ, ಇದು ಸರಿಯಲ್ಲ, ಈ ಬಗ್ಗೆ ಮತ್ತೊಮ್ಮೆ ಸದನದಲ್ಲಿ ಚರ್ಚೆಯಾಗಿ, ಚರ್ಚೆಯಲ್ಲಿ ಪಾಲ್ಗೊಂಡಂತಹ ಎಲ್ಲಾ ಸದಸ್ಯರುಗಳು ಏನು ಬೆಳಕು ಚೆಲ್ಲಿದ್ದಾರೆ ಆದರಿಂದ ತಾವು ಕನ್‌ವಿನ್ಸ್ ಆಗಿದ್ದರೆ, ದಯವಿಟ್ಟು ಇದನ್ನು ಕೈಬಿಡಬೇಕು. ಇಲ್ಲದೇ ಹೋದರೆ, ವೋಟಿಂಗ್ ಪವರ್ಸ್ ಆದರೂ ಕೂಡ ತೆಗೆಯಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ವಿರೋಧ ಪಕ್ಷಗಳು ಬೆಳೆಯಬೇಕೆಂದು ಹೇಳುತ್ತಾರೆ, ಹಾಗೂ ಪ್ರಜಾಪ್ರಭುತ್ವ ಉಳಿಯಬೇಕೆಂದು ಹೇಳುತ್ತಾರೆ, ರಾಷ್ಟ್ರದಲ್ಲಿ ಪ್ರಭಲವಾದ ವಿರೋಧಪಕ್ಷ ಬೆಳೆಯಬೇಕೆಂದು ಹೇಳು ತ್ತಾರೆ. ಒಂದು ತಾಲ್ಲೂಕಿನಲ್ಲಿ ೧೭-೧೮ ಮಂಡಲಗಳ ಪೈಕಿ ೩-೪ ಮಂಡಲಗಳು ಕಾಂಗ್ರೆಸ್‌ನವರಿಗೋ, ಬಿಜೆಪಿಯವರಿಗೋ, ಕಮ್ಯುನಿಸ್ಟ್‌ನವರಿಗೋ ಹೋದರೆ ತಪ್ಪೇನಿದೆ ? ಕಾಂಗ್ರೆಸ್‌ನವರು ಹೋದಂಥ ದಾರಿಯಲ್ಲಿ ನೀವು ಹೋಗುವುದಾದರೆ, ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ಆದ್ದರಿಂದ ನಾಮಕರಣ ಮಾಡುವುದನ್ನು ಕೈಬಿಡಬೇಕು, ತಮ್ಮ ನೀತಿ ಏನಿದೆ ಅದನ್ನು ನಾನು ವಿರೋಧ ಮಾಡಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್ (ಗದಗ್). —ಮಾನ್ಯ ಸಭಾಧ್ಯಕ್ಷರೆ, ನಾನು ಈ ದಿವಸ ಈ ಸರ್ಕಾರ ದವರು ಮಂಡಲ್ ಪಂಚಾಯಿತ್‌ಗೆ ನಾಮಕರಣ ಮಾಡುವ ವಿಷಯವಾಗಿ ಒಂದೆರಡು ಮಾತುಗಳನ್ನು

ಹೇಳುವುದಕ್ಕೆ ಇಷ್ಟಪಡುತ್ತೇನೆ ನನ್ನ ಸ್ನೇಹಿತರಾದಂಥ ಮಾನ್ಯ ವೀರಪ್ಪ ಮೊಯಿಲಿಯವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಶ್ರೀನಿವಾಸ್ ಅವರು ಮಾತನಾಡುತ್ತಾ ಈ ವಿಷಯದ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಅವರ ಮಾತುಗಳನ್ನು ಬೆಂಬಲಿಸುತ್ತಾ, ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಕಾನೂನು ಸಚಿವರು ನನ್ನ ಮಾತಿಗೆ ಒಪ್ಪುತ್ತಾರೆಂದು ತಿಳಿದಿದ್ದೇನೆ. ಏಕೆಂದರೆ, ಅವರು ಒಬ್ಬ ಹಿಂದುಳಿದ ವರ್ಗಗಳ ಹಿತ ದೃಷ್ಟಿಯಿಂದ ಪ್ರತಿಪಾದಕರು. ಬರೀ ಹಿಂದುಳಿದ ವರ್ಗಗಳ ಬಗ್ಗೆ ಪ್ರಚಾರಕರು ಎಂದು ಹೇಳುವುದಿಲ್ಲ. ಹಿಂದುಳಿದ ವರ್ಗಗಳ ಕಲ್ಯಾಣವನ್ನು ಯಾವ ದೃಷ್ಟಿಯಿಂದ ಮಾಡಬೇಕೆಂಬ ಬಗ್ಗೆ ತಮ್ಮ ಲಕ್ಷ್ಯವನ್ನು ಹರಿಸುತ್ತಾರೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಮನವನ್ನೂ ಸಹ ಒಲಿಸುತ್ತಾರೆಂದು ನಾನು ಭಾವನೆ ಮಾಡುತ್ತೇನೆ. ಇನ್ನು ಮಾನ್ಯ ನಜೀರ್ ಸಾಬ್ ಅವರು ಮಂಡಲ್ ಪಂಚಾಯತ್ ಚುನಾವಣೆಗಳನ್ನು ಬಹಳ ತೀವ್ರ ಗತಿಯಲ್ಲಿ ಪೂರ್ತಿಯಾಗಿ ಮಾಡಿ ಒಳ್ಳೆಯ ಕೀರ್ತಿಯನ್ನು ಪಡೆಯಬೇಕೆಂಬ ದೃಷ್ಟಿಯಿಂದ ಅನೇಕ ಕಾನೂನು ವಿರುದ್ಧವಾದ ಕ್ರಮಗಳನ್ನು ಅನುಸರಿಸಿ ಇಷ್ಟೆಲ್ಲಾ ಪ್ರಯತ್ನ ಮಾಡಿದರು. ಅಧ್ಯಕ್ಷರೇ, ಇವೊತ್ತು ಮಲಗಿದ್ದವರನ್ನು ಎಬ್ಬಿಸಬಹುದು. ಮಲಗಿದಂತೆ ನಟನೆ ಮಾಡಿದರೆ ಎಬ್ಬಿರಿಸುವುದು ಹೇಗೆ ? ಮೊನ್ನೆ ಇವರು ಏನು ಮಾಡಿದ್ದಾರೆಂದು ತಮಗೂ ಸಹ ಗೊತ್ತಿದೆ. ನಾನು ಅದರ ಬಗ್ಗೆ ಹೆಚ್ಚು ದೀರ್ಘವಾಗಿ ಹೇಳಲು ಹೋಗುವುದಿಲ್ಲ. ಇವರು ೨೫-೨-೮೭ರಂದು ಒಂದು ನೋಟಿಫಿಕೇಷನ್ ಹೊರಡಿಸಿದರು, ಅಂದರೆ ಕಾಲಿಂಗ್ ಫಾರ್ ಅಬ್ಜಕ್ಷನ್ ಸಲುವಾಗಿ ಮಾನ್ಯ ಸಚಿವರು ಈ ಕಡೆ ವಿಶೇಷವಾದ ಗಮನವನ್ನು ಕೊಟ್ಟಿದ್ದಾರೆಂದು ಭಾವನೆ ಮಾಡುತ್ತೇನೆ. ಈ ಒಂದು ನೋಟಿಫಿಕೇಷನ್ ವಿಶೇಷ ಗೆಜೆಟ್ ಪತ್ರಿಕೆ ಎಂದು ಹೊರಡಿಸಿದಿರಿ, ಈ ವಿಶೇಷ ಗೆಜೆಟ್ ಪ್ರಕಟಣೆ ಹೊರಡಲೇ ಇಲ್ಲ. ಸ್ವಲ್ಪ ಮಾತ್ರ ಎಲ್ಲೆಲ್ಲಿ ಇಡಬೇಕೋ ಅಲ್ಲಿ ಇಟ್ಟುಬಿಟ್ಟರು. ಇದನ್ನು ಅವರು ಏನು ಮಾಡುತ್ತಾರೆ ಅಂದರೆ ಆರ್ಡಿನರಿ ಗೆಜೆಟ್‌ನಲ್ಲಿಯೇ ಒಳಪಡಿಸುತ್ತಾರೆ. ಈ ಕೆಟ್ಟ ಕೃತಿ ಮಾಡುವುದಾದರೆ ವಿಶೇಷ ಗೆಜೆಟ್ ಎಂದು ಹೊರಡಿಸಿ ಏತಕ್ಕೆ ಮಾಡಬೇಕು ? ಅದನ್ನು ಮುಂದಿನ ಗೆಜೆಟ್‌ನಲ್ಲಿ ಹಾಕಿ ಕಳುಹಿಸುವಂತಾದ್ದು ಇದರ ಹಣೆಬರಹ ಆಗಿದೆ. ಈ ಒಂದು ಹೊಸ ಕಾನೂನು ಮಾಡಿ ವಿಶೇಷ ಗೆಜೆಟ್‌ನಲ್ಲಿ ಹಾಕುವಂತಹ ಅವಶ್ಯಕತೆ ಏನಿತ್ತು ? ಆರ್ಡಿನರಿ ಗೆಜೆಟ್‌ನಲ್ಲಿ ಹೊರಡಿಸಿದ್ದರೆ ಅದು ಎಲ್ಲರಿಗೂ ತಿಳಿಯುತ್ತಿತ್ತು. ಇದು ಯಾರಿಗೂ ಗೊತ್ತಾಗಲಿಲ್ಲ. ಒಬ್ಬ ಪತ್ರಿಕಾ ವ್ಯವಸಾಯಗಾರರು ನನಗೆ ಹೇಳಿದರು. ಅನಂತರ ಅದನ್ನು ತರಿಸಿದೆ. ಪತ್ರಿಕಾ ಪ್ರಪಂಚದವರು ಇಲ್ಲದಿದ್ದರೆ ಎಷ್ಟು ಅನಾಹುತವಾಗುತ್ತಿತ್ತು. ಒಂದು ಕಾಪಿಯನ್ನು ತರಿಸಿ ಅದನ್ನು ಹುಡುಕಬೇಕಾದರೆ, ಪೂರ್ವಜನ್ಮದ ಪುಣ್ಯವೆಲ್ಲಾ ಖರ್ಚಾಯಿತು. ಅಂತೂ ಅದು ಸಿಕ್ಕಿತು, ಅವೊತ್ತೇ ಒಂದು ಅಬ್ಜಕ್ಷನ್ ಕೊಟ್ಟೆ, ನಾನು ಏನು ಹೇಳಿದ್ದೇನೆ ಎನ್ನುವುದನ್ನು ಇಲ್ಲಿ ಓದಿ ಬಿಡುತ್ತೇನೆ.

"Dear Sir,

Kindly refer your Notification o. RDP 44 ZPS 87 dated 25.2.87 I have to offer my sincere objection to the proposed amendment to the rules called Karnataka Zilla Parishads, Taluk Panchayat Samithis, Mandal Panchayats and Nyaya Panchayats (Conduct of Election) (Amendment) Rules, 1987.

This amendment itself is invalid, illegal and opposed to law. The existing amendment rule clearly prescribes what backward classes means in the Karnataka. The section is abundantly clear and recent notification issued by the Govt. specifying the backward classes means and include all the classes that are considered under these circumstances, no amendment is to be proposed.

This amendment is malafide as it is thrown to light beyond doubt the move to nominate members of Janatha Party thus to

scutter the majority achieved. This is colourful interference of reducing the majority into minority.

Thanking you.

Yours faithfulily."

ಇದನ್ನು ನೀವು ೧೧ನೇ ತಾರೀಖು ಮಾರ್ಚಿಯಲ್ಲಿ ಕೊಟ್ಟಿರಿ ಇವರು ಯಾವಾಗಲೂ ಯಾರಿಗೂ ಅನ್ಯಾಯ ಮಾಡುವವರಲ್ಲ ನಾವು ನಿಮ್ಮ ಪ್ರಕಾರ ಒಬ್ಬರಿಗೊಂದು, ಒಬ್ಬರಿಗೊಂದು ಮಾಡಿ, ಅನ್ಯಾಯವನ್ನು ಮಾಡಿ ಮಾಡಿ ಇಲ್ಲಿ ಬಂದು ಕೂತೆವು. ಆದರೆ ನೀವು ಮಾತ್ರ ಎಲ್ಲ ಸಮಾಜದವರಿಗೂ ನ್ಯಾಯವನ್ನು ಮಾಡಿ ಕೊಡುತ್ತಾ ಹಿಂದುಳಿದ ವರ್ಗದವರ ಕಲ್ಯಾಣ ಮಾಡುವುದಾಗಿ ವಾಗ್ದಾನವನ್ನು ಕೊಡುತ್ತಾ ಬರುತ್ತಿದ್ದೀರಿ ಆದರೆ ನಿನ್ನ ಅಭಿಪ್ರಾಯ ತಪ್ಪಿದೆ, ನಿನ್ನ ಅಭಿಪ್ರಾಯವನ್ನು ಬದಲಾವಣೆ ಮಾಡಿಕೋ ಅಂತ ಹೇಳಲಿಕ್ಕೆ ನಿಮಗೆ ಏನು ಖರ್ಚಾಗುತ್ತಿತ್ತು ? ನಿಮ್ಮ ಲಾ ಮಿನಿಸ್ಟರ್‌ರವರ ಕೈಯಲ್ಲಿ ಹೈ ಕೋರ್ಟ್‌ನವರು ಇದ್ದಾರೆ ಒಂದು ವೇಳೆ ಇಲ್ಲ ಎಂದು ಹೇಳುವುದಾದರೆ ಆ ಖಾತೆಯಂತೂ ನಿಮ್ಮದು. ಇದನ್ನು ತಾವು ಒಪ್ಪಿಕೊಳ್ಳುತ್ತೀರಿ. ಅಡ್ವೋಕೇಟ್ ಜನರಲ್‌ರವರು ನಿಮ್ಮ ಕೈಯಲ್ಲಿದ್ದಾರೆ ಅವರು ನಿಮ್ಮ ಜನರು, ಇದಂತೂ ಹೌದೋ, ಅಲ್ಲವೋ ? ಈ ಅಡ್ವೋಕೇಟ್ ಜನರಲ್‌ರವರ ಕೆಲಸ ಏನು ? ಅವರು ನಿಮ್ಮ ಸರ್ಕಾರದ ವಕೀಲರು ಅಷ್ಟೇ ಅಲ್ಲ ಅವರು ಈ ಮನೆಯ ಒಬ್ಬ ಗೌರವಾನ್ವಿತ ಸದಸ್ಯರೂ ಕೂಡ ಹೌದು. ಈ ಸರ್ಕಾರದಲ್ಲಿ ಏನಾದರೂ ತಪ್ಪಾದರೆ, ಅವರು ಆ ತಪ್ಪನ್ನು ಎತ್ತಿ ತೋರಿಸಬೇಕು. ಸಾಮಾನ್ಯವಾಗಿ ತಪ್ಪು ಮಾಡುವುದು ಸಹಜ ಹಿಂದೆ ಶ್ರೀ ಭೈರಾ ರೆಡ್ಡಿಯವರು ಅಡ್ವೋಕೇಟ್ ಜನರಲ್ ಆಗಿದ್ದಾಗ ೨ ೩ ಪ್ರಸಂಗದಲ್ಲಿ ಸರ್ಕಾರ ಇಂಥ ತಪ್ಪು ಮಾಡಿದೆ, ಇದು ಸರಿಯಲ್ಲ, ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದ್ದರು. ಅದೇ ರೀತಿ ಈಗಿನ ನಿಮ್ಮ ಅಡ್ವೋಕೇಟ್ ಜನರಲ್‌ರವರೂ ಮಾಡುವುದಕ್ಕೆ ಏತಕ್ಕೆ ಆಗುವುದಿಲ್ಲ? ಇದು ನಾವು ಟೀಕೆ ಮಾಡತಕ್ಕ ಪ್ರಶ್ನೆ ಅಲ್ಲ. ನೀವು ಜನರಿಗೆ ನ್ಯಾಯವನ್ನು ಕೊಡತಕ್ಕ ಜನ. ಅಂಥ ಜನರಿಗೆ ನೀವು ನ್ಯಾಯವನ್ನು ಕೊಡುವುದಕ್ಕೆ ಆಗದಿದ್ದರೆ ಇನ್ನು ಯಾತಕ್ಕೆ ನೀವು ಇದ್ದೀರಿ ? ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇಲ್ಲದ್ದನ್ನು ಹುಡುಕಿ ಏನಾದರೂ ಕೊಕ್ಕೆ ಹಾಕುವುದಕ್ಕೆ ಇದ್ದೀರಾ ? ಅದಲ್ಲ. ಎಲ್ಲಿ ಅನ್ಯಾಯವಾಗುತ್ತದೆ ಅಂಥ ಕಡೆ ಅದನ್ನು ಮಾಡುವುದು ಸರಿಯಲ್ಲವೆಂದು ಹೇಳಬೇಕು. ನೀವು ಪಂಚಾಯತ್ ಖಾತೆಯ ಮಂತ್ರಿಗಳಾಗಿದ್ದೀರಿ. ಅವರನ್ನು ಕೇಳಿ, ನಂತರ ನಿಮಗೆ ತಿಳಿದಂತೆ ಮಾಡಿ ಆದರೆ ಅವರನ್ನು ಕೇಳುವುದಕ್ಕೆ ನಿಮಗೆ ಏನಾಗಿದೆ ? ನೀವು ಅವರನ್ನು ಕೇಳದೆ ಈ ರೀತಿ ಮಾಡುತ್ತಿದ್ದೀರಿ. ಮತ್ತೊಂದು ವಿಚಾರ ಎಂದರೆ, ಈ ಬಿಲ್‌ನ್ನು ಫೈನಲೈಸ್ ಮಾಡುವಾಗ ಅವರನ್ನು ಕೇಳದೇ ಮಾಡಿದ್ದೀರಿ. ಈ ಸದನದಲ್ಲಿ ಇರತಕ್ಕ ಜನರಿಗೆ ಯಾವ ಅಧಿಕಾರ ಇದೆ ? ನಾಳೆ ಯಾರಾದರೂ ಬಂದು ನೀವು ಈ ಮಸೂದೆಯನ್ನು ಯಾವರೀತಿ ಪಾಸ್ ಮಾಡಿದಿರಿ, ನಿಮಗೆ ಗೊತ್ತಾಗಲಿಲ್ಲವೇ ಅಂತ ಕೇಳಿದರೆ ನಾವು ಅವರಿಗೆ ಏನು ಹೇಳಬೇಕು ? ಇದರಲ್ಲಿ ನೀವು ಏನು ಅಬ್ಜೆಕ್ಷನ್ಸ್ ಕಾಲ್‌ಫರ್ ಮಾಡಿದ್ದೀರಿ ಅದಕ್ಕೆ ತಕ್ಕ ತಿದ್ದುಪಡಿಗಳನ್ನು ಮಂಡಿಸುವುದಕ್ಕೆ ನಮಗೆ ಅವಕಾಶವನ್ನು ಕೊಡಬೇಕು. ಎಲ್ಲರೂ ಸೇರಿ ಇದನ್ನು ವಿಚಾರ ಮಾಡೋಣ. ಅದು ಬಿಟ್ಟು ಹೇಗೂ ಮೆಜಾರಿಟಿ ಇದೆಯೆಂದು ನಿಮ್ಮ ಮನಸ್ಸಿಗೆ ಬಂದಂತೆ ಬದಲಾವಣೆಯನ್ನು ಮಾಡತಕ್ಕ ಪ್ರವೃತ್ತಿ ಸರಿಯಲ್ಲ, ಅದು ಸೂಕ್ತವೂ ಅಲ್ಲ, ಸಮಂಜಸವೂ ಅಲ್ಲ. ಇದರಲ್ಲಿ ನೀವು ದುಡುಕುವುದಕ್ಕೆ ಹೋಗಬೇಡಿ. ನಾಮಿನೇಷನ್ ಮಾಡುವುದಾದರೆ, ನೀವು ಎಲ್ಲರನ್ನೂ ಕೇಳಿ, ಅವರಿಗೆ ತಿಳಿಸಿ ಮಾಡಿ. ವಿರೋಧ ಪಕ್ಷದವರನ್ನು ಇಂಥ ಸಂದರ್ಭದಲ್ಲಿ ಅಲ್ಲದೆ ಇನ್ನು ಯಾವ ಸಂದರ್ಭದಲ್ಲಿ ನಿಮ್ಮ ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳುತ್ತೀರಿ ? ರೂಲ್ಸ್‌ನ್ನು ಫ್ರೇಂ ಮಾಡುವಾಗ ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳದೆ ಇನ್ನು ಯಾವಾಗ ತೆಗೆದುಕೊಳ್ಳುತ್ತೀರಿ ? ಆಂಧ್ರದವರು ಹೈದರಾಬಾದ್‌ನಲ್ಲಿ ನೀರಾವರಿ ವಿಚಾರದಲ್ಲಿ ನಿಮ್ಮನ್ನು ಸೋಲಿಸುವಾಗ ನಮ್ಮನ್ನು ಕೇಳುತ್ತೀರಾ ? ಎಂ.ಇ.ಎಸ್.ನವರು ಹೊಂದಾಣಿಕೆ ಆಗದಿದ್ದಾಗ ಕೇಳುತ್ತಾರಾ ? ನಾವು ಹೇಳುವುದು ನಿಮಗೆ ಸರಿಕಾಣದಿದ್ದರೆ ನಂತರ ನಿಮಗೆ ತೋಚಿದಂತೆ ಮಾಡಿ. ನೀವು ಪೊಲಿಟಿಕಲ್ ಆಗಿ ಮಾಡುವುದಾದರೆ, ಮಾಡಿ. ಎಲ್ಲರೂ ಪೊಲಿಟಿಕಲ್ ಆಗಿಯೇ ಮಾಡುತ್ತಾರೆ ಎನ್ನುವುದಾದರೆ ಅದನ್ನು ಯಾವ ರೀತಿ ಮಾಡಬೇಕೋ ಆ ರೀತಿ ಮಾಡಿ. ನೀವು ಇಲ್ಲಿ ಹೀಗೆ ಮಾಡುತ್ತೀರಿ ಅಲ್ಲಿ ಪಾರ್ಲಿಮೆಂಟ್‌ನಲ್ಲಿ ಸನ್ಮಾನ್ಯ ರಾಜೀವ್ ಗಾಂಧಿಯವರನ್ನು ಟೀಕೆ ಮಾಡುತ್ತೀರಿ. ಇದು ಸರಿಯಲ್ಲ. ನಾವು ಮೆಜಾರಿಟಿ

ಯಿಂದ ಗೆದ್ದು ಬಂದಿದ್ದೇವೆ. ನಮಗೆ ಅಧಿಕ ಮತಗಳು ಬಂದಿವೆ ಎಂದು ನೀವು ಅಂಕಿಅಂಶಗಳನ್ನು ಕೊಡಬಹುದು. ನಾನಾದರೂ ಹೇಳುತ್ತೇನೆ ನೀವು ೫೦ ಪರ್ಸೆಂಟ್ ಕೂಡ ಮತವನ್ನು ಗಳಿಸಿ ಆರಿಸಿ ಬಂದಿಲ್ಲ. ನೀವು ಕಾನೂನು ಬದ್ಧವಾಗಿ ಅಧಿಕಾರಕ್ಕೆ ಬಂದಿದ್ದೀರಿ. ಆದ್ದರಿಂದ ನಾವು ನಿಮಗೆ ಮನ್ನಣೆಯನ್ನು ಕೊಡುತ್ತೇವೆ. ಆದರೆ ಕಾನೂನು ಬದ್ಧವಾಗಿ ಅಧಿಕಾರಕ್ಕೆ ಬಂದಾಕ್ಷಣಕ್ಕೇ ಹಿಂದುಳಿದ ವರ್ಗದವರನ್ನು, ಮತ್ತು ಬೇರೆ ಯಾರನ್ನೂ ತುಳಿಯುತಕ್ಕ ರೀತಿಯಲ್ಲಿ ವರ್ತನೆ ಮಾಡುವುದು ಸರಿಯಲ್ಲ. ಆ ನಿಮ್ಮ ನಡತೆ ಒಳ್ಳೆಯದಲ್ಲ ಒಂದು ವೇಳೆ ಯಾರಾದರೂ ನಾಳೆಯ ದಿವಸ ಈ ಕಾನೂನನ್ನು ಹೇಗೆ ಜಾರಿಗೆ ತಂದಿರಿ ಎಂದು ಪ್ರಶ್ನೆ ಮಾಡಿದಾಗ ನೀವು ಅವರಿಗೆ ಉತ್ತರವನ್ನು ಹೇಳುವುದಕ್ಕೆ ಕಷ್ಟವಾಗುತ್ತದೆ. ಅವರ ಮುಂದೆ ನೆಟ್ಟಗೆ ನಿಂತು ಉತ್ತರ ಕೊಡಲಿಕ್ಕೆ ನಿಮ್ಮಲ್ಲಿ ಧೈರ್ಯ ಇರಬೇಕಾಗುತ್ತದೆ. ಅದು ನಿಮ್ಮಲ್ಲಿದೆಯೆ ?

ಮಾನ್ಯ ಅಧ್ಯಕ್ಷರೇ, ಈವತ್ತು ಬ್ಯಾಕ್‌ವರ್ಡ್ ಕ್ಲಾಸ್ ವಿಷಯವಾಗಿ ಈ ಬಿಲ್ಲನ್ನು ತಂದಿದ್ದಾರೆ. ಮತ್ತೆ ಬ್ಯಾಕ್‌ವರ್ಡ್‌ಕ್ಲಾಸ್ ಹಿತವನ್ನು ನಾವು ಕಾಪಾಡುತ್ತೇವೆ, ಆ ಒಂದೇ ಒಂದು ಉದ್ದೇಶಕ್ಕಾಗಿ ಇದನ್ನು ತಂದಿರುತ್ತೇವೆಂದು ಹೇಳುತ್ತೀರಿ. ಇದನ್ನು ವಿರೋಧ ಮಾಡುವವರು ಬ್ಯಾಕ್‌ವರ್ಡ್ ಕ್ಲಾಸ್‌ನ್ನು ವಿರೋಧಿಸುತ್ತಾರೆಂದು ಹೇಳಿದರು. ಪತ್ರಿಕೆಯವರು ಅಗ್ರಿಕಲ್ಚರ್ ಯೂನಿವರ್ಸಿಟಿ ಬಿಲ್ಲನ್ನು ಯಾವ ಉದ್ದೇಶಕ್ಕಾಗಿ ವಿರೋಧ ಮಾಡಿದಿರಿ ಎಂದು ನಮಗೆ ಕೇಳಿದರು. ನಾವು ಬಿಲ್ಲನ್ನು ವಿರೋಧ ಮಾಡಲಿಲ್ಲ ಸರ್ಕಾರದ ನೀತಿಯನ್ನು ನಾವು ವಿರೋಧ ಮಾಡಿದೆವು ಎಂದು ಹೇಳಿದೆ. ಏತಕ್ಕೆಂದರೆ ಎಂ.ಎಲ್.ಎ.ಗಳನ್ನು ಬಿಟ್ಟು ಮತ್ತೊಬ್ಬರನ್ನು ತುರುಕುವುದಕ್ಕೆ ಹೊರಟಿದ್ದಾರೆ. ಅದಕ್ಕೆ ವಿರೋಧ ಮಾಡಿದ್ದೇವೆ. ಆದ್ದರಿಂದ ನಾವು ಯಾವುದಕ್ಕೋಸ್ಕರವಾಗಿ ವಿರೋಧ ಮಾಡುತ್ತೇವೆನ್ನುವುದನ್ನು ತಿಳಿದುಕೊಳ್ಳಬೇಕು. ರಚನಾತ್ಮಕವಾಗಿ ಯಾವುದನ್ನು ವಿರೋಧ ಮಾಡಬೇಕೋ ಅದನ್ನು ವಿರೋಧ ಮಾಡಿಯೇ ಮಾಡಬೇಕಾಗುತ್ತದೆ ನಾಮಿನೇಷನ್ ಮಾಡತಕ್ಕಂಥ ಉದ್ದೇಶ ಸರಿಯಾಗಿ ಇದೆ ಎಂದು ಸರಿಯಾಗಿ ಕನ್‌ವಿನ್ಸ್ ಮಾಡಿದ್ದರೆ ನಾವು ಅದನ್ನು ಸ್ವಾಗತ ಮಾಡುತ್ತಿದ್ದೆವು. ನಾವು ಯಾವಾಗಲೂ ಬ್ಯಾಕ್‌ವರ್ಡ್‌ಕ್ಲಾಸ್ ರೆಪ್ರಸೆಂಟ್ ಮಾಡುವುದಕ್ಕೆ ನಾವು ವಿರೋಧವಾಗಿಲ್ಲ. ನಾವು ಕಾಂಗ್ರೆಸ್ಸಿಗರಾಗಿ ಕಾಂಗ್ರೆಸ್‌ನವರು ಯಾವರೀತಿ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್‌ಟ್ರೈಬ್ಸ್ ಹಿತವನ್ನು ಕಾಯುತ್ತದೆಯೋ ಹಾಗೆಯೇ ಬ್ಯಾಕ್‌ವರ್ಡ್‌ಕ್ಲಾಸ್ ಹಿತವನ್ನು ಕಾಯಬೇಕಾಗುತ್ತದೆ ಆ ದೃಷ್ಟಿಯಿಂದ ಬ್ಯಾಕ್‌ವರ್ಡ್‌ಕ್ಲಾಸ್‌ನ್ನು ಸ್ವಾಗತ ಮಾಡುತ್ತೇವೆ. ಇದರಲ್ಲಿ ನಿಜವಾದ ಉದ್ದೇಶವಿದಿಯೋ ಅಥವಾ ಮಾಲಫೈಡ್ ಇದೆಯೋ ಎನ್ನುವುದನ್ನು ಮಾನ್ಯ ಕಾನೂನು ಸಚಿವರು ತಿಳಿದುಕೊಳ್ಳಬೇಕು. ಮತ್ತು ಸ್ಪಷ್ಟವಾಗಿ ತಿಳುವಳಿಕೆ ಕೊಡಬೇಕೆಂದು ಹೇಳುತ್ತೇನೆ. ಬ್ಯಾಕ್‌ವರ್ಡ್‌ಕ್ಲಾಸ್ ವಿಷಯದಲ್ಲಿ ನಮ್ಮ ಕರ್ನಾಟಕದಲ್ಲಿ ಮಾನ್ಯ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಮಾನ್ಯ ಎಲ್. ಜಿ. ಹಾವನೂರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದರು. ಅವರು ಬ್ಯಾಕ್‌ವರ್ಡ್‌ಕ್ಲಾಸ್ ರಿಪೋರ್ಟನ್ನು ಕೊಟ್ಟರು ಅದನ್ನು ಕೊಡುವಾಗ ಒಂದು ಹೇಳಿಕೆಯನ್ನೂ ಕೂಡ ಕೊಟ್ಟರು ಅದೇನೆಂದರೆ, ಈ ಬ್ಯಾಕ್‌ವರ್ಡ್‌ಕ್ಲಾಸ್ ರಿಪೋರ್ಟನ್ನು ಕೊಟ್ಟಿರತಕ್ಕಂಥದ್ದು ಪೂರ್ತಿಯಾಗಿ ಅಭ್ಯಾಸ ಮಾಡಿ ಕೊಟ್ಟಿಲ್ಲ. ಸ್ಯಾಂಪಲ್ ಸರ್ವೆಯನ್ನು ಮಾಡಿ ಕೊಟ್ಟಿರತಕ್ಕಂಥದ್ದಾಗಿದೆ ಎಂದು ಹೇಳಿ ಕೊಟ್ಟರು. ಈ ಕಮಿಷನ್ ಮಾಡುವಾಗಲೂ ನಾನು ವಿರೋಧ ಮಾಡಿದ್ದೆ. ಮತ್ತೆ ಅವರು ರಿಪೋರ್ಟ್ ಕೊಟ್ಟ ಮೇಲೆ ನಾನು ಪತ್ರಿಕೆಗಳಿಗೆ ಹೇಳಿಕೆಯನ್ನು ಕೂಡ ಕೊಟ್ಟೆ, ಏತಕ್ಕೆಂದರೆ ಬ್ಯಾಕ್‌ವರ್ಡ್‌ಕ್ಲಾಸ್ ಹಿತವನ್ನು ಕಾಪಾಡುತ್ತೇವೆಂದು ಹೇಳಿ ಹಾವನೂರ್ ಕಮಿಟಿಯವರು ಕೊಟ್ಟಿರತಕ್ಕಂಥ ರಿಪೋರ್ಟ್ ಸ್ಯಾಂಪಲ್ ಸರ್ವೆಯಾಗಿದೆಯಲ್ಲಾ ಎಂದು ಅನಂತರ ನೀವು ಬಂದಾಗ ಒಂದು ವೆಂಕಟಸ್ವಾಮಿ ಕಮಿಟಿಯನ್ನು ಮಾಡಿದಿರಿ. ನೀವೇ ನೇಮಿಸಿದ ಕಮಿಟಿ ಏನು ಮಾಡಿದರು ? ಅವರೂ ಕೂಡ ಒಂದು ರಿಪೋರ್ಟ್ ಕೊಟ್ಟರು. ಅಲ್ಲೊಂದು ಇಲ್ಲೊಂದು ಸರ್ವೆ ಅವರು ಮಾಡಲಿಲ್ಲ. ಪೂರ್ತಿಯಾಗಿ ಸರ್ವೆಮಾಡಿ ರಿಪೋರ್ಟ್‌ನ್ನು ಕೊಟ್ಟರು. ಹಳ್ಳಿಹಳ್ಳಿಗೂ ಹೋಗಿ ಪ್ರತಿಯೊಬ್ಬರ ಮನೆಮನೆಗೂ ಹೋಗಿ ಶಿಸ್ತಿನಿಂದ ಸರ್ವೆ ಮಾಡಿದರು. ಕಾನೂನು ಸಚಿವರು ಮತ್ತು ಮಾನ್ಯ ನಜೀರ್ ಸಾಬ್‌ರವರು ಇದಕ್ಕೆ ಬೆಂಬಲ ಕೊಟ್ಟರು. ಹೀಗಾಗಿ ಬ್ಯಾಕ್‌ವರ್ಡ್‌ಕ್ಲಾಸ್ ಎಂದರೆ ಯಾರು ಯಾರು ತಾವು ಇಲ್ಲಿ ನೋಡಿ. ಬ್ರಾಹ್ಮಣರು ಈ ಕರ್ನಾಟಕ ರಾಜ್ಯದಲ್ಲಿ ಮುಂದುವರಿದಂಥ ಜನರು. ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಹೇಳತಕ್ಕಂಥ ಜನರು ನಾವು. ನಿಜವಾಗಿಯೂ ಬ್ಯಾಕ್‌ವರ್ಡ್‌ಕ್ಲಾಸ್ ಹಿತವನ್ನು ನೋಡತಕ್ಕಂಥವರು, ನಾನು ನಿಜವಾಗಿಯೂ

ಬ್ಯಾಕ್‌ವರ್ಡ್‌ಕ್ಲಾಸ್ ? ಕೆ. ಎಚ್. ಪಾಟೀಲ್. ರೆಡ್ಡಿ ಸಮಾಜದವರು ಬ್ಯಾಕ್‌ವರ್ಡ್‌ಕ್ಲಾಸ್ ಎಂದರೆ ನಿಜವಾಗಿಯೂ ನಾಚಿಕೆಯಾಗುತ್ತದೆ. ನನಗಂತೂ ಹಿಂದುಳಿದ ಜನರು ಎಂದು ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗುತ್ತದೆ. ನನಗಿಂತಲ್ಲೂ ಹಿಂದುಳಿದ ಜನರು ಇರುವಾಗ ನನ್ನನ್ನು ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಕರೆಯುತ್ತೀರಾ ? ಎರಡನೆಯದಾಗಿ, ನಿಜವಾದ ದೃಷ್ಟಿಯಿಂದ ನೀವು ವಿಚಾರ ಮಾಡಿದ್ದರೆ ಬ್ಯಾಕ್‌ವರ್ಡ್‌ಕ್ಲಾಸ್‌ನ್ನು ಸ್ವಾಗತ ಮಾಡುತ್ತಿದ್ದೆ. ಅದನ್ನು ತಾವು ಮಾಡಿಲ್ಲ. ಈಗ ವೆಂಟಕಸ್ವಾಮಿ ರಿಪೋರ್ಟ್‌ನ್ನು ತಿರಸ್ಕರ ಮಾಡಿದಿರಿ. ಮಾನ್ಯ ಸಭಾಧ್ಯಕ್ಷರಿಗೆ ಅನುಕೂಲವಾಗಬೇಕಾಗಿತ್ತು, ಮತ್ತೆ ಪ್ರಬಲರಾದ ದೇವೇಗೌಡರಿಗೆ ಅನುಕೂಲವಾಗಬೇಕಾಗಿತ್ತು, ಮಾನ್ಯ ಬೊಮ್ಮಾಯಿಯವರಿಗೆ ಅನುಕೂಲವಾಗಬೇಕಾಗಿತ್ತು. ಇವರೆಲ್ಲರನ್ನೂ ಕೂಡಿಸಿ ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಹೇಳಿದರೆ ಉಳಿದವರು ಯಾರು ? ಮಾನ್ಯ ಹೆಗಡೆಯವರು ಚೀಫ್‌ಮಿನಿಸ್ಟರ್ ಆಗಿದ್ದಾರೆ ಅಷ್ಟು ಸಾಕಾಗಿತ್ತು. ನಿಮ್ಮ ರಿಪೋರ್ಟ್ ಪ್ರಕಾರ ಎಲ್ಲರನ್ನು ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಹೇಳುತ್ತೀರಾ ಅಥವಾ ಅದನ್ನು ಬಿಟ್ಟು ಮತ್ತೆ ಏನನ್ನು ಮಾಡುತ್ತೀರಾ ? ಮಾನ್ಯ ಅಧ್ಯಕ್ಷರೆ, ಇವತ್ತು ಬ್ಯಾಕ್‌ವರ್ಡ್‌ಕ್ಲಾಸ್ ರಿಪೋರ್ಟ್‌ನಲ್ಲಿ ಏನು ಮಾಡಿದ್ದಾರೆಂದರೆ ಒಂದು ಪರ್ಸೆಂಟ್‌ಗಿಂತ ಕಡಿಮೆ ಇದ್ದವರನ್ನು ನಾಮಿನೇಟ್ ಮಾಡಬೇಕೆಂದು ಮಾಡಿದ್ದಾರೆ. ಒಂದು ಪರ್ಸೆಂಟಿಗಿಂತ ಕಡಿಮೆ ಇರುವವರನ್ನು ಹುಡುಕುವವರು ಯಾರು ? ಯಾರು ಹುಡುಕಿ ಹೇಳುತ್ತಾರೆ. ಸರ್ಕಾರದವರು ಕೈಹಾಕುವುದಿಲ್ಲ ಅಂದಾಗ ಆಯಾಯ ಜಿಲ್ಲೆಯವರು ಮಾಡಬೇಕು. ಒಂದು ಸ್ಟಾಟಿಸ್ಟಿಕಲ್ ಸರ್ವೆ ಇಲ್ಲ. ಜಾತಿ ಆಧಾರದ ಮೇಲೆ ಸರ್ವೆ ಮಾಡುವುದಕ್ಕೆ ಯಾವ ಅಧಿಕಾರ ಇದೆ ? ಸಂವಿಧಾನದ ಪ್ರಕಾರ ಜಾತಿಯನ್ನು ಕೇಳುವ ಹಾಗೆ ಇಲ್ಲ. ನನ್ನನ್ನು ಕೇಳಿದರೆ ನಾನು ಮನುಷ್ಯ ಜಾತಿ ಎಂದು ಹೇಳುತ್ತೇನೆ. ಸ್ಟಾಟಿಸ್ಟಿಕಲ್ ಡಾಟಾ ಇಲ್ಲದೆ ಹಿಂದುಳಿದವರು ಎಂದು ಹೇಳುವುದು ಯಾವ ಆಧಾರದ ಮೇಲೆ ? ಬರೀ ಟೀಕೆ ಮಾಡುವುದನ್ನು ಬಿಡಿ. ಕಾಂಗ್ರೆಸ್ಸಿನವರು ಮಾಡಲಿ, ಯಾರೇ ಮಾಡಲಿ, ನಾವು ಕೇಳುತ್ತೇವೆಂದು ನೀವು ಆಳುತ್ತೀರಾ ? ಆಳುವಾಗ ಕೇಳುವುದು ನಮ್ಮ ಕರ್ತವ್ಯ. ನಾವು ಜಾರಿದ್ದೇವೆಂದು ನೀವೂ ಜಾರಬೇಡಿ. ದುಡ್ಡು ನುಂಗಬೇಡಿ ಎಂದು ಹೇಳುತ್ತೇವೆ. ಆದರೂ ನುಂಗುತ್ತೇವೆಂದರೆ ಹೇಗೆ ? ನಾವು ತಿನ್ನಲಿ, ತಿನ್ನದೆ ಇರಲಿ ತಿನ್ನುವವರನ್ನು ಒಳಗೆ ಹಾಕುವ ಅಧಿಕಾರ ನಿಮಗೆ ಇದೆ. ಅದನ್ನು ಮಾಡುತ್ತಿಲ್ಲ. ನಮ್ಮಲ್ಲೂ ತಿಂದವರು ಇದ್ದಾರೆ. ಅವರನ್ನು ಏತಕ್ಕೆ ಬಿಟ್ಟಿರಿ ? ನಿಮ್ಮ ಕೈಯಲ್ಲಿ ಸಾಧ್ಯವಾದರೆ ಅವರನ್ನೂ ಒಳಗೆ ಹಾಕಿ. ಈಗೇನೋ ಹೆಡ್ಡತನ ಮಾಡಿದ್ದೀರಿ. ಮುಂದಾದರೂ ಮಾಡಬೇಡಿ ಎಂದು ಎಚ್ಚರಿಕೆ ಕೊಡುತ್ತೇನೆ. ಜಾತಿಗಳಲ್ಲಿ ಅನೇಕ ಜಾತಿಗಳಿವೆ. ಅಗಸರು, ಕುಂಬಾರರು, ನೋಣಬರು ಎಂದು ಸಾವಿರಾರು ಜಾತಿಗಳು ಕರ್ನಾಟಕದಲ್ಲಿವೆ. ಜಾತಿಯಲ್ಲಿ 0.1 ಪರ್ಸೆಂಟ್ ತನಕ ಇರುವ ಎಷ್ಟೋ ಜಾತಿಗಳಿವೆ. ಹಾವನೂರ್‌ರವರು ಏನು ವರದಿ ಕೊಟ್ಟಿದ್ದಾರೆ. ಅದರಲ್ಲಿದ್ದಂತಹ ಜಾತಿಗಳನ್ನು ಆಧಾರ ಮಾಡಿದ್ದೀರಿ. ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ಜಾತಿಯವರು ಎಷ್ಟೆಷ್ಟು ಪರ್ಸೆಂಟ್ ಇದ್ದಾರೆಂದು ಲೆಕ್ಕ ಕೊಡುತ್ತೀರಾ ? ಒಂದು ಪರ್ಸೆಂಟ್‌ಗಿಂತ ಕಡಿಮೆ ಇದ್ದವರನ್ನು ಬ್ಯಾಕ್‌ವರ್ಡ್‌ಕ್ಲಾಸ್ ಎಂದು ನಾಮಿನೇಟ್ ಮಾಡುತ್ತೇವೆಂದು ಉತ್ತರ ಕೊಡುವಾಗ ಹೇಳಬೇಕು. ನಾವು ಕೊಡುವುದಿಲ್ಲ, ಹರಿಜನರು ಸಿಟ್ಟಿಗೆ ಏಳುತ್ತಾರೆ ಎಂದರೆ ಆಗುವುದಿಲ್ಲ. ನೀವು ಉತ್ತರ ಕೊಡುವಾಗ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಜಾತಿಯವರು ಒಂದು ಪರ್ಸೆಂಟ್‌ಗಿಂತ ಕಡಿಮೆ ಇದ್ದಾರೆ ಎಂಬುದನ್ನು ಹೇಳಬೇಕು. ಅವರನ್ನು ನಾಮಿನೇಟ್ ಮಾಡುತ್ತೀರಾ ಇಲ್ಲವೇ ಎಂಬುದನ್ನು ನಾವು ವಾಚ್ ಮಾಡುತ್ತೇವೆ. ಸದಸ್ಯರಾಗಿ ನಾವು ಇನ್ನು ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಏನು ಮಾಡಿದ್ದಾರೆಂದರೆ ಅವರ ಪಕ್ಷದವರು ಎಲ್ಲೆಲ್ಲಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ ಅಲ್ಲಿ ಅವರು ತಾಲ್ಲೂಕು ಜನತಾ ಪಕ್ಷದ ಅಧ್ಯಕ್ಷರಿಗೆ ಟೆಲಿಗ್ರಾಂ ಕೊಟ್ಟಿದ್ದಾರೆ. ನೀವು ಹೆಸರು ಕೊಟ್ಟು ಕಳಿಹಿಸಿ ಎಂದು. ಸರ್ಕಾರದಿಂದ ಆದೇಶ ಹೋಗಿಲ್ಲ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಅವರ ಪಕ್ಷದ ಅಧ್ಯಕ್ಷರಿಗೆ ಹೇಳಿದ್ದಾರೆ. ಆ ಕ್ಯಾಟಗರಿಯಲ್ಲಿ ಬರತಕ್ಕವರ ಹೆಸರು ಕೊಟ್ಟು ಕಳುಹಿಸಿ ಎಂದು ಹೇಳಿದ್ದಾರೆ. ಅದು ಜಿಲ್ಲಾ ಪರಿಷತ್ತು ಅಥವಾ ಸರ್ಕಾರದ ವತಿಯಿಂದ ಆದ ಹಾಗೆ ಇಲ್ಲ. ಪಾರ್ಟಿ ವತಿಯಿಂದ ಆದ ಹಾಗೆ.

ಶ್ರೀ ಕೆ. ಹೆಚ್. ಪಾಟೀಲ್.—ಪಾರ್ಟಿ ವತಿಯಿಂದಲೂ ನಡೆಯುತ್ತದೆ. ಅವರಲ್ಲಿ ತಪ್ಪಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಚಂದ್ರಶೇಖರ್‌ರವರು ಕಳುಹಿಸಬೇಕು. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಪಾರ್ಟಿ ಅಧ್ಯಕ್ಷರಿಗೆ ಟೆಲಿಗ್ರಾಂ ಕಳುಹಿಸುತ್ತಾರೆಯೋ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಜಿಲ್ಲಾ ಪಾರ್ಟಿಯವರು ಮಾಡುವುದು. ನೀವು ಏನು ಮಾಡುತ್ತೀರಿ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ಇದನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ನ್ಯಾಯವಾಗಿ ಅಲ್ಲಿರತಕ್ಕ ತಹಶೀಲ್ದಾರರಿಗಾಗಲಿ, ಬಿಡಿಒ. ಗಾಗಲಿ ಕೊಟ್ಟು ತರಿಸಿಕೊಳ್ಳಬೇಕು. ಆದರೆ ನೇರವಾಗಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಜನತಾ ಪಾರ್ಟಿ ಅಧ್ಯಕ್ಷರಿಗೆ ಟೆಲಿಗ್ರಾಂ ಕೊಟ್ಟು ತರಿಸಿಕೊಳ್ಳತಕ್ಕದ್ದು ಸರಿ ಅಲ್ಲ. ಒಂದು ಸಾರಿ ಅಧ್ಯಕ್ಷರಾದ ಮೇಲೆ ಎಲ್ಲಾ ಪಕ್ಷಗಳನ್ನು ಸಮಾನವಾಗಿ ನೋಡಬೇಕು. ಒಟ್ಟಿನಲ್ಲಿ ನಿಮ್ಮ ಉದ್ದೇಶವೇನೆಂದರೆ, ನಿಮ್ಮ ಪಕ್ಷದವರು ನಾಮಿನೇಷನ್‌ನಲ್ಲಿ ಬರುತ್ತಿರಬೇಕು. ನಿಮ್ಮ ಪಕ್ಷದವರು ಅಧ್ಯಕ್ಷರಿದ್ದಾರೆಂದು ಟೆಲಿಗ್ರಾಂ ಕೊಟ್ಟು ತರಿಸಿಕೊಳ್ಳತಕ್ಕ ಪದ್ಧತಿ ಸರಿಯಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಇವರು ಮಂತ್ರಿಗಳಾಗಿದ್ದವರು. ಇವರ ಪಕ್ಷದವರನ್ನು ಅಲ್ಲದೆ ಬೇರೆ ಯಾರನ್ನು ಕೇಳುತ್ತಿದ್ದರು ?

ಅಧ್ಯಕ್ಷರು.—ಪಾಟೀಲರು ಏನು ಹೇಳುತ್ತಾರೆ ಕೇಳೋಣ. ತಾವು ಹೇಳಿದ್ದೀರಲ್ಲಾ.

ಶ್ರೀ ಕೆ. ಹೆಚ್. ಪಾಟೀಲ್.—ಲ್ಯಾಂಡ್ ಟ್ರಿಬ್ಯುನಲ್ ಮಾಡುತ್ತಾರೆ. ಅದಕ್ಕೆ ಪ್ರೊಸೀಜರ್ ಇದೆ. ಆದರೆ ಇಲ್ಲಿ ಹೆಸರನ್ನು ಯಾರೇ ಒಯ್ದು ಕೊಡಬಹುದು. ಆದರೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಬ್ಲಾಕ್ ಪ್ರೆಸಿಡೆಂಟರಿಗೆ ಕೊಡುವ ಪದ್ಧತಿ ಇಲ್ಲ.

೪–೩೦ ಪಿ. ಎಂ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾವು ಮಾಡಿದ್ದಿರಲಿ. ನೀವು ಏನು ಮಾಡಿದಿರಿ? ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್ ಹೇಳಿ ಈಗ ನೀವು ಏನು ಮಾಡಿದ್ದು ?

ಶ್ರೀ ಎಚ್. ಎಲ್. ತಿಮ್ಮೇಗೌಡ.—ಪಕ್ಷದ ರಾಜಕೀಯದಲ್ಲಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಲಿ ಜನತಾ ಪಾರ್ಟಿ ಅಧ್ಯಕ್ಷರಾಗಲಿ ನೇಮ್ಸ್ ತರಿಸಿಕೊಂಡು ರೂಲ್ಸ್ ಪ್ರಕಾರ ನಾಮಿನೇಟ್ ಮಾಡುತ್ತಾರೆ. ಇವರ ಪಕ್ಷ ಆಗಲಿ ಬೇರೆ ಪಕ್ಷ ಆಗಲಿ ಯಾರೇ ಇದ್ದರೂ ಪಕ್ಷದ ಸಹಾಯ ಇಲ್ಲದೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ನಮ್ಮ ಕಾರ್ಯಕರ್ತರನ್ನು ಉಪಯೋಗಿಸಿಕೊಂಡೇ ಕೆಲಸ ಮಾಡುವುದು. ಇದರಲ್ಲಿ ತಪ್ಪೇನೂ ಇಲ್ಲ. ಮಾನ್ಯ ಕೆ. ಎಚ್. ಪಾಟೀಲರೂ ತಪ್ಪೇನಿಲ್ಲ ಎಂದು ಹೇಳಿದ್ದಾರೆ. ಅದೆಲ್ಲಾ ತಪ್ಪು ಎಂದರೆ ಪಕ್ಷ ಏತಕ್ಕಿರಬೇಕು?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದರಲ್ಲಿ......

ಅಧ್ಯಕ್ಷರು.—ಸಾಕು. ಎಷ್ಟು ಸಲ ಹೇಳುವುದು? ನೀವು ಹೇಳಿದಿರಿ. ಅವರೂ ಹೇಳಿದರು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಯಾವುದೇ ಪಕ್ಷ ಆಳತಕದಿದ್ದರೂ ಕೂಡ ಜಿಲ್ಲಾ ಪರಿಷತ್, ಅಧ್ಯಕ್ಷರೆಂದರೆ ಅವರು ಎಲ್ಲರಿಗೋಸ್ಕರ ಇರುತ್ತಾರೆ. ಅವರ ಪಕ್ಷದವರೇ ತಹಸೀಲ್ದಾರರಿಗೆ ಕೊಡಬಹುದು. ಅಸಿಸ್ಟೆಂಟ್ ಕಮೀಷನರ್ ಅವರಿಗೆ ಕೊಡಬಹುದು. ಡೆಪ್ಯುಟಿ ಕಮೀಷನರ್ ಅವರಿಗೆ ಕೊಡಬಹುದು. ಆ ಮಾತು ಬೇರೆ. ಅದನ್ನು ನೋಡಿಕೊಂಡು ಟಿಕ್ ಮಾಡಿಕೊಂಡು ನಿಮ್ಮ ಪಾರ್ಟಿಯವರಿಗೇ ಕೊಡಿ. ಆದರೆ ಪದ್ಧತಿಯಾನುಸಾರ ಯಾವುದೇ ಪಾರ್ಟಿ ಅಧಿಕಾರವಲ್ಲಿದ್ದರೂ ನಾಮಿನೇಟ್ ಮಾಡುವಾಗ ಅವರು ನೇರವಾಗಿ ಸಂಬಂಧಪಟ್ಟ ಅಸಿಸ್ಟೆಂಟ್ ಕಮೀಷನರ್ ಅವರಿಗೆ ಹೇಳುತ್ತಾರೆ. ತಹಸೀಲ್ದಾರರಿಗೆ ಹೇಳುತ್ತಾರೆ, ನೀವು ಇಂಥ ಕ್ಯಾಟಗರಿಯಲ್ಲಿ ಬರತಕ್ಕ ಹೆಸರುಗಳನ್ನು ಕಳಿಸಿ ಎಂದು. ಸಂಬಂಧಪಟ್ಟವರು ಹೋಗಿ ಹೆಸರುಗಳನ್ನು ಕೊಡುತ್ತಾರೆ. ನಂತರ ಬೇಕಾದ್ದನ್ನು ಟಿಕ್ ಮಾಡಿಕೊಂಡು ನಾಮಿನೇಟ್ ಮಾಡುತ್ತಾರೆ. ಆದರೆ ಇಲ್ಲಿ ರೆಸಲ್ಯೂಷನ್ ಇಲ್ಲ, ಏನೂ ಇಲ್ಲ. ನೇರವಾಗಿ ಹೆಸರು ತರಿಸಿಕೊಂಡು ಕೊಡುವುದೆಂದರೆ ನಿಮ್ಮ ಆಫೀಸ್ ಮಿಸ್‌ಯೂಸ್ ಮಾಡಿಕೊಂಡಂತಾಗುತ್ತದೆ,

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ವಾದ ವಿವಾದಕ್ಕಿಂತ ನಾವು ನಿಜವಾದುದನ್ನು ಒಪ್ಪೋಣ. ಪಾರ್ಟಿಯಿಂದ ನೀವು ಮಾಡಬೇಡಿ ಎಂದು ಹೇಳುತ್ತಿಲ್ಲ. ಪಾರ್ಟಿ ಅಧ್ಯಕ್ಷರೇ ನೇರವಾಗಿ ಬರೆಯದೆ ಅಲ್ಲಿರುವ ಅಧಿಕಾರಿಗಳ ಮುಖಾಂತರ ಮಾಡಿ ಎಂದು ಹೇಳುತ್ತಿದ್ದೇವೆ. ಅದು ನಿಮಗೆ ಬಿಟ್ಟದ್ದು. ನಿಮ್ಮ ನೀತಿ ಸಹಿಷ್ಣುತೆ ಏನಿದೆಯೋ ಗೊತ್ತಿಲ್ಲ ನಮಗೆ ಒಂದು ನೀತಿಸಹಿಷ್ಣುತೆ ಇದೆ. ಪಕ್ಷದ ವತಿಯಿಂದ ಬರೆಯಬೇಕಾದರೂ ಯಾವರೀತಿ ಬರೆಯಬೇಕು ಎಂಬ ಸಂಸ್ಕೃತಿ ಇದೆ ನಮ್ಮಲ್ಲಿ. ಪಾರ್ಟಿ ಅಧ್ಯಕ್ಷರೇ ನೇರವಾಗಿ ಬರೆಯುವುದಿಲ್ಲ. ಶ್ರೀ ತಿಮ್ಮೇಗೌಡರಂಥ ಭಲೋ ಜನರಿರುವಾಗ ಇಂಥದ್ದೆಲ್ಲಾ ಏತಕ್ಕೆ ವಿಚಾರ ಮಾಡಬಾರದು ? ಕ್ಷಣಿಕ ಸುಖಕ್ಕಾಗಿ ಪರಮಾನಂದವನ್ನು ಏತಕ್ಕೆ ಕಳೆದುಕೊಳ್ಳುತ್ತೀರಿ ? ಲಿಸ್ಟ್ ಆಫ್ ಬ್ಯಾಕ್‌ವರ್ಡ್‌ಕ್ಲಾಸಸ್ ನೋಡಿದರೆ ನಿಮಗೆ ನಾಮಿನೇಷನ್ಸ್ ಮಾಡುವುದಕ್ಕೆ ಸಾಧ್ಯವಿಲ್ಲ ಅನ್ನಿಸುತ್ತದೆ. ನಿಷ್ಪಕ್ಷಪಾತವಾದ ಮನುಷ್ಯ ಕೂತರೆ ನಾಮಿನೇಷನ್ ಮಾಡುವುದು ಸಾಧ್ಯವಿಲ್ಲ. ಕಮಿಟಿಯಲ್ಲಿ ನಾವು ಹೋಗಬೇಕಾಗುತ್ತದೆ. ನೀವು ಏತಕ್ಕೆ ಮಾಡಿದಿರಿ ಎಂದು ಕೇಳಬೇಕಾಗುತ್ತದೆ. ನಮ್ಮ ರೈಟ್ಸ್ ನಾವು ಎಕ್ಸರ್‌ಸೈಸ್ ಮಾಡಬೇಕಾಗುತ್ತದೆ. ಕಾಳಪ್ಪನನ್ನು ನೇಮಿಸಬೇಕೋ ಮಲ್ಲಪ್ಪನನ್ನು ನೇಮಿಸಬೇಕೋ ಎಂಬ ಬಗ್ಗೆ ಜ್ಯುಡಿಷಿಯಲ್ ಮೈಂಡ್ ಇಟ್ಟುಕೊಂಡು ಆ ಪ್ರಕಾರ ಮಾಡಬೇಕಾಗುತ್ತದೆ. ಅಂಥ ಸಮಯದಲ್ಲಿ ಯಾವರೀತಿ ಮಾಡಬೇಕು ? ಈ ರೀತಿಯೆಲ್ಲಾ ತೊಂದರೆಯಾಗಬಾರದು ಎಂದು ನಾನು ಕಾನೂನು ಮಂತ್ರಿಗಳಲ್ಲಿ ಕಳಕಳಿಯಿಂದ ಭಿನ್ನಹ ಮಾಡಿಕೊಳ್ಳುತ್ತೇನೆ. ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವುದು ಬ್ಯಾಕ್‌ವರ್ಡ್‌ಕ್ಲಾಸ್ ಬರುತ್ತದೆ ಎಂಬ ಬಗ್ಗೆ ಒಂದು ಯಾದಿ ಕೊಡಿ. ಇಲ್ಲದಿದ್ದರೆ ಆರ್ಬಿಟ್ರರಿ ಡಿಸಿಷನ್ ಆಗುತ್ತದೆಂದು ಸ್ಪಷ್ಟವಾಗಿ ಹೇಳುತ್ತೇನೆ. ವೆಂಕಟಸ್ವಾಮಿ ರಿಪೋರ್ಟ್ ಮಾಡುವಾಗ ಯಾವ ನಿಲುವು ತಾಳಿದ್ದಿರಿ ಅದನ್ನು ಈಗ ಏತಕ್ಕೆ ತಾಳುವುದಿಲ್ಲ ? ನಾನು ಪತ್ರಿಕೆಯಲ್ಲೂ ಓದಿದೆ, ಅನೇಕ ಜನರಿಂದಲೂ ಕೇಳಿದೆ. ಲಾ ಮಿನಿಸ್ಟರ್ ಆಗಲಿ ಅಬ್ದುಲ್ ನಜೀರ್ ಸಾಬ್ ಅವರಾಗಲೀ ಮತ್ತಿತರ ಅನೇಕ ಜನ ಮಂತ್ರಿಗಳಾಗಲೀ ಬ್ಯಾಕ್‌ವರ್ಡ್‌ಕ್ಲಾಸಸ್ ಬಗ್ಗೆ ಒಂದು ನಿಲುವು ತಾಳಿದ್ದರು ಆ ನಿಲುವು ಏತಕ್ಕೆ ಬದಲಾವಣೆಯಾಯಿತು ? ಅದೇ ನಿಲುವನ್ನು ತಳೆಯಿರಿ ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಯಾರಿಗೆ ಹೇಳುತ್ತೀರಿ ಅವರಿಗೆ ಮನ್ನಣೆ ಕೊಡಿ. ನಾಳೆ ದಿವಸ ೧ ಪರ್ಸೆಂಟಿಗಿಂತ ಕಡಿಮೆ ಇದ್ದವರಿಗೆ ಕೊಡಬೇಕು ಎಂದರೆ, ೦೦೧ ಪರ್ಸೆಂಟ್ ಇದ್ದವರಿಗೂ ಏತಕ್ಕೆ ಕೊಡಬಾರದು ಎಂದು ಕೇಳಬಹುದು. ಯಾವ ಸಮಾಜ ಕಡಿಮೆ ಇದೆ ಸಂಖ್ಯೆಯಲ್ಲಿ ಅದನ್ನು ಹುಡುಕುವುದಕ್ಕೆ ಹತ್ತುತ್ತೀರಿ ಹುಲ್ಕೋಟೆಯಲ್ಲಿ ತಮ್ಮ ಪ್ರಕಾರ ನೋಡಿದರೆ ಬ್ರಾಹ್ಮಣರೇ ಬ್ಯಾಕ್‌ವರ್ಡ್ ಆಗುತ್ತಾರೆ ಹುಲಕೋಟೆ ಊರನ್ನೇ ತೆಗೆದುಕೊಳ್ಳಿ. ಅಲ್ಲಿ ಯಾರು ಬ್ಯಾಕ್‌ವರ್ಡ್ ಇದ್ದಾರೆ ? ಅಲ್ಲಿ ಬ್ರಾಹ್ಮಣರು ಬ್ಯಾಕ್‌ವರ್ಡ್ ಇದ್ದಾರೆ ಅಲ್ಲಿನ ರಾಮದೇವರ ಗುಡಿ ಪೂಜೆ ಮಾಡುವಂತಹವರು ೨-೩ ಮನೆಯವರು ಮಾತ್ರ ಇದ್ದಾರೆ. ನಿಮ್ಮ ತತ್ವವನ್ನು ಅನುಸರಿಸಿ ಅವರನ್ನು ಬ್ಯಾಕ್‌ವರ್ಡ್ ಅಂತ ಕರೆಯೋಣವೇ ? ಇಲ್ಲಿ ಅವರನ್ನು ಮುಂದುವರಿದವರು ಅಂತ ಹೇಳುತ್ತೀರಿ. ಅಲ್ಲಿ ಅವರನ್ನು ಬ್ಯಾಕ್ ವರ್ಡ್ ಅಂತ ಕರೆಯುವುದಾದರೆ, ಇದು ಯಾವ ನ್ಯಾಯ. ಜೈನರನ್ನು ತೆಗೆದುಕೊಳ್ಳೋಣ. ನಿಮ್ಮ ಹಿರೇಕೆರೂರಿನಲ್ಲಿ ಜೈನರು ೧-೨ ಮನೆಯವರು ಇರಬಹುದು. ಹಾಗಾದರೆ ಅವರನ್ನು ಬ್ಯಾಕ್‌ವರ್ಡ್ ಅಂತ ಕರೆಯೋಣವೇ ? ಕುರುಬರು ಓದುವುದಕ್ಕೆ ಬರೆಯುವುದಕ್ಕೆ ಬರದಿದ್ದರೂ ಅವರನ್ನು ಹೆಚ್ಚು ಜನಾಂಗ ನಮ್ಮ ಭಾಗದಲ್ಲಿದೆ. ನಿಮ್ಮ ನೀತಿಯನ್ನು ಅನುಸರಿಸಿದ್ದೇ ಆದರೆ ಅವರನ್ನು ಆ ಭಾಗದಲ್ಲಿ ಬ್ಯಾಕ್‌ವರ್ಡ್ ಅಂತ ಕರೆಯುವುದಕ್ಕಾಗುವುದಿಲ್ಲ. ಜನತಾ ಸರ್ಕಾರ ಹೀಗೆ ಮಾಡುತ್ತಿದೆಯಲ್ಲಾ ಅಂತಲಾದರೂ ಹೇಳಬೇಡವೇ ? ಇದರ ಬಗ್ಗೆ ವಿಚಾರ ಮಾಡಿ ಅಂತ ಮಾತ್ರ ನಾವು ಕೇಳುತ್ತಿದ್ದೇವೆ. ರೂಲ್ ಮಾಡುವುದರಲ್ಲಿ ೧೫ ದಿವಸದೊಳಗೆ ಮಾಡುವುದಕ್ಕೆ ಬರುವುದಿಲ್ಲವೇ ? ಮಂಡಲ್ ಪಂಚಾಯಿತಿಗಳಲ್ಲಿ ನಿಮಗೆ ೧೦೦ ಕಡಿಮೆಯಾದರೆ ಹೋಗಲಿ ಬಿಡಿ. ಮಂಡಲ್ ಪಂಚಾಯಿತಿಯಲ್ಲಿ ಯಾರನ್ನು ನೀವು ನಾಮಿನೇಟ್ ಮಾಡುತ್ತೀರೋ ಅವರೇ ನಿಮಗೆ ಓಟು ಕೊಡುತ್ತಾರೆಂದು ತಿಳಿಯಬೇಡಿ. ಯಾರನ್ನು ನೀವು ನಾಮಿನೇಟ್ ಮಾಡುತ್ತೀರೋ ಅವರೇ ನಿಮಗೆ ಮೊದಲು ವೈರಿಗಳಾಗುವುದು. ಅವರೇ ನಾಲ್ಕು ಮಂದಿಗೆ ವಿರೋಧವಾಗಿರುತ್ತಾರೆ. ಅಂತಹವರನ್ನು ನಾಮಕರಣ ಮಾಡುವುದರಿಂದ ಹೆಚ್ಚು ಅನುಕೂಲ ನಮಗೇ. ನಿಮಗಿಂತಲೂ ನಮಗೇ ಹೆಚ್ಚು ಅನುಕೂಲ.

ಶ್ರೀ ಡಿ. ಜಿ. ಬಸವನಗೌಡ.—ನಿಮಗೆ ಅನುಕೂಲವಾಗುವುದಿದ್ದರೆ ಸುಮ್ಮನಿದ್ದುಬಿಡಿ.

ಶ್ರೀ ಕೆ. ಹೆಚ್. ಪಾಟೀಲ್.—ನಮಗೇ ಅನುಕೂಲವಾಗುತ್ತದೆಂಬುದಾಗಿ ಸಮ್ಮನಿರುವುದಾದರೆ ನಾವೆಲ್ಲರೂ ಅಲ್ಲಿಗೇ ಬಂದುಬಿಡಬಹುದಾಗಿತ್ತು. ನಾವು ಇಲ್ಲಿ ಕುಳಿತಿರುವ ಉದ್ದೇಶ ಏನೆಂದರೆ, ನೀವು ಏನು ತಪ್ಪು ಮಾಡುತ್ತೀರಿ ಅದನ್ನು ಎತ್ತಿ ತೋರಿಸುವುದಕ್ಕಾಗಿ ಇಲ್ಲಿ ಅದನ್ನು ಅವರಿಗೆ ತಿಳಿಸುತ್ತೇವೆ. ನೀವು ಅದನ್ನು ಕೇಳಿ ಸರಿಪಡಿಸಿಕೊಳ್ಳುವುದನ್ನು ಬಿಟ್ಟು, ನಮಗೆ ಮೆಜಾರಿಟಿ ಇದೆ ಪಾಸು ಮಾಡಿಕೊಳ್ಳುತ್ತೇವೆ ಅಂತ ಹೋಗುವುದಾದರೆ, ನಮ್ಮದು ಮೈನಾರಿಟಿ ಇದ್ದಾಗೂ ನಾವು ಮಾಡುವಂತಹ ಕೆಲಸವನ್ನು ಜನರಿಗೆ ತಿಳಿಸುವಂತಹವರು ಪ್ರೆಸ್ ಗ್ಯಾಲರಿಯಲ್ಲಿ ಕುಳಿತಂತಹವರು ಅದನ್ನವರು ಮೆಜಾರಿಟಿ ಇದೆ ಅಂತ ಪಾಸು ಮಾಡಿಕೊಂಡರು ಎಂಬುದಾಗಿ ಜನರಿಗೆ ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಹೇಳುವಂತಹ ಮಾತನ್ನು ಕೇಳಿ ಕೇಳಿ ಬೇಸತ್ತು ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಒಬ್ಬರೇ ಕುಳಿತಿದ್ದರು. ಈಗ ಅವರೂ ಎದ್ದು ಹೋಗಿಬಿಟ್ಟರು.

ಶ್ರೀ ಕೆ. ಎಚ್. ಪಾಟೀಲ್.—ಶ್ರೀಮಾನ್ ಲಕ್ಷ್ಮೀಸಾಗರ್‌ರವರ ಮನಸ್ಸಿನೊಳಗೆ ಕಳವಳ ಇದ್ದೇ ಇದೆ. ಕೆ.ಎಚ್. ಪಾಟೀಲ್‌ರವರು ಹೇಳಿದ್ದಕ್ಕೆ ಹೌದು ಅಂತ ಹೇಳಬೇಕು ಅಂತ ಇದ್ದರೂ ಅವರು ಅಧಿಕಾರದಲ್ಲಿರುವುದರಿಂದ ಇದರಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಇರಲಿ ಬಂದವರು ಬರಲಿ. ಹೋದವರು ಹೋಗಲಿ. ನೀವು ಒಬ್ಬರು ಇದ್ದರೆ ಸಾಕು (ಅಧ್ಯಕ್ಷರನ್ನು ಕುರಿತು) ನಿಮ್ಮ ಹೃದಯಕ್ಕೆ ಮುಟ್ಟಬೇಕು. ನಾವು ಹೇಳುವಂತಹದ್ದು. ಏಕೆಂದರೆ ನೀವು ನ್ಯಾಯಾ ಸ್ಥಾನದಲ್ಲಿರುವಂತಹವರು. ಇವರು ಹೊರಡಿಸಿದಂತಹ ನೋಟೀಫಿಕೇಷನ್ ಮೇಲೆ ನಾವು ಒಂದು ಅಬ್ಜಕ್ಷನ್ ಕೊಟ್ಟ ಮೇಲೂ ಸಹ, ಅದನ್ನು ನೋಡಿದ್ದೇವೆ, ವಿಚಾರ ಮಾಡಿದ್ದೇವೆ ಎಂಬ ಪರ್ಡಿಂಗೂ ಕೂಡ ಇದರಲ್ಲಿಲ್ಲ. ಲಾಯರ್ ಏನು ಮಾಡುತ್ತಾರೆ ಎಂದರೆ, ಶ್ರೀಮಾನ್ ಬಸವಣ್ಣಪ್ಪನವರೂ ಕೂಡ ಲಾಯರ್ ಅಂತ ಕಾಣುತ್ತೆ.

ಶ್ರೀ ಜಿ. ಬಸವಣ್ಣಪ್ಪ.—ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಉದ್ದುದ್ದ ಸ್ಟೇಟ್‌ಮೆಂಟ್‌ನ್ನು ಕೊಡುವಂತಹವರು ಬ್ಯಾಕ್ ವರ್ಡ್ ಕ್ಲಾಸ್ ಹಾಗೂ ಸಮಾಜಕಲ್ಯಾಣ ಇಲಾಖೆಯ ಜವಾಬ್ದಾರಿಯನ್ನು ಹೊತ್ತಂತಹವರು ಬ್ಯಾಕ್‌ವರ್ಡ್ ಕ್ಲಾಸ್ ಜನರ ಹಿತವನ್ನು ಕಾಪಾಡುವಂತಹವರು ಹೌದು. ಇಂತಹ ನೋಟೀಫಿಕೇಷನ್ ಏನು ಹೊರಡಿಸಿದ್ದಾರೆ ಅದರ ಬಗ್ಗೆ ಅಬ್ಜಕ್ಷನ್ ಕೊಟ್ಟರೂ ಕೂಡ ಸಂಬಂಧಪಟ್ಟವರನ್ನು ಕರೆದು ಪರಸ್ಪರ ವಿಚಾರ ಮಾಡುವ ಸೌಜನ್ಯ ಇಲ್ಲ ಈ ಸರ್ಕಾರಕ್ಕೆ. ಅದನ್ನು ಬಿಟ್ಟು ನಿಮ್ಮ ಹಿತವನ್ನು ನೋಡಿಕೊಳ್ಳುವುದರಲ್ಲೇ ಹೆಚ್ಚು ಆಸಕ್ತಿ ಇರುವಂತೆ ಕಾಣುತ್ತೆ. ನಿಮಗೆ ಮೆಜಾರಿಟಿ ಇದೆ ಅಂತ ಈ ಒಂದು ತಿದ್ದುಪಡಿಯನ್ನು ಪಾಸು ಮಾಡಿಕೊಂಡು, ಕಾಂಗ್ರೆಸ್‌ನವರಿಗೆ ಸಿಕ್ಕತಕ್ಕಂತಹ ಇನ್ನೂ ೫೦ ಮಂಡಲ್ ಪಂಚಾಯಿತಿಗಳನ್ನು ಕಸಿದುಕೊಳ್ಳಬೇಕು ಅಂತ ಇದ್ದರೆ, ನೀವು ಕಸಿದುಕೊಳ್ಳಿ. ನಾವು ಬೇಡ ಅಂತ ಹೇಳುವುದಿಲ್ಲ. ಇದನ್ನು ನೀವು ವಿಚಾರ ಮಾಡಿ ನೀವು ಮಾಡಿದ ದೃಷ್ಟಿಯೊಳಗೆ ಮೇಲಿನವರು ಮಾಡುವುದಕ್ಕೆ ಹೋದರೆ ನಿಮ್ಮ ಹಣೇಬರಹ ಏನಾಗುತ್ತದೆ ಎಂಬುದನ್ನು ನೋಡಿಕೊಳ್ಳಿ. ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನು ಅಷ್ಟಕ್ಕೆ ಬಿಡುತ್ತೇನೆ. ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಒಂದು ವಿಚಾರವನ್ನು ಕೇಳುತ್ತೇನೆ, ಯಾವುದೇ ಒಂದು ನಿರ್ಣಯವನ್ನು ಮಾಡುವಾಗ, ಅದು ಜ್ಯುಡಿಷಿಯಸ್ಸಾಗಿರಬೇಕು. ಅದು ಅವರಿಗೆ ಚೆನ್ನಾಗಿ ಗೊತ್ತಿದೆ. ಆ ರೀತಿ ಜ್ಯುಡಿಸಿಯಸ್ಸಾಗಿ ತೀರ್ಮಾನವನ್ನು ಮಾಡುವಾಗಲೂ ಯಾರಿಗಾದರೂ ತೊಂದರೆಯಾಗಿದ್ದರೆ, ಅವರನ್ನು ಕರೆದು ಅವರಿಗೆ ಮೊದಲು ಅವಕಾಶ ಕೊಡಬೇಕೆಂಬುದರ ಬಗ್ಗೆ ಅನೇಕ ಜಡ್ಜ್‌ಮೆಂಟ್‌ಗಳು ಹೈಕೋರ್ಟಿನಿಂದ ಬಂದಿವೆ. ಸುಪ್ರಿಂ ಕೋರ್ಟಿನಿಂದಲೂ ಬಂದಿವೆ, ಅಂತಹ ತೀರ್ಮಾನಗಳನ್ನು ಸರ್ಕಾರದ ಮಟ್ಟದಲ್ಲೂ ಮಾಡುವುದಕ್ಕೆ ಅವಕಾಶ ಇದೆ. ಮಂತ್ರಿಗಳು, ಒಬ್ಬ ಡಿ. ಸಿ. ಜ್ಯುಡಿಷಿಯಸ್ಸಾಗಿ ಹಿಯರ್ ಮಾಡದಿದ್ದರೆ, ಅದನ್ನು ಸೆಟ್ಸೈಡ್ ಮಾಡಿ, ಪ್ರಾಪರ್ ನಾಲೆಡ್ಜ್ ಇಲ್ಲ ಅಂತ ತಿಳಿದುಕೊಂಡು ಅದರ ವಿರುದ್ಧವಾಗಿ ನಾನೇ ಜಡ್ಜ್‌ಮೆಂಟ್‌ನ್ನು ಬರೆದಂತಹ ಅನೇಕ ಉದಾಹರಣೆಗಳು ಇವೆ. ಅಂತಹದ್ದನ್ನು ಮಾಡುವುದಕ್ಕೆ ಬದಲಾಗಿ ಮನಸ್ಸಿಗೆ ಬಂದಂತೆ ಕಾನೂನ್ನು ಬದಲಾವಣೆ ಮಾಡುವಂತಹದ್ದು ರೂಲ್ಸನ್ನು ಮಾಡುವಂತಹದ್ದು, ಕಾನೂನಿಗೆ ವಿರುದ್ಧವಾದ ರೂಲ್ಸನ್ನು ಮಾಡುವಂತಹದ್ದು. ರೂಲ್ಸ್ ಮಾಡುವಾಗ ನಾವು ಕೊಟ್ಟಂತಹ ಅಬ್ಜಕ್ಷನ್ ಹಿಯರ್ ಮಾಡದೆ ಮಾಡಿಫೈಡ್ ಇನ್‌ಟೆನ್ಷನ್‌ನಿಂದ ಮಾಡಿರುವಂತಹದ್ದು ಸರಿಯಲ್ಲ. ಮೊದಲು ಒಮ್ಮತ ಬಂತು. ಆಮೇಲೆ ಹಿಯರ್ರೀ ಮಾಡಿಲ್ಲ. ಎರಡನೇ ಸಾರಿ ಮಾಡುವಾಗ ಎಕ್ಸ್‌ಟ್ರಾ ಆರ್ಡಿನರಿ ಗೆಜೆಟ್ ಹೊರಡಿಸಿದಿರಿ. ಏಕೆ ಆರ್ಡಿನರಿ ಗೆಜೆಟ್‌ನಲ್ಲಿ

ಬರುವುದಕ್ಕೆ ಆಗುತ್ತಾ ಇರಲಿಲ್ಲವೇ? ನಿಮಗೆ ಅಧಿಕಾರ ಇದೆ ಎಂದು ನೀವು ಹೋಗಿ ಮಾಡುತ್ತೀರಿ. ಬೇಕಾದರೆ ಆಕ್ಟನ್ನೇ ತಿದ್ದುಪಡಿ ಮಾಡುತ್ತೀರಿ. ಅಸೆಂಬ್ಲಿ ಮುಗಿದ ಮೇಲೆ ಬೇಕಾದರೆ, ಇನ್ನೊಮ್ಮೆ ಬೇಕಾದರೆ ಉಳಿತು ಎಲೆಕ್ಟೆಡ್ ಮೆಂಬರ್ಸೇ ಬೇಡ, ೧೫–೧೫ ಜನ ಜನತಾ ಮಂದಿಯನ್ನೇ ನಾಮಿನೇಟ್ ಮಾಡುವುದಕ್ಕೆ ನಿಮಗೆ ಬರುತ್ತದೆ. ಇಲ್ಲಿ ಆಗದೇ ಇದ್ದರೆ ತಾವು ಆರ್ಡಿನೆನ್ಸ್ ಬೇಕಾದರೆ ಹೊರಡಿಸಬಹುದು. ಅದರಲ್ಲಿ ಯಾವುದೇ ಸಂದೇಹ ಇಲ್ಲ. ಆದರೆ ನಾಲ್ಕು ಕೋಟಿ ಜನ ನಮ್ಮನ್ನು, ನಿಮ್ಮನ್ನೂ ಕೂಡಿ ನೋಡುತ್ತಾರೆ, ನಾವು ಸುಮ್ಮನೆ ಕೂತರೆ ಆಗುವುದಿಲ್ಲ. ಗೌರ್ನರ್ ಅವರು ನನ್ನನ್ನು ಒಮ್ಮೆ ಕೇಳಿದರು. ಪಾಟೀಲರೇ ನೀವು ಯಾಕೆ ಎಂದು ಈ ಬಿಲ್ ತರುವಾಗ ಕಣ್ಣುಮುಚ್ಚಿ ಕುಳಿತಿರಿ ಬ್ಯಾಕ್‌ವರ್ಡ್ ಕ್ಲಾಸ್ ಜನರ ದೃಷ್ಟಿಯಿಂದ ನಾವು ಆ ಬಿಲನ್ನು ಒಪ್ಪಿದ್ದೇವೆ, ಆದರೆ ಇವತ್ತಿನ ದಿವಸದ ಪರಿಸ್ಥಿತಿಯನ್ನು ನೋಡಿದರೆ, ನಾವು ಆಗ ಸುಮ್ಮನೆ ಕೂತಿರಬಾರದಾಗಿತ್ತು. ಅವತ್ತೇ ನಾವು ಹೊಡೆದಾಡಬೇಕಾಗಿತ್ತು. ಇವತ್ತು ಇವರಿಗೆ ಎಷ್ಟು ಹೇಳಿದರೂ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಆಗಿದೆ. ಎಷ್ಟು ಹೇಳಿದರೂ ಇವರ ತಲೆಗೆ ಹೋಗುವುದಿಲ್ಲ. ಏಕೆಂದರೆ ಇವರಿಗೆ ಮೆಜಾರಿಟಿ ಇದೆ, ಏನು ನಾವು ಹೇಳಿದರೂ ಅವರು ಮಾಡುವುದನ್ನೇ ಮಾಡುತ್ತಾರೆ, ಇವತ್ತು ನಿಮ್ಮ ಕೆಲಸವನ್ನು ಜನ ನೋಡುತ್ತಾರೆ. ಜನ ನೋಡದೇ ಇದ್ದರೂ ಮೇಲೆ ಇರುವ ದೇವರು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. You will have to answer. ಮಾನ್ಯ ಲಕ್ಷ್ಮೀಸಾಗರ್ ಅವರಿಗೋಸ್ಕರ ಜನ ಬಾಯಿ ಮುಚ್ಚಿ ಕುಳಿತರೂ ಪರಮಾತ್ಮನ ಕಣ್ಣನ್ನು ತಾವು ತಪ್ಪಿಸುವುದಕ್ಕಾಗುವುದಿಲ್ಲ. ಬಡವರ ಹೆಸರಿನಲ್ಲಿ ಹಿಂದುಳಿದವರ ಹೆಸರಿನಲ್ಲಿ ಮುಂದುವರಿದ ಜನಾಂಗದವರನ್ನು ಕೂರಿಸುವ ಪ್ರಯತ್ನ ಮಾಡುತ್ತಿದ್ದೀರಿ. ಇವತ್ತು ತಾವು ಪಬ್ಲಿಕ್ ಮ್ಯಾಂಡೇಟ್ ಕೇಳಿ. ೪ ಕೋಟಿ ಜನರ ಹಿತವನ್ನು ಕಾಪಾಡತಕ್ಕ ವಿಷಯ ಇದು. ತಾವು ರಾಜೀನಾಮೆ ಕೊಟ್ಟು ಮತ್ತೆ ಜನರ ಬಳಿಗೆ ಹೋಗಿ ನೀವು ಗೆದ್ದು ಬಂದರೆ ನಾವು ಮನೆಗೆ ಹೋಗುತ್ತೇವೆ. ನೀವು ಹೆಚ್ಚು ಮಂದಿ ಗೆದ್ದು ಬಂದರೆ ನಿಮಗೆ ಲಾಭ ಆಗುತ್ತದೆ.

ಶ್ರೀ ಜಿ ಬಸವಣ್ಣಪ್ಪ.—ಮಾನ್ಯ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಆರ್ಟಿಕಲ್ ೩೪೦ ಪ್ರಕಾರ ಹಾವನೂರ್ ಆಯೋಗವನ್ನು ರಚಿಸಲಾಗಿ ೧೯೭೫ರಲ್ಲಿ ವರದಿಯನ್ನು ಪಡೆಯಲಾಯಿತು. ಆದರ ಆಧಾರದ ಮೇಲೆ ೧೯೭೭ರಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಮೀಸಲಾತಿ ಬಗ್ಗೆ ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಯಿತು ಆ ಒಂದು ಆಜ್ಞೆಯನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಹೋದಾಗ Sri Gundu Rao had given an undertaking in the Supreme Court ಅದರ ಆಧಾರದ ಮೇಲೆ ಸೆಕೆಂಡ್ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಅಪಾಯಿಂಟ್ ಆದ ವಿಷಯ ತಮಗೆ ಗೊತ್ತೇ ಇದೆ. ಎರಡನೇ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ವರದಿಯನ್ನು ೧೯೮೬ರಲ್ಲಿ ಸಲ್ಲಿಸಿದಾಗ ರಾಜ್ಯದಲ್ಲಿ ಯಾವ ರೀತಿಯ ಗೊಂದಲ ಆಯಿತು ಎಂಬುದು ನಿಮಗೂ ಗೊತ್ತಿದೆ ನಮಗೂ ಗೊತ್ತಿದೆ.

SRI MALLIKARJNUA M. KHARGE.—There are vested interest. What is your stand about them?

SRI M. VEERAPPA MOILY.—You have to resign from the Minister-ship of backward classes. You have no moral right to talk. ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಮಾತನಾಡುವ ನೈತಿಕ ಹಕ್ಕು ಇವರಿಗೆ ಇಲ್ಲ. ಯಾವ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ತಾವು ಮಾತನಾಡುತ್ತೀರಿ ತಾವು ಈ ಬಗ್ಗೆ ರಾಜೀನಾಮೆಯನ್ನು ಕೊಡಬೇಕಾಗುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ಆ ವರದಿ ಬಂದಮೇಲೆ ಆ ಬಗ್ಗೆ ಮುಖಂಡರು ಹಾಗೂ ಶಾಸಕರನ್ನು ಕರೆದು ವಿಚಾರ ವಿನಿಮಯ ಮಾಡಿ ತಾತ್ಕಾಲಿಕ ಮೀಸಲಾತಿ ಆಜ್ಞೆ ಹೊರಡಿಸಿದ್ದೇವೆ. ವೆಂಕಟಸ್ವಾಮಿ ಆಯೋಗದ ವರದಿ ಸಂಪೂರ್ಣ ಒಮ್ಮತದ ತೀರ್ಮಾನ ಅಲ್ಲ; ಅದರಲ್ಲಿ ಲೋಪದೋಷಗಳು ಇವೆ ಎಂದು ಅನೇಕ ಜನ ವಿರೋಧ ಪಕ್ಷದ ಸದಸ್ಯರೂ ಹೇಳಿದಾರೆ. ಈ ಭಾಗದ ಸದಸ್ಯರೂ ಹೇಳಿದ್ದಾರೆ ಆದ್ದರಿಂದ ಅವರುಗಳೆಲ್ಲರ ಅಭಿಪ್ರಾಯ ತೆಗೆದುಕೊಂಡು ತಾತ್ಕಾಲಿಕ ಆಜ್ಞೆಯನ್ನು ಹೊರಡಿಸಲಾಗಿದೆ. ಆಯೋಗದ ಕೆಲವು ಸದಸ್ಯರೂ ಅತೃಪ್ತಿ ವ್ಯಕ್ತಪಡಿಸಿದ್ದರು.

ಶ್ರೀ ಎಂ. ವೀರಪ್ಪ ಮೊಯ್ಲಿ.—ವೆಂಕಟಸ್ವಾಮಿ ಆಯೋಗದ ಸದಸ್ಯರ ಆಕ್ಷೇಪವನ್ನು ಯಾವಾಗ ತರಿಸಿದ್ದು? ಸಮಾಲೋಚನೆ ಮಾಡತಕ್ಕ ಸಮಯದಲ್ಲಿ you have invited them and made them to write those objections The Government preferred them and abetted those members to write those objections and give it to the commission. Subsequently you have not inoroporated in the report. These people have abetted to demolish that report.

SRI G. BASAVANNAPPA.—We have safeguarded the interest of backward classes: we have given more weightage to them.

ಶ್ರೀ ಎಂ. ವೀರಪ್ಪ ಮೊಯ್ಲಿ.—ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಇಲ್ಲಿ ಕುಳಿತು ಮಾತನಾಡುವುದಕ್ಕೆ ನನ್ನ ರಕ್ತ ಕುದಿಯುತ್ತದೆ. Backward classes are guinea pigs in the hands of these people. ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಏನು ಇವರು ವ್ಯಾಖ್ಯಾನ ಮಾಡುತ್ತಾರೆ? ಸದಸ್ಯರ ಆಬ್ಜೆಕ್ಷನ್ ತೆಗೆದು ಕೊಳ್ಳುವುದು ರಿಪೋರ್ಟ್ ಬಂದಮೇಲಾ? ಮುಖ್ಯ ಮಂತ್ರಿಗಳು ಅವರನ್ನು ಕರೆಸಿ ಆಬ್ಜೆಕ್ಷನ್ ಬರೆಯಿಸಿ ಅದನ್ನು ಎಲ್ಲಾ ಸದಸ್ಯರಿಗೂ ಹಂಚತಕ್ಕ plan you have done. These people have abetted to demolish that report.

ಅಧ್ಯಕ್ಷರು.—ಅವರು ಏನು ಹೇಳುತ್ತಾರೆ ಕೇಳಿ.

(INTERRUPTION)

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರದು ಆಬ್ಜೆಕ್ಷನ್ ಏನು? ಇವರು ಏನು ಮಾಡಿದ್ದಾರೆ ಸುಮ್ಮನೆ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಮಾತನಾಡುತ್ತಾರೆ;

ಶ್ರೀ ಜಿ. ಬಸವಣ್ಣಪ್ಪ.—ತಾತ್ಕಾಲಿಕವಾಗಿ ಮೀಸಲಾತಿಯನ್ನು ಮೂರು ವರ್ಷಗಳವರೆಗೆ ಮಾಡಿದ್ದೇವೆ. We have given more weightage to them. ಎ,ಬಿ,ಸಿ,ಡಿ, ಗುಂಪು ಮಾಡಿದ್ದೇವೆ. We have safeguarded the interests of these backward classes people.

SRI M. VEERAPPA MOILY.—Backward classes are guinea pigs in the hands of these people.

ಶ್ರೀ ಜಿ. ಬಸವಣ್ಣಪ್ಪ.—ನಿಮಗೊಬ್ಬರಿಗೆ ಮಾತ್ರ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಅಭಿಮಾನವಿಲ್ಲ. ಅವರು ತಿಳಿದುಕೊಂಡಿದ್ದಾರೆ ನಮಗೊಬ್ಬರಿಗೆ ಅಭಿಮಾನವಿದೆ ಎಂದು. ಅದು ತಪ್ಪು. ನಿಮಗಿಂತ ಹೆಚ್ಚಿಗೆ ಅಭಿಮಾನ ಬೇರೆಯವರಿಗೆ ಇಲ್ಲವೇ? ನಾವು ಅಂತಹ ಪರಿಸ್ಥಿತಿಯಲ್ಲಿ ಆಕ್ಟ್ ಮಾಡಿದ್ದೇವೆ. ರಾಜ್ಯದ ಜನತೆ ಅರ್ಥ ಮಾಡಿಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಏತಕ್ಕೆ ಸಮರ್ಥನೆ ಮಾಡಿಕೊಳ್ಳುತ್ತೀರಿ? ನಿಮ್ಮ ಮನಸ್ಸು ಒಪ್ಪುತ್ತಾ ಇಲ್ಲ. ಏತಕ್ಕೆ ಸುಮ್ಮನೆ ಅನ್‌ನೆಸಸರಿಯಾಗಿ ಡಿಫೆಂಡ್ ಮಾಡಿಕೊಳ್ಳುತ್ತೀರಿ?

SRI G. BASAVANNAPPA.—We have given more weightage to them. ಲಿಂಗಾಯಿತರು ಎಂದು ಹೇಳುತ್ತಾರೆ, ಅವರಿಗೆ ಕೇವಲ ೪೦ ಪರ್ಸೆಂಟ್ ರಿಸರ್ವೇಷನ್ ಕೊಟ್ಟಿದ್ದೇವೆ. ರೂರಲ್ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ೧೮% ರಷ್ಟು ಮೀಸಲಾತಿಯನ್ನು ಕೊಟ್ಟಿದ್ದೇವೆ. 'ಬಿ' ಗುಂಪಿನವರಿಗೆ ಶೇಕಡ ೭೦ ರಷ್ಟು ರಿಸರ್ವೇಷನ್, 'ಸಿ' ಗುಂಪಿನವರಿಗೆ ಶೇಕಡ ೬೦ ರಷ್ಟು 'ಡಿ' ಗುಂಪಿನವರಿಗೆ ಶೇಕಡ ೪೦ ರಷ್ಟು ರಿಸರ್ವೇಷನ್ ಕೊಟ್ಟಿದ್ದೇವೆ. We have given more weightage to these backward classes people. It is only an interim order of the Government. ಥರ್ಡ್ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಅಪಾಯಿಂಟ್‌ಮೆಂಟ್ ಮಾಡುತ್ತೇವೆ, ಆಗ ವೈಜ್ಞಾನಿಕವಾದ ವರದಿಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ ಎಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ಈ ವಿಷಯ ಇಷ್ಟು ಏತಕ್ಕೆ ಬಿರುಸಾಗಿದೆ ಅಂದರೆ ಬ್ಯಾಕ್‌ವರ್ಡ್ ಕ್ಲಾಸ್ ಮಂತ್ರಿಗಳಾಗಿ. ಬ್ಯಾಕ್‌ವರ್ಡ್ ಕ್ಲಾಸ್‌ನವರ ಬಗ್ಗೆ ಉತ್ತರ ಹೇಳಲಿಕ್ಕೆ ಹೊರಟಿದ್ದಾರೆ. ಅವೊತ್ತು ಮಾನ್ಯ ದೇವರಾಜ ಅರಸ್‌ರವರು ಏನು ನಿಲುವು ತಾಳಿದ್ದರು ಎನ್ನುವುದು ಬಹಳ ಮುಖ್ಯ. ಮಾನ್ಯ ರಾಮಕೃಷ್ಣ ಹೆಗಡೆಯವರ ನಿಲುವು ಏನು? ಅವರಿಗೇನೂ ಸಾಮಾನ್ಯ ಜನರ ಮೇಲೆ ದ್ವೇಷವಿಲ್ಲ. ಮಾನ್ಯ ಬಸವಣ್ಣಪ್ಪನವರು ಮತ್ತು ಮಾನ್ಯ ಲಕ್ಷ್ಮೀಸಾಗರ್‌ರವರು ಏನೊಂದು ನಿಲುವನ್ನು ಎತ್ತಿಹಿಡಿದು ಮಾತನಾಡಿದರು, ಆದರೆ ಮುಂದೆ ಮಂತ್ರಿ ಪದವಿ ಉಳಿಸಿಕೊಳ್ಳುವ ಸಲುವಾಗಿ ಅದನ್ನು ಕೈ ಬಿಟ್ಟರು. ಅದು ಏನೇ ಇರಲಿ. ಪಕ್ಷದ ಹಿತ ಅಂದಮೇಲೆ ಅದನ್ನು ನೋಡಬೇಕು. ರಾಜಕೀಯ ಜೀವನದೊಳಗೆ ತಮ್ಮ ಮಂತ್ರಿಮಂಡಲ ಹೇಗೆ ನಡೆಯಬೇಕು, ಹೇಗೆ ಉಳಿಸಿಕೊಳ್ಳಬೇಕು, ಯಾರು ಮೆಜಾರಿಟಿ ಇರುತ್ತಾರೆ ಬಹು ಪ್ರಭಲವಾಗಿರುತ್ತಾರೆ ಅವರ ಕಡೆಗೆ ಒಲವು ಹೋಗುವುದು ಸ್ವಾಭಾವಿಕ. ಒಲವಿಗಾಗಿ ಬ್ಯಾಕ್‌ವರ್ಡ್ ಕ್ಲಾಸ್‌ನ ತತ್ವಗಳು ಬದಲಾವಣೆ ಆಗುತ್ತವೆ. ಆವೊತ್ತು ಏನೇ ಹೇಳಿದ್ದರೂ ಇವತ್ತು ಅದು ತಪ್ಪು ಆಗಿದ್ದರೂ ಅದರ ಮೇಲೆ ಸ್ಟಿಕಾನ್ ಆಗಬೇಕಾಗುತ್ತದೆ. ಪರ್ಸೆಂಟೇಜ್ ಬಗ್ಗೆ ಹೇಳುವುದಾದರೆ, ಬಹುಸಂಖ್ಯಾತ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಬಹಳ ಅನ್ಯಾಯವಾಗುತ್ತದೆ. ಉದಾಹರಣೆಗೆ, ಕುರುಬರನ್ನು ತೆಗೆದುಕೊಳ್ಳಿ, ಕುರುಬರು ಎಲ್ಲಾ ಊರುಗಳಲ್ಲಿಯೂ ಇದ್ದಾರೆ. ಒಂದು ಜಿಲ್ಲೆಯಲ್ಲಿ ೧ ಪರ್ಸೆಂಟ್ ತೆಗೆದುಕೊಳ್ಳಬೇಕೆಂದು ಇದೆ. ಹಾಗೆ ಮಾಡಿದರೆ ಕುರುಬರ ರೆಪ್ರಸೆಂಟೇಷನ್ ಹೋಗುತ್ತದೆ. ಅವರಿಗೆ ಬಹಳ ಅನ್ಯಾಯವಾಗುತ್ತದೆ. ಹೆಚ್ಚು ಹಿಂದುಳಿದವರು ಅಂದರೆ ಕುರುಬರು. ಇವತ್ತು ಕೂಡ ಅವರು ನೆಲ ತಗ್ಗು ಮಾಡಿ ಊಟ ಮಾಡುವ ಜನರು ಇದ್ದಾರೆ. ಅಧ್ಯಕ್ಷರೇ, ತಮಗೆ ಗೊತ್ತಿದೆ ಹೊಲದೊಳಗೆ ನೆಲ ತಗ್ಗು ಮಾಡಿ ಮಜ್ಜಿಗೆ ಅಂಬಲಿ ಉಣ್ಣುತ್ತಾರೆ. ಈ ಜನರನ್ನು ಬಿಟ್ಟುಕೊಟ್ಟು, ಬ್ಯಾಕ್‌ವರ್ಡ್ ಕ್ಲಾಸ್‌ನವರ ಹಿತ ಮಾಡುತ್ತೇವೆಂದರೆ ಹೇಗೆ? ಒಬ್ಬರಿಗಿಂತ ಇಬ್ಬರನ್ನು ವಿಚಾರ ಮಾಡಿದರೆ ಅಭಿಪ್ರಾಯ ಉಳಿಯುತ್ತದೆ. ಅದಕ್ಕೆ ನೀವು ಅವಕಾಶ ಕೊಡದೆ, ಇವತ್ತು ಪಾಸ್ ಮಾಡುವುದು, ನಾಳೆ ಮುಂಜಾನೆ ಇದನ್ನು ವಿರೋಧ ಮಾಡಿದರು ಎಂದು ಹೇಳುವುದಿಲ್ಲ. ನೀವು ಈ ರೀತಿ ಮಾಡಿದರೆ ನೀವು ಯಾವ ರೀತಿ ನಮ್ಮ ದೇಶಕ್ಕೆ ನಮ್ಮ ಜನತೆಗೆ ಹಾಗೂ ನಮ್ಮ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಹಿತ ಮಾಡುತ್ತೀರಿ ಎಂದು ಪ್ರಶ್ನೆ ಕೇಳುತ್ತೇನೆ. ಮಾನ್ಯ ಬಸವಣ್ಣಪ್ಪನವರು ಬಹಳ ಚೆನ್ನಾಗಿ ಹೇಳಿದರು. ಹಾವನೂರು ಕಮಿಟಿ ನೇಮಿಸಿದ್ದೆವು. ಅವರ ವರದಿಯ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಇನ್ನೊಂದು ಆಯೋಗ ನೇಮಕ ಮಾಡಿಯೆಂದು ಹೇಳಿದ್ದಾರೆಂದು ಹೇಳುತ್ತಿದ್ದರು. ನಾವು ಕೂಡ ಕೆ.ಪಿ.ಸಿ.ಸಿ. (ಐ) ವತಿಯಿಂದ ಮಾನ್ಯ ಗೋಪಿನಾಥ್ ಸಾಂದ್ರ ಕಮಿಟಿಯನ್ನು ನೇಮಕ ಮಾಡಿ ಅವರೊಂದು ರಿಪೋರ್ಟ್ ಕೊಟ್ಟಿದ್ದಾರೆ. ಆ ರಿಪೋರ್ಟ್ ಪ್ರಕಾರ ಮಾಡಿದ್ದರೆ ಇಷ್ಟು ಗೊಂದಲವಾಗುತ್ತಿರಲಿಲ್ಲ. ಹಾವನೂರು ಕಮಿಷನ್ ರಿಪೋರ್ಟ್‌ನಲ್ಲಿ ಬಹಳ ಜನರಿಗೆ ಮೀಸಲಾತಿಯನ್ನು ಕೊಟ್ಟರು. ಯಾರ್‍ಯಾರು ಬ್ಯಾಕ್‌ವರ್ಡ್ ಅಲ್ಲದವರು ಇದ್ದಾರೆ ಅವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಅದನ್ನು ಬದಲಾವಣೆ ಮಾಡಲಿಕ್ಕೆ ಪೂರ್ಣ ಸರ್ವೆ ಮಾಡಿಯೆಂದು ಹೇಳಿದರು.

ಸುಪ್ರಿಂ ಕೋರ್ಟ್ ಆದೇಶ ಪ್ರಕಾರ ಮಾಡಿದ್ದು ನಿಜ. ಅದು ಮಾಡಿದಮೇಲೆ ವೆಂಕಟಸ್ವಾಮಿ ಆಯೋಗದ ರಿಪೋರ್ಟ್ ಬಂತು. ಅಲ್ಲಿ ಬದಲಾವಣೆ ಮಾಡಬೇಕಾದರೆ ಕರೆಸಿ ಕೇಳುತ್ತೇವೆ. ಎಂದು ಹೇಳಿದಿರಿ, ಎಲ್ಲಾ ಕಡೆ ಅಜಿಟೇಷನ್ ನಡೆದಮೇಲೆ. ಬದಲಾವಣೆ ಮಾಡುವ ಸಲುವಾಗಿ ಅವತ್ತು ಕರೆದು ಕೇಳಿದಂಥ ಜನ ಇವತ್ತು ಏಕೆ ಕೇಳಲಿಲ್ಲ ? ಇವತ್ತು ಏನಾಗಿದೆ ನಿಮಗೆ ? ಈ ದೃಷ್ಟಿಯಿಂದ ಆಲೋಚನೆ ಮಾಡಬೇಕು. ಹಠಕ್ಕೆ ಬಲಿಬೀಳಬೇಡಿ. ನಾನು ಶ್ರೀ ರಾಮಕೃಷ್ಣ ಹೆಗಡೆಯವರನ್ನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ ಏನೆಂದರೆ ಇದನ್ನು ವಿತ್‌ಡ್ರಾ ಮಾಡಬೇಕು. ದೇಶದ, ನಾಡಿನ ಹಿತದೃಷ್ಟಿಯಿಂದ ನೋಡಬೇಕೇ ಹೊರತು ನಿಮ್ಮ ದೃಷ್ಟಿಯಿಂದ ಅಲ್ಲ. ಹಿರಿಯ ಸದಸ್ಯರಾದ ಡಾ. ತಿಮ್ಮೇಗೌಡರು ಒಂದು ಮಾತನ್ನು ಹೇಳಿದರು. ಪಕ್ಷದ ವತಿಯಿಂದ ಮಾಡಬೇಕು, ಪಕ್ಷದ ಹಿತಕ್ಕಾಗಿ ಮಾಡಬೇಕು ಎಂದು. ಪಕ್ಷದ ಹಿತವನ್ನು ಕಾಪಾಡಬೇಕಾಗುತ್ತದೆ, ಬೇಡವೆಂದು ನಾನು ಹೇಳುವುದಿಲ್ಲ. ನಾವಾಗಲೀ, ನೀವಾಗಲೀ ಪಕ್ಷದ ಹಿತವನ್ನು ಕಾಪಾಡಬೇಕು. ಆದರೆ ಪಕ್ಷಕ್ಕಾಗಿ ಸರ್ಕಾರದ ಉಪಯೋಗ ಮಾಡತಕ್ಕದ್ದು ಸರಿ ಅಲ್ಲ. ಇವತ್ತು ನೀವು ಬಂದಂಥ ಗ್ರಾಂಟನ್ನು ನಿಮ್ಮ ಪಕ್ಷದವರಿಗೇ ಮಾತ್ರ ಹಂಚಿಕೆ ಮಾಡುವುದಕ್ಕೆ ಆಗುತ್ತದೆಯೇ? ಕೇಂದ್ರದಲ್ಲಿ ನಮ್ಮ ಸರ್ಕಾರ ಇದೆ. ನಾವು ನಮ್ಮವರು ಏನು ಇದ್ದಾರೆ, ಅಂತಹ ಕಡೆ ಮಾತ್ರ ಗ್ರಾಂಟನ್ನು ಕೊಡಬೇಕೆಂದು ಶ್ರೀ ರಾಜೀವಗಾಂಧಿಯ

ವರಿಗೆ ಹೇಳುವುದಕ್ಕೆ ಆಗುತ್ತದೆಯೇ? ಅಲ್ಲಿ ರಾಜೀವಗಾಂಧಿಯವರ ಮನೆ ಅಲ್ಲ, ಇಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರ ಮನೆಅಲ್ಲ. ಸಾರ್ವಜನಿಕರಿಗೆ ಇದು ವಿತರಣೆ ಆಗಬೇಕು. ಯಾರಿಗೇ ಬೇಕೋ ಅವರಿಗೆಕೊಡಬಹುದು, ಏಕೆಂದರೆ ನಿಮಗೆ ಡಿಸ್ಕ್ರಿಷನರಿ ಪವರ್ ಇದೆ. ನೀವು ಮಾಡಿದ್ದು ದುರುಪಯೋಗ ಆಗುತ್ತಿದೆ ಎಂದುಕಂಡುಬಂದರೆ ಕೋರ್ಟು ಇದೆ. ಆದರೆ ನಾನು ಸಚಿವರ ನಜರಿಗೆ ಒಂದು ವಿಷಯವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಸರ್ಕಾರದ ಪರವಾಗಿ ಸಹಾಯ ಮಾಡುವುದಕ್ಕೆ ಅಡ್ವೋಕೇಟ್ ಜನರಲ್ ಇದ್ದಾರೆ. ಅನೇಕರು ಜಿಲ್ಲಾ ಪರಿಷತ್ ಸಲುವಾಗಿ ಕೋರ್ಟಿಗೆ ಹೋದರು, ನೂರಾರು ಅರ್ಜಿಗಳು ಹೋದವು. ಶ್ರೀ ಲಕ್ಷ್ಮೀಸಾಗರ್ ಅವರೇ, ಇಲ್ಲಿ ಕೇಳಿ. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಯನ್ನು ಚಾಲೆಂಜ್ ಮಾಡಿ ಹೈಕೋರ್ಟಿಗೆ ಬಹಳ ಜನರು ಹೋದರು. ನಿಮ್ಮ ಅಡ್ವೋಕೇಟ್ ಜನರಲ್ ಅವರು ಹಾಜರಿದ್ದರು ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಸ್ಟೇ ಕೊಡಬಾರದು ಎಂದು ಟೈಮ್ ಕೇಳಿದ್ದಾರೆ. ಏಕೆ ಕೇಳಬೇಕಾಗಿತ್ತು ಅವರು ? ನೂರಾರು ಅರ್ಜಿಗಳು ಅಡ್ಮಿಷನ್ ಆದಮೇಲೆ, ಎಲೆಕ್ಷನ್ ಮುಗಿದು ಇಷ್ಟು ದಿನಗಳ ತನಕ ಇಟ್ಟರೆ ಯಾರು ನೋಡಬೇಕು ? ತಮ್ಮ ಕೆಲಸವಲ್ಲವಾ ಇದು ? ಹೈಕೋರ್ಟಿನಲ್ಲಿ ಎಷ್ಟು ಕೇಸ್‌ಗಳು ನಿಖಾಲಿ ಆಗುವುದಕ್ಕೆ ಇದೆ ? ಏನು ತೊಂದರೆ ಇದೆ, ಇನ್ನಷ್ಟು ಕೇಸುಗಳು ಬೇಕಾ, ಬೆಂಚ್ ಕಡಿಮೆ ಬೇಕಾ, ಬೆಂಚ್ ಬೇಕಾ ಎಂದು ವಿಚಾರ ಮಾಡುವುದು ತಮ್ಮ ಕೆಲಸ ಅಲ್ಲವೇನು ? ಅಡ್ವೋಕೇಟ ಜನರಲ್ ಅವರೇ ಟೈಮ್ ಬೇಕು ಎಂದು ತೆಗೆದುಕೊಂಡರೆ ಹೇಗೆ ? ಕಡೆಗೆ ನೋಟಿಫಿಕೇಷನ್ ಅನ್ನು ಟೆಲಿಗ್ರಾಂ ಮಾಡಿ ಕಳಿಸುತ್ತಾರೆ. ಜಿಲ್ಲಾ ಪರಿಷತ್‌ಗಳಿಗೆ ಆದೇಶ ಕೊಡುತ್ತಾರೆ, ಕಡೆಯ ಒಂದು ಸಾಲನ್ನು ಮಾತ್ರ ಓದುತ್ತೇನೆ.—

> "Please also note that nominations are intended to be made before the Mandal Pradhan and Upa-pradhan elections"

ಏತಕ್ಕೆ ಕೊಡಬೇಕಾಗಿತ್ತು ? ಅಷ್ಟರವರೆಗೆ ಆ್ಯಕ್ಟ್‌ನೊಳಗೆ ಮೀಟಿಂಗ್ ಕರೆಯುವವರು ಯಾರು ಎಂಬುದು ವಿಕ್ಷಿಪ್ತವಾದದ್ದು. ಇಷ್ಟು ದಿವಸ ನಾನು ನೋಡಿರಲಿಲ್ಲ, ಮೊನ್ನೆ ನೋಡಿದೆ. ಮೊದಲನೇ ಜನರಲ್ ಮೀಟಿಂಗ್. ಎರಡನೇ ಜನರಲ್ ಮೀಟಿಂಗ್‌ಗೆ ಡೇಟ್ ಫಿಕ್ಸ್ ಮಾಡುವ ಅಧಿಕಾರ ಅಧ್ಯಕ್ಷರಿಗೂ ಇಲ್ಲ, ಡೆಪ್ಯುಟಿ ಕಮೀಷನರ್‌ಗೂ ಇಲ್ಲ. The first general body meeting will have to fix the date cf future general meeting. ಇದರೊಳಗೆ ಏನಾದರೂ ಅಮೆಂಡ್ ಮಾಡುವುದಾದರೆ ಅಧ್ಯಕ್ಷರು ಸಬ್ಸಿಕ್ವೆಂಟ್ ಡೇಟ್‌ಗೆ ಪೋಸ್ಟ್‌ಪೋನ್ ಮಾಡಬಹುದು. ಇವರು ಏನು ಮಾಡಿದ್ದಾರೆ, ಎಂದರೆ ಮೀಟಿಂಗ್‌ನ್ನೇ ರದ್ದು ಮಾಡುವುದಕ್ಕೆ ಹೊರಟ್ಟಿದ್ದಾರೆ.

ನೀವು ಉಪಯೋಗ ಮಾಡಿಕೊಳ್ಳಿ. ಡೆಪ್ಯೂಟಿ ಕಮೀಷನರ್ ಹುದ್ದೆಯಲ್ಲಿರತಕ್ಕ ಜನ, ಜನರನ್ನು ರಕ್ಷಣೆ ಮಾಡತಕ್ಕಂಥ ಜನ, ಅವರೇ ಈ ರೀತಿ ಮಾಡಿದರೆ ಹೇಗಾದೀತು ಎಂಬುದನ್ನು ಯೋಚನೆ ಮಾಡಬೇಕೆಂಬ ವಿಚಾರವನ್ನು ಮಾನ್ಯ ಲಕ್ಷ್ಮೀಸಾಗರ್ ಅವರ ನಜರಿಗೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಹಿಂದೆ ಬ್ರಿಟೀಷರ ಕಾಲದಲ್ಲಿ, ಮಹಾತ್ಮಗಾಂಧಿಯವರ ಮೇಲೆ ಕೋರ್ಟ್‌ನಲ್ಲಿ ಕೇಸ್ ಹಾಕಿದರು. ಆಗ ಅಲ್ಲಿನ ಜಡ್ಜ್ ಅವರಿಗೆ ಶಿಕ್ಷೆ ಕೊಟ್ಟರು. ಈ ತರಹ ಶಿಕ್ಷೆ ಕೊಡುವಾಗ, ಅವರು ಏನು ಹೇಳಿದರು ಎಂದರೆ, ನಾನು, ನಿಮಗೆ ಶಿಕ್ಷೆ ಕೊಡುವುದರಿಂದ, ನಿಮ್ಮ ಮಟ್ಟವನ್ನು ಕಡಿಮೆ ಮಾಡುವುದಕಾಗುವುದಿಲ್ಲ. ನನ್ನ ದೃಷ್ಟಿಯಲ್ಲಿ ನೀವು ಇನ್ನೂ ಉಚ್ಚಮಟ್ಟಕ್ಕೆ ಹೋಗುತ್ತೀರಿ. ಸಾರ್ವಜನಿಕರ ದೃಷ್ಟಿಯಲ್ಲೂ ತಾವು ಉನ್ನತಮಟ್ಟಕ್ಕೆ ಹೋಗುತ್ತೀರಿ. ಆದರೆ ನಿಮಗೆ ಶಿಕ್ಷೆ ಕೊಡುವುದಕ್ಕೆ ಮನಸ್ಸಿಲ್ಲದಿದ್ದರೂ ಕೂಡ, ಕುಳಿತಿರತಕ್ಕಂಥ ಸ್ಥಾನದ ಪ್ರಭಾವ, ಹಾಗೂ ಒತ್ತಡದಿಂದ ನಾನು ನಿಮಗೆ ಶಿಕ್ಷೆ ಕೊಡಬೇಕೆಂದು ಹೇಳಿ, ಜಡ್ಜ್‌ಮೆಂಟ್ ಬರೆದು ಮಾರನೇ ದಿವಸವೇ ರಾಜೀನಾಮೆ ಕೊಟ್ಟು ಹೋದರು. ಇಂಥದ್ದು ಒಂದಾದರೂ ತಾವು ಮಾಡಿ. ಮಾನ್ಯ ಲಕ್ಷ್ಮೀಸಾಗರ್ ಅವರೂ, ಮಾನ್ಯ ಬಸವಣ್ಣಪ್ಪನವರು, ರಾಮಕೃಷ್ಣ ಹೆಗಡೆಯವರಿಗೆ ಸ್ಪಷ್ಟವಾಗಿ ಹೇಳಬೇಕು. ನೀವು ಮಾಡುತ್ತಿರುವ ಕೆಲಸವನ್ನು ನೋಡಿದಾಗ, ಜನತೆಯ ಕಲ್ಯಾಣದ ವಿರುದ್ಧ ಬ್ಯಾಕ್‌ವರ್ಡ್‌ಕ್ಲಾಸ್‌ನವರ ವಿರುದ್ಧ ಕೆಲಸವಾಗಿದೆ. ನೀವು ನಾಮಿನೇಷನ್ ಮಾಡುತ್ತೇವೆಂದು ಹೇಳುತ್ತೀರಿ. ಇವತ್ತು ಇದು ಯಾವುದನ್ನೂ ಹಾಕದೆ ಬ್ಯಾಕ್‌ವರ್ಡ್‌ಕ್ಲಾಸ್ ನಾಮಿನೇಟ್ ಮಾಡುವುದಕ್ಕೆ ಬರುತ್ತಿತ್ತು. ನೀವು ಇವೊತ್ತು ಅಲ್ಲಾಸಲ್ಲದ

ಮಾತುಗಳನ್ನು ಹಾಕಿ ಯಾರಿಗೂ ಹಿತವಾಗದಂತೆ ಮಾಡುತ್ತಿದ್ದೀರಿ. ಇದರಿಂದ ದೇಶಕ್ಕೆ, ರಾಜ್ಯಕ್ಕೆ ಘಾತವಾಗುತ್ತದೆ. ಇದನ್ನು ತಪ್ಪಿಸಬೇಕು. ನೀವು ಏನು ಕೀರ್ತಿ ತಂದಿದ್ದೀರಿ ಎಂದರೆ, ಎಲ್ಲಿ ಪಾರ್ಟಿ ಇರಲಿಲ್ಲ, ಅಲ್ಲಿ ಪಾರ್ಟಿ ತರುವುದಕ್ಕೆ ಮಾಡಿದ್ದೀರಿ. ಇಷ್ಟು ಮಾತುಗಳನ್ನು ಹೇಳಿ, ನಿಜವಾಗಿಯೂ ಎರಡನೇ ನೋಟಿಫಿಕೇಷನ್ ಮಾಡುವಾಗ, ಮೊದಲನೆಯ ನೋಟಿಫಿಕೇಷನ್ ಏನಿತ್ತು, ಅದಕ್ಕಿಂತ ಹೆಚ್ಚಿಗೆ ಸೇರಿಸಿದ್ದೀರಿ. ಎರಡನೆಯದಲ್ಲಿ ಏಕೆ ನೀವು ಬದಲಾವಣೆ ಮಾಡಿದಿರಿ. ನಾವು ಜನರಿಂದ ಸಲಹೆ ತೆಗೆದುಕೊಂಡಿದ್ದೇವೆ ಎಂದು ಹೇಳಬಹುದು. ಒಂದುವೇಳೆ ಸಲಹೆ ತೆಗೆದುಕೊಂಡಿದ್ದರೆ ಇಲ್ಲಿ ಬರೆಯ ಬೇಕಿತ್ತು. "We have heard the public ; We have taken the suggestions of so and so" ಎಂದು. ಇದು ನಿಜವಾಗಿಯೂ ನಾನು ಯಾವ ಶಬ್ದದಿಂದ ಕರೆಯಬೇಕೋ ನನಗಂತೂ ಗೊತ್ತಿಲ್ಲ. ಕರ್ನಾಟಕ ರಾಜ್ಯದ ಘನತೆ ಗಾಂಭೀರ್ಯಗಳಿಗೆ ಸಲ್ಲತಕ್ಕದ್ದಲ್ಲವೆಂದು ಹೇಳಿ ಪ್ರಬಲವಾಗಿ ಇದನ್ನು ನಾನು ವಿರೋಧ ಮಾಡುತ್ತೇನೆ. ನಮಗೇನಾದರೂ ಶಕ್ತಿ ಇದ್ದರೆ ಇದಕ್ಕಿಂತ ಇನ್ನೂ ಸ್ವಲ್ಪ ಮುಂದೆ ಹೋಗಿ ವಿರೋಧ ಮಾಡಬಹುದಿತ್ತು. ಇಷ್ಟು ಮಾತನ್ನು ಹೇಳಿ, ಕರ್ನಾಟಕದ ಜನತೆಗೆ ನಮ್ಮ ಕೈಲಾದ ಎಲ್ಲಾ ಶಕ್ತಿಯನ್ನು ವ್ಯಯ ಮಾಡುತ್ತೇವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಈಗ ಅಧಿಕಾರ ಮಾಡತಕ್ಕಂಥ ಜನತಾ ಪಕ್ಷ ಬಹುಶಃ ಅಧಿಕಾರಕ್ಕೆ ಬರಬೇಕಾಗಿದ್ದರೆ, ಈ ರಾಜ್ಯದ ಹಿಂದುಳಿದ ವರ್ಗದ ಜನರ ಆಶೀರ್ವಾದ ಬಹಳ ಮುಖ್ಯವಾಗಿತ್ತು ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ತಂದಿರತಕ್ಕ ಮಂಡಲ್ ಪಂಚಾಯಿತ್ತಿ ಬಗ್ಗೆ ನೋಟಿಫಿಕೇಷನ್ ಏನಿದೆ ಇದನ್ನು ವಿರೋಧಿಸಿ ನಾಲ್ಕು ಮಾತುಗಳನ್ನಾಡ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಜನತಾ ಪಕ್ಷ ದೇವರಾಜ ಅರಸುರವರು ಅಧಿಕಾರದಲ್ಲಿರುವವರೆಗೆ ಅಂದರೆ ೧೯೮೩ರ ವರೆಗೆ ಅಧಿಕಾರದಲ್ಲಿ ಬರುವುದಕ್ಕೆ ಸಾಧ್ಯವಾಗಲಿಲ್ಲ. ಏತಕ್ಕೆ ಆಗಲಿಲ್ಲ ಎಂದರೆ, ದೇವರಾಜ ಅರಸು ಬಂದಮೇಲೆ, ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಮಾಡಿ, ಮಾನ್ಯ ಹಾವನೂರ್ ಅವರಿಂದ ವರದಿಯನ್ನು ತಯಾರಿಸಿ, ಅದರ ಮೂಲಕ ಹಿಂದುಳಿದ ವರ್ಗಗಳಿಗೆ, ಆ ಜನ ಹಿತರಕ್ಷಣೆ ಮಾಡುವುದಕ್ಕೆ ಅವರು ಮುಂದಾದರು. ಇದರಿಂದ ಆಗ ಜನತಾ ಪಕ್ಷದವರು ಅಧಿಕಾರಕ್ಕೆ ಬರುವುದಕ್ಕಾಗಲಿಲ್ಲ. ಏನಾದರೂ ಮಾಡಿ ಹಿಂದುಳಿದ ವರ್ಗಗಳ ಬೆಂಬಲ ಪಡೆಯುವ ತನಕ ಈ ರಾಜ್ಯದಲ್ಲಿ ಅಧಿಕಾರ ಸಿಗುವುದಿಲ್ಲ ಎಂಬ ಅಭಿಪ್ರಾಯವನ್ನು ಮನಗಂಡು, ೧೯೮೩ರ ಚುನಾವಣೆ ಯಲ್ಲಿ ಇವರು ಸುಳ್ಳು ಪ್ರಚಾರ ಶುರು ಮಾಡಿದರು.

೫-೦೦ ಪಿ.ಎಂ.

ಹಾವನೂರ್ ವರದಿಯಲ್ಲಿ ಹಿಂದುಳಿದವರ್ಗಗಳಿಗೆ ಕೊಟ್ಟಿರತಕ್ಕಂಥ ಸವಲತ್ತುಗಳು ಏನಿವೆ, ಅದಕ್ಕಿಂತ ಇನ್ನೂ ಹೆಚ್ಚಿನ ರೀತಿಯಲ್ಲಿ ಹಿಂದುಳಿದವರ್ಗಗಳಿಗೆ ಸೌಲಭ್ಯಗಳು ಸಿಗಬೇಕಾಗುತ್ತದೆ, ಇದರಲ್ಲಿ ಅನೇಕ ಹಿಂದುಳಿದವರ್ಗಗಳು ಬಿಟ್ಟು ಹೋಗಿವೆ. ಆದುದರಿಂದ ಇದಕ್ಕಿಂತ ಉತ್ತಮವಾದ ಆಯೋಗವನ್ನು ಮಾಡಿ, ಸುಪ್ರೀಂ ಕೋರ್ಟ್ ತೀರ್ಮಾನವೇನಿದೆ, ಅದನ್ನು ಒಳಗೊಂಡಂತೆ ಒಂದು ಹಿಂದುಳಿದವರ್ಗಗಳ ಆಯೋಗವನ್ನು ಇನ್ನೂ ಪಕ್ವವಾಗಿ ಮಾಡಿ, ಈ ರಾಜ್ಯದಲ್ಲಿ ಇರತಕ್ಕಂಥ ಹಿಂದುಳಿದವರ್ಗಗಳಿಗೆ ಅನುಕೂಲದೊರಕಿಸಿ ಕೊಡುತ್ತೇವೆ, ಇನ್ನೂ ಹೆಚ್ಚಿನ ಸೌಲಭ್ಯ ಒದಗಿಸಿಕೊಡುತ್ತೇವೆ ಎಂದು, ಇವರ ತಮ್ಮ ಚುನಾವಣಾಘೋಷಣೆಯನ್ನು ಪ್ರಾರಂಭ ಮಾಡಿದರು.

ಶ್ರೀ ಡಿ.ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಹಿಂದುಳಿದ ವರ್ಗಗಳಿಗೆ ನಾಮಕರಣ ಮಾಡುವ ವಿಚಾರವನ್ನೂ ಇವರು ಮಾತನಾಡುತ್ತಿದ್ದಾರೋ ಅಥವಾ ಇಲ್ಲವೋ, ಇವರೇನು ಇದರ ಪರವಾಗಿ ಮಾತನಾಡುತ್ತಿರೋ ಅಥವಾ ವಿರೋಧವಾಗಿ ಮಾತನಾಡುತ್ತಿದ್ದಾರೋ ಒಂದೂ ಗೊತ್ತಾಗುತ್ತಿಲ್ಲ.

ಶ್ರೀ ಬಿ. ಲಕ್ಕಪ್ಪ —ಇದನ್ನು ಮನಗಂಡು ಈ ಪಾರ್ಟಿ, ಚುನಾವಣೆಯಲ್ಲಿ ಹಿಂದುಳಿದ ವರ್ಗ ಗಳಿಗೆ ಹೆಚ್ಚಿನ ಒಂದು ಆಶ್ವಾಸನೆಯನ್ನು ಕೊಟ್ಟು ಅಧಿಕಾರಕ್ಕೆ ಬಂತು. ಅಧಿಕಾರಕ್ಕೆ ಬಂದ ಮೇಲೆ, ಚುನಾವಣೆಯಲ್ಲಿ ಕೊಟ್ಟಿರತಕ್ಕಂಥ ಆಶ್ವಾಸನೆಯನ್ನು, ಹೇಳಿರತಕ್ಕಂಥ ಮಾತನ್ನು ಉಳಿಸಿಕೊಳ್ಳ ತಕ್ಕಂಥ ನಾಟಕವಾಡಿದರು. ಆ ನಾಟಕ ಏನೆಂದರೆ ಹೇಳಿದರೆ, ಇವರ ಉದ್ದೇಶ ಹಿಂದುಳಿದವರ್ಗಗಳಿಗೆ

ಸೌಲಭ್ಯವನ್ನು ಹೆಚ್ಚಿಸತಕ್ಕಂಥಾದ್ದಾಗಿರಲಿಲ್ಲ. ಯಾವ ಪಟ್ಟಭದ್ರ ಹಿತಗಳು, ಬಹಳ ವರ್ಷದಿಂದ ರಾಜಕೀಯ ಮಾಡಿಕೊಂಡು ಬಂದು, ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ ಹಾವನೂರ್ ವರದಿ ಆಧಾರದ ಮೇಲೆ ಅನುಕೂಲಗಳನ್ನು ತೆಗೆದುಕೊಂಡಂಥ ಹಿಂದುಳಿದವರ್ಗಗಳ ಅಭ್ಯುದಯವನ್ನು ಸಹಿಸಲಾರದಂಥ ವರ್ಗಗಳು ಏನಿವೆ ಇವುಗಳು ಅವತ್ತು ಯೋಚನೆ ಮಾಡಿದವು, ಏನಾದರೂ ಮಾಡಿ ಹಿಂದುಳಿದವರ್ಗಗಳಿಗೆ ಹೆಚ್ಚಿನ ಸೌಲಭ್ಯ ಕೊಡುತ್ತೇವೆ ಎಂಬ ಮಾತನ್ನು ಹೇಳುತ್ತಾ, ಮತ್ತೊಂದು ಕಮಿಷನ್ ಮಾಡಿ ಆ ಮೂಲಕ ಹಿಂದುಳಿದವರ್ಗಗಳಿಗೆ ಸಿಗತಕ್ಕಂಥ ಸೌಲಭ್ಯಗಳನ್ನು ಕಿತ್ತುಹಾಕಬೇಕೆಂದು ಮಾಡಿದರು.

ಶ್ರೀ ವೈ.ಕೆ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಮಧ್ಯದಲ್ಲಿ ಇಂಟರ್‌ಪಿಯರ್ ಮಾಡುವುದಕ್ಕೆ ಕ್ಷಮೆ ಕೇಳುತ್ತಿದ್ದೇನೆ. ವೆಂಕಟಸ್ವಾಮಿ ಆಯೋಗದ ನೇಮಕಾತಿಯನ್ನು ಈ ಸರಕಾರ ಮಾಡಿರಲಿಲ್ಲ. ಹಿಂದೆ ಮಾಡಿರತಕ್ಕಂಥ ವರದಿ ವಿರುದ್ಧ ಕೋರ್ಟಿಗೆ ಹೋದಾಗ ಗುಂಡೂರಾಯರ ಸರಕಾರ ಒಂದು ಅಂಡರ್ ಟೇಕಿಂಗ್ ಕೊಟ್ಟಿತ್ತು. ಈ ವರದಿಯಲ್ಲಿ ಏನಾದರೂ ತಪ್ಪಿದ್ದರೆ, ನ್ಯೂನತೆ ಇದ್ದರೆ, ಮತ್ತೊಂದು ಕಮಿಷನ್ ಅಪಾಯಿಂಟ್ ಮಾಡಿ ಆ ನ್ಯೂನತೆಗಳನ್ನು, ತಪ್ಪನ್ನು ಸರಿ ಮಾಡುತ್ತೇವೆ ಎಂದು ವಾಗ್ದಾನವನ್ನು ಕೊಟ್ಟಿದುದರ ಆಧಾರದ ಮೇಲೆ ವೆಂಕಟಸ್ವಾಮಿ ಆಯೋಗವನ್ನು ಹಿಂದೆಯೇ ರಚನೆಯಾದಂತಾಗಿತ್ತು. ಈ ಸರಕಾರ ಬಂದ ಮೇಲೆ ಕಮಿಷನ್ ಅಪಾಯಿಂಟ್ ಮಾಡಲಿಲ್ಲ. ನಮ್ಮ ಸರಕಾರ ಬಂದ ಮೇಲೆ ಹೊಸದಾಗಿ ಕಮಿಷನ್ ಅಪಾಯಿಂಟ್ ಮಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಮಂತ್ರಿಗಳಿದ್ದಿರಿ, ತಮಗೆ ಗೊತ್ತಿದೆ, ವೆಂಕಟಸ್ವಾಮಿ ಕಮಿಷನ್ ಅಥವಾ ಮತ್ತೊಂದು ಕಮಿಷನ್ ಮಾಡುತ್ತೇವೆ ಎಂದು ಯಾರೋ ಅಂಡರ್ ಟೇಕಿಂಗ್ ಕೊಟ್ಟಿರಬಹುದು, ಆದರೆ ಕಮಿಷನ್ ಅಪಾಯಿಂಟ್ ಮಾಡಿ, ಅದಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್ ಕೊಡತಕ್ಕ ಕೆಲಸ ನೀವು ಮಾಡಿರುತ್ತೀರಿ. ಟರ್ಮ್ಸ್ ಆಫ್ ರೆಫರೆನ್ಸ್ ಏನು ಕೊಟ್ಟಿರುತ್ತಾರೆ, ಅದರ ಪ್ರಕಾರ ಪ್ರತಿಯೊಂದು ಆಯೋಗವೂ ಕೆಲಸ ಮಾಡುತ್ತದೆ. ಆದೇ ರೀತಿ ಇವರು ಟರ್ಮ್ಸ್ ಆಫ್ ರೆಫರೆನ್ಸ್ ಪ್ರಕಾರ ಕೆಲಸ ಮಾಡಿರುತ್ತಾರೋ ಇಲ್ಲವೋ ಎಂಬುದನ್ನು ಪರಿಶೀಲಿಸಿ ಏನಾದರೂ ತಪ್ಪಿದ್ದರೆ ಇದನ್ನು ರಿಜೆಕ್ಟ್ ಮಾಡಬಹುದಾಗಿತ್ತು. ಆದರೆ ನಿಮ್ಮ ಅನುಕೂಲಕ್ಕಾಗಿ ಬೇರೆ ಒಂದು ಆರ್ಡರ್ ಮಾಡಿದಿರಿ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಲಿಲ್ಲ. ಸುಪ್ರೀಂ ಕೋರ್ಟ್‌ನ ಆಜ್ಞೆ ಏನಿತ್ತು, ಅದರ ಪ್ರಕಾರ, ಅವರು ಏನು ಕೆಲವು ಅಂಶಗಳನ್ನು ಪರಿಶೀಲಿಸಬೇಕೆಂದು ಹೇಳಿದ್ದರು, ಅದನ್ನು ತಿಳಿದುಕೊಂಡು ಅವರು ವರದಿಯನ್ನು ತಯಾರು ಮಾಡಿದ್ದಾರೆ. ಅವರು ತಯಾರು ಮಾಡಿದ ವರದಿ ಸರಿಯಲ್ಲ ಎನ್ನತಕ್ಕಂಥ, ಅಭಿಪ್ರಾಯ ಕೆಲವು ಜನರಿಗೆ ಇದೆ, ಕೆಲವು ಜನರಿಗೆ ಅನುಕೂಲ ಆಗಲಿ ಎಂದು ಇದು ಸರಿಯಲ್ಲ ಎಂದು ಹೇಳಿದರು. ಅದನ್ನು ತಾವು ಒಪ್ಪಿಕೊಂಡು ಈ ಆಯೋಗದ ವರದಿಯನ್ನು ರಿಜೆಕ್ಟ್ ಮಾಡಿದಿರಿ.

SRI. Y.K. RAMAIAH,—The Backward Classes Commission Report submitted by Sri. L.G. Havanur was questioned before the Court. At that time, the then Government undertook, that they are going to correct if there are any lapses and if there are any NUNATHES. In view of the undertaken given by that Government. the Venkata Swamy Commission was appointed. At the time when Venkataswamy Commission was working, the Supreme Court has given certain guidelines. Taking into consideration those guidelines the Venkata Swamy Commission has submitted its report. That was the position.

ಶ್ರೀ ಬಿ. ಲಕ್ಕಪ್ಪ,—ಅಧ್ಯಕ್ಷರೇ, ವೆಂಕಟಸ್ವಾಮಿ ಆಯೋಗವನ್ನು ರಚನೆ ಮಾಡಿದ್ದುದು ಹಾವನೂರ್ ವರದಿಯಲ್ಲಿರತಕ್ಕಂಥ ನ್ಯೂನತೆಗಳನ್ನು ಸರಿಪಡಿಸಬೇಕೆಂಬ ಸುಪ್ರೀಂ ಕೋರ್ಟ್ ಆದೇಶಕ್ಕೆ ಅನುಸಾರವಾಗಿ ಎಂದು ಮಾನ್ಯ ರಾಮಯ್ಯನವರು ಹೇಳುತ್ತಿದ್ದಾರೆ, ಇದರಿಂದ ವೆಂಕಟಸ್ವಾಮಿ ಆಯೋಗ ರಚನೆ ಆಯಿತು ಎಂಬ ಮಾತನ್ನು ಹೇಳಿದರು. ನಿಜ, ಒಂದು ವೇಳೆ ಹಾವನೂರ್ ರಿಪೋರ್ಟ್‌ನಲ್ಲಿರತಕ್ಕಂಥ ನ್ಯೂನತೆಗಳನ್ನು ಸರಿಪಡಿಸಿ ಅನುಕೂಲ ಮಾಡಿದ್ದರೆ

ಸರಿಯಾಗುತ್ತಿತ್ತು. ಆದರೆ ಒಂದು ಕೋಟಿ ರೂಪಾಯಿಗಳ ಹಣ ಖರ್ಚು ಮಾಡಿ ವೆಂಕಟಸ್ವಾಮಿಯವರು ಏನು ವರದಿ ಕೊಟ್ಟರು, ಆ ವರದಿಯು ಹಾವನೂರ್ ವರದಿ ಏನಿತ್ತು ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ತಯಾರಿಸಿದ ಉತ್ತಮ ವರದಿಯಾಗಿತ್ತು.

ಹಾವನೂರು ವರದಿಯಲ್ಲಿ ಆಗಿದ್ದಂತಹ ನ್ಯೂನ್ಯತೆಗಳನ್ನು ಸರಿಪಡಿಸಿದಂತಹ ವರದಿ ಅದು ಆಗಿದ್ದರೂ ಕೂಡ ಆ ವರದಿಯನ್ನು ತಾವು ಜಾರಿಗೆ ಕೊಡುತ್ತಿರಲಿಲ್ಲ. ಕಾರಣ ತಮ್ಮ ಉದ್ದೇಶ ಅದು ಆಗಿಲ್ಲ. ವೆಂಕಟಸ್ವಾಮಿ ವರದಿಯನ್ನು ತಾವು ಏತಕ್ಕೆ ಜಾರಿಗೆ ಕೊಡಲಿಲ್ಲವೆಂದರೆ ಆ ವರದಿಯನ್ನು ಜಾರಿಗೆ ಕೊಟ್ಟರೆ ನಿಮ್ಮ ಉದ್ದೇಶ ಈಡೇರಿಸಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಆದ್ದರಿಂದ ನಿಮ್ಮ ಉದ್ದೇಶವೇ ಬೇರೆ ಇತ್ತು. ಶ್ರೀಮಾನ್ ದೇವರಾಜ ಅರಸುರವರು ಇದ್ದಾಗ ಈ ಹಾವನೂರು ವರದಿಯನ್ನು ಜಾರಿಗೆ ಕೊಟ್ಟರು. ಆಗ ಕೆಲವು ಜನ ಪಟ್ಟಭದ್ರಹಿತಾಸಕ್ತಿಗಳು ಸಮಯವನ್ನು ಕಾಯುತ್ತಿದ್ದರು. ಆ ಸಮಯ ಒದಗಿ ಬಂದಾಗ ಉಪಯೋಗಿಸಿಕೊಂಡು ವೆಂಕಟಸ್ವಾಮಿ ವರದಿಯನ್ನು ಮೂಲೆ ಗುಂಪು ಮಾಡಿದರು. ನಿಜವಾದ ಹಿಂದುಳಿದ ವರ್ಗದವರು ಯಾರಿದ್ದರು ಅವರ ಸಮಾಧಿಯನ್ನು ಮಾಡಿದರು. ಹಿಂದುಳಿದ ವರ್ಗದ ಗುಂಪಿಗೆ ಸುಮಾರು ೯೪ ಪರ್ಸೆಂಟ್ ಜನರನ್ನು ಸೇರಿಸಿದವರು ಹಿಂದುಳಿದ ವರ್ಗಕ್ಕೆ ಸೇರಬೇಕಾಗಿದ್ದ ಸೌಲಭ್ಯಗಳನ್ನು ಕಸಿಯುವುದಕ್ಕೆ ಅನುಕೂಲವಾಯಿತು. ಆದರೆ ಸುಪ್ರೀಂ ಕೋರ್ಟಿನ ಉದ್ದೇಶ ಆ ರೀತಿ ಇರಲಿಲ್ಲವೆನ್ನುವುದು ನನ್ನ ಭಾವನೆ, ಬಹುಶಃ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಾವು ಕೂಡ ಸರ್ಕಾರವನ್ನು ನಡೆಸುತ್ತಿದ್ದೀರಿ ಕಳೆದ ೪೦ ವರ್ಷಗಳಿಂದ ಅಧಿಕಾರ ಮಾಡಿಕೊಂಡು ಬಂದಂತಹ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪುನರ್ ನಿರ್ಮಾಣ ಮಾಡುತ್ತೇವೆಂದು ಹೇಳಿಕೊಂಡು ಬಂದಂತಹ ಜನ ತಾವು. ತಾವು ಅಧಿಕಾರಕ್ಕೆ ಬಂದ ಮೇಲೆ ಈ ಚುನಾವಣೆಗಳನ್ನು ಮಾಡಿದಿರಿ. ಈ ಈ ಚುನಾವಣೆಗಳು ಆದ ಮೇಲೆ ಎಷ್ಟರ ಮಟ್ಟಿಗೆ ತಾವು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬೆಲೆಯನ್ನು ಕೊಡುತ್ತಿದ್ದೀರಿ, ಏನು ಮಾಡುತ್ತಿದ್ದೀರಿ ಎನ್ನುವುದನ್ನು ನೋಡುತ್ತಿದ್ದೇವೆ. ಒಟ್ಟಿನಲ್ಲಿ ಹೇಳುವುದಾದರೆ ಈ ರಾಷ್ಟ್ರದಲ್ಲಿ ಎಲ್ಲರಿಗೂ ಪರಮ ಸಾರ್ವಭೌಮತ್ವವನ್ನು ಪಡೆದಿರುವ ಜನರು ಹೇಳಿದ ಹಾಗೆ ರಾಜ್ಯಭಾರ ಮಾಡಬೇಕಾಗುತ್ತದೆ. ಜನತೆಯ ಅಭಿಪ್ರಾಯ ಏನಿದೆಯೋ ಆ ರೀತಿ ನಡೆಯಬೇಕಾಗುತ್ತದೆ. ಜನತೆ ಅಭಿಪ್ರಾಯದಂತೆ ನಡೆಯುವುದಕ್ಕೆ ಅವಕಾಶ ಇದೆ ಹೊರತು ಬೇರೆ ಅಭಿಪ್ರಾಯಕ್ಕೆ ಮನ್ನಣೆ ಇಲ್ಲ. ಮಂಡಲ ಪಂಚಾಯತ್ ಚುನಾವಣೆಗಳು ನಡೆದವು. ಜನತೆ ತಮ್ಮ ತಮ್ಮ ತೀರ್ಮಾನವನ್ನು ಕೊಟ್ಟರು. ಕೆಲವು ಮಂಡಲ ಪಂಚಾಯಿತಿಗಳಲ್ಲಿ ಜನತಾ ಪಕ್ಷ ಬಹುಮತ ಪಡೆದಿರಬಹುದು. ಕೆಲವು ಕೆಲವು ಮಂಡಲ ಪಂಚಾಯಿತಿಗಳಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆದಿರಬಹುದು, ಕೆಲವು ಮಂಡಲ ಪಂಚಾಯಿತಿಗಳಲ್ಲಿ ಸ್ವತಂತ್ರರು ಚುನಾಯಿತರಾಗಿರಬಹುದು ಜನರ ಅಭಿಪ್ರಾಯದ ಪ್ರಕಾರ ಚುನಾಯಿತರಾಗಿದ್ದಾರೆ. ತಾವು ಪ್ರಜಾಪ್ರಭುತ್ವಕ್ಕೆ ಬೆಲೆ ಕೊಡುವುದಾದರೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದರೆ ಮಂಡಲ ಪಂಚಾಯಿತಿಗಳಲ್ಲಿ ನಾಮಕರಣ ಮಾಡಿ ಚುನಾಯಿತ ಪ್ರತಿನಿಧಿಗಳಿಗೆ ಅವಮಾನ ಮಾಡಬೇಡಿ ಅವರಿಗೆ ಅವಮಾನ ಮಾಡದೆ ಅವರೇ ಮಂಡಲ ಪಂಚಾಯಿತಿಗಳನ್ನು ರಚನೆ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಿ. ಈಗ ನಾಮಕರಣ ಮಾಡುವುದರಿಂದ ಏನಾಗುತ್ತದೆ ಎನ್ನುವುದನ್ನು ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ೧೦ ಮಂಡಲ ಪಂಚಾಯಿತಿಗಳಲ್ಲಿ ಒಬ್ಬರು ಇಬ್ಬರು ಸದಸ್ಯರು ಚುನಾಯಿತರಾಗಿರುವ ಕಾಂಗ್ರೆಸ್ ಪಕ್ಷದ ಮಂಡಲ ಪಂಚಾಯಿತಿಗಳು ಇವೆ. ಈ ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡಿದರೆ ಕಾಂಗ್ರೆಸ್ ಪಕ್ಷಕ್ಕೆ ನಾಲ್ಕು ಮಂಡಲ ಪಂಚಾಯಿತಿಗಳು ಉಳಿಯುವುದು ಸಹ ಕಷ್ಟವಾಗುತ್ತದೆ. ಅಲ್ಲಿನ ಜನ ಏನು ಹೇಳುತ್ತಾರೆಂದರೆ ನಾಮಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದ್ದಿದ್ದರೆ ಚುನಾವಣೆಗಳನ್ನು ಏತಕ್ಕೆ ಮಾಡಬೇಕಾಗಿತ್ತು? ನಾಮಕರಣ ಮಾಡಿದವರ ಕೈಗೆ ಅಧಿಕಾರ ಕೊಟ್ಟು ನಾವೆಲ್ಲಾ ಜನರ ಪ್ರತಿನಿಧಿಯಾಗಿ ಚುನಾಯಿತರಾಗಿ ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವಂತೆ ಮಾಡಲು ಚುನಾವಣೆಗಳು ಮಾಡಿದರೇನು ಎಂದು ಕೇಳುತ್ತಾರೆ. ಒಂದು ಕಡೆ ತಾವು ಪ್ರಜಾಪ್ರಭುತ್ವಕ್ಕೆ ಬೆಲೆ ಕೊಡುತ್ತೇವೆಂದು ಹೇಳುತ್ತೀರಿ, ಇನ್ನೊಂದು ಕಡೆ ಪ್ರಜಾಪ್ರಭುತ್ವಕ್ಕೆ ಬೆಲೆ ಇಲ್ಲದಂತಹ ಕೆಲಸ ಮಾಡುತ್ತಿದ್ದೀರಿ. ಹಿಂದುಳಿದ ವರ್ಗದವರನ್ನು ನಾಮಕರಣ ಮಾಡಬೇಕೆಂದು ತಾವು ಹೊರಟರೆ ಈಗ ಇರತಕ್ಕಂಥ ಸರ್ಕಾರಿ ಆಜ್ಞೆಯ ಪ್ರಕಾರ ಅದು ಸಾಧ್ಯವಾಗುವುದಿಲ್ಲ. ಕಾರಣ ಈಗಾಗಲೇ ಎಲ್ಲಾ ಮಂಡಲ ಪಂಚಾಯಿತಿಗಳಲ್ಲಿ ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ಲಭಿಸಿದೆ. ಆದರೆ ತಾವೇನು ಮಾಡಿದ್ದೀರಿ ಎಂದರೆ ಇಲ್ಲಿ ಹಾವನೂರು ವರದಿಯ ಆಧಾರದ ಮೇಲೆ ತಯಾರಾದ ಒಂದು ಆಜ್ಞೆಯನ್ನು ಇಲ್ಲಿ ಅಳವಡಿಸಿಕೊಂಡಿದ್ದೀರಿ. ಇದು

ಸರಿಯಲ್ಲ. ಆ ರೀತಿ ಏನಾದರೂ ತಾವು ಮಾಡುವುದಾದರೆ ಪ್ರಜಾಪ್ರಭುತ್ವಕ್ಕೆ ಬೆಲೆ ತೆತ್ತಂತೆ ಆಗುವುದಿಲ್ಲ. ಆದರೆ ಇವತ್ತಿನ ದಿವಸ ಒತ್ತಾಯವಾಗಿ ಆ ಒಂದು ನಾಮಕರಣ ಮಾಡುವ ಮೂಲಕ ತಮ್ಮ ಅಧಿಕಾರವನ್ನು ತಮ್ಮ ವಶದಲ್ಲಿ ಇಟ್ಟುಕೊಳ್ಳುವ ತಂತ್ರವನ್ನು ಸರ್ಕಾರ ಈ ದಿನ ಮಾಡಿದೆ. ಈ ನಾಮಕರಣ ಮಾಡುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದಾಗಿದೆ. ಈ ಒಂದು ದಿಸೆಯಲ್ಲಿ ಜನರ ಅಭಿಪ್ರಾಯವನ್ನು ಸರ್ಕಾರ ಕೇಳುತ್ತಿಲ್ಲ. ಜನರ ಕೈಗೆ ಸಿಗಬೇಕಾದಂಥ ಅಧಿಕಾರವನ್ನು ಪರೋಕ್ಷವಾಗಿ ಕಸಿದಂತಾಗುತ್ತದೆ, ಅಧಿಕಾರವನ್ನು ವಿಕೇಂದ್ರಿಕರಣ ಮಾಡಿ ಜನತೆಯ ಅಭಿಪ್ರಾಯದ ಮೇಲೆಗೆ ಸರ್ಕಾರವನ್ನು ನಡೆಸುವುದಕ್ಕಾಗಿ ಮೊದಲು ಹೇಳಲಾಗಿತ್ತು. ಅದಕ್ಕಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಚುನಾವಣೆಗಳನ್ನು ಮಾಡಲಾಯಿತು ಚುನಾವಣೆಗಳಲ್ಲಿ ಗೆದ್ದ ಸುಮಾರು ೫೦ ಸಾವಿರ ಸದಸ್ಯರುಗಳನ್ನು ಬೆಂಗಳೂರಿಗೆ ಕರೆದು ಒಂದು ದೊಡ್ಡ ಸಮಾವೇಶವನ್ನು ಮಾಡಿ, ಎಲ್ಲಾ ಅಧಿಕಾರವನ್ನು ಜನತೆಯ ಕೈಗೆ ಕೊಡಲಾಗಿದೆಯೆಂಥು ಘೋಷಣೆಯನ್ನು ಮಾಡಿದಿರಿ. ಆ ಘೋಷಣೆ ನಿಜವಾಗಿಯೂ ನಾಟಕವಾಗಿ ಇಂದು ಪರಿಣಮಿಸಿದೆ. ನೀವು ಮಾಡಿರುವ ಕೆಲಸವನ್ನು ಜನರು ನಂಬುವುದಿಲ್ಲ. ಯಾವುದೇ ಪಕ್ಷದವರು ಅಧಿಕಾರದಲ್ಲಿ ಇರಲಿ ಅದು ಮುಖ್ಯವಲ್ಲ, ಇವತ್ತು ಜನತಾ ಪಕ್ಷದ ಸರ್ಕಾರ ಇರಬಹುದು, ನಾಳೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬಹುದು ಹಿಂದುಳಿದವರಿಗೆ ಪ್ರಾತಿನಿಧ್ಯ ಕೊಡುವ ಬಗ್ಗೆ ನಮ್ಮಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆದರೆ, ಪ್ರಜಾಪ್ರಭುತ್ವದ ತತ್ವ, ಸಿದ್ಧಾಂತ ಮತ್ತು ನಂಬಿಕೆಗಳ ವಿರುದ್ಧ ಯಾರೂ ನಡೆಯುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಪಕ್ಷದಲ್ಲಿರುವ ಮಾನ್ಯ ವೈ. ಕೆ, ರಾಮಯ್ಯನವರು ನಮ್ಮ ಜಿಲ್ಲೆಯವರೇ ಆಗಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಒಂದು ಆರ್.ಎಂ.ಸಿ. ಕಮಿಟಿ ಇದೆ. ಆ ಕಮಿಟಿಗೆ ಸುಮಾರು ವರ್ಷಗಳಿಂದ ಅಧ್ಯಕ್ಷರ ಚುನಾವಣೆ ನಡೆದಿಲ್ಲ. ಇದಕ್ಕೆ ಕಾರಣ ಏನೆಂದರೆ, ಆ ಆರ್.ಎಂ.ಸಿ. ಕಮಿಟಿಯಲ್ಲಿ ನಮ್ಮ ಪಕ್ಷದವರ ಸಂಖ್ಯೆ ಹೆಚ್ಚಾಗಿದೆ. ಚುನಾವಣೆಯನ್ನು ನಡೆಸಿದರೆ ಎದುರು ಪಕ್ಷದವರು ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಚುನಾವಣೆಯನ್ನು ನಡೆಸದೆ ಅದನ್ನು ಮುಂದು ಮುಂದಕ್ಕೆ ಹಾಕುತ್ತಿದ್ದಾರೆ. ಜಿಲ್ಲಾಧಿಕಾರಿಯವರು ಈ ಚುನಾವಣೆಯನ್ನು ನಡೆಸಿಕೊಡಬೇಕೆಂದು ಕೇಳಿಕೊಂಡೆವು. ಅದರಂತೆ ಅವರು ಚುನಾವಣೆಯನ್ನು ನಡೆಸುವುದಕ್ಕೆ ಪ್ರಯತ್ನ ಪಟ್ಟರೂ ಚುನಾವಣೆಯನ್ನು ಇನ್ನೂ ನಡೆಸುವುದಕ್ಕೆ ಆಗಲಿಲ್ಲ. ಎಲ್ಲಾ ಕಡೆಯೂ ರಾಜಕೀಯ ದೃಷ್ಟಿಯಿಂದಲೇ ನೋಡುವುದಾದರೆ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುತ್ತದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಹಿಂದುಳಿದ ವರ್ಗದವರುಗಳನ್ನು ಅಭಿವೃದ್ಧಿ ಮಾಡುವುದಕ್ಕಾಗಿ ನಮ್ಮ ಸರ್ಕಾರದವರು ೪೦ ವರ್ಷಗಳಿಂದಲೂ ಪ್ರಯತ್ನ ಮಾಡುತ್ತಲೇ ಇದ್ದೆವು. ಈಗ ಇವರು ಹಿಂದುಳಿದವರಿಗೆ ಮತ್ತು ಬಡವರಿಗೆ ಸಹಾಯ ಮಾಡುತ್ತಿದ್ದೇವೆ ಎಂದು ಮುಖವಾಡವನ್ನು ಧರಿಸಿಕೊಂಡು ಹೇಳುತ್ತಿದ್ದಾರೆ. ಬಡವರ, ಹಿಂದುಳಿದವರ, ಅಲ್ಪಸಂಖ್ಯಾತರ ಹೆಸರನ್ನು ಹೇಳಿಕೊಂಡು ಅವರುಗಳನ್ನು ಇವರು ಶೋಷಣೆ ಮಾಡುತ್ತಿದ್ದಾರೆ. ನೀವು ಮಾಡುವ ಕೆಲಸಗಳನ್ನು ಜನರು ಎಚ್ಚೆತ್ತು ನೋಡುತ್ತಿದ್ದಾರೆ. ಹಿಂದುಳಿದವರ ಹೆಸರಿನಲ್ಲಿ ಎಲ್ಲಾ ಮಂಡಲ ಪಂಚಾಯಿತಿಗಳಿಗೂ ಸದಸ್ಯರುಗಳನ್ನು ನಾಮಕರಣ ಮಾಡಿ ಅಧಿಕಾರವನ್ನು ಪಡೆಯಬೇಕು ಎಂಬುದೇ ಇವರ ಉದ್ದೇಶವಾಗಿದೆ. ಮಂಡಲ ಪಂಚಾಯಿತಿ ಚುನಾವಣೆಯಲ್ಲಿ ಹಿಂದುಳಿದಿರುವ ಜನಾಂಗದವರು. ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಸಾಕಷ್ಟು ಜನ ಆರಿಸಿ ಬಂದಿದ್ದಾರೆ ಈಗ ಆರಿಸಿ ಬಂದಿರುವ ಸದಸ್ಯರುಗಳೇ ತಮ್ಮ ಜನಾಂಗದ ಅಭಿವೃದ್ಧಿಗೆ ಕೆಲಸ ಕಾರ್ಯಗಳನ್ನು ಮಾಡಬಹುದು. ಅಲ್ಪಸಂಖ್ಯಾತರನ್ನು ಹಿಂದುಳಿದ ವರ್ಗದವರನ್ನು ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡಿದರೆ ಮಾತ್ರವೇ ಅವರ ಅಭಿವೃದ್ಧಿಯಾಗುವುದು? ಒಂದು ಪಕ್ಷ ಹಿಂದುಳಿದ ವರ್ಗದವರನ್ನು ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡಲೇಬೇಕು ಎಂದಾದರೆ ಅವರುಗಳಿಗೆ ಓಟಿನ ಹಕ್ಕು ಕೊಡವುದು ಸರಿಯಲ್ಲ. ಹಿಂದುಳಿದ ವರ್ಗದವರ ಸಮಸ್ಯೆಗಳನ್ನು ಹೇಳಬೇಕಾದ ಸದಸ್ಯರುಗಳಿಗೆ ಓಟಿನ ಹಕ್ಕು ಏಕೆ ಬೇಕು ? ಮಂಡಲ ಪಂಚಾಯಿತಿ ಮೀಟಿಂಗ್‌ಗಳಲ್ಲಿ ಅವರು ತಮ್ಮ ಜನಾಂಗದ ಸಮಸ್ಯೆಗಳನ್ನು ಹೇಳಿಕೊಂಡು ಪರಿಹಾರವನ್ನು ಪಡೆಯಬಹುದಲ್ಲ. ಆಮೇಲೆ ಇನ್ನೂ ಒಂದು ಹೇಳಬೇಕಾದರೆ, ಮಂಡಲ ಪಂಚಾಯಿತಿಗೆ ಸದಸ್ಯರುಗಳನ್ನು ನಾಮಕರಣ ಮಾಡುವುದರಿಂದ ಏನು ಸಮಸ್ಯೆ ಬರುತ್ತದೆ ಎಂಬ

ಬಗ್ಗೆ ಚರ್ಚೆ ಮಾಡುವುದು ಅಗತ್ಯ ಇದೆ ಎಂದು ಕಂಡು ಬಂದ ಮೇಲೆ, ಚರ್ಚೆ ಮಾಡುವುದಕ್ಕೆ ಇವತ್ತು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಎಷ್ಟರಮಟ್ಟಿಗೆ ಚರ್ಚೆ ನಡೆಯುತ್ತದೆ, ಹಾಗೂ ಚರ್ಚೆಯಿಂದ ಯಾವ ಅಭಿಪ್ರಾಯಗಳು ಬರುತ್ತವೆ ಎಂದು ಚರ್ಚೆ ಮುಗಿಯುವವರೆಗಾದರೂ ಸರ್ಕಾರ ನಾಮಕರಣ ಮಾಡುವ ಬಗ್ಗೆ ಕೆಲಸ ಕಾರ್ಯಗಳನ್ನು ಮಾಡದೇ ಸುಮ್ಮನೆ ಇರಬಹುದಾಗಿತ್ತು. ಆದರೆ, ಇಲ್ಲಿ ಚರ್ಚೆ ನಡೆಯುತ್ತಿದೆ, ಆ ಕಡೆ ಮಂಡಲ ಪಂಚಾಯಿತಿಗೆ ಸದಸ್ಯರುಗಳನ್ನು ನಾಮಕರಣ ಮಾಡುವುದಕ್ಕೆ ಜಿಲ್ಲಾ ಪರಿಷತ್ತಿನಲ್ಲಿ ೬ನೇ ತಾರೀಖು ಮೀಟಿಂಗ್ ಕರೆದಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಎಷ್ಟರ ಮಟ್ಟಿಗೆ ಸರಿಹೋಗುತ್ತದೆಂದು ಯೋಚನೆ ಮಾಡಬೇಕು. ಚರ್ಚೆ ೨ನೇ ತಾರೀಖು ನಡೆಯುತ್ತದೆ ಎಂದು ಅಜೆಂಡಾದಲ್ಲಿ ಗೊತ್ತಾಗಿದ್ದರೂ ಅದಕ್ಕಿಂತಲೂ ಮುಂಚೆ ನಾಮಕರಣ ಮಾಡುವುದಕ್ಕೆ ಬದ್ಧರಾಗಿರುವ ಇವರಿಗೆ ಏನು ಹೇಳಬೇಕು. ಇಲ್ಲಿ ಇಷ್ಟೆಲ್ಲಾ ಸದಸ್ಯರುಗಳು ಗಂಟೆಗಟ್ಟಲೇ ಕಾಲ ವ್ಯಯ ಮಾಡಿಕೊಂಡು ತಮ್ಮ ಇದುರಿಗೆ ಇಷ್ಟೆಲ್ಲಾ ಚರ್ಚೆ ಮಾಡುವ ಅಗತ್ಯ ಏನಿತ್ತು? ಹಾಗಾದರೆ ನಾವು ಇಲ್ಲಿ ಕುಳಿತುಕೊಂಡು ಚರ್ಚೆ ಮಾಡತಕ್ಕಂಥ ಅಗತ್ಯವಾದರೂ ಏನಿತ್ತು ? ಇಲ್ಲಿ ಏನಾಗಿದೆ ಎಂದರೆ ಭಾರಿ ರಾಜಕಾರಣದ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ದಿನ ಈ ರೀತಿಯಾಗಿ ಮಾಡತಕ್ಕಂಥದ್ದು ಖಂಡಿತಾ ಸರಿಯಲ್ಲ. ನೀವು ಹಿಂದುಳಿದ ವರ್ಗಗಳ ಹೆಸರಿನಲ್ಲಿ ಮಾಡತಕ್ಕಂಥ ನಾಮಕರಣ ಏನಿದೆ, ಅದು ಹಿಂದುಳಿದ ವರ್ಗಗಳಿಗೆ ಯಾವುದೇ ತರಹದ ರಕ್ಷಣೆಯನ್ನು ನೀಡುವುದಿಲ್ಲ. ಅದಕ್ಕೋಸ್ಕರವಾಗಿ ನೀವು ನಾಮಕರಣ ಮಾಡುವುದಾದರೆ ನೀವು ಅವರಿಗೆ ಓಟಿನ ಹಕ್ಕನ್ನು ಕೊಡದ ರೀತಿಯಲ್ಲಿ ಮಾಡಿ. ಇಲ್ಲದಿದ್ದರೆ, ನೀವು ಅವರಿಗೆ ಓಟಿನ ಹಕ್ಕನ್ನು ಕೊಡುತ್ತೇವೆ ಎಂದು ನಾಮಕರಣ ಮಾಡಿದರೆ, ಅದು ಅಧಿಕಾರದ ದುರುಪಯೋಗ ಆಗುತ್ತದೆ, ಪ್ರಜಾಪ್ರಭುತ್ವಕ್ಕೆ ಅಪಚಾರ ಮಾಡಿದಹಾಗೆ ಆಗುತ್ತದೆ. ಇಂತಹ ಪ್ರಯತ್ನವನ್ನು ತಾವುಗಳು ಮಾಡಬಾರದು ಎಂದು ಹೇಳಬಯಸುತ್ತೇನೆ. ನಮ್ಮ ಹಿಂದುಳಿದ ವರ್ಗಗಳ ಮಂತ್ರಿಗಳಾಗಿರುವ ಮಾನ್ಯ ಲಕ್ಷ್ಮೀಸಾಗರ್‌ರವರು ಮತ್ತು ಬಸವಣ್ಣಪ್ಪನವರು ವೆಂಕಟಸ್ವಾಮಿ ವರದಿಯನ್ನು ಬೆಂಬಲಿಸಿ ಮಾತನಾಡಿರತಕ್ಕಂಥ ಜನ. ಇವರನ್ನು ಹಿಂದುಳಿದ ವರ್ಗಗಳ ಪ್ರತಿನಿಧಿಗಳು ಎಂದು ಜನ ತಿಳಿದುಕೊಂಡಿದ್ದಾರೆ. ಆದರೆ ಇವರು ತಮ್ಮ ಕಣ್ಣಿಗೆ ಕಂಡಿರತಕ್ಕಂಥ ಸತ್ಯವನ್ನು ಕೂಡ ಹೇಳುವುದಕ್ಕೆ ಮರೆಮಾಚುತ್ತಿದ್ದಾರೆ. ಅವರವರ ನಿಲುವನ್ನು ಸಮರ್ಥನೆ ಮಾಡಿಕೊಂಡು ಹಿಂದುಳಿದ ವರ್ಗಗಳ ಹಿತಕ್ಕೆ ಧಕ್ಕೆ ಬರತಕ್ಕಂಥ ರೀತಿಯಲ್ಲಿ ಪ್ರಯತ್ನಗಳನ್ನು ಮಾಡುತ್ತಾ ಇದ್ದಾರೆ.

ಶ್ರೀ ಬಸವಣ್ಣಪ್ಪ.—ಅಧ್ಯಕ್ಷರೇ, ವೆಂಕಟಸ್ವಾಮಿ ವರದಿಯನ್ನು ಸಂಪುಟದ ಮುಂದೆ ಸಬ್‌ಮಿಟ್ ಮಾಡಿದ ತಕ್ಷಣ ನಾವು ಸಾರ್ವಜನಿಕರಿಗೆ ಅದನ್ನು ಬಿಡುಗಡೆ ಮಾಡಿದ್ದೇವೆ. ಇದರ ಉದ್ದೇಶ ಎಲ್ಲರೂ ಅದನ್ನು ಅಧ್ಯಯನ ಮಾಡಲಿ ಎಂಬುದಾಗಿತ್ತು. ಆದರ ಮೇಲೆ ಜನಗಳ ಅಭಿಪ್ರಾಯವನ್ನು ಪಡೆದು ಅನಂತರ ನಾವು ಅದನ್ನು ಇಂಟ್ರಡ್ಯೂಸ್ ಮಾಡೋಣ ಎಂದು ಅಧ್ಯಯನ ಮಾಡಿದಾಗ, ಅದರಲ್ಲಿ ಅನೇಕ ಲೋಪದೋಷಗಳು ಇದ್ದವು. ನಾನು ಇದನ್ನು ೨-೩ ಸಾರಿ ಪ್ರೆಸ್‌ಕಾನ್ಫರೆನ್ಸ್‌ನಲ್ಲಿ ಹೇಳಿದ್ದೇನೆ. ಇದರಲ್ಲಿ ಲೋಪದೋಷಗಳು ಇವೆ, ಇದು ಒಮ್ಮತದ ವರದಿ ಅಲ್ಲ ಎಂದು ಹೇಳಿದ್ದೇನೆ. ಒಂದು ಸಾರಿ ನಾನು ಧಾರವಾಡಕ್ಕೆ ಹೋದಾಗ, ಅಲ್ಲಿ ಅನೇಕ ಪ್ರತಿನಿಧಿಗಳು ಬಂದು ಅನೇಕ ಪ್ರಶ್ನೆಗಳನ್ನು ಕೇಳಿದರು. ಆ ವಿಚಾರದಲ್ಲಿ ಕನ್ನಡಪ್ರಭ ಪತ್ರಿಕೆಯಲ್ಲಿ ಸ್ವಲ್ಪ ಆ ರೀತಿಯಾಗಿ ಬಂದಿತ್ತು. ಅಷ್ಟೇ ಹೊರತು ನಾನಂತೂ ವರದಿಯು ವೈಜ್ಞಾನಿಕವಾಗಿದೆ ಎಂದು ಯಾವತ್ತೂ ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಗ ಮೆಜಾರಿಟಿ ಜನ ಅದಕ್ಕೆ ವಿರೋಧ ಮಾಡಿದರು ಎಂದು ಹಾಗೆ ಹೇಳಿದ್ದೀರಿ. ಆದರೆ ತಾವುಗಳು ಮೊದಲು ಹೇಳಿದ್ದುದು, ವರದಿಯು ಸೈಂಟಿಫಿಕ್ ಆಗಿದೆ, ಚೆನ್ನಾಗಿ ಇದೆ, ಎಂದೇ ಹೇಳಿದ್ದೀರಿ. ನಿಮ್ಮ ಪಕ್ಷದ ಹಿತದೃಷ್ಟಿಯಿಂದ ನೀವು ಇದನ್ನು ಮಾಡಿಕೊಂಡಿದ್ದೀರಿ ಎಂದು ಹೇಳಿದರೆ, ಆ ಮಾತು ಬೇರೆ. ವೆಂಕಟಸ್ವಾಮಿಯವರು ಅದೆಷ್ಟು ಕಷ್ಟಪಟ್ಟು ಸಹಸ್ರಾರು ಜನರೊಂದಿಗೆ ವಿಚಾರವಿನಿಮಯ ಮಾಡಿ, ರಾಜ್ಯವೆಲ್ಲ ತಿರುಗಿ, ಅಂಕಿಅಂಶಗಳನ್ನು ಸಂಗ್ರಹಿಸಿ, ಅದನ್ನು ಆಧಾರವಾಗಿಟ್ಟುಕೊಂಡು ಮಾಡಿದುದನ್ನು ನೀವುಗಳು ದಿಢೀರ್ ಆಗಿ ಅದು ಸರಿಯಾಗಿ ಇಲ್ಲ ಎಂದು ಹೇಳುವುದು ಸರಿಕಾಣುವುದಿಲ್ಲ ಎಂದು ಹೇಳುತ್ತಿದ್ದೇನೆ. ಮುಖ್ಯ ಕಾರಣವೇನೆಂದರೆ ಆಗ ಅದಂತಹ ಪ್ರತಿಕ್ರಿಯೆಯನ್ನು ತಡೆಯತಕ್ಕಂತ ಶಕ್ತಿಯು ತಮ್ಮಲ್ಲಿ ಇರಲಿಲ್ಲ ಎಂದು ಹೇಳಿ... ...

ಶ್ರೀ ಜಿ. ಬಸವಣಪ್ಪ.—ಜನತಾ ಪಕ್ಷ ಮತ್ತು ಜನತಾ ಸರಕಾರ, ಹಿಂದುಳಿದ ವರ್ಗಗಳ ಬಗ್ಗೆ ನಾವು ಯಾರಿಗಿಂತಲೂ ಎರಡನೆಯವರಲ್ಲ. ತಮಗೆ ಗೊತ್ತಿದೆ, ಮಾನ್ಯ ಮೊರಾರ್ಜಿದೇಸಾಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ೧೯೭೮ ರಲ್ಲಿ ಮಂಡಳ ಕಮೀಶನ್ ಮಾಡಿದ್ದಕ್ಕೆ ನಿಮ್ಮ ಸರಕಾರ ಅದನ್ನು ಇವೊತ್ತಿಗೂ ಇಂಪ್ಲಿಮೆಂಟ್ ಮಾಡಲಿಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಕೈಯಲ್ಲಿ ಇದ್ದುದನ್ನು ಹೇಳುವುದಕ್ಕೆ ಆಗುತ್ತಾ, ಇಲ್ಲ ಯಾವುದೇ ಸಂದರ್ಭ ಬಂದಾಗಲೂ ಕೂಡ ಕೇಂದ್ರವನ್ನು ದೂರತಕ್ಕಂಥ ಒಂದು ಪರಿಪಾಠವನ್ನು ನೀವು ಹಾಕಿಕೊಂಡ ಹಾಗೆ ಕಾಣುತ್ತದೆ. ಮುಖ್ಯ ಮಂತ್ರಿಗಳಾಗಲೀ, ಬೊಮ್ಮಾಯಿಯವರಾಗಲೀ, ಬಸವಣ್ಣಪ್ಪನವರೇ ಆಗಲಿ ಬರೀ ಇನ್ನೊಬ್ಬರನ್ನು ದೂರುವುದರಲ್ಲಿ ಇದ್ದೀರಿ. ನಿಮ್ಮ ಹಣೇಬರಹ ನೋಡಿ ಎಂದರೆ ಇನ್ನೊಬ್ಬರ ವಿಚಾರದಲ್ಲಿ ತಲೆಹಾಕುತ್ತಿದ್ದೀರಿ.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರು ತಮ್ಮ ಭಾಷಣವನ್ನು ಮುಗಿಸಿರಿ... ..

ಶ್ರೀ ಬಿ. ಲಕ್ಕಪ್ಪ.—ಈಗ ವೆಂಕಟಸ್ವಾಮಿ ಆಯೋಗದ ವರದಿಯನ್ನು ಕೈಬಿಟ್ಟು ಸರಕಾರದವರು ಹೊರಡಿಸಿರತಕ್ಕಂಥ ಮೀಸಲಾತಿ ನಿಯಮಗಳು ಎಂತಹ ಪರಿಸ್ಥಿತಿಯಲ್ಲಿ ಬಂದವು ಎನ್ನುವ ಬಗ್ಗೆ ಅವರು ಹೇಳಿದರು. ರಾಜ್ಯದಲ್ಲಿ ಈ ಪರಿಸ್ಥಿತಿಯಲ್ಲಿ ಹೊಸ ಮೀಸಲಾತಿ ನಿಯಮವನ್ನು ಜಾರಿಗೆ ತರದಿದ್ದರೆ ಬಹಳ ಕಷ್ಟವಾಗುತ್ತಿತ್ತು. ಅದಕ್ಕೋಸ್ಕರವಾಗಿ ನಾವು ಮಾಡಿದ್ದೇವೆ ಎಂದು ಹೇಳುತ್ತಾರೆ. ಆ ದಿಸೆಯಲ್ಲಿ ನಡೆದ ಚಳುವಳಿ ಸರಕಾರದ ಪ್ರೇರಣೆಯಿಂದ ಆದಂಥ ಚಳುವಳಿಯಾಗಿದೆ. ಆಗ ಹಿಂದುಳಿದ ವರ್ಗದವರು ಎಚ್ಚೆತ್ತು ತಮ್ಮ ಒಂದು ವಿರೋಧವನ್ನು ವ್ಯಕ್ತಮಾಡಿದರೆ ಬಹುಶಃ ಗುಜರಾತ್‌ನಲ್ಲಿ ನಡೆದು ಹೋದ ಚಳುವಳಿಯಂತೆ ಇಲ್ಲಿಯೂ ಆಗುತ್ತಿತ್ತು ಎಂದು ಹೇಳಬೇಕಾಗುತ್ತದೆ. ಆದರೆ ಈಗಿನ ಸರಕಾರ ಯಾರು ಈ ಆಯೋಗದ ವರದಿಯನ್ನು ಕಡೆಗಣಿಸಿ, ಈಗಿನ ಮೀಸಲಾತಿಯಲ್ಲಿ ಲಾಭವನ್ನು ಪಡೆಯಬೇಕೆಂಬ ಇಚ್ಛೆವುಳ್ಳವರಾಗಿದ್ದರು, ಅವರ ಪರವಾಗಿ ಸರಕಾರ ಇತ್ತು. ಸರಕಾರದ ಬೆಂಬಲದಿಂದ ಹೀಗೆ ಆಯಿತು. ಇಲ್ಲದಿದ್ದರೆ ಚಳುವಳಿಯೂ ಸಹ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ನಡೆಯುವುದಕ್ಕೆ ಸಾಧ್ಯವಿತ್ತು. ಆದರೆ ನಿಜವಾದ ಹಿಂದುಳಿದವರಿಗೆ ಅಷ್ಟು ವಿಚಾರಶಕ್ತಿಯೂ ಇರಲಿಲ್ಲ, ಸರಕಾರದ ಬೆಂಬಲವೂ ಇರಲಿಲ್ಲ. ಹೀಗಾಗಿ ಹಿಂದುಳಿದ ವರ್ಗಗಳು ಹಿಂದುಳಿದುಕೊಂಡು ಬಿಟ್ಟುವು. ಈ ರೀತಿಯಾಗಿ ಅನ್ಯಾಯಕ್ಕೆ ಅವರು ಗುರಿ ಆಗಿದ್ದಾರೆ. ಸರಕಾರ ಏನು ಮಾಡಿದರೂ ಈ ವರ್ಗದವರು ಸಹಿಸಿಕೊಂಡು ಬಂದಿದ್ದಾರೆ. ಈ ಸದನದಲ್ಲಿ ಆ ರಿಪೋರ್ಟನ್ನು ಚರ್ಚೆ ಮಾಡಲಿಕ್ಕೆ ಸದನದ ಮುಂದೆ ಇಡುವ ಒಂದು ಸೌಜನ್ಯವನ್ನು ತೋರಿಸಲಿಲ್ಲ. ಸರಕಾರದಿಂದ ಒಂದು ಕೋಟಿ ರೂಪಾಯಿಗಳ ವೆಚ್ಚದಿಂದ ಬಂದಂಥ ವರದಿಯನ್ನು ವೈಜ್ಞಾನಿಕವಾಗಿದೆಯೋ, ಲೋಪದೋಷಗಳಿಂದ ಕೂಡಿದೆಯೋ ಎಂಬ ಬಗ್ಗೆ ಈ ಮನೆಯಲ್ಲಿ ಚರ್ಚೆ ಮಾಡಬೇಕಾಗಿತ್ತು. ಅಂತಹ ಲೋಪದೋಷಗಳು ಕಂಡು ಬಂದಿದ್ದಲ್ಲಿ ಇನ್ನೊಂದು ಆಯೋಗವನ್ನು ಮಾಡುವುದಕ್ಕೆ ಅವಕಾಶ ಇರುತ್ತಿತ್ತು. ಸರಕಾರದ ಪರವಾಗಿ ಹಿಂದುಳಿದ ವರ್ಗಗಳ ಬಗ್ಗೆ ಒಂದು ವರದಿಯನ್ನು ಕೊಡುವುದಕ್ಕೆ ವೆಂಕಟಸ್ವಾಮಿಯವರು ಬಹುಶಃ ವಿಫಲವಾಗಿದ್ದಾರೆ. ಮಾನ್ಯ ಬಸವಣ್ಣಪ್ಪನವರನ್ನು ಆ ಸ್ಥಾನದಲ್ಲಿ ಕೂಡಿಸಿ, ನೀವೇ ಬರೆಯಿರಿ ಎಂದು ಹೇಳಿದ್ದರೆ, ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಳ್ಳಬಹುದಾಗಿತ್ತು. ಆದರೆ ಅದನ್ನೂ ಕೂಡ ಮಾಡದೇ ಒಂದು ಒಳ್ಳೆಯ ವರದಿಯನ್ನು ಕೈಬಿಟ್ಟು, ಬಹುಜನಕ್ಕೆ ನೀವುಗಳು ಅನ್ಯಾಯವನ್ನು ಮಾಡಿದ್ದೀರಿ. ಪುನಃ ಈ ರಾಜ್ಯದಲ್ಲಿ ನೀವು ಮಂಡಲ ಪಂಚಾಯಿತಿಗೆ ನೇಮಕಾತಿ ಮಾಡುವುದಕ್ಕೆ ಹೊರಟಿದ್ದೀರಿ. ಅದರಿಂದಲೂ ಸಹ ಯಾವುದೇ ದೃಷ್ಟಿಯಿಂದಲೂ ಹಿಂದುಳಿದ ವರ್ಗಗಳಿಗೆ ಅನುಕೂಲವಾಗುವುದಿಲ್ಲ. ಈಗಾಗಲೇ ಅಲ್ಲ ಆ ವರ್ಗಗಳಿಗೆ ಪ್ರಾತಿನಿಧ್ಯ ಇರುವುದರಿಂದ ಈ ಪ್ರಯತ್ನವನ್ನು ಕೈಬಿಡಬೇಕೆಂದು ಹೇಳುತ್ತೇನೆ. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಪ್ರತಾಪ ಚಂದ್ರ ಶೆಟ್ಟಿ — ಗೈರು ಹಾಜರು,
ಶ್ರೀ ರಮೇಶ್‌ಕುಮಾರ್ — ಗೈರು ಹಾಜರ ,
ಶ್ರೀ ಶಿವನಂಜಪ್ಪನವರು ಮಾತನಾಡಿ.

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಪ್ರಸ್ತುತ ವಿಚಾರದ ಬಗ್ಗೆ ತಮ್ಮ ಅಪ್ಪಣೆ ಪಡೆದು ನಾಲ್ಕು ಮಾತುಗಳನ್ನು ಆಡಲು ಬಯಸುತ್ತೇನೆ.

ಈ ಜನತಾ ಸರಕಾರದವರು ಅಧಿಕಾರಕ್ಕೆ ಬರುವ ಮುಂಚೆ ಮೌಲ್ಯಾಧಾರಿತ ರಾಜಕಾರಣವನ್ನು ಮಾಡುತ್ತೇವೆ, ಜನತೆ ಹೇಳಿದ ಹಾಗೆ ನಡೆದುಕೊಳ್ಳುತ್ತೇವೆ, ಜಿಲ್ಲಾಪರಿಷತ್ತು ಮತ್ತು ಮಂಡಳ ಪಂಚಾಯತಿಗಳ ಚುನಾವಣೆಯನ್ನು ನಡೆಸಿ, ಜನತೆಯ ಕೈಗೆ ಆಡಳಿತವನ್ನು ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಇವರು ಚುನಾವಣೆ ಮಾಡಿದ ರೀತಿಯನ್ನು ನೋಡಿದರೆ ಇವರು ಈ ಸದನದಲ್ಲಿ ಕೊಟ್ಟ ಆಶ್ವಾಸನೆಯನ್ನು ವಚನಗಳನ್ನು ಮುರಿದು ವಚನಭ್ರಷ್ಟರಾಗಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ, ಆಯಾಯಾ ಕ್ಷೇತ್ರಗಳ ಶಾಸಕರನ್ನು ಕರೆದು ಅವರ ಸಮ್ಮತಿಯನ್ನು ಪಡೆದು, ಕ್ಷೇತ್ರಗಳ ವಿಂಗಡಣೆಯನ್ನು ಮಾಡುತ್ತೇವೆ ಎಂದು ಹೇಳಿದ್ದರು. ಅದರ ಪ್ರಕಾರ ನಮ್ಮನ್ನು ಒಂದು ಸಾರಿ ಕರೆಸಿದರು. ಕ್ಷೇತ್ರಗಳ ವಿಂಗಡಣೆಯನ್ನು ಕೂಡ ಮಾಡಿದರು. ಫೈನಲ್ ರಿಪೋರ್ಟ್‌ನ್ನು ನೋಡಿದರೆ, ನಾವು ಹೇಳಿದ್ದು ಒಂದೂ ಇಲ್ಲವಾಗಿತ್ತು. ಮಾನ್ಯ ರಾಮಯ್ಯನವರು ಮತ್ತು ವೀರಣ್ಣನವರು ಜಿಲ್ಲಾ ಮಂತ್ರಿಗಳೂ ಆಗಿದ್ದರು. ಇವರಿಬ್ಬರೂ ಕೂಡಿ ನಮಗೆ ಕೇಡು ಮಾಡಿದ್ದಾರೋ ಏನೋ ಎಂದು ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ತುಮಕೂರಿಗೆ ಬಹಳ ಅನ್ಯಾಯವಾಗಿದೆ.

ಶ್ರೀ ವೈ. ಕೆ. ರಾಮಯ್ಯ.—ನಾವು ಮಾಡಿಲ್ಲ ಸ್ವಾಮಿ, ಜಿಲ್ಲಾಧಿಕಾರಿಯವರು ಮಾಡಿದ್ದುದು.

ಶ್ರೀ ಜಿ.ಎಸ್. ಶಿವನಂಜಪ್ಪ.—ಹೀಗೆ ಒಂದೊಂದು ಕ್ಷೇತ್ರ ವಿಂಗಡಣೆ ಮಾಡುವಾಗ, ಎಂದರೆ ಚೇಳೂರು ಹೋಬಳಿ ತೆಗೆದುಕೊಂಡು ಕಸಬ ಹೋಬಳಿಗೆ ಹಾಕಿದರು, ಕಸಬಾ ಹೋಬಳಿಯಿಂದ ಸಿ.ಆರ್. ಪುರ ಹೋಬಳಿಗೆ ಹಾಕಿದರು. ಹೀಗೆ ಒಂದಕ್ಕೊಂದು ಸಂಬಂಧ ಸೂತ್ರ ಇಲ್ಲದ ಹಾಗೆ ಮಾಡಿದರು. ಈ ರೀತಿಯಾಗಿ ಮಾಡುವುದು ನಿಮ್ಮ ಆದೇಶಕ್ಕೆ ವಿರುದ್ಧವಾಗಿದೆ. ಹಾಗೆಯೇ ಕ್ಷೇತ್ರಗಳ ವಿಂಗಡಣೆ ಮಾಡುವಾಗ ೪೦೦ ಮತದಾರರು ಇರಬೇಕು ಎಂದು ಮಾಡಿ ಅದಕ್ಕೆ ಒಂದು ಸೀಟನ್ನು ಕೊಟ್ಟಿದ್ದೀರಿ ಆದರೆ ಈ ನೀತಿಯನ್ನು ಅನುಸರಿಸಿ ಮಾಡಿದ್ದನ್ನು ನೋಡಿ ನಗಬೇಕೋ, ಅಳಬೇಕೋ ಗೊತ್ತಾಗುತ್ತಿಲ್ಲ ಕೆಲವು ಕಡೆ ೨೯ ಮತದಾರರಿಗೆ ಒಂದು ಸೀಟು ಕೊಟ್ಟಿದ್ದಾರೆ. ಅದೇ ಹರಿಜನರು ೨೨೦ ಮತದಾರರು ಇರುವ ಕಡೆಗಳಲ್ಲಿ ಒಂದು ಸೀಟು ಕೊಟ್ಟಿದ್ದಾರೆ. ಹಿಂದುಗಳು ೪೩೦ ಇರುವ ಕಡೆಗಳಿಗೂ ಒಂದು ಸೀಟು ಕೊಟ್ಟಿದ್ದಾರೆ. ಹಾಗೆಯೇ ಮುಸಲ್ಮಾನರು ೨೫೦ ಇರುವ ಕಡೆಗೆ ಕೂಡ ಒಂದು ಸೀಟು ಕೊಟ್ಟಿದ್ದಾರೆ, ಪಕ್ಕದಲ್ಲಿಯೇ ಇರುವಂತಹ ಹಿಂದುಗಳ ೩೦೦ ಮತಕ್ಕೆ ನಾಲ್ಕು ಸೀಟುಗಳನ್ನು ಕೊಟ್ಟಿದ್ದಾರೆ. ಇದನ್ನು ಯಾವ ಸಿದ್ಧಾಂತದ ಆಧಾರದ ಮೇಲೆ ಕೊಟ್ಟಿದ್ದಾರೆ ಎಂದು ತಿಳಿಯುತ್ತಿಲ್ಲ. ಇಷ್ಟೆಲ್ಲಾ ನ್ಯೂನ್ಯತೆಗಳನ್ನು ಇಟ್ಟುಕೊಂಡಿದ್ದರೂ ಕೂಡ ಯಾವ ಯಾವ ಮಂತ್ರಿಗಳು, ಯಾವ ಯಾವ ಜಿಲ್ಲೆಗೆ ಏನು ಹೇಳಿದ್ದಾರೋ ಅದನ್ನೆಲ್ಲಾ ಮಾಡಿ, ಕುಲಗೇಡಿಸಿ ಬಿಟ್ಟಿದ್ದಾರೆ. ಕಾನೂನು ವಿಷಯದಲ್ಲಿ ಯಾರೂ ನಮಗೆ ಹೇಳಿಕೊಡುವ ಅವಶ್ಯಕತೆ ಇಲ್ಲ. ಈ ಸದನದಲ್ಲಿ ಬಹಳಷ್ಟು ಜನರು ಅಡ್ವೋಕೇಟ್ಸ್ ಇದ್ದಾರೆ. ಹಿಂದೆ ಮೆಕಾಲೇ ಕಮಿಶನರ್ ಇಡೀ ಭಾರತದೇಶದಲ್ಲಿ ಪರ್ಯಾಟನ ಮಾಡಿ, ಮುಂದೆ ಎಂತಹ ಸರಕಾರಗಳೂ ಬರಬಹುದು, ಮೋಸ ಮಾಡಬಹುದು, ಎಂದು ಇದಕ್ಕೆ ೪೨ನೇ ಸೆಕ್ಷನ್ನು ಸೇರಿಸಿದ್ದಾರೆ. ಅದು ನಮಗೆ ಅಪ್ಲೈ ಆಗುತ್ತದೆ. ಅದೇ ರೀತಿಯಲ್ಲಿ ಏನೇನು ದೇಶದಲ್ಲಿ ಮುಂದೆ ಬರಬಹುದು ಎಂಬುದನ್ನು ಮುಂದಾಲೋಚನೆ ಮಾಡಿ, ಯಾವ ಯಾವ ವಿಷಯಗಳನ್ನು ಮುಖ್ಯವಾಗಿ ಇದರೊಳಗೆ ಸೇರಿಸಿದ್ದಾರೆ, ಆ ನಿಯಮಗಳನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ನೀವುಗಳು ವಿರೋಧಪಕ್ಷದಲ್ಲಿದ್ದುಕೊಂಡು ಹೇಳುತ್ತಿದ್ದುದನ್ನು ನೀವೇ ಈಗ ಮಾಡುತ್ತಿದ್ದೀರಿ. ಇದು ಸರಿಯೇ ? ಒಂದು ಕಾನೂನು ಮಾಡಿದರೆ, ಕೊನೆಯ ಪಕ್ಷ ಅದಕ್ಕೆ ತಜ್ಞರನ್ನು ಕರೆದು ವಿಚಾರ ಮಾಡಿ, ಸೂಕ್ತ ರೀತಿಯಲ್ಲಿ ತರಬೇಕಾಗಿತ್ತು. ಇಂತಹ ಒಂದು ಸುಲಭ ವಿಚಾರವನ್ನು ಪರಿಹರಿಸಲಿಕ್ಕೆ ಆಗದೇ ಹೋದ ಈ ಸರಕಾರಕ್ಕೆ ಸರಕಾರವನ್ನು ನಡೆಸಲಿಕ್ಕೆ ಆಗುತ್ತದೆಯೇ ? ನಾವು ಹಾಗೆಯೇ ಸರ್ಕಾರವನ್ನು ನಡೆಸುತ್ತೇವೆಂದು ಹೇಳತಕ್ಕಂತಹ ಧಾಟಿ ಇಲ್ಲಿ ಕಾಣುತ್ತದೆ. ಜನ ನಿಮ್ಮ ಹತ್ತಿರ ಈಗ ಇಲ್ಲ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಏನಾಗಿದೆ ಎಂದು ಅರ್ಥವಾಗಿದೆಯೇ ಅಥವಾ ಇನ್ನೂ ಅರ್ಥವಾಗಿಲ್ಲವೇ ? ಮಂಡಲ ಪಂಚಾಯತಿ ಚುನಾವಣೆಯಲ್ಲಿ ಎಷ್ಟು ಓಟು, ಬಂದಿದೆ ಒಟ್ಟು ಎಷ್ಟು ಸೀಟು ಬಂದಿದೆ ಎಂಬುದನ್ನು ಲೆಕ್ಕ ಹಾಕಿ ನೋಡಿ ತುಮಕೂರು ಜಿಲ್ಲೆಯ ಪಾರ್ಲಿಮೆಂಟ್ ಚುನಾವಣೆಯಲ್ಲಿ ಹನ್ನೊಂದು ಸಾವಿರ ಓಟು ಜಾಸ್ತಿ ಬಂದಿದೆ ನಿಮ್ಮ ಪರವಾಗಿ ಜನ ಇಲ್ಲ ನೀವು ಈಗ ಏನು

ಅಧಿಕಾರ ಮಾಡುತ್ತಿದ್ದೀರಿ ಅದು ಜನಗಳಿಗೆ ಮುಟ್ಟುತ್ತಿಲ್ಲ ಸಾರ್ವಜನಿಕರಿಗೆ ಅಂದರೆ ಯಾರಿಗೆ ಮುಟ್ಟಬೇಕಾಗಿತ್ತೋ ಅದು ಅವರಿಗೆ ಮುಟ್ಟುತ್ತಿಲ್ಲ ಮಧ್ಯದಲ್ಲಿ ಯಾರೋ ತಿಂದು ಹೋಗಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ಈಗ ಚುನಾವಣೆಯಾಗಿದೆ ಜನ ಯಾರನ್ನು ಆರಿಸಿಕೊಳ್ಳಬೇಕೋ ಅವರನ್ನು ಆರಿಸಿಕೊಂಡಿದ್ದಾರೆ ನಿಮ್ಮದೇನು ಕೈ ಅದರಲ್ಲಿ ? ನೀವೇಕೆ ಅದರಲ್ಲಿ ಕೈ ಇಡಬೇಕು ? ಒಂದು ಕೈಯ್ಯಲ್ಲಿ ಅಧಿಕಾರ ಕೊಡುವ ಹಾಗೆ ಮಾಡಿ ಇನ್ನೊಂದು ಕೈಯ್ಯಲ್ಲಿ ಏಕೆ ಅಧಿಕಾರ ಇಟ್ಟುಕೊಳ್ಳಬೇಕು. ನಿಮಗೆ ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿದರೆ ಅದನ್ನು ಮಾಡ ಬಾರದು ಇನ್ನು ವೆಂಕಟಸ್ವಾಮಿ ಆಯೋಗದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಹಾವನೂರು ಕಮಿಟಿ ಇದೆ ಸುಪ್ರೀಂ ಕೋರ್ಟಿನಲ್ಲಿ ನಾನೂ ಒಬ್ಬ ಪಾರ್ಟಿಅದಕ್ಕೆ ಇದನ್ನು ಯಾವ ದೃಷ್ಟಿ ಇಟ್ಟುಕೊಂಡು ಮಾಡಿದ್ದಾರೆ ಎಂಬ ಬಗ್ಗೆ ಇಲ್ಲಿ ಚರ್ಚೆ ನಡೆದಿದ್ದರೆ ಚೆನ್ನಾಗಿತ್ತು. ಇಷ್ಟೊಂದು ಹಣವನ್ನು ಖರ್ಚು ಮಾಡಿ ಏಕ್‌ದಂ ಅದನ್ನು ವಜಾ ಮಾಡುವುದು ಸರಿಯಲ್ಲ ಅದು ಇಲ್ಲಿ ಡಿಸ್‌ಕಸ್ ಆಗಬೇಕಾಗಿತ್ತು ಯಾರು ಯಾರು ಬ್ಯಾಕ್‌ವರ್ಡ್ ಆಗಬೇಕಾಗಿತ್ತು, ಯಾರ್ಯಾರು ಬ್ಯಾಕ್‌ವರ್ಡ್ ಅಲ್ಲ ಅನ್ನತಕ್ಕಂತಹ ವಿಚಾರ ಬಹಳ ಸೂಕ್ಷ್ಮವಾಗಿರತಕ್ಕಂತಹ ವಿಚಾರ. ಹಿಂದೆ ಚಿನ್ನಸ್ವಾಮಿ ಕಮಿಟಿ ಎಂದು ಮಾಡಿದರು ಅದರಲ್ಲಿ ನಾನು ಮತ್ತು ಶ್ರೀ ಲಕ್ಷ್ಮೀಸಾಗರ್‌ರವರು ಸದಸ್ಯರಾಗಿದ್ದೆವು, ನಾನು ಹೇಳಿದೆ ಲಿಂಗಾಯತ ರಲ್ಲಿ ಹಜಾಮರಿದ್ದಾರೆ, ಕುಂಬಾರರಿದ್ದಾರೆ, ಬಳೆಗಾರರು ಇದ್ದಾರೆ, ಅದನ್ನು ಮೇಲ್ಜಾತಿ ಎಂದು ಪರಿಗಣಿಸದೆ ಬ್ಯಾಕ್‌ವರ್ಡ್ ಎಂದು ಗುರುತಿಸಬೇಕೆಂದು ಆದರೆ ಅದು ಆಗಲಿಲ್ಲ. ಇಲ್ಲಿನ ಸದಸ್ಯರು ಒಳ್ಳೆಯ ಭಾಷಣಕಾರರಿದ್ದಾರೆ ಇಲ್ಲಿ ಚರ್ಚೆ ಮಾಡಬೇಕಾಗಿತ್ತು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದರು. ಚುನಾವಣೆ ಮಾಡಿಯಾದ ಮೇಲೆ ಅದು ಬದಲಾಯಿತು. ನಾನು ತಮ್ಮ ಮೂಲಕ ಸರಕಾರಕ್ಕೆ ತಿಳಿಸುತ್ತಿದ್ದೇನೆ ಚುನಾವಣಾ ಕಾನೂನು ಮಾಡಿದಾಗ ಕೌಂಟಿಂಗ್ ಮಾಡಬೇಕೆಂದು ಯಾವ ಒಂದು ರೂಲ್ಸ್‌ನಲ್ಲಿ ಹೇಳಿದ್ದೀರಿ ಅಕೌಂಟಿಂಗ್ ಬಗ್ಗೆ ನಿಮ್ಮ ಹತ್ತಿರ ಏನು ಚುನಾವಣೆ ರೂಲ್ಸ್ ಇದೆ ತೋರಿಸುತ್ತೀರಾ ? ಚುನಾವಣಾ ಕಮಿಷನರ್‌ರವರನ್ನು ಕೇಳಿದರೆ ಜನರಲ್ ಪೀಪಲ್ ರೆಪ್ರಸಂಟೇಷನ್ ಕಾನೂನು ಪ್ರಕಾರ ಏನಿದೆಯೋ ಅದನ್ನು ಮಾಡಿ ಎಂದು ಹೇಳಿದರು ಸಿಂಗಲ್ ಮೆಂಬರ್ಸ್ ಕಾನ್‌ಸ್ಟಿಟ್ಯುಯನ್ಸಿ ರೂಲ್ಸ್ ಅನ್ನು ಮಲ್ಟಿ ಮೆಂಬರ್ಸ್ ಕಾನ್‌ಸ್ಟಿಟ್ಯುಯನ್ಸಿ ರೂಲ್ಸ್ ಅಪ್ಲೈ ಮಾಡಿ ಚುನಾವಣೆ ಡಿಕ್ಲೇರ್ ಮಾಡಿದ್ದಾರೆ ಇದರಿಂದಾಗಿ ಸೋತವರು ಗೆದ್ದಿದ್ದಾರೆ ಗೆದ್ದವರು ಸೋತಿದ್ದಾರೆ ಏತಕ್ಕೋಸ್ಕರ ಇಷ್ಟೊಂದು ತರಾತುರಿಯಿಂದ ಮಾಡುತ್ತಿದ್ದಾರೆಂದು ಇವತ್ತಿನವರೆಗೂ ಗೊತ್ತಾಗಲಿಲ್ಲ. ಹಳ್ಳಿಯಲ್ಲಿ ಪ್ರತಿಯೊಂದು ಊರಿನಲ್ಲೂ ಮನೆಗಳಲ್ಲೂ ಕೂಡ ಇವತ್ತು ಜಗಳ ಇದೆ.

೫-೩೦ ಪಿ.ಎಂ.

ಇಬ್ಬರು-ಮೂವರು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಹೇಳಿ ಡೆಫೆನಿಷನ್ ಕೊಟ್ಟು ಮತ್ತೆ ಅವರಿಗೆ ನಾಮಿನೇಟ್ ಮಾಡಿ ಕಿತ್ತುಕೊಳ್ಳುವುದಾದರೆ ಇವರಿಗೆ ಅಧಿಕಾರವನ್ನು ಎಲ್ಲಿ ಕೊಡುವುದಕ್ಕಾಗುತ್ತದೆ? ಕೇವಲ ಜನಗಳ ಹಿತದೃಷ್ಟಿಯಿಂದ ಒಂದು ಕಾನೂನನ್ನು ಮಾಡುತ್ತಿಲ್ಲ. ಪಕ್ಷದ ಹಿತದೃಷ್ಟಿಯಿಂದ ನೀವು ದುರುಪಯೋಗ ಮಾಡಿಕೊಂಡು ಸರ್ಕಾರದ ಬೊಕ್ಕಸದಿಂದ ನಿಮ್ಮ ಪಕ್ಷ ಕಟ್ಟಲಿಕ್ಕೆ ಈ ಕೆಲಸ ಸರ್ಕಾರದ ಅಧಿಕಾರವನ್ನು ಮಾಡುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಿಜವಾಗಿ ಈ ರೀತಿ ಮಾಡಬಾರದಾಗಿತ್ತು. ಅಧಿಕಾರವನ್ನು ಚುನಾವಣೆ ಆದ ಮೇಲೆ ಯಾರು ಮಾತನಾಡುವುದಕ್ಕಾಗುತ್ತದೆ? ಅನುಕೂಲ ಆಗುವ ರೀತಿಯಲ್ಲಿ ಚುನಾವಣೆಗಳನ್ನು ಮಾಡಿದ್ದೀರಿ. ಅನುಕೂಲವಾಗುವ ರೀತಿಯಲ್ಲಿ ನಿಮಗೆ ಮನಸ್ಸಿಗೆ ಬಂದ ಹಾಗೆ ಮಾಡಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಪ್ರಜಾಪ್ರಭುತ್ವದ ದೃಷ್ಟಿಯಲ್ಲಿ ಇದೇ ರೀತಿ ಮಾಡಬೇಕು ಎಂದು ಇದೆಯೇ? ಇದರ ಪ್ರಕಾರ ಚುನಾವಣೆ ಮಾಡಬೇಕು ಎಂದು ಇದೆಯೇ? ಇವತ್ತು ಯಾವುದೇ ರಾಜಕೀಯ ಪಕ್ಷ ಇರಲಿ, ಪ್ರಜಾಪ್ರಭುತ್ವದಲ್ಲಿ ಇದೇ ರೀತಿಯಲ್ಲಿ ಚುನಾವಣೆ ಮಾಡಬೇಕು ಎಂದು ಇದ್ದರೆ ಮಾಡಿಕೊಳ್ಳಿ. ಆದರೆ ಈ ರೀತಿ ಪ್ರಜಾಪ್ರಭುತ್ವದಲ್ಲಿ ಇಲ್ಲ. ಇಂಥ ಒಂದು ಅಧಿಕಾರವನ್ನು ಜನ ಸಹಿಸುವುದಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರನ್ನು ಬಿಡಿ, ನಾವು ಏನಾದರೂ ಹೇಳಿದರೆ ನಾವು ಅದನ್ನೇ ಮಾಡುತ್ತೇವೆ ಎಂದು ಬಂಡತನ ಮಾಡುವುದು. ನಿಜವಾಗಿಯೂ ಕೂಡಾ ಇವರು ಏನೇನು ಭಾಷಣ ಮಾಡಿದ್ದಾರೆ ಎನ್ನುವುದನ್ನು ತೆಗೆಸಿ ನೋಡಿ. ಸಣ್ಣ ಒಂದು ವಿಚಾರಕ್ಕೆ ಈ ಟ್ರಿಬ್ಯೂನಲ್‌ಗೆ ಅಪಾಯಿಂಟ್ ಮಾಡುವಾಗ, ನಾಮಿನೇಟ್ ಮಾಡುವಾಗ ನಮ್ಮ ಪಕ್ಷದವರಿಗೆ ಕೊಡಬೇಕು ಎಂದು ಧರಣ ಮಾಡುವಂಥ ಪರಿಸ್ಥಿತಿಗೆ ಇಳಿದಿದ್ದೆವು. ಒಂದು ಕೆಲಸ ಮಾಡೋಣ

ಸ್ವಾಮಿ, ಅವರವರ ಕ್ಷೇತ್ರದ ಎಂ.ಎಲ್.ಎ.ಗಳನ್ನು ಕೇಳಿ ನಾಮಿನೇಟ್ ಮಾಡುತ್ತೇವೆ ಎಂದು ಹೇಳುವ ಧೈರ್ಯ ನಿಮಗೆ ಇದೆಯೇ? ತಾಕತ್ತು ಇದೆಯೇ?

ಶ್ರೀ ಜಿ. ಬಸವಣ್ಣಪ್ಪ.—ನಾಮಿನೇಟ್ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇಲ್ಲ.

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಬಸವಣ್ಣಪ್ಪನವರೇ, ನಿಮ್ಮಿಂದ ಈ ಮಾತನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದೆ, ಅವರು ಯಾವಾಗಲೂ ಹಾಗೆಯೇ ಎಂದು. ಅವರಿಗೆ ಲಾ ಮಿನಿಸ್ಟರ್ ಎನ್ನುವ ಬದಲಿಗೆ ಪ್ರೊವೋಕೇಷನ್ ಮಿನಿಸ್ಟರ್ ಎಂದು ಹೇಳಿದ್ದರೆ ಲಾಯಕ್ಕು ಆಗಿರುತ್ತಿತ್ತು. ಅವರು ಯಾವಾಗಲೂ ಪ್ರೊವೋಕೇಷನ್ ಮಾಡುತ್ತಿರುವುದೇ. ಮೊದಲು ಹಾವನೂರ್ ಅವರೂ ಕೂಡಾ ಹಾಗೆಯೇ ಮಾಡುತ್ತಿದ್ದರು. ಆ ಪೋಸ್ಟ್ ನೋಡಿದರೆ ಅಂಥವರಿಗೆ ಸಿಗುತ್ತದೆ ಅದೇಕೋ ಗೊತ್ತಿಲ್ಲ. ಮಾನ್ಯ ಬಸವಣ್ಣಪನವರು ಈ ರೀತಿ ಮಾತನಾಡುತ್ತಾರೆ ಎಂದು ನಾನು ನಂಬಿರಲಿಲ್ಲ. ಹೊಸದಾಗಿ ನಿಮ್ಮ ಚರಿತ್ರೆಯನ್ನು ನೋಡಬೇಕಾಗುತ್ತದೆ. ಅಧಿಕಾರ ಇದೆ. ಪಕ್ಷವನ್ನು ಬೆಳೆಸಿ. ಆದರೆ ಸಾರ್ವಜನಿಕ ಹಣದಿಂದ, ಸರ್ಕಾರದ ಹಣದಿಂದ ನೀವು ಪಕ್ಷ ಕಟ್ಟುತ್ತೇವೆ ಎಂದು ಹೋದರೆ ಜನ ಮೇಲೆ ಬೀಳುತ್ತಾರೆ, ತಡೆಯುವುದಿಲ್ಲ, ಚಳುವಳಿಯನ್ನು ಹೂಡಬೇಕಾಗುತ್ತದೆ, ಜನ ಘೇರಾವ್ ಮಾಡುತ್ತಾರೆ. ನಮ್ಮ ತಾಲ್ಲೂಕಿನವರು, ನಮ್ಮ ಜಿಲ್ಲೆಯವರೇ ನಿಮ್ಮನ್ನು ಬಿಡುವುದಿಲ್ಲ. ನಿಮಗೆ ಬಹಿಷ್ಕಾರ ಹಾಕುತ್ತಾರೆ, ಎಲ್ಲಿ ಮೆರವಣಿಗೆ ಮಾಡಿದರೆ ಅಲ್ಲಿ ಗಲಾಟೆ ಮಾಡಬೇಕಾಗುತ್ತದೆ. ಪ್ರಜಾಪ್ರಭುತ್ವದ ವಿರೋಧಿ ನೀತಿಗಳನ್ನು ನೀವು ಇವತ್ತಿನ ದಿವಸ ಅನುಸರಿಸುತ್ತಿದ್ದೀರಿ, ಇದು ಸರ್ವ ಸಾಧ್ಯ ಇಲ್ಲ. ಈಗಲೂ ಕೂಡಾ ಏನು ಹಿಂದೆ ನಾವು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಹೇಳುತ್ತೇವೆ ವೆಂಕಟಸ್ವಾಮಿ ಆಯೋಗದಲ್ಲಿ ಅದರ ಪ್ರಕಾರ ಮಾಡಿ, ಯಾರಿಗೆ ಸಿಕ್ಕಿಲ್ಲ ಎಂದು ಕೇಳಬೇಕು? ಲೇಡೀಸ್‌ಗೆ ೨೫ ಸೀಟ್ ಕೊಡುತ್ತೇವೆ ಎಂದು ಹೇಳಿದರೆ ನಾವು ಬೇಡ ಎಂದು ಹೇಳಿದೆವೆಯೇ? ಕೃಷಿ ಕಾರ್ಮಿಕರಿಗೆ ಒಂದೊಂದು ಸೀಟ್ ಕೊಟ್ಟಿದ್ದೇವೆ ಎಂದರೆ ಬೇಡ ಎಂದು ಹೇಳುತ್ತಿರಲಿಲ್ಲ. ನಾವು ಬೇಡ ಎಂದರೂ ಬಿಡುತ್ತಿರಲಿಲ್ಲ, ಪಾಸು ಮಾಡಿಕೊಳ್ಳುತ್ತಿದ್ದಿರಿ. ಆ ರೀತಿ ತಲೆ ಇಲ್ಲದೇ ಕೆಲಸ ಮಾಡಬೇಡಿ. ನೀವು ಅಧಿಕಾರ ನಡೆಸತಕ್ಕಂಥದ್ದು, ಸಾರ್ವಜನಿಕರಿಗೆ, ಬಡವರಿಗೋಸ್ಕರ ಎಂದು ಹೇಳುತ್ತಿರುವುದು ಸಾರ್ವಜನಿಕರಲ್ಲಿ ಬಡವರು ಇವತ್ತು ಎಲ್ಲಿ ಬದುಕುತ್ತಾರೆ? ಒಬ್ಬ ಹರಿಜನ ತಲೆ ಎತ್ತಿ ಬದುಕುವುದಕ್ಕೆ ಆಗುತ್ತಿಲ್ಲ. ಅವನಿಗೆ ಆಗುತ್ತಿರುವ ಶೋಷಣೆ, ಗೋಳನ್ನು ಹೇಳಿಕೊಳ್ಳುವುದಕ್ಕೂ ಆಗುತ್ತಿಲ್ಲ. ಒಬ್ಬ ಬಡವ ಯಾವುದೇ ಜಾತಿಗೆ ಸೇರಿರಲಿ, ಅವನು ಒಕ್ಕಲಿಗ ಇರಬಹುದು, ಲಿಂಗಾಯಿತ ಆಗಿರಬಹುದು, ಇವತ್ತಿನ ದಿವಸ ಬಡವನಿಗೆ ತೊಂದರೆಯಾಗಿದ್ದರೆ ಹೇಳಿಕೊಳ್ಳುವಂಥ ಶಕ್ತಿ ಇಲ್ಲ. ಇವತ್ತು ಗಂಭೀರವಾಗಿ ಎಚ್ಚರಿಕೆಯ ರೂಪದಲ್ಲಿ ಜನತಾ ಪಕ್ಷದವರಿಗೆ ಹೇಳುತ್ತಿದ್ದೇನೆ. ಬಡವರ ಹೆಸರಿನಲ್ಲಿ ಶೋಷಣೆ ಮಾಡತಕ್ಕಂಥದ್ದು ಸರಿಯಲ್ಲ, ಅಧಿಕಾರ ಇವತ್ತು ಐದು ವರ್ಷಗಳ ತನಕ ಇದೆ, ನೀವು ಅಧಿಕಾರ ಮಾಡುತ್ತೀರಿ. ಬಹುಶಃ ಹೆಗಡೆಯವರು ಡೆಲ್ಲಿಗೆ ಹೋಗುತ್ತಿದ್ದಾರೆ ಎಂದು ವದಂತಿ ಇದೆ. ಆ ರೀತಿ ಹೋದರೆ ಒಂದು ಮೂರು ತಿಂಗಳೂ ಕೂಡಾ ಈ ಸರ್ಕಾರ ಇರುವುದಿಲ್ಲ. ಅದು ನಿಮಗೆ ಬಿಟ್ಟಿದ್ದು. ನಿಮ್ಮ ಮನೆ ಜಗಳ ಅದು.

ಜನಗಳು ೩೫ ವರ್ಷದಿಂದಲೂ ಕಾಂಗ್ರೆಸ್ಸಿನವರು ನಮಗೆ ಸರಿಯಾಗಿ ಆಡಳಿತ ಕೊಡಲಿಲ್ಲ ಎಂದು, ಇದನ್ನು ಬದಲಾವಣೆ ಮಾಡಬೇಕೆಂದು ತಿಳಿದು ಈಗ ನಿಮಗೆ ಅಧಿಕಾರ ಕೊಟ್ಟರು. ನೀವು ಅವರಿಗಿಂತಲೂ ಹೊಲಸು ಮಾಡುವುದಾದರೆ ನೀವು ಏತಕ್ಕೆ ಇರಬೇಕು? ಜನ ಎಚ್ಚೆತ್ತಿದ್ದಾರೆ. ಅವರು ಯಾವ ರೀತಿ ಓಟು ಕೊಡಬೇಕು? ಎನ್ನುವುದನ್ನು ಚೆನ್ನಾಗಿ ಕಲಿತಿದ್ದಾರೆ. ನೀವು ಅವರಿಗೇನಾದರೂ ಆಮಿಷ ತೋರಿಸಿ ಓಟು ತೆಗೆದುಕೊಳ್ಳುತ್ತೇವೆ ಎನ್ನುವ ಭ್ರಮೆ ಬೇಡ ಜನ ಈಗ ಎಚ್ಚೆತ್ತಿದ್ದಾರೆ, ಬಹಳ ಬುದ್ಧಿವಂತರಾಗಿದ್ದಾರೆ. ಈಗ ನಿಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳದಿದ್ದರೆ ಇಷ್ಟು ಹೊತ್ತಿಗೆ ಶ್ರೀ ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಡಬೇಕಾಗಿತ್ತು. ಈಗ ನಡೆದಂಥ ಚುನಾವಣೆಯಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ. ಹಣ ಖರ್ಚು ಮಾಡಿದ್ದೀರಿ, ಹೆಂಡ ಖರ್ಚು ಮಾಡಿದ್ದೀರಿ. ಇವು ಮೂರೂ ಇಲ್ಲದೇ ಹೋಗಿದ್ದರೆ ಇಷ್ಟು ಹೊತ್ತಿಗೆ ಶ್ರೀಮಾನ ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಡಬೇಕಾಗಿತ್ತು. ದಯವಿಟ್ಟು ಇದನ್ನು ಮುಂದುವರೆಸಿಕೊಂಡು ಹೋಗಬೇಡಿ. ಒಳ್ಳೆಯ ಕೆಲಸಗಳನ್ನು ಮಾಡಿದರೆ ಜನ ಮೆಚ್ಚುತ್ತಾರೆ. ನಿಮ್ಮ ಕೆಲಸ ಒಳ್ಳೆಯ

ಮೌಲ್ಯಾಧಾರಿತ ನೀತಿಯಾಗಿರಬೇಕು. ಹಾಗೆ ಮಾಡದಿದ್ದರೆ ನಿಮ್ಮ ತತ್ವಕ್ಕೆ ವಿರುದ್ಧವಾಗುತ್ತದೆ. ಮೌಲ್ಯಾಧಾರಿತ ರಾಜಕಾರಿಣಿಗಳಾಗಿ ಜನತೆಗೆ ಒಳ್ಳೆಯ ಕೆಲಸಗಳನ್ನು ಮಾಡಿರಿ ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ನಾಳೆ ಸರ್ಕಾರದಿಂದ ಉತ್ತರ.

ಇವೊತ್ತು ಮಾತನಾಡಿರುವುವರಲ್ಲಿ ಕಾಂಗ್ರೆಸ್‌ನವರು ೩೩ ನಿಮಿಷ ಜನತಾ ೨ ನಿಮಿಷ, ಬಿ.ಜೆ.ಪಿ. ೧೦ ನಿಮಿಷ, ಸಿ ಪಿ.ಎಂ. ೧[illegible] ನಿಮಿಷ. ಸಿ.ಪಿ.ಐ. ೨೩ ನಿಮಿಷ.

ಶಾಸನ ರಚನೆ ಕಲಾಪಗಳು

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳು ವಿಧೇಯಕವನ್ನು ಮಂಡಿಸುವುದು.

೧೯೮೭ನೇ ಇಸವಿಯ ಕರ್ನಾಟಕ ಮನರಂಜನೆಗಳ ತೆರಿಗೆ (ಮೂರನೆಯ ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಇವರ ಪರವಾಗಿ ನಾನು ೧೯೮೭ನೇ ಇಸವಿಯ ಕರ್ನಾಟಕ ಮನರಂಜನೆಗಳ ತೆರಿಗೆ (ಮೂರನೆಯ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ೧೯೮೭ನೇ ಇಸವಿಯ ಕರ್ನಾಟಕ ಮನರಂಜನೆಗಳ ತೆರಿಗೆ (ಮೂರನೆಯ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ೧೯೮೭ನೇ ಇಸವಿಯ ಕರ್ನಾಟಕ ಮನರಂಜನೆಗಳ ತೆರಿಗೆ (ಮೂರನೆಯ ತಿದ್ದುಪಡಿ) ವಿಧೇಯಕವನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಪ್ರಕಟಣೆ

ಕುಟುಂಬ ಕಲ್ಯಾಣ ಕಾರ್ಯಕ್ರಮದ ಪ್ರಯುಕ್ತ ನಾಳೆ ಅಂದರೆ ದಿನಾಂಕ ೩-೪-೧೯೮೭ರ ಶುಕ್ರವಾರ ಬೆಳಿಗ್ಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕರ್ನಾಟಕ ರಾಜ್ಯ ಶಾಸಕರ ಸಮ್ಮೇಳನ ನಡೆಯಲಿದೆ. ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಭಾಗವಹಿಸಬೇಕು.

ಎರಡನೆಯದಾಗಿ ಈ ದಿನ ಅಂದರೆ ದಿನಾಂಕ ೨-೪-೧೯೮೭ರಂದು ಗುರುವಾರ ೬ ಗಂಟೆಗೆ ಕಾಮನ್‌ವೆಲ್ತ್ ಅಸೋಸಿಯೇಷನ್‌ನ ಜನರಲ್ ಬಾಡಿ ಮೀಟಿಂಗ್ ಇದೆ. ದಯವಿಟ್ಟು ಮಾನ್ಯ ಸದಸ್ಯರು ಭಾಗವಹಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ವೆಂಕಟಸ್ವಾಮಿ ಆಯೋಗದ ರಿಪೋರ್ಟಿನ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಬೇಕೆಂದಿದ್ದಾರೆ. ಇದಕ್ಕೆ ೨-೩ ಗಂಟೆ ಕಾಲವಾದರೂ ಮಾತನಾಡಲಿಕ್ಕೆ ಒಂದು ನಿಗದಿ ಮಾಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಮತ್ತೆ ಜುಲೈ ತಿಂಗಳಲ್ಲಿ ಅಧಿವೇಶನ ಕರೆದಾಗ ಮಾತನಾಡಬಹುದು.